TIGHT BINDING

UNIVERSAL LIBRARY
OU_198161
UNIVERSAL LIBRARY

ಕಥಾಪ್ರಪಂಚ—೧.

# ನಿರಾಶ್ರಿತೆ

ಎಚ್. ವಿ. ಸಾವಿತ್ರಮ್ಮ, ಬಿ.ಎ.

ಪ್ರಕಾಶಕರು:

ಕಾವ್ಯಾಲಯ

ಮೈಸೂರು

CKD. 1951

ಮೊದಲನೆಯ ಮುದ್ರಣ: ೧೯೪೯

Checked 1963

Checked 1969

*All Rights Reserved*

ಎಲ್ಲ ಹಕ್ಕುಗಳನ್ನು ಕಾದಿರಿಸಿದೆ

ಬೆಲೆ :

**ಸಾದಾಪ್ರತಿ ರೂ. ೧-೧೨-೦ ಕ್ಯಾಲಿಕೋ ಪ್ರತಿ ರೂ. ೩-೦-೦**

ಪ್ರಕಾಶಕರು :

ಕಾವ್ಯಾಲಯ ಮೈಸೂರು

ಮುದ್ರಣಕಾರರು :

**ಹಿಂದೂಸ್ಥಾನ್ ಪ್ರೆಸ್, ಮೈಸೂರು**

# ಮೊದಲ ನುಡಿ

ಈ ಪುಸ್ತಕದಲ್ಲಿರುವ ಕತೆಗಳನ್ನು ಬರೆಯಲು ಪ್ರಾರಂಭಿಸಿ ಹಲವು ವರ್ಷಗಳಾದುವು. ಅವುಗಳನ್ನು ಆಗಿಂದಾಗ ಓದಿಸಿ, ಪ್ರೋತ್ಸಾಹವಿತ್ತು ಸಂತೋಷಪಡುತ್ತಿದ್ದ ಪೂಜ್ಯರಾದ ನನ್ನ ತಂದೆಯವರ ಕೈಯಲ್ಲಿ ಈ ಪುಸ್ತಕವನ್ನಿಟ್ಟು ಆಶೀರ್ವಾದ ಪಡೆಯುವ ಭಾಗ್ಯ ಇಲ್ಲದೆ ಹೋಯಿತು. ಅವರ ಪವಿತ್ರ ಸ್ಮರಣೆಗೆ ಈ ಪುಸ್ತಕವನ್ನರ್ಪಿಸಿ ತೃಪ್ತಿಪಟ್ಟುಕೊಳ್ಳಬೇಕಾಗಿದೆ.

ಕನ್ನಡನುಡಿಯ ಸ್ವಾರಸ್ಯವನ್ನು ನನಗೆ ಮೊದಲು ಪರಿಚಯಮಾಡಿಕೊಟ್ಟು, ಅದರ ವ್ಯವಸಾಯದಲ್ಲಿ ಪದೇಪದೇ ಉತ್ತೇಜನಕೊಟ್ಟು ನನ್ನ ಮೊದಲ ಪ್ರಯತ್ನಗಳನ್ನು ಬೇಸರವಿಲ್ಲದೆ ಆದರದಿಂದ ಓದಿನೋಡಿ ಆಶೀರ್ವದಿಸಿದ ಪೂಜ್ಯಗುರುಗಳಾದ ಶ್ರೀ. ತೀ. ನಂ. ಶ್ರೀಕಂಠಯ್ಯನವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಶ್ರೀಮತಿ ಎಲ್. ವಿ. ಕಾವೇರಮ್ಮನವರ ಪ್ರೋತ್ಸಾಹವಿಲ್ಲದೆ ಈ ಪುಸ್ತಕವು ಬೆಳಕಿಗೆ ಬರುತ್ತಲೇ ಇರಲಿಲ್ಲ. ಅವರಿಗೆ ಸ್ವಭಾವದಂತೆ ಪದೇ ಪದೇ ನನ್ನನ್ನು ಎಚ್ಚರಿಸಿ, ನನ್ನ ಬರವಣಿಗೆಯನ್ನು ಓದಿ ನೋಡಿ, ಸೂಕ್ತ ಸಲಹೆಗಳನ್ನು ಕೊಟ್ಟು, ಪುಸ್ತಕದ ಪ್ರಕಟನೆಗೆ ಅನೇಕರೂಪವಾಗಿ ಸಹಾಯ ಮಾಡಿದ ಸೋದರಿ ಕಾವೇರಮ್ಮನಿಗೆ ನಾನು ಎಷ್ಟು ಕೃತಜ್ಞಳಾಗಿದ್ದರೂ ಸಾಲದು.

ಕಾವ್ಯಾಲಯದ ಸಂಪಾದಕರು ಬಹು ಶ್ರಮವಹಿಸಿ, ಆಸಕ್ತಿಯಿಂದ ಪುಸ್ತಕವನ್ನು ಬೇಗ, ಅಂದವಾಗಿ ಮುದ್ರಿಸಿದುದಕ್ಕಾಗಿ ನಾನು ಋಣಿಯಾಗಿದ್ದೇನೆ.

**ಎಚ್. ವಿ. ಸಾವಿತ್ರಮ್ಮ.**

# ವಿವರ.


| | | | | ಪುಟ |
|---|---|---|---|---|
| ೧. | ನಿರಾಶ್ರಿತೆ | .... | .... | ೧ |
| ೨. | ಪುನರ್ಜನ್ಮ | .... | .... | ೧೫ |
| ೩. | ಜಾತಿಯ ಬಲಿ | .... | .... | ೨೭ |
| ೪. | ಪಶ್ಚಾತ್ತಾಪ | .... | .... | ೩೫ |
| ೫. | ಕಲ್ಯಾಣಿ | .... | .... | ೪೫ |
| ೬. | ಗುರುಪೀಠ | .... | .... | ೫೨ |
| ೭. | ಚಿರದುಃಖಿ | .... | .... | ೬೩ |
| ೮. | ಸೋದರಿಕೆ | .... | .... | ೭೭ |
| ೯. | ಆತ್ಮಾರ್ಪಣೆ | .... | .... | ೯೬ |
| ೧೦. | ಬಹಿಷ್ಕೃತೆ | .... | .... | ೧೦೮ |
| ೧೧. | ಅಸಡ್ಡೆಯೋ ಅಕ್ಕರೆಯೋ ? | .... | .... | ೧೨೪ |
| ೧೨. | ಮಾಯದ ನೆನಪು | .... | .... | ೧೩೨ |

# ನಿರಾಶ್ರಿತೆ

ಚಂದ್ರನು ಮಾವನ ಮನೆಗೆ ಬಂದು ಎರಡು ವಾರಗಳಾಗಿದ್ದರೂ ಇನ್ನೂ ಚೇತರಿಸಿಕೊಂಡಿರಲಿಲ್ಲ. ಚೇತರಿಸಿಕೊಳ್ಳಬೇಕೆಂಬ ಉತ್ಸಾಹವೂ ಇರಲಿಲ್ಲ. ಪ್ರಚಂಡಮಾರುತಕ್ಕೆ ಸಿಕ್ಕಿ ಅವನ ಸಂಸಾರನೌಕೆಯು ಒಡೆದು ಪುಡಿಯಾಗಿತ್ತು. ರಾವಲ್ಪಿಂಡಿಯಿಂದ ಮನೆಮಠಗಳನ್ನು ಬಿಟ್ಟು ಓಡಿ ಬಂದುದು ಈಗಲೂ ಒಂದು ಭಯಾನಕ ಕನಸಿನಂತೆ ತೋರುತ್ತಿತ್ತು. ಆರಾಮಕುರ್ಚಿಯ ಮೇಲೆ ಬಿದ್ದುಕೊಂಡಿದ್ದ ಚಂದ್ರನಿಗೆ ಆ ದಿನಗಳ ಸ್ಮರಣೆಯನ್ನು ತಡೆಯುವ ಶಕ್ತಿ ಕೂಡ ಇರಲಿಲ್ಲ. ತುಳಸಿಯೊಬ್ಬಳು ಪಾರಾಗಿ ಬಂದಿದ್ದರೆ ಏನನ್ನಾದರೂ ಸಹಿಸಬಹುದಾಗಿತ್ತು; ಅಥವಾ ಕಣ್ಣೆದುರಿಗೆ ಸತ್ತಾದರೂ ಹೋಗಿದ್ದರೆ ಈ ದಾರುಣ ವ್ಯಥೆಯಿರಲಿಲ್ಲ. ಎಲ್ಲಿರುವಳೋ, ಏನಾದಳೋ ಎಂಬ ಚಿಂತಾಗ್ನಿ ಚಂದ್ರನನ್ನು ದಿನದ ಪ್ರತಿಗಳಿಗೆಯೂ ಸುಡುತ್ತಿತ್ತು.

ಚಂದ್ರನು ರಾವಲ್ಪಿಂಡಿಯಲ್ಲಿ ವೈದ್ಯನಾಗಿದ್ದನು. ವಿದೇಶಕ್ಕೆ ಹೋಗಿ ಹೆಸರಿನ ಮುಂದೆ ನಾಲ್ಕಕ್ಷರಗಳನ್ನು ಸೇರಿಸಿಕೊಳ್ಳದಿದ್ದರೂ ತನ್ನ ಜಾಗರೂಕತೆ ಸಹಾನುಭೂತಿಗಳಿಂದ ಜನರ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಮನೆಯನ್ನು ತುಳಸಿಯ ಪ್ರೇಮವು ಬೆಳಗಿಸಿತ್ತು. ರಾಧೆಯು ಅವರಿಬ್ಬರ ಪ್ರೇಮವನ್ನು ಪೂರ್ಣಗೊಳಿಸಿದ್ದಳು. ಚಂದ್ರನು ಇಹಲೋಕದಲ್ಲಿ ಬಯಸಬೇಕಾದುದಿನ್ನೇನೂ ಇರಲಿಲ್ಲ. ಹುಟ್ಟುತ್ತಲೇ ತಂದೆತಾಯಿಗಳನ್ನು ಕಳೆದು ಕೊಂಡಿದ್ದರೂ, ಸೋದರಮಾವನು ಆ ನೋವು ತೋರದಂತೆ ಚಂದ್ರನನ್ನು ಬೆಳಸಿದ್ದರು. ಅರಿವುಂಟಾದಂದಿನಿಂದಲೂ ಅವರೇ ಆತನ ತಂದೆಯಂತಿದ್ದರು. ತುಳಸಿ ಅವರ ಒಬ್ಬಳೇ ಮಗಳು. ಮೊದಲಿನಿಂದಲೂ ಅವಳಿಗೂ ಚಂದ್ರನಿಗೂ ವಿವಾಹವೆಂಬುದು ನಿಷ್ಕರ್ಷೆಯಾದಂತೆಯೇ ಇತ್ತು. ವಿಧಿಯು ಎರಡು ಕೈಗಳಿಂದಲೂ ಚಂದ್ರನನ್ನು ಹರಸಿದಂತಿತ್ತು. ಮದುವೆಯಾದ ವರ್ಷವೇ ವೈದ್ಯಪರೀಕ್ಷೆಯಲ್ಲಿ ಉತ್ತೀರ್ಣನಾದನು. ಶ್ರೀನಿವಾಸರಾಯರಿಗೇನೋ ಅವನು ಅಲ್ಲಿಯೇ ಖಾಸಗಿ ವೈದ್ಯನಾಗಲೆಂಬ ಆಸೆ. ಚಂದ್ರನು ಯಾವ ನಿರ್ಧಾರಕ್ಕೂ ಬಂದಿರಲಿಲ್ಲ. ಅಷ್ಟರಲ್ಲಿ, ಆರೆ

ಮನಸ್ಸಿನಿಂದ ಹಾಕಿದ್ದ ಅರ್ಜಿಗೆ ಮನ್ನಣೆ ದೊರೆತು ರಾವಲ್ಪಿಂಡಿಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಸಿಕ್ಕಿತೆಂದು ತಂತಿ ಬಂತು. ಶ್ರೀನಿವಾಸ ರಾಯರಿಗೆ ಅದು ಸ್ವಲ್ಪವೂ ಇಷ್ಟವಿರಲಿಲ್ಲ. "ನೀನೇಕೆ ಸರ್ಕಾರಿ ಕೆಲಸಕ್ಕೆ ಸೇರಬೇಕು? ಸ್ವಂತವಾಗಿ ವೃತ್ತಿಯನ್ನಾರಂಭಿಸಿದರೆ ಅವರು ಕೊಡುವ ಐನೂರು ರೂಪಾಯಿಗಳನ್ನು ಧಾರಾಳವಾಗಿ ಇಲ್ಲೇ ಸಂಪಾದಿಸಬಹುದು." ಎಂದು ವಾದಿಸಿದರು. ಸರಸ್ವತಮ್ಮನೂ ಹೇಳಿ ನೋಡಿದರು. "ನೀನೂ ತುಳಸಿ ಹೊರಟು ಹೋದರೆ ನಮ್ಮನ್ನು ಕೇಳುವವರು ಯಾರು?" ಎಂದು ಕಣ್ಣೀರು ಕರೆದರು. ತುಳಸಿಗೂ ತಾಯಿತಂದೆಗಳನ್ನು ಬಿಟ್ಟು ಅಷ್ಟು ದೂರ ಹೋಗುವುದು ಇಷ್ಟವಿರಲಿಲ್ಲ. ಆದರೆ ಯೌವನದ ಹುಚ್ಚುಹಠ ದಿಂದ ಹೋಗಿಯೇ ತೀರಬೇಕೆಂದು ಚಂದ್ರನು ಪಟ್ಟು ಹಿಡಿದನು. ಸರಸ್ವತಮ್ಮನು "ಮನೆ ಅಳಿಯನಾದರೇನು, ಯಾರಾದರೇನು? ಅಳಿಯಂದಿರ ಪಾಡೆಲ್ಲಾ ಒಂದೇ," ಎಂದು ನಿಷ್ಠುರವಾಗಿ ನುಡಿದರು.

ಶ್ರೀನಿವಾಸರಾಯರು ಆಕೆಯನ್ನು ಸಮಾಧಾನಪಡಿಸುತ್ತಾ "ಸುಮ್ಮನಿರು. ಹಾಗೆಲ್ಲಾ ಮಾತಾಡಬಾರದು. ಚಂದ್ರು ಒಳ್ಳೆಯ ಹುಡುಗ. ನಾಲ್ಕು ದಿನ ಹೋಗಿಬರಲಿ, ಎಲ್ಲಾದರೂ ತಣ್ಣಗಿದ್ದರೆ ಸರಿ". ಎಂದು ತಮ್ಮ ಮನಸ್ಸಿಗಾಗುತ್ತಿದ್ದ ನೋವನ್ನು ಮರೆಸಲು ಪ್ರಯತ್ನಿಸಿದರು. ಕಡೆಗೊಂದು ದಿನ, ಸಾಮಾನು ಕಟ್ಟಿ, ತುಳಸಿ ಚಂದ್ರ ಹೊರಟೇ ಹೋದರು. ಕಣ್ಣೀರು ಕರೆಯುತ್ತಾ ಕುಳಿತಿದ್ದ ಸರಸ್ವತಮ್ಮನನ್ನು ಶ್ರೀನಿವಾಸರಾಯರು ಎಬ್ಬಿಸಿ "ಎಂದಾದರೂ ನನಗೆ ನೀನು, ನಿನಗೆ ನಾನು; ಬಾ, ಸ್ವಲ್ಪ ಹೊತ್ತು ಸುತ್ತಾಡಿಕೊಂಡು ಬರೋಣ" ಎಂದರು. ಆ ನೋವನ್ನು ಮರೆಯಲು ಸರಸ್ವತಮ್ಮನಿಗೆ ಬಹು ಕಾಲ ಹಿಡಿಯಿತು. ಹಬ್ಬವಾದರೆ ತುಳಸಿಯಿಲ್ಲ. ಸಿಹಿತಿಂಡಿ ಮಾಡಿದರೆ ತುಳಸಿಯಿಲ್ಲ. ಮನೆಯಲ್ಲಿ ಇರುವುದೇ ಕಷ್ಟವಾಗಿ ತೋರುತ್ತಿತ್ತು.

ತುಳಸಿಗಾದರೋ ಇನ್ನೂ ಬಾಳಿನ ಪ್ರಾತಃಕಾಲ. ತಾಯಿ ತಂದೆಗಳ ಅಗಲಿಕೆ ಕೊಂಚಕಾಲ ಕಷ್ಟವಾಗಿ ತೋರಿದರೂ ಹೊಸ ಆಸೆ, ಉತ್ಸಾಹಗಳು ಅದನ್ನು ಬೇಗ ಮರೆಮಾಡಿದುವು. ಚಂದ್ರನು ಅವಳನ್ನು ಪ್ರೇಮದ ನೂತನ ಲೋಕಕ್ಕೇ ಕರೆದುಕೊಂಡು ಹೋಗಿದ್ದನು. ಅವಳು

ಮನೆಯನ್ನು ಸಿಂಗರಿಸಿ, ಚಂದ್ರನಿಗೆ ಇಷ್ಟವಾದ ತಿಂಡಿಗಳನ್ನು ಮಾಡಿ, ಅವನೊಡನೆ ಸರಸಾಲಾಪದಲ್ಲಿ ಲೋಕವನ್ನೇ ಮರೆಯುತ್ತಿದ್ದಳು. ಚಂದ್ರನು ಇಷ್ಟಪಟ್ಟು ವೈದ್ಯವೃತ್ತಿಯನ್ನು ಆರಿಸಿಕೊಂಡವನು. ಅವನ ಪ್ರತಿಭೆಗೆ ತಕ್ಕ ಮನ್ನಣೆಯೂ ಸಿಕ್ಕಿತ್ತು. ಬಹಳ ಸುಖವಾಗಿಯೇ ಇದ್ದರು ಇಬ್ಬರೂ.

"ನಾವೆಂದು ಊರಿಗೆ ಹೊರಡುವುದು ?"

"ಹೋಗಲೇಬೇಕೆ ತುಳಸೀ ? ನಿಮ್ಮ ತಾಯಿಯನ್ನೇ ಇಲ್ಲಿಗೆ ಬರಹೇಳಿದರೆ ?"

ತುಳಸಿಗೆ ತಂದೆಯ ಮನೆಗೆ ಹೋಗಬೇಕೆಂದು ತೀವ್ರಾಭಿಲಾಷೆ ಯುಂಟಾಗಿತ್ತು. ಎಳತನದ ಸುಖವನ್ನು ಪುನಃ ಸವಿಯಲು ಆತುರಳಾಗಿ ದ್ದಳು.

"ಈಗ ಹೋಗದಿದ್ದರೆ ತಂದೆಯವರು ತುಂಬಾ ನೊಂದುಕೊಳ್ಳು ತ್ತಾರೆ."

"ನನ್ನ ಗತಿ ?" ಚಂದ್ರನು ಮುಗುಳುನಗೆ ನಗುತ್ತಾ ತಲೆಯೆತ್ತಿದನು.

ತುಳಸಿಯೂ ನಗುತ್ತಾ, "ನೀವೂ ಬನ್ನಿ" ಎಂದಳು.

"ನನ್ನ ಕೆಲಸ ಮಣ್ಣುಪಾಲಾಗುತ್ತೆ."

* * * * *

ತುಳಸಿಯೇನೋ ಹೊರಟು ಹೋದಳು. ಒಂದೆರಡು ತಿಂಗಳೊಳ ಗಾಗಿ ಚಂದ್ರನಿಗೂ ಬೇಸರವಾಗಿ ಅವಳ ಹಿಂದೆ ಹೊರಟನು. ಆ ಮೂರು ನಾಲ್ಕು ತಿಂಗಳೂ ಸರಸ್ವತಮ್ಮನಿಗೆ ಹಬ್ಬದಂತಿತ್ತು. ತುಳಸಿಗೆ ಎಷ್ಟು ತಿಂಡಿ ಮಾಡಿಟ್ಟರೂ ತೃಪ್ತಿಯಿಲ್ಲ. ರಾಧೆಯು ಹುಟ್ಟಿ ಎರಡು ತಿಂಗಳಾ ಗಿತ್ತಷ್ಟೆ. ಆಗಲೇ ಚಂದ್ರನು ಹೊರಡುವ ಆತುರದಲ್ಲಿದ್ದನು.

"ತುಳಸಿ ಇನ್ನು ನಾಲ್ಕು ದಿನ ಇಲ್ಲೇ ಇರಲಿ. ಎಳೇಮಗು ವನ್ನು ಕಟ್ಟಿಕೊಂಡು ಒಬ್ಬಳೇ ಹೇಗಿರುತ್ತಾಳೆ ?" "ಮಗುವನ್ನು ನೋಡಿಕೊಳ್ಳಲು ಯಾರನ್ನಾದರೂ ಗೊತ್ತುಮಾಡ್ತೀನಿ" ಎಂದನು ಚಂದ್ರ.

"ಅಷ್ಟುದೂರದ ಪ್ರಯಾಣ ಮಗುವಿನ ಮೈಗಾಗುವುದಿಲ್ಲ" ಚಂದ್ರನು ನಸುನಗುತ್ತಾ "ನಾನಿಲ್ಲವೇ, ಸ್ವಂತ ಡಾಕ್ಟರ್ ? ನೋಡಿ ಕೊಳ್ಳುತ್ತೇನೆ," ಎಂದನು.

ನಿರ್ವಾಹವಿಲ್ಲದೆ ಸರಸ್ವತಮ್ಮನು ಸುಮ್ಮನಾದರು. ಹೊಸ ಸೀರೆ ಯುಡಿಸಿ, ಕುಂಕುಮವಿಟ್ಟು ಮನಸಾರೆ ಹರಸಿ ಮಗಳನ್ನು ಕಳುಹಿಸಿ ಕೊಟ್ಟರು.

ತುಳಸಿಯು ತಂದೆಯ ಮನೆಯ ಹೊಸ್ತಿಲನ್ನು ದಾಟಿದ್ದು ಅದೇ ಕಡೆಯಾಯಿತು.

* * * * *

ಆ ದಿನದ ನೆನಪು ಚಂದ್ರನ ದೇಹದಲ್ಲಿ ಜೀವಸಂಚಾರವಿರುವವರೆಗೂ ಬಿಟ್ಟು ಹೋಗುವುದಲ್ಲ. ಭಾರತ ಸ್ವಾತಂತ್ರ್ಯದ ಅರುಣೋದಯ. ರಕ್ತ ಬಲಿಯಿಲ್ಲದೆ ಸಾಧಿಸಿದ ಸ್ವಾತಂತ್ರ್ಯವೆಂದು ದೇಶವೇ ಹಿಗ್ಗಿ ಬಿರಿಯಿತು. ಮುಂದಿನ ಭಯಾನಕ ದೃಶ್ಯಗಳ ನೆರಳೂ ಕೂಡ ಆ ದಿನದ ಸುಪ್ರಭಾತದಲ್ಲಿ ಕಾಣಿಸಿಕೊಳ್ಳಲಿಲ್ಲ. ಜವಾಹಿರರು ರಾಷ್ಟ್ರಧ್ವಜವನ್ನು ಹಾರಿಸುತ್ತಿರಲು ದೇವಲೋಕವೇ ಆಶೀರ್ವಚನವಿತ್ತಂತೆ ಕಾಮನಬಿಲ್ಲು ಕಾಣಿಸಿಕೊಂಡಿತು. ಅದಾದ ಕೇವಲ ಹದಿನೈದೇ ದಿನಗಳು. ಭಯಂಕರ ಪ್ರಳಯಕ್ಕಾರಂಭ ವಾಯಿತು.

ಚಂದ್ರನು ಆಸ್ಪತ್ರೆಯಿಂದ ಬೇಗ ಹೊರಟನು. ಊರಲ್ಲಿ ಗಲಭೆ ಯೆಂದು ವರ್ತಮಾನ ತಿಳಿದಾಗ ಆವನು ಶಸ್ತ್ರಚಿಕಿತ್ಸೆಯ ಕೋಣೆಯಲ್ಲಿ ದ್ದನು. ಆಗ ಅವನಿಗೆ ತಿಳಿಸುವ ಧೈರ್ಯ ಯಾರಿಗೂ ಇರಲಿಲ್ಲ. ಕೈ ತೊಳೆದು ಹೊರಗೆ ಬರುತ್ತಲೇ ಅಲ್ಲಿಯ ನೌಕರನೊಬ್ಬನು ವರ್ತಮಾನ ತಿಳಿಸಿದನು. ಗಾಬರಿಯಿಂದ ಚಂದ್ರನು ಹೊರಟನು. "ದೇವರೇ! ತುಳಸಿ, ರಾಧೆ ಕ್ಷೇಮವಾಗಿರಲಿ" ಎಂಬುದೊಂದೇ ಅವನ ಜಪವಾಗಿತ್ತು. ಎಷ್ಟು ತಿರುಗಿಸಿದರೂ ಕಾರೇ ಹೊರಡಲೊಲ್ಲದು. ಚಂದ್ರನ ಮೈಯೆಲ್ಲಾ ಬೆವತು ನೀರಾಗಿತ್ತು. ಕಡೆಗೆ ಅಲ್ಲಿದ್ದವರೆಲ್ಲ ತಳ್ಳಿ ಕಾರನ್ನು ಹೊರಡಿಸುವ ವೇಳೆಗೆ ಅರ್ಧಘಂಟೆಯಾಯಿತು. ಮನೆಯಕಡೆ ಹೋಗಹೋಗುತ್ತ ಜನರ ಗುಂಪು ಹೆಚ್ಚುತ್ತಿದ್ದಿತು. ಚಂದ್ರನ ಗಾಬರಿಯೂ ಹೆಚ್ಚಾಗುತ್ತ ಹೋಯಿತು. ಮುಂದೆ ಕಾರನ್ನು ಬಿಡುವುದೇ ಅಸಾಧ್ಯವಾಗಲು ಅಲ್ಲೇ ನಿಲ್ಲಿಸಿ ಚಂದ್ರನು ನುಗ್ಗಿಹೋದನು. ಅಲ್ಲಿಯ ದೃಶ್ಯವನ್ನು ನೋಡಿ ಅವನ ಹೃದಯ ಬಾಯಿಗೇ ಬಂತು. ಅವನ ಮನೆ, ತುಳಸಿಯ ಪ್ರೇಮ

ಮಂದಿರ ಬೆಂಕಿಹತ್ತಿ ಉರಿಯುತ್ತಿತ್ತು. ಅಲ್ಲಿ ಸೇರಿದ್ದವರು ಬೆಂಕಿಯನ್ನಾರಿಸಲು ಪ್ರಯತ್ನಿಸುತ್ತಿದ್ದರು. ಚಂದ್ರನು "ತುಳಸೀ" ಎಂದರಚುತ್ತಾ ಮುನ್ನುಗ್ಗಲು ಯಾರೋ ಅವನ ರಟ್ಟೆಯನ್ನು ಬಲವಾಗಿ ಹಿಡಿದು ನಿಲ್ಲಿಸಿದರು. ರಾಧೆಯನ್ನು ತೊಡೆಯಮೇಲೆ ಹಾಕಿಕೊಂಡು ಅವನ ಮುದಿ ಸೇವಕ ರಾಮಸಿಂಹನು ಕುಳಿತಿದ್ದನು. ರಾಧೆಯೆಂದು ಗುರುತೇ ಸಿಕ್ಕದಷ್ಟು ಅವಳ ದೇಹವೆಲ್ಲಾ ಸುಟ್ಟುಹೋಗಿತ್ತು. ಚಂದ್ರನು ಕುಳಿತುಕೊಂಡು ರಾಧೆಯನ್ನು ಮೆಲ್ಲಗೆ ಎತ್ತಿಕೊಂಡನು. ಸುಟ್ಟಿದ ನೋವಿಗೆ ರಾಧೆಯು "ಅಮ್ಮಾ" ಎಂದು ಚೀರಿದಳು. ಚಂದ್ರನ ಪಳಗಿದ ಕಣ್ಣಿಗೆ ಅವಳ ಜೀವದ ಆಸೆಯಿಲ್ಲವೆಂದು ಖಂಡಿತವಾಗಿ ತಿಳಿಯಿತು. ರಾಮಸಿಂಹನನ್ನು ನೋಡಿ, "ಅಮ್ಮಾವರೆಲ್ಲಿ?" ಎಂದನು. ರಾಮಸಿಂಹನು ಕಣ್ಣುಗಳಿಂದ ಧಾರಾಳವಾಗಿ ನೀರು ಸುರಿಯುತ್ತಿರಲು ಸುಮ್ಮನೆ ತಲೆಯಾಡಿಸಿದನು. ರಾತ್ರಿ ಸುಮಾರು ಹತ್ತು ಘಂಟೆಯವೇಳೆಗೆ ನೋವಿನ ಪಂಜರದಿಂದ ತಪ್ಪಿಸಿಕೊಂಡು ರಾಧೆಯ ಪ್ರಾಣಪಕ್ಷಿ ಹಾರಿಹೋಯಿತು.

ಮನುಷ್ಯನ ಸಹನಶಕ್ತಿಗೂ ಒಂದು ಮಿತಿಯುಂಟು. ಚಂದ್ರನ ದುಃಖ ಆ ಎಲ್ಲೆಯನ್ನು ಮೀರಿ ಹೋಗಿತ್ತು. ಅವನ ಸಹೋದ್ಯೋಗಿಗಳೂ, ನೌಕರರೂ ತುಳಸಿಗಾಗಿ ಊರನ್ನೆಲ್ಲಾ ಶೋಧಿಸಿದರು. ಎಲ್ಲೂ ಪತ್ತೆಯಾಗಲಿಲ್ಲ. ತಾನು ಹೇಗೆ ಊರುಬಿಟ್ಟನೋ, ಮಾವನ ಮನೆಯನ್ನು ಸೇರಿದನೋ, ಒಂದೂ ಚಂದ್ರನಿಗೆ ನೆನಪಿಲ್ಲ. ಅವನ ದುಃಖದ ಆಳವನ್ನರಿತ ಅತ್ತೆಮಾವಂದಿರು ಆ ವಿಷಯ ಹೆಚ್ಚು ಪ್ರಶ್ನಿಸುತ್ತಿರಲಿಲ್ಲ. ರಾಧೆ ಸತ್ತಳೆಂದೂ ತುಳಸಿ ಕಣ್ಮರೆಯಾದಳೆಂದೂ ಮಾತ್ರ ತಿಳಿದಿದ್ದರು. ಬರುತ್ತಲೇ ಎಳೆಯ ಮಗುವಿನಂತೆ ಬಿಕ್ಕುತ್ತಾ ಒಂದ ಚಂದ್ರನು ಅಷ್ಟು ಸುದ್ದಿಯನ್ನು ತಿಳಿಸಿದ್ದನು. ಪುನಃ ಅವನು ಆ ಮಾತನ್ನೆತ್ತಲಿಲ್ಲ. ಮರದ ತುಂಡಿನಂತೆ ಬಿದ್ದಿರುತ್ತಿದ್ದನು. ತಮ್ಮ ದುಃಖವನ್ನು ನುಂಗಲು ಪ್ರಯತ್ನಿಸುತ್ತಿದ್ದರೇ ಹೊರತು, ಸರಸ್ವತಮ್ಮನಾಗಲಿ, ಶ್ರೀನಿವಾಸರಾಯರಾಗಲಿ ಚಂದ್ರನನ್ನು ಪ್ರಶ್ನಿಸುತ್ತಿರಲಿಲ್ಲ.

* * * * *

"ಇನ್ನೆಷ್ಟು ದಿನ ಹೀಗೆ ಗೋಳಾಡುತ್ತಿರುತ್ತೀ, ಚಂದ್ರೂ? ಆದುದಾಯಿತು. ಮುಂದಿನ ಯೋಚನೆ ನೋಡು. ನನ್ನನ್ನು ನೋಡಿ

ಧೈರ್ಯ ತಂದುಕೋ". —ಶ್ರೀನಿವಾಸರಾಯರು ಈ ಮಾತನ್ನಾಡುತ್ತಿರುವಾಗಲೇ ಅವರ ಕಣ್ಣಿಂದ ಪಟಪಟನೆ ನೀರುದುರಿತು.

ಚಂದ್ರನು ನಿರಾಸೆ ತುಂಬಿದ ಕಣ್ಣುಗಳನ್ನು ಅವರ ಕಡೆ ತಿರುಗಿಸಿ "ನಾನೇನು ಮಾಡಲಿ ?" ಎಂದನು.

"ಏನುಮಾಡಲಿ—ಎಂದರಾಗುತ್ತದೆಯೇ ? ನೀನಿನ್ನೂ ಹುಡುಗ, ಮಾಡಬೇಕಾದದ್ದು ಎಷ್ಟೋ ಇದೆ."

"ಯಾರಿಗಾಗಿ ಮಾಡಲಿ ?"

"ನಾನು ಯಾರಿಗಾಗಿ ಮಾಡುತ್ತೇನೆ ?" ಎಂದವರೇ ಕುರ್ಚಿಯ ಮೇಲೆ ಕುಳಿತು ಮುಖಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅತ್ತುಬಿಟ್ಟರು.

ಚಂದ್ರನಿಗೆ ನಾಚಿಕೆಯಾಯಿತು. "ನಾನೆಷ್ಟು ಸ್ವಾರ್ಥತೆಯಿಂದ ನನ್ನ ದುಃಖವನ್ನು ಬೆಳಸಿಕೊಳ್ಳುತ್ತಿದ್ದೇನೆ. ಅವರ ದುಃಖವೇನೆಂಬುದನ್ನು ಕೂಡ ವಿಚಾರಿಸಲಿಲ್ಲವಲ್ಲಾ", ಎಂದು ಮರುಗಿ, ಎದ್ದು ಮಾವನ ಭುಜವನ್ನು ನೇವರಿಸಿದನು. ಶ್ರೀನಿವಾಸರಾಯರು ಕಣ್ಣೊರಸಿಕೊಂಡು, "ಬಿಡು, ಪರವಾಯಿಲ್ಲ ಬಿಡು. ಈಗ ದೆಹಲಿಯಲ್ಲಿ ವೈದ್ಯರಿಗೇನೂ ಕಡಮೆ ಕೆಲಸವಿಲ್ಲ. ಲಕ್ಷಾಂತರ ನಿರಾಶ್ರಿತರು ಬಂದಿದ್ದಾರೆ. ಅವರ ಯೋಗಕ್ಷೇಮ ವಿಚಾರಿಸಲು ವೈದ್ಯರ ತಂಡವೇ ಬೇಕಾಗಿದೆ" ಎಂದರು.

ನಿರಾಶ್ರಿತರೆನ್ನುತ್ತಲೇ ಚಂದ್ರನ ಮೈಯಲ್ಲಿ ವಿದ್ಯುತ್ಸಂಚಾರವಾಯಿತು. ಕೋಣೆಯಲ್ಲಿ ಆ ಕಡೆಯಿಂದ ಈ ಕಡೆಗೆ ತಿರುಗಲಾರಂಭಿಸಿದನು. ಶ್ರೀನಿವಾಸರಾಯರು ವಿಷಾದದಿಂದ ನಕ್ಕು, "ಅವರಲ್ಲಿ ತುಳಸಿಯಿಲ್ಲ. ವಿಚಾರಿಸಿ ಕೇಳಿದೆ" ಎಂದರು.

* * * * *

ಚಂದ್ರನಿಗೆ ನಿಜವಾಗಿಯೂ ಕೆಲಸದಲ್ಲಿ ಅಲ್ಪ ಸ್ವಲ್ಪ ಶಾಂತಿ ದೊರಕಿತು. ಹಗಲೆನ್ನದೆ ರಾತ್ರಿಯೆನ್ನದೆ ನಿರಾಶ್ರಿತರ ವಸತಿಯಲ್ಲಿ ದುಡಿಯುತ್ತಿದ್ದನು. ಅವರ ದುಃಖದ ಕತೆಗಳನ್ನು ಕೇಳಿ ಅವನ ಮೈಮೇಲೆ ಮುಳ್ಳೇಳುತ್ತಿದ್ದಿತು. ಅಂತಹ ಸನ್ನಿವೇಶಗಳಲ್ಲಿ ತುಳಸಿಯನ್ನು ಚಿತ್ರಿಸಿಕೊಳ್ಳುವ ಶಕ್ತಿಯೂ ಅವನಿಗಿರಲಿಲ್ಲ. ಆದರೆ ಈ ಹೆಣ್ಣುಮಕ್ಕಳಲ್ಲಿ ಅನೇಕರು ತುಳಸಿಯಂತೆ ಸುಖದಲ್ಲಿ ಬೆಳೆದವರು. ಅವರಿಗೆ ತಾನು

ಮಾಡುವ ಸೇವೆ ತುಳಸಿಗೆ ನೆರವಾಗಲೆಂಬ ಬುದ್ಧಿಯಿಂದ ಚಂದ್ರನು ದುಡಿಯುತ್ತಿದ್ದುದರಿಂದ ಅವನ ಕೆಲಸದಲ್ಲಿ ಶ್ರದ್ಧೆಯು ಅನಂತ ವಿಶ್ವಾಸ ಬೆರತಿತ್ತು. ಅವನಿಗೆ ಬಿಡುವೇ ಇರಲಿಲ್ಲ. ನಿರಾಶ್ರಿತರಿಗೆ ಔಷಧೋಪಚಾರಗಳನ್ನೆಸಗುವುದೇ ಅಲ್ಲದೆ, ಉಡಲು ಬಟ್ಟೆ, ತಿನ್ನಲು ಆಹಾರ ಇವುಗಳನ್ನೂ ಶೇಖರಿಸಲು ಶ್ರಮಿಸುತ್ತಿದ್ದನು. ಆ ವಸತಿಯ ಹೆಣ್ಣುಮಕ್ಕಳೆಲ್ಲಾ ಅವನನ್ನು ದೇವರಂತೆ ಕಾಣುತ್ತಿದ್ದರು.

ಈಗ ಅವನಲ್ಲಿ ಮೊದಲಿನ ಉಲ್ಲಾಸವಿಲ್ಲ; ಹಾಸ್ಯವಿಲ್ಲ. ತನ್ನ ದುಃಖವನ್ನು ಮರೆಯಲು ಘೋರತಪಸ್ಸನ್ನೇ ಆಚರಿಸುತ್ತಿದ್ದನು.

ಸರಸ್ವತಮ್ಮನಿಗೆ ಅವನ ಕಷ್ಟವನ್ನು ನೋಡಿ ಮರುಕವುಂಟಾಗುವುದು. "ಹೊತ್ತಿಗೆ ಸರಿಯಾಗಿ ಊಟಕ್ಕೆ ಬಾ, ಚಂದ್ರೂ. ಆರೋಗ್ಯವಾಗಿದ್ದರಲ್ಲವೇ, ಕೆಲಸ?" ಎನ್ನುವರು.

"ಆರೋಗ್ಯವಿಲ್ಲದೆ ನನಗೇನಾಗಿದೆ, ಅತ್ತೇ" ಎಂದು ಉತ್ತರವನ್ನು ಹಾರಿಸಿ ಹೊರಟು ಹೋಗುವನು.

ಆ ವಸತಿಯಲ್ಲಿ ಪೂರುವರ್ಷದ್ದೊಂದು ಮಗು. ಅದನ್ನು ನೋಡಿದಾಗಲೆಲ್ಲಾ ರಾಧೆಯ ನೆನಪು ಚಂದ್ರನ ಮನಸ್ಸನ್ನು ಕಲಕುವುದು. ಆಸ್ಪತ್ರೆಯಿಂದ ಬರುವವೇಳೆಗೆ ಸಿಂಗರಿಸಿಕೊಂಡು ಕಾರಿನಲ್ಲಿ ಹೊರಡಲು ಸಿದ್ಧಳಾಗಿರುತ್ತಿದ್ದ ರಾಧ! ಮನೆಗೆ ಬರುವವೇಳೆಗೆ ಅಮ್ಮನ ಮೇಲೆ ಎಷ್ಟೋ ದೂರುಗಳು. ನಗುತ್ತಾ, ಕುಣಿಯುತ್ತಾ, ಇಬ್ಬರ ಹೃದಯದಲ್ಲೂ ತನ್ನದೊಂದು ಸಿಂಹಾಸನವನ್ನೇ ಪ್ರತಿಷ್ಠಿಸಿಬಿಟ್ಟಿದ್ದಳು. ಅವಳನ್ನು ಎಷ್ಟು ಸಿಂಗರಿಸಿದರೂ ತುಳಸಿಗೆ ತೃಪ್ತಿಯಿಲ್ಲ. ಕಡೆಯದಿನ ಆಸ್ಪತ್ರೆಗೆ ಹೋಗುವ ಮೊದಲು ಬೊಂಬೆ ತರಬೇಕೆಂದು ಹಠಹಿಡಿದು ಮಾತು ತೆಗೆದುಕೊಂಡಿದ್ದಳು. ಪುನಃ ನೋಡುವ ವೇಳೆಗೆ ಸುಟ್ಟ ಮಾಂಸದ ಮುದ್ದೆಯಾಗಿದ್ದಳು. ಅಲ್ಲಿಗೆ ಚಂದ್ರನ ಆಲೋಚನೆಗಳು ತಡೆಗಟ್ಟಿ ನಿಲ್ಲುವುವು. ಆ ಭಯಂಕರ ದೃಶ್ಯವನ್ನು ಮನಸ್ಸಿನಿಂದ ಅಳಿಸಲು ಸಾಧ್ಯವೇ ಇರಲಿಲ್ಲ. ಇಂದಿಗೂ ಅವಳು ನೋವಿನಿಂದ ಚೀರುತ್ತಿರುವಂತೆ ಅವನಿಗೆ ಆಗಾಗ ತೋರುವುದು. ತುಳಸಿಯೂ ಅಲ್ಲಿಯೇ ಬೆಂದು ಹೋಗಿದ್ದರೆ! ಈ ಅನಿಶ್ಚಯವಿರುತ್ತಿರಲಿಲ್ಲ. ಕಲ್ಪಿತಯಾತನೆ

ಯಿರುತ್ತಿರಲಿಲ್ಲ. ಆಲೋಚನೆಗಳನ್ನು ಹರಿಯ ಬಿಟ್ಟರೆ ಹುಚ್ಚು ಹಿಡಿಯುವಂತಾಗುತ್ತಿತ್ತು. ಇವನ್ನೆಲ್ಲ ಮರೆಯಲು ಆ ಅನಾಥಮಗುವನ್ನು ಮುದ್ದಿಸಿ ಅವಳಿಗೆ ತಿಂಡಿಯನ್ನು ತೆಗೆದುಕೊಂಡು ಹೋಗುತ್ತಿದ್ದನು.

* * * * *

ಒಂದು ಸಂಜೆ ಶ್ರೀನಿವಾಸರಾಯರು ಹೊರಗೆ ಹೊರಡಲು ಸಿದ್ಧರಾಗಿ ನಿಂತಿದ್ದರು. ಬೈಸಿಕಲ್ಲನ್ನು ತಳ್ಳಿಕೊಂಡು ಚಂದ್ರನು ಆಗತಾನೆ ಮನೆಗೆ ಬರುತ್ತಿದ್ದನು. ಮಾವನನ್ನು ನೋಡಿ, "ಎಲ್ಲಿಗೋ ಹೊರಟಿರುವ ಹಾಗಿದೆ?" ಎಂದನು.

"ಗಾಂಧೀಜಿಯ ಪ್ರಾರ್ಥನಾಸಭೆಗೆ ಹೋಗಿಬರೋಣವೆಂದುಕೊಂಡೆ" ಎಂದರು.

"ಒಂದು ನಿಮಿಷ ತಡೆದರೆ ನಾನೂ ಬರುತ್ತೇನೆ."

"ಇನ್ನೂ ಈಗತಾನೇ ಮನೆಗೆ ಬರುತ್ತಿದ್ದೀ. ಸ್ವಲ್ಪ ಕಾಫಿ ತಿಂಡಿ ತೆಗೆದುಕೊಂಡು ವಿಶ್ರಮಿಸಿಕೋ". ಆ ವಿಶ್ರಾಂತಿಯೇ ಬೇಕಾಗಿರಲಿಲ್ಲ ಚಂದ್ರನಿಗೆ. ಒಂದರೆಗಳಿಗೆ ಸುಮ್ಮನೆ ಕುಳಿತರು ಮನಸ್ಸನ್ನು ಕದಡುವ ಆಲೋಚನೆಗಳು; ಹಿಂದಿನ ನೆನಪುಗಳು; ನಡೆದುಹೋದುದನ್ನು ಬದಲಾಯಿಸಲು ಶಕ್ತಿಯಿಲ್ಲದ ತನ್ನ ಅಸಹಾಯತೆ! ಚಂದ್ರನಿಗೆ ವಿಶ್ರಾಂತಿಯಲ್ಲಿ ಶಾಂತಿಯಿರಲಿಲ್ಲ. ದುಡಿತ, ದುಡಿತ! ಹಗಲೂ ರಾತ್ರಿ ದುಡಿದು ದುಃಖದ ಆವೇಗವನ್ನು ಮರೆಯಬೇಕಾಗಿತ್ತು. ತುಳಸಿಯ ನಿರಾಶ್ರಿತ ಅಜ್ಞಾತ ಸ್ಥಿತಿಯನ್ನು ನೆನೆದರೆ ಅವನಿಗೆ ಈ ಭೂಮಿಯ ಮೇಲಿರುವುದೇ ಅಸಾಧ್ಯವಾಗಿ ತೋರುತ್ತಿತ್ತು.

"ಬೇಗ ಬರುತ್ತೇನೆ" ಎಂದು ಒಳಗೆ ಹೋದನು. ಸರಸ್ವತಮ್ಮನು ತಿಂಡಿ ಕಾಫಿಯನ್ನು ಸಿದ್ಧವಾಗಿಯೇ ಇಟ್ಟುಕೊಂಡಿದ್ದುದರಿಂದ ಅವನು ಹಿಂತಿರುಗಿ ಬರುವುದು ತಡವಾಗಲಿಲ್ಲ, ಇಬ್ಬರೂ ಹೊರಟು ಮೈದಾನವನ್ನು ಸೇರುವುದರೊಳಗಾಗಿ ಜನರು ಕಿಕ್ಕಿರಿದು ನೆರೆದಿದ್ದರು. ಗಾಂಧೀಜಿಯೂ ಬಂದು ಕುಳಿತಿದ್ದರು. ಆ ದಿನದ ಪ್ರಸಂಗವು ನಿರಾಶ್ರಿತರ ವಿಚಾರವಾಗಿಯೇ ನಡೆದಿತ್ತು; ಅದರಲ್ಲೂ ನಿರಾಶ್ರಿತರಾದ ಹೆಣ್ಣುಮಕ್ಕಳ ವಿಚಾರವಾಗಿ. "ಜಾತಿಕೆಟ್ಟರೆಂದು ಅವರನ್ನು ದೂಡಬೇಡಿ; ಅವರು

ಬುದ್ಧಿಪೂರ್ವಕವಾಗಿ ಕೆಟ್ಟ ಹಾದಿಗೆ ನಡೆದವರಲ್ಲ. ಬಲಾತ್ಕಾರದಿಂದ, ಹಿಂಸೆಯಿಂದ ಕುಲವಧುಗಳು ದಾರಿ ತಪ್ಪಿದ್ದರೆ, ವಿಶ್ವಾಸದಿಂದ, ಆದರದಿಂದ ಹಿಂದಕ್ಕೆ ಬರಮಾಡಿಕೊಳ್ಳಿ." ಎಂದು ಅಮೃತವಾಣಿಯಿಂದ ಮಹಾತ್ಮರು ಉಪದೇಶಿಸಿದರು.

ಚಂದ್ರನು ಒಂದೇ ಮನಸ್ಸಿನಿಂದ ಕೇಳಿದನು. ಆ ಮಹಾತ್ಮನ ಸನ್ನಿಧಿಯಲ್ಲಿ ಎಂತಹ ಅಲೌಕಿಕ ಶಾಂತಿ. ಮನಸ್ಸಿನ ಹೊಡೆದಾಟವೆಲ್ಲಾ ನಿಂತು ಶಾಂತಿಸಾಗರದಲ್ಲಿ ಮಿಂದು ಬಂದಂತಿತ್ತು. ಹೆಂಗಳೆಯರ ಘೋರ ಸಂಕಟಕ್ಕೆ ಮರುಗಿ ಮಹಾತ್ಮರ ಕಣ್ಣುಗಳಿಂದ ನೀರುದುರುತ್ತಿತ್ತು. ಎಂತಹ ಕಷ್ಟಕಾಲದಲ್ಲಿಯೂ ಮಿಡುಕದ ಜೀವವು ಪರರ ಕಷ್ಟಕ್ಕಾಗಿ ತಲ್ಲಣಿಸುತ್ತಿತ್ತು. ಚಂದ್ರನು ನಿರ್ವಿಕಾರವಾಗಿ ತುಳಸಿಯ ವಿಚಾರವಾಗಿ ಆಲೋಚಿಸಲು ಶಕ್ತನಾದನು. "ಈಗೊಂದುವೇಳೆ ತುಳಸಿ ದೊರೆತರೆ—ಆನಂದದಿಂದ ಅವಳನ್ನು ಮನೆಗೊಯ್ದು ಪುನಃ ನನ್ನ ಹೃದಯಮಂದಿರ ದಲ್ಲಿ ಪ್ರತಿಷ್ಠಿಸುವೆನು. ನೊಂದ ಜೀವವನ್ನು ಪುನಃ ನೋಯಿಸುವೆನೆ? ತುಳಸಿ ಬರಿದು ಮಾಡಿಹೋದ ಸ್ಥಳವನ್ನು ತುಂಬಲು ಬೇರಾರಿಗೆ ಸಾಧ್ಯ?" ಎಂದು ಆಲೋಚಿಸಿಕೊಂಡನು. ಮಹಾತ್ಮರ ವಚನಗಳನ್ನು ಎಷ್ಟು ಕೇಳಿದರೂ ಅವನಿಗೆ ತೃಪ್ತಿಯೆನಿಸಲಿಲ್ಲ. ಸಭೆ ಮುಗಿದಮೇಲೂ ಕಲ್ಲಿನ ಪ್ರತಿಮೆಯಂತೆ ಕುಳಿತೇ ಇದ್ದನು. ಶ್ರೀನಿವಾಸರಾಯರು ಭುಜ ಹಿಡಿದು ಅಲುಗಿಸಿದಾಗಲೇ ಅವನಿಗೆ ಎಚ್ಚರ. ಅವರ ಕಣ್ಣುಗಳಿಂದ ಧಾರೆಧಾರೆಯಾಗಿ ನೀರು ಸುರಿಯುತ್ತಿತ್ತು. "ಪುನಃ ತುಳಸಿ ದೊರೆಯು ವಳೇ?" ಎಂದು ನಿಟ್ಟುಸಿರುಗರೆದರು.

ಮಾರನೆಯ ದಿನ ಮಧ್ಯಾಹ್ನ ಚಂದ್ರನು ಬಿರ್ಲಾ ಭವನಕ್ಕೆ ನಡೆ ದನು. ಮಹಾತ್ಮರ ಬಳಿಯಲ್ಲಿ ಬೇರೆ ಯಾರೂ ಇಲ್ಲದುದರಿಂದ ಚಂದ್ರ ನನ್ನು ಬೇಗ ಕರೆಸಿಕೊಂಡರು. ಸಹಜವಾದ ಸೌಜನ್ಯದಿಂದ ಚಂದ್ರನ ಕೈ ಹಿಡಿದು ಕುಳ್ಳಿರಿಸಿಕೊಂಡರು. "ನೀವು ನಿರಾಶ್ರಿತರ ವಿಚಾರದಲ್ಲಿ ಬಹಳ ಶ್ರದ್ಧೆವಹಿಸಿ ಕೆಲಸಮಾಡುತ್ತಿರುವಿರಂತೆ. ಕೇಳಿ ಬಹಳ ಸಂತೋಷವಾ ಯಿತು." ಶ್ರೀಕೃಷ್ಣನೊಮ್ಮೆ ಅರ್ಜುನನ ಮೈದಡವಲು ಅವನ ಸಮಸ್ತ ದುಃಖಗಳೂ ಮರೆಯಾದುವಂತೆ. ಈಗ ಚಂದ್ರನ ಸ್ಥಿತಿಯೂ ಹಾಗೆಯೇ

ಆಯಿತು. ತನ್ನ ಕೆಲಸವೂ ಸಾರ್ಥಕವಾಯಿತೆನ್ನಿಸಿತು. ತಲೆಬಾಗಿ ಸುಮ್ಮನಿದ್ದನು. "ಬೇರೆಯವರ ಕಷ್ಟದಲ್ಲಿ ಸಹಾನುಭೂತಿ ತೋರುವುದು ದೈವದತ್ತ ವರ."— ಮಹಾತ್ಮರೆಂದರು. "ನಾನೂ ಕಷ್ಟಪಟ್ಟಿದ್ದೇನೆ ಬಾಪೂಜಿ", ಎಂದು ಚಂದ್ರನು ತನ್ನ ದುಃಖದ ಕಥೆಯನ್ನು ತೋಡಿ ಕೊಂಡನು. ಮಹಾತ್ಮರ ಮುಖವು ಕನಿಕರದಿಂದ ಬಾಡಿಹೋಗಿತ್ತು. ಮಾತನಾಡದೆ ಚಂದ್ರನ ಬೆನ್ನನ್ನು ನೇವರಿಸಿದರು. ಕೆಲಹೊತ್ತು ಸುಮ್ಮ ನಿದ್ದು, "ತುಳಸಿ ನಿಮಗೆ ಖಂಡಿತ ಸಿಕ್ಕುತ್ತಾಳೆ. ದೇವರನ್ನು ನಂಬಿ. ಧೈರ್ಯಗೆಡಬೇಡಿ. ಆದರೆ ಮಾತ್ರ ಜೋಕೆಯಿಂದಿರಿ! ಈಗಲೇ ಹೇಳಿ ದ್ದೇನೆ. ಅವಳ ಮೇಲೆ ವಿಚಾರಣೆಗೆ ಕೂಡುವ ಅಧಿಕಾರವನ್ನು ದೇವರು ನಿಮಗೆ ಕೊಟ್ಟಿಲ್ಲ. ಪರಮಾತ್ಮನು ನಿಮಗೆ ಕೊಟ್ಟುದನ್ನು ನಮ್ರತೆ ಯಿಂದ, ವಿಶ್ವಾಸದಿಂದ ಸ್ವೀಕರಿಸಿ" ಎಂದರು. ಆ ದಿನ ಚಂದ್ರನು ಮನೆಗೆ ಬರುವ ವೇಳೆಗೆ ಸಂಜೆಯಾಗಿತ್ತು. ಮನಸ್ಸು ಶಾಂತವಾಗಿತ್ತು. ತುಳಸಿ ಹೊರಟುಹೋದಂದಿನಿಂದ, ಆ ರಾತ್ರಿ ಅನುಭವಿಸಿದಂತಹ ಹಿತವಾದ ನಿದ್ರೆ ಯನ್ನು ಚಂದ್ರನು ಎಂದೂ ಅನುಭವಿಸಿರಲಿಲ್ಲ.

* * * * *

ಮುಂದೆ ಅನೇಕ ದಿನಗಳು ಕಳೆದುವು. ಬರಬರುತ್ತ ಚಂದ್ರನಿಗೆ ಮಹಾತ್ಮರ ಅಭಯವಚನದಲ್ಲಿ ವಿಶ್ವಾಸ ಜಾರುತ್ತಾ ಬಂತು. ಇನ್ನೆ ಲ್ಲಿಯ ತುಳಸಿ! ಯಾವ ಪೈಶಾಚಿಕ ಕೃತ್ಯದಿಂದ ಎಂದು ಅವಳು ಹತಳಾ ದಳೋ! ಈ ಜನ್ಮದಲ್ಲಿ ಅವಳನ್ನು ಕಾಣುವ ಆಸೆಯಿಲ್ಲ!

ನಿರಾಸೆ ಹೆಚ್ಚಿದಂತೆಲ್ಲಾ ಚಂದ್ರನು ತನ್ನ ಕೆಲಸದಲ್ಲೇ ತಲ್ಲೀನನಾ ಗುತ್ತ ಬಂದನು. ಎಷ್ಟುಮಾಡಿದರೂ ಕೊನೆಮೊದಲಿಲ್ಲದ ಕೆಲಸ. ಹೊಟ್ಟೆಗಿಲ್ಲದ, ಬಟ್ಟೆಗಿಲ್ಲದ ಆ ಅನಾಥರ ನಡುವೆ ರೋಗಗಳು ಮನೆ ಮಾಡಿ ಕೊಂಡುದೇನಾಶ್ಚರ್ಯ? ಮಧ್ಯಾಹ್ನವಾಗುವ ವೇಳೆಗೆ, ಆ ಕರ್ಕಶ ದೃಶ್ಯ ಗಳನ್ನು ನೋಡಿ, ಅವನೆದೆಯು ಸೋತುಹೋಗುವುದು. ಮನೆಗೆ ನಡೆಯು ವುದಕ್ಕೂ ತ್ರಾಣಸಾಲದೆ ಹೋಗುವುದು. ಒಂದು ದಿನ ಉರಿಯುವ ಬಿಸಿಲಿನಲ್ಲಿ ನಿಧಾನವಾಗಿ ಬರುತ್ತಿರಲು ಹಿಂದೆ ಯಾರೋ ಹೆಂಗಸು ನಡೆದು ಬಂದಳು. ಮುಖವನ್ನು ಸೆರಗಿನಲ್ಲಿ ಮರೆಸಿಕೊಂಡಿದ್ದುದರಿಂದ ಯಾರೆಂದು

ತಿಳಿಯಲಿಲ್ಲ. ಮುಂದೆ ಹೋಗಲೆಂದು ಹೆಜ್ಜೆಯನ್ನು ನಿಧಾನ ಮಾಡಿದನು. ಅವಳು ಎದುರಿಗೆ ಬಂದು ಪರದೆಯನ್ನು ಸರಿಸಲು—ತುಳಸಿ! ಆಯಾಸದಿಂದ ಕಂದಿ, ಅನಾಥಳಾಗಿ ಬೆಂದ ತುಳಸಿ! ಚಿಂದಿ ಚಿಂದಿ ಸೀರೆಯನ್ನುಟ್ಟಿದ್ದಳು. ತಲೆಬಾಚಿ ಯಾವ ಕಾಲವೋ ಆಗಿತ್ತು. ಆದರೂ ಚಂದ್ರನ ಹೃದಯಾಧಿದೇವತೆ ತುಳಸಿ! ಚಂದ್ರನು ಕಣ್ಣನ್ನೇ ನಂಬಲಾರದೆ ಹೋದನು. "ತುಳಸೀ" ಎಂದು ಕೈಗಳನ್ನು ಚಾಚಿದನು. ತುಳಸಿಯು ಹೆದರಿದಂತೆ ಸ್ವಲ್ಪ ಹಿಂದೆ ಸರಿದಳು. ಚಂದ್ರನು ಅನುಮಾನದಿಂದ, "ನೀನು ತುಳಸಿಯಲ್ಲವೆ?" ಎಂದನು. ತುಳಸಿಯ ಕಣ್ಣೀರು ಹರಿಯುತ್ತಿತ್ತು. "ಹೌದು ನಾನೇ—ನಿರ್ಭಾಗ್ಯೆ ತುಳಸಿ," ಎಂದಳು.

ಚಂದ್ರನಿಗೆ ತಾನು ನಿದ್ರೆಯಲ್ಲಿ ಕನಸು ಕಾಣುತ್ತಿರುವಂತೆ ತೋರಿತು. ಅನೇಕಸಲ, ರಾತ್ರಿ ಮಲಗಿ ಅವನು ಈ ದೃಶ್ಯವನ್ನು ಕಲ್ಪಿಸಿಕೊಂಡಿದ್ದನು. ತುಳಸಿಯ ಪುನರ್ದರ್ಶನವಾದಾಗ ತಾನಾಡಬೇಕಾದ ಮಾತುಗಳನ್ನು ನಿರ್ಧರಿಸಿದ್ದನು. ಅವಳ ನೋವನ್ನೆಲ್ಲಾ ಮರೆಸುವೆನೆಂದು ಪಣತೊಟ್ಟಿದ್ದನು. ಆದರೆ ಈಗ ಅವನ ಬಾಯಲ್ಲಿ ಮಾತೇ ಹೊರಡಲಿಲ್ಲ. ಮೂಕನಂತೆ ತುಳಸಿಯನ್ನು ನೋಡುತ್ತಿದ್ದನು. ತುಳಸಿಯೂ ಸುಮ್ಮನಿದ್ದರೂ ಅವಳ ಅಂಕೆ ಮೀರಿ ಹರಿದ ಕಣ್ಣೀರನ್ನು ಸೆರಗಿನಲ್ಲಿ ಒರಸಿಕೊಂಡಳು. ಚಂದ್ರನಿಗೆ ತಟ್ಟನೆ ಎಚ್ಚರವಾದಂತಾಗಿ, "ಮನೆಗೆ ಬಾ, ತುಳಸೀ," ಎಂದನು. ತುಳಸಿ "ಬರಬಹುದೆ?" ಎಂದಳು.

"ಇದೇನು ಹೀಗೆನ್ನುತ್ತೀ? ನಿನ್ನ ಮನೆಗೆ ಬರಲು ನೀನು ಅಪ್ಪಣೆಯನ್ನು ಕೇಳಬೇಕೆ? ಬಾ, ಹೋಗೋಣ." "ಹಾಗಾದರೆ ಇಲ್ಲೇ ಇರಿ. ಮಗುವನ್ನು ತರುತ್ತೇನೆ." "ಮಗು!!" ಚಂದ್ರನು ಬೆಚ್ಚಿದನು. ಅವನ ಕಲ್ಪನೆಯಲ್ಲಿಯೂ ಮಗುವೊಂದರ ಚಿತ್ರ ಸುಳಿದಿರಲಿಲ್ಲ. ತಟ್ಟನೆ ಹೊಡೆದೆಬ್ಬಿಸಿದಂತಾಯಿತು. ತನ್ನದಲ್ಲದ ತುಳಸಿಯ ಮಗು! ಅವಮಾನದಿಂದ ರಕ್ತ ಬಿಸಿಯಾಯಿತು. ಅವನ ಅನುಮಾನವನ್ನು ನೋಡಿ ತುಳಸಿ, "ಹೌದು. ನಿರ್ಭಾಗ್ಯ ಮಗುವೊಂದಿದೆ. ನಾಲ್ಕು ತಿಂಗಳು. ರಾಧೆ ಚನ್ನಾಗಿದ್ದಾಳೆಯೆ?" ಎಂದಳು.

"ರಾಧೆ! ಇನ್ನೆಲ್ಲಿಯ ರಾಧೆ! ಮನೆ ಸುಟ್ಟಾಗ ರಾಧೆಯೂ ಬೆಂದು

ಹೋದಳು." ಕ್ಷಣಕಾಲ ಇಬ್ಬರ ಬಗೆಯ ಮುಂದೆಯೂ ಆ ಸುಖಸಂಸಾರವನ್ನು ಸುಟ್ಟು ಬೂದಿಮಾಡಿದ ಪ್ರಳಯಾಗ್ನಿಯು ಸುಳಿಯಿತು. ಆದರೆ ಕಷ್ಟದ ಬೇಗುದಿಯಲ್ಲಿ ಬೆಂದು ಬಂದ ತುಳಸಿಗೆ ರಾಧೆಯ ಮರಣ ವಾರ್ತೆಯೂ ಹೆಚ್ಚಾಗಿ ತಟ್ಟಲಿಲ್ಲ. ಅವಳಿಗೆ ನೋವಿನ ಗ್ರಹಣಶಕ್ತಿಯೂ ಕೂಡ ಹೋಗಿಬಿಟ್ಟಂತಿತ್ತು.

ಚಂದ್ರನು ತನ್ನ ಮುಂದಿನ ಕಥೆಯನ್ನು ಚಿಂತಿಸುತ್ತಾ "ಮಗುವನ್ನು ಬೇಕಾದರೆ ಯಾವುದಾದರೂ ಅನಾಥಾಲಯದಲ್ಲಿ ಬಿಡೋಣ. ನೀನು ಬಾ ತುಳಸೀ" ಎಂದನು. ತುಳಸಿ ಮೊದಲಿನ ತುಳಸಿಯಾಗಿರಲಿಲ್ಲ. ಕಷ್ಟದ ಬೇಗೆ ಅವಳ ಮಾರ್ದವವನ್ನೂ ಕನಿಕರವನ್ನೂ ಬೇಯಿಸಿ, ಕಠಿಣ ಪ್ರಪಂಚದೆದುರು ಕಲ್ಲಾಗಿ ನಿಲ್ಲುವ ಸಾಮರ್ಥ್ಯವನ್ನು ಕೊಟ್ಟಿತ್ತು.

"ಮಗುವನ್ನು ಬಿಟ್ಟುಬರುವುದಿಲ್ಲ. ಬೇಕಾದರೆ ಇಬ್ಬರೂ ಬರುತ್ತೇವೆ." ಅವಳ ಮುಖದಲ್ಲಿ ತಿರಸ್ಕಾರದ ನಗೆಯೂ ಇದ್ದಂತಿತ್ತು.

ಚಂದ್ರನು ಅನುಮಾನಿಸಿದನು. ಮಹಾತ್ಮರ ಮಾತು—"ಅವಳ ಮೇಲೆ ವಿಚಾರಣೆಗೆ ಕೂಡುವ ಅಧಿಕಾರ ನಿನಗಿಲ್ಲ." ....ಆ ಮಾತುಗಳು ರಕ್ತದಲ್ಲಿ ಬರೆದಂತೆ ಕಾಣುತ್ತಿದ್ದುವು. ಆದರೂ ದುರಭಿಮಾನವೆಲ್ಲ ನಶಿಸಿ ಹೋಗುವಷ್ಟು ಕಷ್ಟದ ಕಾವಿಗೆ ಚಂದ್ರನು ಸಿಕ್ಕಿರಲಿಲ್ಲ. ಮಗುವಿನ ಮುಖ ನೋಡಲು ಕೂಡ ಅವನು ಹಿಂಜರಿದನು. ತಡವರಿಸುತ್ತಾ "ಸಾಯಂಕಾಲ ಇಲ್ಲಿಗೇ ಬಾ. ಮಾವನವರಿಗೆ ಒಂದು ಮಾತು ಹೇಳಿ ಬರುತ್ತೇನೆ" ಎಂದನು. ತುಳಸಿ ಆಗಲೆಂದು ತಲೆಯಾಡಿಸಿ ಹೊರಟು ಹೋದಳು.

ಚಂದ್ರನು ಚಿಂತಿಸುತ್ತಾ ಹೊರಟನು. ಕಲ್ಪನೆಯಲ್ಲಿ ತಾನು ತುಳಸಿಗೆ ತೋರಿದ ಆದರವೇನು, ಸ್ವಾಗತವೇನು? ವಾಸ್ತವವಾಗಿ ತೋರಿದುದೇನು? ಮಗುವಿಲ್ಲದಿದ್ದರೆ, ಅಥವಾ ಅದನ್ನು ಬೇರೆಲ್ಲಾದರೂ ಬಿಡಲು ತುಳಸಿ ಒಪ್ಪಿದ್ದರೆ! ವೈದ್ಯನಾಗಿ ಈ ವಿಚಾರಗಳಿಗೆ ಅಷ್ಟು ಮಹತ್ವ ಕೊಡಕೂಡದೆಂದು ತಿಳಿದಿದ್ದರೂ ಅಭಿಮಾನವು ಒಪ್ಪಲಿಲ್ಲ. ಸದಾ ತುಳಸಿಯ ಕಳಂಕವನ್ನು ಸಾರುತ್ತಾ ಆ ಮಗುವಿರಬೇಕೆ? ತನ್ನ ರಾಧೆಯ ಸ್ಥಾನದಲ್ಲಿ ಆ ಮಗುವನ್ನು ಮುದ್ದಿಸಬೇಕೆ? ಮನೆ ಸೇರಿದರೂ ಚಂದ್ರನಿಗೆ

ದಿಕ್ಕು ತೋರಲಿಲ್ಲ. ಮಹಾತ್ಮರ ಬಾಯಿಂದ—ತುಳಸಿಯನ್ನು ಸ್ವೀಕರಿಸ ಬೇಕೆಂದು ಕೇಳಿದಾಗ ಅದರಲ್ಲೇನೂ ತೊಡಕು ಕಂಡಿರಲಿಲ್ಲ. ಈಗ ಅದು ಅಸಾಧ್ಯವಾಗಿ ತೋರಿತು.

ಯಾವುದೋ ಧ್ಯಾನದಲ್ಲಿ ಊಟಮಾಡಿ ಹಾಸಿಗೆಯಮೇಲೆ ಬಿದ್ದು ಕೊಂಡನು. ಕಡೆಗೊಂದು ಪತ್ರವನ್ನು ಬರೆದು ಮಲವನವರಿಗೆ ಕಾಣು ವಂತೆ ಮುಂದಿನ ಮೇಜಿನಮೇಲಿಟ್ಟು ಬೈಸಿಕಲ್ ಹತ್ತಿಕೊಂಡು ಹೊರಟು ಹೋದನು.

ಶ್ರೀನಿವಾಸರಾಯರು ಸಂಜೆ ಹೊರಗೆ ಹೊರಡಲು ಸಿದ್ಧರಾದರು. ಮೇಜಿನ ಮೇಲಿದ್ದ ಕಾಗದವನ್ನು ನೋಡಿದರು. "ನಿಮ್ಮ ಸ್ನೇಹಕ್ಕಾ ಗಲಿ, ತುಳಸಿಯ ಪ್ರೇಮಕ್ಕಾಗಲಿ ನಾನು ಅರ್ಹನಲ್ಲ. ಕ್ಷಮಿಸಿ. ತುಳಸಿ ನಿರಾಶ್ರಿತರ ವಸತಿಯ ಒಳಿಯಿರುವ ಆಲದ ಮರದ ಹತ್ತಿರ ಸಂಜೆ ನಿಮಗಾಗಿ ಕಾಯುತ್ತಿರುವಳು" ಎಂದು ಚಂದ್ರನು ಬರೆದಿಟ್ಟಿದ್ದನು.

ಶ್ರೀನಿವಾಸರಾಯರಿಗೇನೂ ತೋರಲಿಲ್ಲ. ಸರಸ್ವತಮ್ಮನಿಗೂ ತಿಳಿಸದೆ ಚಂದ್ರನು ಹೇಳಿದ್ದ ಕಡೆಗೆ ಹೋದರು. ತಂದೆಯನ್ನು ನೋಡಿ ತುಳಸಿಯ ಕಣ್ಣೀರಿನ ಕಟ್ಟೆಯು ಒಡೆಯಿತು. ಬಿಗಿದ ಗಂಟಲಿನಿಂದ "ಅಪ್ಪಾ" ಎಂದಳು. ಶ್ರೀನಿವಾಸರಾಯರೂ ಧಾರಾಳವಾಗಿ ಅತ್ತರು. ಮಗಳ ಬೆನ್ನನ್ನು ಸೇವರಿಸಿದರು. ತಲೆ ಸವರಿದರು, "ಬಾಮ್ಮಾ ಮನೆಗೆ ಹೋಗೋಣ."

ತಿರುಗಿ ತುಳಸಿಯ ಎದೆ ಕಲ್ಲಾಯಿತು. "ಇಲ್ಲಪ್ಪಾ, ನಾನು ಬರುವುದಿಲ್ಲ. ಮಗುವೊಂದಿದೆ" ಎಂದಳು. ಶ್ರೀನಿವಾಸರಾಯರೂ ಬೆಚ್ಚಿದರು. ಮಹಾತ್ಮರ ವಚನಗಳು ಅವರ ಕಿವಿಯಲ್ಲೂ ಇನ್ನೂ ಮೊರೆಯುತ್ತಿದ್ದುವು. ಕ್ಷಣಕಾಲ ಅಂಜಿದರು. ಮರುಕ್ಷಣವೇ, "ಕರ ಕೊಂಡು ಬಾಮ್ಮಾ, ನಿನ್ನ ಮಗು ನನ್ನ ಮೊಮ್ಮಗುವಲ್ಲವೇ?" ಎಂದರು.

ತುಳಸಿ ಬಿಕ್ಕುತ್ತಾ "ಅಪ್ಪಾ, ನೀನು ದೇವರು" ಎಂದಳು.

"ನಾನಲ್ಲಮ್ಮಾ, ಬೇರೊಬ್ಬ ದೇವರು ಮಾರ್ಗತೋರಿಸಿದ್ದಾನೆ" ಎಂದರು.

ಮನೆಗೆ ಹೋದಮೇಲೆ ತುಳಸಿ "ಅವರೆಲ್ಲಿ" ಎಂದು ಅಂಜುತ್ತಾ ಕೇಳಿದಳು. ಶ್ರೀನಿವಾಸರಾಯರು ಚಂದ್ರನ ಕಾಗದವನ್ನು ಕೊಟ್ಟರು. ಓದಿನೋಡಿ ತುಳಸಿ "ಹೀಗಾಗಬಹುದೆಂದುಕೊಂಡೆ" ಎಂದಳು.

ಶ್ರೀನಿವಾಸರಾಯರು "ಮನುಷ್ಯರನ್ನು ದೇವರು ಹೀಗೆ ಪರೀಕ್ಷಿಸಬಾರದಮ್ಮಾ" ಎಂದು ಕಣ್ಣೊರಸಿಕೊಂಡರು.

# ಪುನರ್ಜನ್ಮ

ಪಕ್ಕದ ಮನೆಯಲ್ಲಿ ಎಂದಿನಂತೆ ಗಲಾಟೆಗೆ ಪ್ರಾರಂಭವಾಗಿದ್ದಿತು. ಗೋಪುಪಿನ ಮೇಲೆ ನರಸಿಂಹದೇವರು ಒಂದಿದ್ದರು. ವಾರಕ್ಕೆ ಒಂದು ಸಲವಾದರೂ ಈ ಗಲಾಟೆ ನಮಗೆ ತಪ್ಪಿದ್ದಲ್ಲ. ಗೋಪುವಿನ ತಂದೆ ಶುದ್ಧ ವೈದಿಕರು. ದೇವರು ದೆವ್ವಗಳಲ್ಲಿ ಸಂಪೂರ್ಣ ನಂಬಿಕೆ. ಗೋಪು ಪಿನ ತಾಯಿಯಂತೂ ಅನೇಕ ದೆವ್ವಗಳ ಸಹವಾಸದಲ್ಲಿಯೇ ಬೆಳೆದವರು. ಮಲೆನಾಡಿನ ಹೆಣ್ಣುಮಗಳು. ಅವರ ತಂದೆಯು ತೋಟದ ಕಾವಲುಗಾರನೇ ಒಬ್ಬ ದೆವ್ವ. ಇಂತಹ ವಾತಾವರಣದಲ್ಲಿ ಬೆಳೆದ ಹುಡುಗಿ ಮದುವೆಯಾಗಿ ಮೈದಾನಕ್ಕೆ ಒಂದರೂ ಅವರಿಗೆ ದೆವ್ವಗಳ ಕಾಟ ತಪ್ಪಿರಲಿಲ್ಲ. ಅವರು ಗೋಪುವಿನ ತಂದೆಗೆ ಎರಡನೆಯ ಹೆಂಡತಿ. ಪದ್ಧತಿಯ ಪ್ರಕಾರ ಸವತಿಯ ದೆವ್ವ ಅವರನ್ನು ಗಟ್ಟಿಯಾಗಿ ಹಿಡಿಯಿತು. ಪಕ್ಷಕ್ಕೆ ಒಂದಾವರ್ತಿಯಾದರೂ ಹೂವೀಳ್ಯಮಾಡದಿದ್ದರೆ ಆಕೆಗೆ ಬಿಡುಗಡೆಯಿರಲಿಲ್ಲ. ಸವತಿ ಮೈಮೇಲೆ ಬಂದುಬಿಡುವಳು. ಮೊದಮೊದಲು ಗೋಪುವಿಗೆ ತಾಯಿಯ ಈ ಸ್ಥಿತಿಯನ್ನು ನೋಡಿದರೆ ದಿಗಿಲು. ಆದರೆ ಬರಬರುತ್ತಾ ಅಭ್ಯಾಸವಾಗಿ ಅವನ ಮೇಲೆಯೇ ನರಸಿಂಹದೇವರು ಬರಲು ಆರಂಭಿಸಿದನು. ನರಸಿಂಹನೆಂದರೆ ಅಸಾಧ್ಯದ ದೇವರಲ್ಲವೆ? ಗೋಪು ಹಾರಿಹಾರಿ ಬೀಳುವನು, ಕುಪ್ಪಳಿಸುವನು, ಹೂಂಕರಿಸುವನು. ಅವನ ತಂದೆ ವಿನಯದಿಂದ ಹಣ್ಣುಕಾಯಿಗಳನ್ನರ್ಪಿಸುವರು. ತಾಯಿ ಅಡ್ಡಬೀಳುವಳು. ಒಂದೆರಡು ಘಂಟೆಗಳ ವ್ಯಾಯಾಮವನ್ನು ನಡಸಿ ಗೋಪು ಆಯಾಸದಿಂದ ಬೆವರು ಹರಿಸುತ್ತಾ ಮಲಗುವನು. ನರಸಿಂಹದೇವರು ವೈಕುಂಠಕ್ಕೆ ತೆರಳುವನು. ಮೊದಮೊದಲು ತಿಂಗಳು, ಎರಡು ತಿಂಗಳಿಗೆ ಬರುತ್ತಿದ್ದ ದೇವರು ಈಚೆಗೆ ಪ್ರತಿಶುಕ್ರವಾರವೂ ಬರಲು ಪ್ರಾರಂಭಿಸಿದ್ದನು. ಊರಿನವರೆಲ್ಲಾ ಆ ದಿನ ಹಣ್ಣುಕಾಯಿಗಳನ್ನು ತೆಗೆದುಕೊಂಡು ಗುಡಿಗೆ ಹೋದಂತೆ ಹೋಗಿಬರುತ್ತಿದ್ದರು.

ನಾನೂ ಒಂದು ದಿನ ಕುತೂಹಲದಿಂದ ನೋಡಲು ಹೋದೆ. ಜನರು ಕಿಕ್ಕಿರಿದು ನಿಂತಿದ್ದರು. ಒಳಕ್ಕೆ ಹೋಗುವುದಕ್ಕೇ ಸ್ಥಳವಿರಲಿಲ್ಲ.

ಆದರೆ ಗೋಪುವನ್ನು ನೋಡಲು ಒಳಕ್ಕೇ ಹೋಗಬೇಕಾಗಿರಲಿಲ್ಲ. ಅವನು ಆರಡಿ ಎತ್ತರಕ್ಕೆ ಹಾರುತ್ತಿದ್ದನು. ಬಾಯೆಲ್ಲಾ ನೊರೆತುಂಬಿ ಸೋರುತ್ತಿದ್ದಿತು. ಹಣೆಯನ್ನು ಎಲ್ಲಿಗೋ ಬಡಿದಿದ್ದುದರಿಂದ ರಕ್ತ ಹುಬ್ಬಿನಿಂದ ತೊಟ್ಟಿಡುತ್ತಿದ್ದಿತು. ನನಗೆ ಕನಿಕರವಾಯಿತು.— "ಇಷ್ಟು ಜನ ಸೇರಿ ಈ ಹುಡುಗನನ್ನು ಅನ್ಯಾಯವಾಗಿ ಹುಚ್ಚನಾಗಿ ಮಾಡುವ ರಲ್ಲಾ" ಎಂದು. ಅವನಿಗೆ ಬೇಕಾಗಿದ್ದುದು ಒಬ್ಬ ವೈದ್ಯ. ಹಣ್ಣು, ಕಾಯಿ, ಕರ್ಪೂರ ದಕ್ಷಿಣೆಗಳಲ್ಲ. ವಾರವೆಲ್ಲಾ ಎಷ್ಟೋ ಬುದ್ಧಿವಂತ ನಂತೆ ಓಡಿಯಾಡುವ ಹುಡುಗ. ಈ ಒಂದು ದಿನ ಮಾತ್ರ ಏಕೆ ಹೀಗಾಗ ಬೇಕು? ಈ ತೊಡಕನ್ನು ಬಿಡಿಸುವ ಮನಶ್ಶಾಸ್ತ್ರಜ್ಞರು ಯಾರೂ ಅಲ್ಲಿರ ಲಿಲ್ಲ. ಗೋಪು ಹಾರಿದಷ್ಟೂ ಜನರ ಭಕ್ತಿಯೂ ಹೆಚ್ಚಿ ಪೂಜೆ ನಮಸ್ಕಾ ರಗಳು ನಡೆಯುತ್ತಲೇ ಇದ್ದುವು. ಬೇಸರದಿಂದ ಮನೆಯನ್ನು ಸೇರಿದೆ.

ಈ ದಿನವೂ ನರಸಿಂಹದೇವರ ಅವಾಂತರ. ನನ್ನ ರೇವತಿ ಓದಿದ ಹುಡುಗಿ. ಆದರೂ ಅವಳಿಗೆ ದೆವ್ವಗಳ ಭಯ ತಪ್ಪಿರಲಿಲ್ಲ. ಮನೆಯಲ್ಲಿ ಕತ್ತಲಾದ ಮೇಲೆ ಒಬ್ಬಳೇ ಇರುವುದೆಂದರೆ ಅವಳಿಗೆ ಬಹು ಕಷ್ಟದ ಕೆಲಸ. ಗೋಪುವಿನ ಮೇಲೆ ದೇವರು ಬಂದು ಗಲಾಟೆಯನ್ನು ಎಬ್ಬಿಸಿದರಂತೂ ಅವಳ ಪ್ರಾಣವೇ ಹಾರಿಹೋಗುವುದು. ಬಿಗಿಯಾಗಿ ನನ್ನನ್ನು ತಬ್ಬಿ ಕೊಂಡು, ಕಣ್ಣುಗಳನ್ನು ಅಗಲವಾಗಿ ಬಿಟ್ಟುಕೊಂಡು ಗೋಪುವಿನ ಗಲಾಟೆ ಯನ್ನು ಕೇಳುತ್ತಿದ್ದಳು.

"ಯಾಕೆ, ರೇವಾ, ಭಯವೆ?"

ರೇವತಿ ಮಾತಿಲ್ಲ. ತನ್ನ ಹಿಡಿತವನ್ನು ಬಿಗಿ ಮಾಡಿದಳು. "ಒಂದು ಸಲ ಹೋಗಿ ನೋಡಿಕೊಂಡು ಬರೋಣ, ಬಾ. ಆ ಹುಡುಗನ ಅವಸ್ಥೆ ನೋಡಿದರೆ 'ಅಯ್ಯೋ ಪಾಪ!' ಎನ್ನಿಸುತ್ತದೆ; ಹೆದರಿಕೆ ಯಾಗುವುದಿಲ್ಲ."

ರೇವತಿ ಏಳಲೊಲ್ಲಳು. ಬಾಗಿಲಿನಿಂದ ಆಚೆ ನೋಡುವುದಕ್ಕೇ ಅವಳಿಗೆ ಭಯ. ಆ ದಿನ ರಾತ್ರಿಯೆಲ್ಲಾ ಕನವರಿಸಿಕೊಳ್ಳುತ್ತಿದ್ದಳು. ನನಗೂ ದಿಗಿಲಾಯಿತು. ಅವಳೂ ಐದು ತಿಂಗಳ ಬಸಿರಿ. ಏನಾದರೂ ಹೆಚ್ಚುಕಡಿಮೆಯಾದರೆ ತೊಂದರೆ. ತಂದೆಯ ಮನೆಗೆ ಕಳುಹಿಸೋಣವೇ

ಎಂದು ಆಲೋಚಿಸಿದೆ. ಲೆಖ್ಖ ಹಾಕಿದರೆ ನಾಲ್ಕು, ಆಮೇಲೆ ಮೂರು—ಹೀಗೆ ಏಳು ತಿಂಗಳು—ನನ್ನ ರೇವತಿಯನ್ನು ಬಿಟ್ಟಿರಬೇಕಾಗುವುದು. ಅವಳಿಗೇನೋ ತಂದೆಯ ಮನೆ, ತಾಯಿಯ ಆರೈಕೆ; ನನ್ನನ್ನು ಬಿಟ್ಟಿದ್ದರೂ ನೆಮ್ಮದಿಯಾಗಿದ್ದು ಬಿಡುವಳು. ಇಲ್ಲಿ ನಾನು ಒಬ್ಬೊಂಟಿಗ. ಏಳು ತಿಂಗಳನ್ನು ದೂಡುವುದು ಹೇಗೆ. ಹೀಗೆ ಸ್ವಾರ್ಥತೆಯಿಂದ ಅವಳನ್ನು ನಿಲ್ಲಿಸಿಕೊಂಡರೆ ಏನಾದರೂ ಪ್ರಮಾದವಾದೀತೆಂಬ ಭಯ. ಬೆಳಗಾಗಲಿ ಎಂದುಕೊಂಡೆ. ರಾತ್ರಿಯೆಲ್ಲಾ ನನಗೆ ಸರಿಯಾಗಿ ನಿದ್ದೆಯೇ ಇಲ್ಲ, ರೇವತಿಯೂ ಸಮೀಪದಲ್ಲಿಯೇ ಇದ್ದರೂ, ಎಲ್ಲಿಯೋ ಹೊರಟುಹೋಗಿರುವಳೆಂಬ ಗಾಬರಿ. ಮೂರು ನಾಲ್ಕುಸಲ ಅವಳನ್ನು ಮುಟ್ಟಿ ನೋಡಿ ಧೈರ್ಯಮಾಡಿಕೊಂಡೆ.

ಮಾರನೆಯ ದಿನ ರೇವತಿ ಎಂದಿನಂತೆ ಕೆಲಸಕಾರ್ಯಗಳಲ್ಲಿ ಮಗ್ನಳಾಗಿದ್ದಳು. ನಾನಾಗಿ, ಅವಳನ್ನು ತವರುಮನೆಗೆ ಕಳುಹಿಸುವ ಮಾತನೆತ್ತಲಿಲ್ಲ. ರಾತ್ರಿ ನನ್ನನ್ನು ಆವರಿಸಿದ್ದ ದಿಗಿಲು ಬೆಳಕಿನಲ್ಲಿ ಕರಗಿ ಹೋಗಿದ್ದಿತು. ರೇವತಿಗೇನು ಭಯ! ದೇವರಿದ್ದಾನೆ,ಎಂದುಕೊಂಡು ಹೊರಗೆ ಹೊರಡಲು ಸಿದ್ಧನಾಗುತ್ತಿದ್ದೆ. ನಮ್ಮ ಮನೆಯಲ್ಲಿದ್ದ ಒಂದೇ ಮುರುಕು ಕನ್ನಡಿಯ ಮುಂದೆ ನಿಂತು ಬೈತಲೆ ತೆಗೆಯುತ್ತಿದ್ದೆ. ರೇವತಿ ಆ ಕನ್ನಡಿಯನ್ನು ಬೀರುಪೆಟ್ಟಿಗೆಗಳ ಮಧ್ಯೆ ಎಲ್ಲಿಯೋ ಕತ್ತಲು ಮೂಲೆಯಲ್ಲಿ ಮೊಳೆಗೆ ನೇತುಹಾಕಿದ್ದುದರಿಂದ ನನ್ನ ಮುಖದರ್ಶನಕ್ಕಾಗಿ ಬಗ್ಗಿ ಒಂದು ದೊಡ್ಡ ಸಾಹಸವನ್ನೇ ಮಾಡಬೇಕಾಗಿದ್ದಿತು. ಅಲಂಕಾರವೆಲ್ಲಾ ಪೂರ್ತಿಯಾದನಂತರ ಬೀದಿಬಾಗಿಲಿಗೆ ಬಂದು ನಿಂತೆ. ನಮ್ಮ ಬೀದಿ ಬಾಗಿಲಲ್ಲಿ ನಿಂತು ನೋಡಿದರೆ ಎದುರು ಮನೆಯ ಅಡುಗೆಕೋಣೆಯವರೆಗೂ ಕಾಣಿಸುವುದು. ಶ್ರೀನಿವಾಸರಾಯರು ಬೀದಿಯಲ್ಲೇ ಬಿಸಿಲಿನಲ್ಲಿ ಕುಳಿತು ವೃತ್ತಪತ್ರಿಕೆಯನ್ನು ಓದುತ್ತಿದ್ದರು. ಅವರ ಏಳು ವರ್ಷದ ಮಗನು ಕುರ್ಚಿಯ ಕಾಲಿಗೆ ಒಂದು ದಾರವನ್ನು ಬಿಗಿದು, ಅದರ ಇನ್ನೊಂದು ಕೊನೆಯನ್ನು ಶ್ರೀನಿವಾಸರಾಯರ ಜುಟ್ಟಿಗೆ ಬಿಗಿಯುವ ಕುಶಲ ಕಾರ್ಯದಲ್ಲಿ ನಿರತನಾಗಿದ್ದನು. ನಾನೂ ಕುತೂಹಲದಿಂದ ಅವನ ಪ್ರಯತ್ನವನ್ನೇ ನೋಡುತ್ತಿದ್ದೆ. ಪಕ್ಕದಲ್ಲಿ "ಸಾರ್" ಎಂದ ಸದ್ದು ಕೇಳಿಸಿತು.

ಗೋಪು ತಟ್ಟೆಯಲ್ಲಿ ಸ್ವಲ್ಪ ಕುಂಕುಮವನ್ನೂ, ಹೂವನ್ನೂ, ಒಂದು ಹೋಳು ತೆಂಗಿನಕಾಯನ್ನೂ ಹಿಡಿದು ನಿಂತಿದ್ದ.

"ಏನಪ್ಪಾ?" ಎಂದೆ.

"ನೆನ್ನೆ ನೀವು ಬರಲಿಲ್ಲ, ಸಾರ್, ಅದಕ್ಕೆ ನಮ್ಮ ತಂದೆಯವರು ಪ್ರಸಾದವನ್ನಾದರೂ ಕೊಟ್ಟು ಬಾ, ಎಂದರು." "ಓಹೋ! ನೀನೇ ಅಲ್ಲವೇ ನರಸಿಂಹಸ್ವಾಮಿ?" ಸ್ವಲ್ಪ ಕುಚೇಷ್ಟೆಗಾಗಿ ಕೇಳಿದೆನು.

ಗೋಪು ಗಂಭೀರವಾಗಿ "ಈಗ ಅಲ್ಲ ಸಾರ್" ಎಂದ. ನಾನು ಹೆಚ್ಚೇನನ್ನೂ ಹೇಳಲಾರದೆ "ಒಳಗಿಡಪ್ಪಾ" ಎಂದೆ. ತಟ್ಟೆಯನ್ನು ಒಳಗಿಟ್ಟು ಅವನು ಹೊರಟು ಹೋದ.

ಆ ದಿನ ಸಂಜೆ ಸ್ಕೂಲಿನಿಂದ ನಾನು ಹಿಂತಿರುಗುವುದು ಸ್ವಲ್ಪ ನಿಧಾನವೇ ಆಯಿತು. ಈಗಿನ ವಿದ್ಯಾಭ್ಯಾಸಕ್ರಮದ ಹೆಚ್ಚು ಕೆಲಸಗಳಿವೆಯಲ್ಲಾ! ಮನೆಗೆ ಬರುವ ವೇಳೆಗೆ ರೇವತಿ ಯಾರೊಡನೆಯೋ ಮಾತನಾಡುತ್ತಿದ್ದುದು ಕೇಳಿಸಿತು. "ಈ ಊರಿನಲ್ಲಿಯೂ ಸದ್ಯ ಇವಳಿಗೆ ಸ್ನೇಹಿತರು ಸಿಕ್ಕಿದರಲ್ಲಾ!" ಎಂದು ಸಂತೋಷದಿಂದ ಒಳಕ್ಕೆ ಹೋದೆ. ಯಾರಾದರೂ ಹೆಂಗುಸರೇನೋ ಎಂದು ಸ್ವಲ್ಪ ಸಂಕೋಚದಿಂದಲೇ ಮುಂದಕ್ಕೆ ಹೋದೆ. ಗೋಪು ಒಂದು ಚಾಪೆಯ ಮೇಲೆ ಕುಳಿತು ಮಾತನಾಡುತ್ತಿದ್ದನು. ರೇವತಿ ಒಲೆಯ ಮುಂದೆ ಕುಳಿತು ಏನೋ ಮಾಡುತ್ತಾ ಅಲ್ಲಿಂದಲೇ ಮಾತನಾಡುತ್ತಿದ್ದಳು. ನನಗೆ ಆಶ್ಚರ್ಯವಾಯಿತು. ಹಿಂದಿನ ದಿನ ಅವನ ಕೂಗಾಟವನ್ನು ಕೇಳಿ ಅಷ್ಟು ಹೆದರಿದ್ದ ರೇವತಿ ಈ ದಿನ ಇಷ್ಟು ಸುಖವಾಗಿ ಅವನೊಡನೆ ಮಾತನಾಡುತ್ತಿರುವುದನ್ನು ನೋಡಿ ಆಶ್ಚರ್ಯವಾಯಿತು.

ನನ್ನನ್ನು ಕಂಡು ಗೋಪು ಎದ್ದನು. "ಏನು ಗೋಪೂ! ಎದ್ದುಬಿಟ್ಟೆ?"

"ಬರ್ತೀನೆ ಸಾರ್."

"ಸ್ಕೂಲು ಬಿಟ್ಟ ಹಾಗೇನೋ ನೀನು?"

ಗೋಪು ನಿರುತ್ತರ. "ಸರಿ! ಹೊರಡಪ್ಪಾ" ಎಂದೆ. ಗೋಪು ಹೊರಟುಹೋದ.

"ಏನು ರೇವತಿ, ಒಳ್ಳೆ ಸ್ನೇಹಿತ ಸಿಕ್ಕಿದನಲ್ಲ ನಿನಗೆ!"

"ತಟ್ಟಿ ತೆಗೆದುಕೊಂಡು ಹೋಗುವುದಕ್ಕೆ ಬಂದ. ನನಗೆ ದಿಗಿಲೇ ಆಯಿತು. ಒಳಗಿನಿಂದಲೇ ಮಾತನಾಡಿದೆ. ನೋಡಿದರೆ ಅವನ ಕಣ್ಣು ತುಂಬ ನೀರಿತ್ತು. ನನಗೂ 'ಅಯ್ಯೋ!' ಎನ್ನಿಸಿ 'ಏಕಪ್ಪಾ?' ಎಂದೆ. ಗಳಗಳನೆ ಅತ್ತೇಬಿಟ್ಟ. ಶುಕ್ರವಾರ ಬರುವುದೆಂದರೆ ಅವನಿಗೆ ಭಯವಾಗುತ್ತಂತೆ. ಯಾರ ಹತ್ತಿರ ಮಾತನಾಡುವುದಕ್ಕೂ ನಾಚಿಕೆಯಂತೆ. ಸ್ಕೂಲೂ ಬಿಟ್ಟದ್ದಾಯಿತು. ತನ್ನ ಗತಿಯೇನೆಂದು ಅತ್ತುಬಿಟ್ಟ. ಪಾಪ! ಎಳೇ ಹುಡುಗ, ಈ ಅವಾಂತರದಲ್ಲಿ ಮುದುಕನ ಹಾಗಾಗಿ ಬಿಟ್ಟಿದ್ದಾನೆ. ಮನೆಯಲ್ಲೇ ಸ್ವಲ್ಪ ಇಂಗ್ಲಿಷ್ ಹೇಳಿಕೊಡಬೇಕೆಂದು ಕೇಳಿದ. ಮಧ್ಯಾಹ್ನ ವೇಳ್ಯಾ ನನಗೂ ಬಿಡುವಿರುತ್ತದೆ;—'ಆಗಲಿ' ಎಂದೆ."

ನನಗೆ ನಗು ಬಂತು. ನನ್ನ ರೇವತಿ ಹುಡುಗಾಟವನ್ನು ಬಿಟ್ಟು ಉಪಾಧ್ಯಾಯಿನಿಯ ಗಾಂಭೀರ್ಯದ ಸೋಗನ್ನು ಹೇಗೆ ಹಾಕಿಕೊಳ್ಳಬಲ್ಲಳು. ಆದರೂ ಗೋಪುವಿನ ಗುರುತಾದರೆ ನರಸಿಂಹ ದೇವರ ದಿಗಿಲು ಹೋಗಬಹುದೆಂಬ ಆಸೆಯಾಯಿತು. ಸರಿ ಎಂದೆ. ಅಂದಿನಿಂದ ಪ್ರತಿ ಮಧ್ಯಾಹ್ನವೂ ಗೋಪು ರೇವತಿಯ ಬಳಿಗೆ ಪಾಠಕ್ಕೆ ಬರುತ್ತಿದ್ದ. ರೇವತಿಗೆ ಅದೊಂದು ದೊಡ್ಡ ಕೆಲಸವೇ ಆಯಿತು. ಅವನಿಗೆ ಪಾಠ ಹೇಳುವುದು, ಬರೆಯಲು ಪ್ರಶ್ನೆಗಳನ್ನು ಕೊಡುವುದು, ಅವನು ಬರೆದ ಉತ್ತರಗಳನ್ನು ತಿದ್ದುವುದು; ಬಹಳ ಉತ್ಸಾಹದಿಂದಲೇ ವಿದ್ಯಾಭ್ಯಾಸ ಸಾಗುತ್ತಿದ್ದಿತು. ಸಾಯಂಕಾಲ ಶಾಲೆಯ ಹುಡುಗರ ಉತ್ತರಗಳನ್ನು ನಾನು ತಿದ್ದುತ್ತಿದ್ದರೆ, ಬೇಸರ ಪಟ್ಟು, ಗೊಣಗಿ, ಕೆಲಸದಿಂದ ನನ್ನ ಲಕ್ಷ್ಯವನ್ನು ತಪ್ಪಿಸಲು ತನ್ನ ಚಾತುರ್ಯವನ್ನೆಲ್ಲಾ ಖರ್ಚುಮಾಡುತ್ತಿದ್ದ ರೇವತಿ, ದೀಪದ ಬೆಳಕಿಗೆ ತನ್ನದೊಂದು ಕುರ್ಚಿಯನ್ನು ಎಳೆದುಕೊಂಡು ಗೋಪುವಿನ ವಿದ್ಯಾಭ್ಯಾಸದ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಳು. ನನ್ನ ಚಲ್ಲಾಟದ ರೇವತಿಯೇ ಇಲ್ಲವಾಗಿದ್ದಳು. ಈ ಕೆಲಸ ಅವಳ ಮನಸ್ಸಿನ ಸ್ವಸ್ಥತೆಗೆ ಆವಶ್ಯಕವೆಂಬ ಅಭಿಪ್ರಾಯವಿಲ್ಲದಿದ್ದರೆ ನಾನು ಗೋಪುವನ್ನು ಎಂದೋ ಓಡಿಸಿಬಿಡುತ್ತಿದ್ದೆ. ನನ್ನ ಕ್ರಮಕ್ಕಿಂತ ರೇವತಿಯ ಶಿಕ್ಷಣ ಕ್ರಮವೇ ಚೆನ್ನಾಗಿದ್ದಿತೆಂದು ತೋರುತ್ತದೆ. ಕೆಲವು ಕಾಲದಲ್ಲಿಯೇ

ಗೋಪು ಚೆನ್ನಾಗಿ ಕಲಿತನು. ಅವನ ಜತೆಯ ಹುಡುಗರ ಬರವಣಿಗೆಗಳಿಗಿಂತ ಅವನ ಬರವಣಿಗೆ ಎಷ್ಟೋ ಚೆನ್ನಾಗಿತ್ತು. ಈ ವಿಷಯವನ್ನು ನಾನು ಹೇಳಿದ ದಿನವಂತೂ ರೇವತಿಯ ಜಂಭವನ್ನು ಹಿಡಿಯುವುದಕ್ಕೇ ಆಗಲಿಲ್ಲ.

ಆದರೆ ಶುಕ್ರವಾರ ದೇವರು ಬರುವುದು ಮಾತ್ರ ನಿಂತಿರಲಿಲ್ಲ. ಅದು ಯಥಾಪ್ರಕಾರವಾಗಿ ನಡೆಯುತ್ತಲೇ ಇತ್ತು. ಆ ದಿನ ಅವನು ನಮ್ಮ ಮನೆಯ ಕಡೆಯೇ ಬರುತ್ತಿರಲಿಲ್ಲ. ರೇವತಿಗೂ ಗೋಪುವಿನ ಗುರುತಾಗಿದ್ದರೂ ನರಸಿಂಹಸ್ವಾಮಿಯ ಗುರುತಾಗಲೇ ಇಲ್ಲ. ಗೋಪು ಹಾರಾಡಲು ಪ್ರಾರಂಭಿಸಿದರೆ, ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಗಾಬರಿಯಿಂದ ಕುಳಿತುಬಿಡುವಳು. ಗೋಪುವೂ ಗುರುವಾರವೇ ಪ್ರಾರಂಭಿಸುವನು: "ಅಕ್ಕಾ, ನಾಳೆ ಶುಕ್ರವಾರ. ಭಯವಾಗುತ್ತೆ." ರೇವತಿಗೆ ಅವನಿಗಿಂತಲೂ ಹೆಚ್ಚು ಭಯ. ಅವಳೇನು ಧೈರ್ಯ ಹೇಳಬಲ್ಲಳು!

ಶುಕ್ರವಾರದ ಸಂಜೆ ನಾನೆಲ್ಲಿಗೂ ಹೋಗುತ್ತಿರಲಿಲ್ಲ. ಸಾಧ್ಯವಾದಾಗಲೆಲ್ಲಾ ರೇವತಿಯನ್ನೂ ಮನೆಯಿಂದ ದೂರವಾಗಿ ಕರೆದುಕೊಂಡು ಹೋಗಿ ನರಸಿಂಹದೇವರು ಶಾಂತನಾದಮೇಲೆಯೇ ಮನೆಗೆ ಬರುತ್ತಿದ್ದೆವು. ಆದರೆ ರೇವತಿ ಕಲ್ಪನೆಯಿಂದಲೇ ಭಯಪಡುವಳು. ಮನೆ ಹತ್ತಿರವಾದಂತೆಲ್ಲಾ ನನ್ನ ಹತ್ತಿರ ಹತ್ತಿರ ಬರುವಳು. ತಿರುತಿರುಗಿ ಆ ಕಡೆ ಈ ಕಡೆ ನೋಡುವಳು. ಆಡುತ್ತಿದ್ದ ಮಾತೆಲ್ಲಿಯೋ ಮಾಯವಾಗುವುದು. ನನಗೆ ಅವಳ ಹೆದರಿಕೆಯೂ ಚೆನ್ನಾಗಿಯೇ ತೋರುತ್ತಿದ್ದಿತು. ಆಗ ಅವಳು ನನ್ನ ರಕ್ಷಣೆಯನ್ನು ಕೋರಿ ಅದು ತನಗೆ ಎಷ್ಟು ಆವಶ್ಯಕವೆಂಬುದನ್ನು ತೋರಿಸುತ್ತಿದ್ದಳು. ನನಗೆ ಅದೇ ಒಂದು ಆನಂದ!

ಅಂದು ಶುಕ್ರವಾರ. ಪಾಠಶಾಲೆಯಲ್ಲಿ ಏನೋ ಕೆಲಸ. ಆರು ಘಂಟೆಯಾದರೂ ಮನೆಗೆ ಹೊರಡಲು ಆಗಲಿಲ್ಲ. ಎಲ್ಲವನ್ನೂ ತೀರಿಸಿಕೊಂಡು ಹೊರಟಾಗ ನರಸಿಂಹಮೂರ್ತಿಯೂ ನನ್ನ ಜೊತೆಯಲ್ಲಿಯೇ ಹೊರಟನು. ಸ್ವಲ್ಪ ದೂರ ಹೋಗುವುದರೊಳಗಾಗಿ ರಾಮಸ್ವಾಮಿಯೂ, ಸೇತೂರಾಯನೂ ಸಿಕ್ಕಿದರು. ಅಲ್ಲೇ ನಾಲ್ಕು ರಸ್ತೆಗಳು ಸೇರುವಕಡೆ ನಿಂತು ಎಷ್ಟೋ ಹೊತ್ತು ಹರಟೆ ಹೊಡೆದೆವು. ತೀರ ಕತ್ತಲಾಗುವ

ವೇಳೆಗೇ ಮನೆಯ ಚಿಂತೆ ಬಂದುದು. ನಾನೂ ಮೂರ್ತಿಯೂ ಹೊರ ಟೆವು. ಮೂರ್ತಿಯ ಮನೆಯು ನಮ್ಮ ಮನೆಯಿಂದ ಮೂರು ನಾಲ್ಕು ಮನೆಗಳ ಆಚೆಗಿತ್ತು. ಅವನ ಮನೆಯ ಬಾಗಿಲಿಗೆ ಬರುವ ವೇಳೆಗೆ "ಬಾರೋ! ಒಂದು ಲೋಟ ಕಾಫಿ ಕುಡಿದು ಹೋಗು" ಎಂದ.

"ಇಲ್ಲಪ್ಪಾ: ಮನೇಲಿ ಕಾದಿರ್ತಾಳೆ."

"ಬೇಗ ಹೋಗುವೆಯಂತೆ, ಬಾ."

ಒಳಗೆ ಅವನ ಭಾವಮೈದುನನೂ ಅವನ ಸ್ನೇಹಿತರೂ ಕುಳಿತಿದ್ದರು. ಇಸ್ಪೀಟು ಆಟ ನಡೆಯುತ್ತಿದ್ದಿತು. ಮೂರ್ತಿಯ ಹೆಂಡತಿ ಎರಡು ತಟ್ಟೆ ಗಳಲ್ಲಿ ದೋಸೆ ಪಲ್ಯಗಳನ್ನೂ ಎರಡು ಲೋಟ ಕಾಫಿಯನ್ನೂ ತಂದಿಟ್ಟರು. ಮಾತನಾಡುತ್ತಾ ದೋಸೆಯನ್ನು ಮುಗಿಸಿದೆವು. ನಿಧಾನವಾಗಿ ಇಬ್ಬ ರೂ ಇಸ್ಪೀಟಿಗೆ ಕೈಹಾಕಿದೆವು. ನಮ್ಮ ಪಾಲಿಗೆ ಕಾಲಚಕ್ರ ನಿಂತು ಹೋಯಿತು.

*  *  *  *  *

ಮನೆಯಲ್ಲಿ ರೇವತಿಗೆ ದಿಗಿಲು. ಎರಡು ಘಂಟೆಗಳಿಂದ ನರಸಿಂಹ ದೇವರ ಹಾರಾಟ ನಡೆದಿದ್ದಿತು. ಪೂಜೆ ಮಂತ್ರಗಳ ಶಬ್ದವನ್ನು ಮೀರಿ ಗೋಪುವಿನ ಆರ್ಭಟ ನಡೆದಿದ್ದಿತು. ಮನೆಯೊಳಗೆಲ್ಲಾ ಒಬ್ಬಳೇ. ಕಿವಿಗಳಲ್ಲಿ ಗಟ್ಟಿಯಾಗಿ ಬೆರಳು ತುರುಕಿಕೊಂಡು ಒಂದು ಮೂಲೆಯಲ್ಲಿ ಕುಳಿತಿದ್ದಾಳೆ. ಅವಳ ಪಾಲಿಗೆ ಮನೆಯ ತುಂಬ ದೆವ್ವಗಳು ನಾಟ್ಯವಾಡು ವಂತಿವೆ. ಎಲ್ಲಿ ನೋಡಿದರೂ ನೆರಳುಗಳು. ಪ್ರಾಣವನ್ನು ಎಡಗೈಯಲ್ಲಿ ಹಿಡಿದು ಮನೆಯಲ್ಲಿದ್ದ ದೀಪಗಳನ್ನೆಲ್ಲಾ ಹಚ್ಚಿದಳು. ದೀಪ ಹಚ್ಚಿದ ಮೇಲೂ ಕೋಣೆಗೆ ಬೆನ್ನುಮಾಡಿ ಹೊರಗೆ ಬರಲು ಭಯ. ಮುಖದಲ್ಲಿ ಬೆವರು ತೊಟ್ಟಿಡುತ್ತಿದ್ದಿತು. ಸ್ವಲ್ಪಹೊತ್ತು ಒಂದು ಕಡೆ ಕುಳಿತಳು. ಹೆದರಿಕೆಯನ್ನು ತಡೆಯಲಾಗಲಿಲ್ಲ. ಬೀದಿಬಾಗಿಲನ್ನು ತೆಗೆದುಕೊಂಡು ಹೊರಟಳು. ಹಿಂದಿನಿಂದ ಯಾರೋ ನೂಕಿದಂತಾಯಿತು. ಚಿಟ್ಟನೆ ಚೀರಿದಳು. ಗೋಪುವಿನ ಗಲಾಟೆ ಇಲ್ಲದಿದ್ದರೆ ಅಕ್ಕಪಕ್ಕದ ಮನೆಯವರು ವಿಚಾರಿಸಲು ಓಡಿಬರುತ್ತಿದ್ದರು. ರೇವತಿಗೆ ಯುಕ್ತಾಯುಕ್ತತೆಯ

ಅರಿವೇ ತಪ್ಪಿಹೋಯಿತು. ಒಂದೇ ಉಸಿರಿಗೆ ಓಡಿದಳು. ಎದುರ್ತಾ ಮೂರ್ತಿಯ ಮನೆಯ ಮುಂದೆ ಬಂದು ನಿಂತಳು.

* * * * *

ಸಾಧಾರಣವಾಗಿ ನಾನು ಮೂರ್ತಿಯ ಮನೆಗೇ ಹೋಗುತ್ತಿದ್ದುದು. ಬೇರೆ ಎಲ್ಲಿಗೂ ಹೋಗುತ್ತಿರಲಿಲ್ಲ. ಮೂರ್ತಿಯ ಮನೆಯಲ್ಲಿ ನನ್ನ ಇಸ್ಪೀಟಿನ ವ್ಯಾಮೋಹವನ್ನು ತೀರಿಸಿಕೊಳ್ಳುತ್ತಿದ್ದುದು ರೇವತಿಗೂ ತಿಳಿದಿತ್ತು. ಅದರಿಂದಲೇ ಈ ದಿನ ಭಯಗೊಂಡು ಮೂರ್ತಿಯ ಮನೆಗೇ ಬಂದಳು. ಮೂರ್ತಿಯ ಭಾವಮೈದುನನು, "ಯಾರೋ ಬಂದಿದ್ದಾರೆ" ಎಂದು "ಅಕ್ಕಾ" ಎಂದನು. ಮೂರ್ತಿಯ ಹೆಂಡತಿ ಬಂದರು.

ರೇವತಿ ಹೆದರಿಕೆಯನ್ನು ಮರಸುತ್ತಾ, "ಹೊತ್ತಾಯಿತು, ಮನೆಗೆ ಬರಲಿಲ್ಲ. ಇಲ್ಲಿದ್ದೀರೇನೋ ನೋಡೋಣವೆಂದು ಬಂದೆ" ಎಂದು ನನ್ನನ್ನೇ ಸಂಬೋಧಿಸಿ ಹೇಳಿದಳು.

"ಇಗೋ ಬಂದೆ, ನಡಿ" ಎಂದು ನಾನೂ ಎದ್ದೆ. ಮೂರ್ತಿಯ ಹೆಂಡತಿ ರೇವತಿಗೆ ಕುಂಕುಮವನ್ನು ಕೊಟ್ಟರು. ನಾನು ಎದ್ದು ಆಕಳಿಸುತ್ತಿರುವಾಗಲೇ ರೇವತಿ ಹೊರಬಾಗಿಲನ್ನು ದಾಟಿದಳು.

* * * * *

"ಎಷ್ಟು ಸಲ ಹೇಳಿದರೂ ನಿಮಗೆ ತಿಳಿಯುವುದಿಲ್ಲ. ಆ ಮನೆಯಲ್ಲಿ ಒಬ್ಬಳೇ ಇರುವುದಕ್ಕೆ ನನಗೆ ಭಯ. ಈ ಊರಿನಲ್ಲಿ ಬೇರೆ ಮನೆಯೇ ಇಲ್ಲವೆನ್ನುತ್ತೀರಿ. ಸಂಜೆಯಾಗುವ ಹೊತ್ತಿಗೇ ನೀವೂ ಬರುವುದಿಲ್ಲ. ಈವತ್ತು ಶುಕ್ರವಾರ ಬೇರೆ."

"ಹೂ."

"ನನಗೂ ಹೇಳಿ ಹೇಳಿ ಸಾಕಾಯಿತು. ನಿಮಗಂತೂ ಅರ್ಥವೇ ಆಗುವುದಿಲ್ಲ."

"ಹೂ."

"ನನಗಾಗುವ ಹೆದರಿಕೆ ಒಂದು ದಿನ ನಿಮಗಾದರೆ ಆಗ ತಿಳಿಯುತ್ತೆ. ಈ ಹೊತ್ತಂತೂ ಪ್ರಾಣವೇ ಹೋಗುವಹಾಗಾಗಿತ್ತು."

"ಹೂ."

"ಏನು ಮಾತಾಡಿದರೂ 'ಹೂ' ಎನ್ನುತ್ತೀರಿ. ಜವಾಬಿದ್ದರೆ ಅಲ್ಲವೆ ಹೇಳೋದು. ತಾವು ಮಾಡಿದ್ದು ತಪ್ಪು ಕೆಲಸ ಎಂದು ತಿಳಿದಿದ್ದರೆ ಇನ್ನೇನು ಮಾಡೋಕಾಗುತ್ತೆ?

"ಹೂ."

"ಹೂ ನಂತೆ! ಎಷ್ಟು ರೇಗುತ್ತೋ!" ಎಂದು ತಟ್ಟನೆ ರೇವತಿ ತಿರುಗಿದಳು. ಅವಳ ಎದೆ ಒಡೆಯುವಂತಾಯಿತು. ಜತೆಯಲ್ಲಿ ಯಾರೂ ಇರಲಿಲ್ಲ. ಒಂದೇ ಉಸಿರಿಗೆ ಹಿಂದಕ್ಕೆ ಓಡಿದಳು.

* * * * *

"ಏನು ರೇವತಿ? ಹುಚ್ಚುಗಿಚ್ಚು ಹಿಡೀತೇನೇ? ಯಾಕೆ ಹೀಗೆ ಓಡುತ್ತಿದ್ದೀ?" ಎಂದು ಓಡುತ್ತಿದ್ದ ರೇವತಿಯನ್ನು ಹಿಡಿದು ನಿಲ್ಲಿಸಿದೆ.

ರೇವತಿಯು ನಾಲಗೆ ಸಿಕ್ಕಿಕೊಂಡಂತಾಗಿದ್ದಿತು. ಮಾತೇ ಹೊರಡದು. ತಲೆಯಿಂದ ಬೆವರು ಸೋರುತ್ತಿತ್ತು. ನನ್ನ ಗುರುತೂ ಸಿಕ್ಕಿತೋ ಇಲ್ಲವೋ ಎನ್ನುವಷ್ಟು ಹೆದರಿದ್ದ ದೃಷ್ಟಿಯಿಂದ ನೋಡಿದಳು. ತಲೆಯನ್ನು ಸವರುತ್ತಾ, "ಯಾಕೆ ರೇವಾ, ಏನಾಯಿತು?" ಎಂದೆ.

"ನೀವು ಈಗ ನನ್ನೊಡನೆ ಬಂದಿದ್ದಿರಾ?" ಏದುತ್ತಾ ಏದುತ್ತಾ ರೇವತಿ ಕೇಳಿದಳು. "ಬರುತ್ತಿದ್ದೇನಲ್ಲಾ."

"ಈಗಲ್ಲ! ಸ್ವಲ್ಪ ಹೊತ್ತಿಗೆ ಮುಂಚೆ?"

"ಏನೋ ಮಾತಾಡ್ತ ನಿಂತುಬಿಟ್ಟೆ, ಮೂರ್ತಿ. ಅಷ್ಟರಲ್ಲಿ ನೀನೂ ಹೊರಟುಬಿಟ್ಟೆ."

"ಹಾಗಾದರೆ ನೀವು ಬರಲಿಲ್ಲ?" ಯಾವುದೋ ಧ್ಯಾನದಲ್ಲಿರುವಂತೆ ರೇವತಿ ಮಾತನಾಡಿದಳು.

"ನಡಿ, ಹೋಗೋಣ." ಕೈ ಬಿಟ್ಟರೆ ಬಿದ್ದುಬಿಡುವಳೇನೋ ಎನ್ನುವಷ್ಟು, ಬೊಂಬೆಯ ಹಾಗೆ ರೇವತಿ ನಡೆದು ಬರುತ್ತಿದ್ದಳು. ನಾನೂ ಅವಳ ಧ್ಯಾನವನ್ನೆಳೆದುಕೊಳ್ಳಲು ಏನೇನೋ ಮಾತನಾಡಿದೆ. ಯಾವ ಮಾತಿಗೂ ಉತ್ತರವನ್ನೇ ಕೊಡಲಿಲ್ಲ.

ಆ ರಾತ್ರಿ ರೇವತಿ ಇದ್ದಕ್ಕಿದ್ದಂತೆ ಚೀರಿಕೊಂಡಳು. ಮುಟ್ಟಿ ನೋಡಿದರೆ ಮೈ ಸುಡುತ್ತಿತ್ತು. ಗೋಪುವನ್ನು ಕೂಗಿ ವೈದ್ಯನಿಗೆ

ಹೇಳಿ ಕಳುಹಿಸಿದೆ. ತಂತಿಗೆ ಉತ್ತರವಾಗಿ ನನ್ನ ಅತ್ತೆಯುವರೂ ಮಾವನವರೂ ಮೂರನೆಯ ದಿನವೇ ಬಂದರು. ರೇವತಿಗೆ ಮೈಮೇಲೆ ಜ್ಞಾನವೇ ಇಲ್ಲ. ಗಳಿಗೆಗೊಮ್ಮೆ ಚಿಟ್ಟನೆ ಚೀರುವಳು. ಹೆದರಿದಂತೆ ಕಣ್ಣುಗಳನ್ನು ಸುತ್ತಲೂ ಹೊರಳಿಸುವಳು. ಒಬ್ಬರ ಗುರುತಾದರೂ ಇಲ್ಲ.

ಗೋಪುವಿಗೆ ಜೀವವೇ ಹಾರಿಹೋಗಿತ್ತು. ತನ್ನ ಮೇಲೆ ದೇವರು ಬರುವುದಕ್ಕೂ, ರೇವತಿಯ ಖಾಯಿಲೆಗೂ ಸಂಬಂಧವಿದೆಯೆಂದು ಅವನು ಅರಿತುಕೊಂಡನು. ತನ್ನ ವಿಷಯದಲ್ಲಿ ಮರುಕತೋರಿದ ರೇವತಿಯ ಖಾಯಿಲೆಗೆ ತಾನು ಕಾರಣನಾದುದು ಅವನಿಗೆ ಬಹು ದುಃಖವನ್ನುಂಟು ಮಾಡಿತು. ರೇವತಿಯ ತಾಯಿಯ ಜತೆಗೆ ತಾನೂ ರೇವತಿಯ ಸೇವೆಗೆ ನಿಂತನು. ಹಗಲು ಇರುಳೆನ್ನದೆ, ನಿದ್ರಾಹಾರಗಳೆನ್ನದೆ ಅವಳ ಶುಶ್ರೂಷೆಗೆ ನಿಂತನು. ರೇವತಿ ಕಣ್ಣುಬಿಟ್ಟಾಗ ಗೋಪುವನ್ನು ಕಂಡರೆ ಚೀರುವಳು. ಅವನು ಬೇಸರಗೊಳ್ಳದೆ ಬಾಗಿಲಿನಿಂದಾಚೆಯೇ ನಿಂತು ಕಾದಿರುವನು.

ನನ್ನ ಮನಸ್ಸಿನ ಸ್ಥಿತಿಯನ್ನಂತೂ ವರ್ಣಿಸಲಸಾಧ್ಯ. ನನ್ನ ಸ್ವಾರ್ಥದೃಷ್ಟಿಯಿಂದ ರೇವತಿಯನ್ನು ಕೊಂದೆನೇನೋ ಎನ್ನುವ ತಳಮಳ ನನ್ನ ಮನಸ್ಸಿನ ಶಾಂತಿಯನ್ನು ಹೋಗಲಾಡಿಸಿತ್ತು. ಈ ಕಷ್ಟದಿಂದ ಪಾರಾದರೆ ಇನ್ನೆಂದಿಗೂ ಸ್ವಾರ್ಥಪರನಾಗುವುದಿಲ್ಲವೆಂದು ಬಾರಿಬಾರಿಗೂ ಆಣೆಯಿಟ್ಟುಕೊಂಡೆ. ಆ ದಿನ ಹೆದರಿದಾಗ ರೇವತಿಯನ್ನು ಅವಳ ತಂದೆಯ ಮನೆಗೆ ಕಳುಹಿಸಿದ್ದರೆ ಈ ವಿಪತ್ತೇ ಇರಲಿಲ್ಲವೆಂದು ನೆನೆನೆನೆದು ಮರುಗಿದೆ. ಜ್ಞಾಪಕ ಬಂದ ದೇವರಿಗೆಲ್ಲಾ ಹರಕೆ ಹೊತ್ತೆ. ಗೋಪುವಿನ ನರಸಿಂಹ ದೇವರನ್ನೂ ಮರೆಯಲಿಲ್ಲ.

"ಯಜಮಾನರು ರೇವತಿಯ ಜಾತಕವನ್ನು ನೋಡಿದರು. ಈ ಶನಿವಾರ ಕಳೆದರೆ ಜೀವಕ್ಕೆ ಭಯವಿಲ್ಲವೆಂದರು"—ನಮ್ಮ ಅತ್ತೆಯುವರೆಂದರು.

"ನಾಳೆಯೇ ಶನಿವಾರ!" ರೇವತಿ ಮಲಗಿದಾಗಿನಿಂದ ಎಲ್ಲಾ ಗ್ರಹ ನಕ್ಷತ್ರಗಳಲ್ಲಿಯೂ ನನಗೆ ನಂಬಿಕೆ ಬಂದುಬಿಟ್ಟಿತ್ತು.

'ನಾಳೆಯೇ ಶನಿವಾರ' ವೆನ್ನುತ್ತಲೂ ನನಗೆ ಶುಕ್ರವಾರದ ನೆನಪುಂಟಾಯಿತು. ತಟ್ಟನೆ ಗೋಪುವಿನ ಕಡೆ ತಿರುಗಿದೆ. ಅವನು ಎಲ್ಲಿಯೋ

ನೋಡುತ್ತಿದ್ದನು. ಆಗಲೇ ಸಂಜೆ ಆರು ಘಂಟೆಯಾಗಿತ್ತು. ಗೋಪುವಿನ ನರಸಿಂಹದೇವರು ಬಂದಿರಲಿಲ್ಲ. ನಾನು ಆ ಮಾತನ್ನೇ ಎತ್ತದೆ ಸುಮ್ಮನಾದೆ. ಅವರ ಮನೆಯವರೂ ಯಾರೂ ಬರಲಿಲ್ಲ. ಆ ದಿನಕ್ಕೆ ರೇವತಿ ಮಲಗಿ ಎಂಟು ದಿನವಾಗಿತ್ತು. ನನ್ನ ಮನಸ್ಸಿಗಂತೂ ಎಷ್ಟೋ ವರ್ಷಗಳು ಕಳೆದುಹೋದಂತಿದ್ದುವು. ಪುನಃ ನನ್ನ ರೇವತಿ ಎಂದಿನಂತೆ ಎದ್ದು ಓಡಾಡಿ ನನ್ನ ಹೃದಯವನ್ನು ತನ್ನ ಮುಗುಳುನಗೆಯಿಂದ ಬೆಳಗುವಳೇ, ಎಂಬ ನಿರಾಸೆಯು ಸುಡಿ ಆಗಾಗ ನನ್ನ ಮನಸ್ಸನ್ನು ಬೆಚ್ಚುವಂತೆ ಮಾಡುವುದು. ಕೆಟ್ಟ ಆಲೋಚನೆ ಮಾಡಬಾರದೆಂದು ಎಷ್ಟೆಷ್ಟು ಹಿಂದೆ ತಳ್ಳಿದರೂ ರೇವತಿಯಿಲ್ಲದ ನಿಸ್ಸಾರಜೀವನ ನನ್ನ ಬಗೆಯ ಮುಂದೆ ಮರಳುಗಾಡಿನಂತೆ ಕಾಣುವುದು. ನನಗೂ ಒಂದು ವಿಧವಾದ ಹುಚ್ಚೇ ಹಿಡಿದು ಹೋಗಿದ್ದಿತು. ರೇವತಿ ಖಾಯಿಲೆಯಾಗಿರುವಾಗಲೂ ಪ್ರಪಂಚದ ವಿವಿಧ ವ್ಯವಹಾರಗಳು ನಡೆದುಹೋಗುತ್ತಿವೆಯಲ್ಲಾ, ಎಂದು ನನಗೆ ಆಶ್ಚರ್ಯ.

ರೇವತಿಯ ಜಾತಕಬಲವೋ, ನನ್ನ ಅದೃಷ್ಟಪುಣ್ಯವಿಶೇಷವೋ, ಗೋಪುವಿನ ನರಸಿಂಹದೇವರ ವರಪ್ರಸಾದವೋ, ನನ್ನ ಅತ್ತೆಮಾವಂದಿರ ಕರುಳಿನ ಪುಣ್ಯವೋ, ಅಂತೂ ಆ ಶನಿವಾರದಿಂದ ರೇವತಿ ಗುಣಮುಖಳಾದಳು. ಜ್ವರವೂ ಕಡಮೆಯಾಗಿ ಜ್ಞಾನವೂ ಬರತೊಡಗಿತು. ಅವಳಿಗೆ ಸ್ವಲ್ಪ ಶಕ್ತಿ ಬರುತ್ತಲೇ ಕರೆದುಕೊಂಡು ಹೋಗಿ ಅವರ ತಂದೆಯ ಮನೆಯಲ್ಲಿ ಬಿಟ್ಟೆ.

*  *  *  *  *

ನಾವು ಹೊಸೂರನ್ನು ಬಿಟ್ಟು ವರ್ಷವಾಗುತ್ತ ಬಂದಿದ್ದಿತು. ಆ ಊರಿನ ಸಂಪರ್ಕವಿದ್ದುದು ಗೋಪುವಿನಿಂದಲೇ. ರೇವತಿ ಖಾಯಿಲೆಯಿದ್ದ ಶುಕ್ರವಾರ ಹೊರಟುಹೋದ ನರಸಿಂಹದೇವರು ಪುನಃ ಅವನ ಮೈಮೇಲೆ ಬಂದಿರಲಿಲ್ಲ. ನಾವು ಆ ಊರನ್ನು ಬಿಟ್ಟಾಗ ನಮ್ಮೊಡನೆಯೇ ಅವನೂ ಬಂದನು. ಅವನ ತಂದೆತಾಯಿಗಳೂ "ಎಲ್ಲಾದರೂ ಮಗು ಸುಖವಾಗಿರಲಿ; ನಿಮ್ಮ ಪುಣ್ಯದಿಂದಲಾದರೂ ಅವನು ನೆಮ್ಮದಿಯಾಗಿರಲಿ" ಎಂದು ಹೇಳಿ ಕಳುಹಿಸಿಕೊಟ್ಟರು. ಈ ಸಲ ಅವನು ಲೋವರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದ್ದ. ರೇವತಿ ಎಂದಿನಂತೆ ಉತ್ಸಾಹದಿಂದ ಪಾಠ ಹೇಳಿಕೊಡು

ತ್ತಿದ್ದಳು. ನಮ್ಮ ಪುಟ್ಟರೋಹಿಣಿಯಂತೂ ಅವನನ್ನು ಎಡಬಿಡುತ್ತಿರಲಿಲ್ಲ.

---

# ಜಾತಿಯ ಬಲಿ

"ಊಟಮಾಡುವಾಗ ಬರಬಾರದೆಂದು ಎಷ್ಟು ಸಲ ಹೇಳಬೇಕೋ ಹಸನ್?"

"ಇಲ್ಲಾಮ್ಮ ಬರೋಕಿಲ್ಲ."

ಲಲಿತೆಗೆ ಮರುಕವುಂಟಾಯಿತು. ಹಸನನ ಜೀವನದಲ್ಲಿ "ಬರಬಾರದು, ಮಾಡಬಾರದು ಎಂಬ ಪದಗಳೇ ಪದೇ ಪದೇ ಕೇಳಿಬರುತ್ತಿದ್ದವು. ಅವನು ತಬ್ಬಲಿ ಹುಡುಗ. ದೂರದ ಸಂಬಂಧಿಯೊಬ್ಬನ ಮನೆಯಲ್ಲಿ ಅವನ ಅನ್ನಬಟ್ಟೆಗಳು ಕಳೆಯುತ್ತಿದ್ದವು. ರಷೀದಳು ಒಳ್ಳೆಯ ಹೆಂಗಸೇ. ಲಲಿತೆಗೂ ಅವಳಿಗೂ ತುಂಬಾ ಸ್ನೇಹವಿತ್ತು. ಎಷ್ಟೋ ಕಸೂತಿ ಕೆಲಸವನ್ನು ಲಲಿತೆಯು ಅವಳಿಂದ ಕಲಿತಿದ್ದಳು. ಹರಟೆಯಲ್ಲಿ ಅನೇಕ ಗಂಟೆಗಳನ್ನು ಕಳೆಯುತ್ತಿದ್ದರು. ಲಲಿತೆಯೂ, ಅವಳ ಗಂಡ ವೆಂಕಟೇಶಯ್ಯನೂ ದೆಹಲಿಗೆ ಬಂದಾಗ ಅವರಿಗೆ ಯಾರ ಗುರುತೂ ಇರಲಿಲ್ಲ. ಲಲಿತೆಗೆ ಮೊದಲು ಗುರುತಾದುದು ರಷೀದಳೇ. ಅವಳಿಗೆ ಹರುಕು ಮುರುಕಾಗಿ ಕೆಲವು ಕನ್ನಡದ ಮಾತುಗಳು ಬರುತ್ತಿದ್ದುದರಿಂದ ಲಲಿತೆಗೆ ಎಷ್ಟೋ ಸಹಾಯವಾಯಿತು. ಕೆಲಸದವರಿಗೆ ತನ್ನ ಇಂಗಿತವನ್ನು ತಿಳಿಸಲು ರಷೀದಳ ಸಹಾಯವು ಅಗತ್ಯವಾಗಿತ್ತು.

ಹೀಗೆ ಪ್ರಾರಂಭವಾದ ಸ್ನೇಹವು ಬಲಿಯುತ್ತಾ ಬಂದಿತ್ತು. ರಷೀದಳಿಗೆ ಮಕ್ಕಳಿರಲಿಲ್ಲ. ಆದರೂ ಹಸನನೆಂದರೆ ಅವಳಿಗೆ ಬೇಸರವೇ. ಅವನು ಹೇಗಿದ್ದರೂ ಅವಳ ಮನಸ್ಸಿಗೆ ಸರಿಹೋಗುತ್ತಿರಲಿಲ್ಲ. ಮುಖ ನೋಡಿದುದು ವಿಷಗಳಿಗೆಯೋ ಏನೋ! ಕೂತರೆ ನಿಂತರೆ ಅವನನ್ನು ಆಕ್ಷೇಪಿಸುವಳು. ಅವನು ಎದುರುಗಿದ್ದರೆ ಚೇಳು ಕಡಿದಂತಾಡುತ್ತಿದ್ದಳು. ಹಸನ್ ಚಿಕ್ಕವನು. ಆದರೂ ಅವನಿಗೆ ರಷೀದಳ ಮನೋಭಾವ ತಿಳಿದಿತ್ತು: ಬಹಳಮಟ್ಟಿಗೆ ಅವಳಿಂದ ದೂರವಾಗಿಯೇ ಇರುತ್ತಿದ್ದನು ಕಾಣದಿದ್ದರೆ, "ಎಲ್ಲೋ ಪೋಲಿ ಅಲೆಯುವುದಕ್ಕೆ ಹೋದ" ಎಂದು ರಷೀದಳ ಅಭಿಪ್ರಾಯ,

ಈಚೆಗೆ ಹಸನನು ಹೆಚ್ಚು ಹೊತ್ತನ್ನು ಲಲಿತೆಯ ಮನೆಯಲ್ಲೇ ಕಳೆಯುತ್ತಿದ್ದನು. ಲಲಿತೆಯ ಮಗಳು ಕಮಲೆಯೂ ಹಸನನ ವಯಸ್ಸಿನವಳೇ. ಅವಳಿಗೆ ಹಸನನು ಆಡಲು ಜತೆಯಾದನು. ಹಿರಿಯರನ್ನು ಅನುಕರಿಸಿ ಕಮಲೆಯೂ ಅವನನ್ನು ಅಸಡ್ಡೆಯಿಂದ ಕಾಣುತ್ತಿದ್ದರೂ, ಆಟದವೇಳೆಯಲ್ಲಿ ಮಾತ್ರ ಅವನು ಅಗತ್ಯವಾಗಿ ಬೇಕಾಗಿದ್ದನು. ಊಟದ ನಿದ್ರೆಯ ಹೊತ್ತು ವಿನಾ ಮಿಕ್ಕಹೊತ್ತನ್ನೆಲ್ಲಾ ಇಲ್ಲೇ ಕಳೆಯುತ್ತಿದ್ದನು. ಅಹಮ್ಮದನು, "ಅವನು ಸದಾ ಅಲ್ಲಿ ಹೋದರೆ ಅವರಿಗೆ ಬೇಸರವಾಗುವುದು" ಎಂದು ರಷೀದಳೊಡನೆ ಹೇಳಿದಾಗ ಮಾತ್ರ ಅವಳು ಅವನನ್ನು ಕರೆದೊಯ್ಯಲು ಬರುವಳು. ಲಲಿತೆ, "ಇರಲಿ ಬಿಡ್ರೀ. ಕಮಲೆಯೊಡನೆ ಆಡುತ್ತಾನೆ" ಎಂದರೆ, ತಾನೂ ಹರಟೆಗೆ ಕುಳಿತುಕೊಳ್ಳುವಳು.

ಆ ದಿನ ಭಾನುವಾರ. ವೆಂಕಟೇಶಯ್ಯನು ಕೆಲಸಕ್ಕೆ ಹೋಗಬೇಕಾಗಿರಲಿಲ್ಲ. ಕಮಲೆಯ ಕೈ ಹಿಡಿದುಕೊಂಡು ಪೇಟೆಯಕಡೆ ಹೊರಟನು. ಸ್ವಲ್ಪದೂರ ಹೋಗುವುದರೊಳಗಾಗಿ "ಕಮಲಾ, ಕಮಲಾ," ಎಂದು ಕೂಗಿಕೊಂಡು ಹಸನ್ ಓಡಿ ಬಂದನು. ಅವನ ಹರುಕು ಬನಿಯನ್ನನ್ನು ನೋಡಿ ಕಮಲೆ "ನಾನು ಪೇಟೆಗೆ ಹೋಗ್ತೀನಿ" ಎಂದಳು.

"ನಾನೂ ಬರಲಾ?" ಹಸನನ ಧ್ವನಿ ದೀನವಾಗಿತ್ತು. ತನ್ನ ಬೇಡಿಕೆ ವ್ಯರ್ಥವೆಂದು ಅವನು ಖಂಡಿತವಾಗಿ ತಿಳಿದಿದ್ದನು.

ಕಮಲೆ ನಿರ್ದಾಕ್ಷಿಣ್ಯವಾಗಿ "ನಿನ್ನ ಬಟ್ಟೆ ಚನ್ನಾಗಿಲ್ಲ" ಎಂದಳು. ಹಸನ್ ತಲೆ ತಗ್ಗಿಸಿ ತನ್ನ ಬಟ್ಟೆಗಳನ್ನು ನೋಡಿಕೊಂಡನು. ಅವು ನಿಜವಾಗಿಯೂ ಪೇಟೆಯಲ್ಲಿ ಧರಿಸಲು ಅರ್ಹವಾಗಿರಲಿಲ್ಲ. ಮಾಸಿದ್ದ ಪಾಯಿಜಾಮೆ ಮೊಣಕಾಲಿನ ಹತ್ತಿರ ಉಬ್ಬಿ ನಿಂತಿತ್ತು. ಪಾದಗಳನ್ನು ದಾರದ ಎಳೆಗಳು ಸುತ್ತುವರಿದಿದ್ದುವು. ಎದೆಯಮೇಲೆ ಉದ್ದಕ್ಕೂ ಷರಟು ಹರಿದಿತ್ತು. ಗುಂಡಿಗಳಿಲ್ಲದುದರಿಂದ ಒಂದು ದಾರವನ್ನು ಹಾಕಿ ಸೇರಿಸಿದ್ದನು. ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ಕೆರೆದುಕೊಳ್ಳುತ್ತಾ ಸುಮ್ಮನಾದನು. ವೆಂಕಟೇಶಯ್ಯನಿಗೆ ಅರ್ಧಮರುಕವೂ, ಅರ್ಧನಗುವೂ ಬಂತು. ಹಸನನು ಎಂದೂ ಹೊಸ ಬಟ್ಟೆಗಳನ್ನು ಧರಿಸಿದ್ದುದನ್ನು ಆತನು ನೋಡಿರಲಿಲ್ಲ.

"ಪರವಾಯಿಲ್ಲ. ಬಾ ಹಸನ್" ಎಂದನು.

ಹಸನನು ತನ್ನ ಕಿವಿಯನ್ನೇ ನಂಬಲಾರದೆ, ಬೆಪ್ಪನಂತೆ ವೆಂಕಟೇಶಯ್ಯನ ಮುಖವನ್ನು ನೋಡುತ್ತಾ ನಿಂತನು. ಆತನು ಬೆರಳನ್ನು ಚಾಚಲು, ಹಲ್ಲುಕಿರಿಯುತ್ತಾ ಅದನ್ನು ಹಿಡಿದು ಹೊರಟನು. ಹತ್ತು ಹೆಜ್ಜೆ ಹೋಗುವುದರೊಳಗಾಗಿ ತನ್ನ ಬಟ್ಟೆಗಳ ಸ್ಥಿತಿ ಅವನಿಗೆ ಮರೆತೇ ಹೋಯಿತು. ಕಮಲೆಯೂ ಅವನೂ ಬಿಡುವಿಲ್ಲದೆ ಹರಟುತ್ತಾ ಹೊರಟರು.

ಲಲಿತೆ ಅಡಿಗೆಯನ್ನು ಮುಗಿಸಿ ಬೀದಿಬಾಗಿಲಿನಲ್ಲಿ ಬಂದು ನಿಂತಳು. ಎದುರುಮನೆಯಲ್ಲೇನೋ ಗಲಾಟೆ ನಡೆದಿತ್ತು. ಬಾಗಿಲಲ್ಲಿ ಒಂದು ಕಾರು ನಿಂತಿತ್ತು. ಕುತೂಹಲದಿಂದ ನೋಡುತ್ತಿರಲು ರಷೀದಳು ಬಂದು "ಹಸನ್ ಇದ್ದಾನಾ?" ಎಂದಳು.

"ಇಲ್ಲವಲ್ಲಾ."

"ಎಲ್ಲಿ ಹೋದನೋ. ಪ್ರಾರಬ್ಧ ಹುಡುಗ."

"ಏನು, ಎಲ್ಲಿಗೋ ಪ್ರಯಾಣವಾಗುತ್ತಿರುವಹಾಗಿದೆ?" ರಷೀದಳು ದೊಡ್ಡ ರಹಸ್ಯವನ್ನು ಹೇಳುವಂತೆ ಅತ್ತಿತ್ತ ನೋಡಲು, ಲಲಿತೆಯ ಕುತೂಹಲ ಹೆಚ್ಚಿತು.

"ಊರಲ್ಲೆಲ್ಲಾ ಏನೋ ಸುದ್ದಿ ಹರಡಿದೆಯಂತೆ. ನಮ್ಮ ಜನಾನೆಲ್ಲಾ ಹೊಡೆದು ಹಾಕ್ತಾರಂತೆ. ನಮ್ಮಣ್ಣ ಮದರಾಸಿನಿಂದ ಕಾಗದ ಬರೆದ. ಅಲ್ಲಿಗೆ, ಗಲಾಟೆಯೆಲ್ಲಾ ಮುಗಿಯೋವರಗೂ ಹೊರಟು ಹೋಗ್ತೇವಿ."

"ಸುಮ್ಮಸುಮ್ಮನೆ ಯಾಕೆ ಹೊಡೆದು ಹಾಕ್ತಾರೆ? ಎಲ್ಲೋ ಸುಳ್ಳು ಸುದ್ದಿ ಕೇಳಿ ಗಾಬರಿಯಾಗಿದ್ದೀರಿ."

"ಏನೋಮ್ಮ; ನಮ್ಮ ಜಮಾನ್ರು ಹೇಳಿದ್ರು. ಅವರ ಅಂಗಡೀಲಿದ್ದ ಬಟ್ಟೆಯೆಲ್ಲಾ ಆಗಲೇ ಸಾಗಿಸಿಬಿಟ್ರು.--ಹಾಗಾದ್ರೆ ಹಸನ್ನಿಲ್ಲಿಲ್ವಾ?"

"ಇಲ್ಲಮ್ಮಾ. ಬೆಳಗಿನಿಂದ ನಾನು ಅವನನ್ನು ನೋಡಲೇ ಇಲ್ಲ."

"ಅಲ್ಲೇ ದಾರೀಲಿ ಸಿಕ್ತಾನೆ" ಎಂದುಕೊಂಡು ರಷೀದಳು ಹೊರಟುಹೋದಳು.

ಎಲ್ಲವೂ ಸಿದ್ಧವಾಗಿದ್ದುದರಿಂದ ಲಲಿತೆ ಅಲ್ಲಿ ನಿಂತಿದ್ದಾಗಲೇ ಕಾರೂ ಹೊರಟಿತು. ಲಲಿತೆಗೆ ದುಃಖವೇ ಆಯಿತು. ಅವರು ಹೊರಡುವವರೆಗೂ ರಷೀದಳ ಸ್ನೇಹ ಎಷ್ಟು ಅವಶ್ಯವಾಗಿತ್ತೆಂದು ಅವಳಿಗೆ ತೋರಿರಲಿಲ್ಲ. ಆಗತಾನೇ ಅವರು ಮನೆಬಿಟ್ಟು ಹೋಗಿದ್ದರೂ ಎಷ್ಟೋ ವರ್ಷಗಳಿಂದ ಅದು ಪಾಳು ಬಿದ್ದಂತಿತ್ತು.

ಲಲಿತೆ ಒಳಕ್ಕೆ ಹೋಗಿ ಊಟಕ್ಕೆ ತಟ್ಟೆಗಳನ್ನು ಸಿದ್ಧಪಡಿಸಿದಳು. ಸ್ವಲ್ಪ ಹೊತ್ತಿಗೆ ಕಮಲೆಯೂ ವೆಂಕಟೇಶಯ್ಯನೂ ಮನೆಗೆ ಬಂದರು. ಅಂಗಡಿಯಿಂದ ಕೊಂಡು ತಂದಿದ್ದ ಒಂದು ಬಟ್ಟೆಬೊಂಬೆಯನ್ನು ತೊಡೆಯ ಮೇಲಿಟ್ಟುಕೊಂಡೇ ಕಮಲೆ ಊಟಮಾಡುತ್ತಿದ್ದಳು. ಇದ್ದಕ್ಕಿದ್ದಂತೆ ಯಾರೋ ಅತ್ತ ಶಬ್ದ ಕೇಳಿಸಿತು. ನಿರ್ದಾಕ್ಷಿಣ್ಯವಾಗಿ ಗಟ್ಟಿಯಾಗಿ ಬಾಯಿತೆರೆದು ಅಳುತ್ತಿದ್ದರು. ಬಡಿಸುತ್ತಿದ್ದ ಲಲಿತೆ ತಲೆಯೆತ್ತಿ, "ಯಾರದು?" ಎಂದಳು. ಕಮಲೆ ನಿರ್ಲಕ್ಷ್ಯವಾಗಿ, "ಹಸನ್ ಇರಬಹುದು" ಎಂದಳು.

"ಹಸನ್ ಎಲ್ಲಿದ್ದಾನೆ? ಅವರೆಲ್ಲಾ ಮದರಾಸಿಗೆ ಹೊರಟು ಹೋದರು."

"ನಮ್ಮ ಜತೆಯಲ್ಲೇ ಬಂದನಲ್ಲಾ! ಈಗತಾನೇ ಮನೆಗೆ ಹೋದ" ಎಂದನು ವೆಂಕಟೇಶಯ್ಯ.

ಲಲಿತೆ ಗಾಬರಿಯಿಂದ, "ಹಾಗಾದರೆ ಅವರಿಗೆ ಸಿಕ್ಕಲಿಲ್ಲವೇನೋ! ದಾರಿಯಲ್ಲಿ ಅವನನ್ನೂ ಕರೆದುಕೊಂಡು ಹೋಗುವುದಾಗಿ ರಷೀದ ಹೇಳಿದಳು." ಎಂದು ಬೀದಿ ಬಾಗಿಲನ್ನು ತೆಗೆದು ನೋಡಿದಳು. ಎದುರು ಮನೆಯ ಅಂಗಳದಲ್ಲಿ ಹಸನನು ನಿಂತು ಕಣ್ಣುಗಳನ್ನುಜ್ಜುತ್ತಾ ಅಳುತ್ತಿದ್ದನು.

"ಇಲ್ಲಿ ಬಾ ಹಸನ್."

ಹಸನನು ತಲೆಯೆತ್ತಿ ಲಲಿತೆಯನ್ನು ನೋಡಿ ಪುನಃ ಗಟ್ಟಿಯಾಗಿ ಅಳತೊಡಗಿದನು. ಲಲಿತೆಯೇ ಹೋಗಿ ಅವನ ಕೈಹಿಡಿದು ಕರೆತಂದು ಒಂದು ಎಲೆ ಹಾಕಿ ಅವನಿಗಷ್ಟು ಅನ್ನವನ್ನು ಬಡಿಸಿದಳು. ಆ ತಬ್ಬಲಿ

ಮಗುವನ್ನು ನೋಡಿ ಲಲಿತೆಗೆ ತುಂಬಾ ದುಃಖವಾಯಿತು. ರಷೀದಳದು ಎಷ್ಟು ಕಲ್ಲು ಹೃದಯ !

ಅವನು ತನ್ನ ಮಗನಾಗಿದ್ದರೆ ಹೀಗೆ ಬಿಟ್ಟು ಹೋಗುತ್ತಿದ್ದಳೇ ? ಅಹಮ್ಮದನಾದರೂ ಹುಡುಕಿ ಕರೆದುಕೊಂಡು ಹೋಗಬೇಡವೇ ?

ಹಸನನಿಗೇನೋ ಆಗಲೇ ದುಃಖ ಮರೆತುಹೋಗಿತ್ತು. ವೆಂಕಟೇಶಯ್ಯನು ಅವನಿಗೊಂದು ಆಟದ ಮೋಟಾರನ್ನು ಕೊಂಡು ಕೊಟ್ಟಿದ್ದರು. ಅವನೂ ಕಮಲೆಯೂ ಬೊಂಬೆಯನ್ನು ಅದರಲ್ಲಿ ಕೂರಿಸಿ ಆಡಿಕೊಳ್ಳುತ್ತಿದ್ದರು. ಆಟವೆಲ್ಲಾ ಮುಗಿಯಲು ಹಸನನು "ಮನೆಗೆ ಹೋಗ್ತೀನಿ" ಎಂದು ಎದ್ದನು.

"ಬೇಡ ಹಸನಾ. ಈವತ್ತು ಇಲ್ಲೇ ಇದ್ದುಬಿಡು" ಎಂದಳು ಲಲಿತೆ.

ಹಸನನು "ಮಾಯಿ ಎಲ್ಲಿ ?" ಎಂದನು.

"ಎಲ್ಲೋ ಹೋಗಿದ್ದಾರೆ. ಇನ್ನೊಂದೆರಡು ದಿನಕ್ಕೆ ಬರ್ತಾರೆ." ಹಸನನ ಅಭ್ಯಂತರವೇನೂ ಇರಲಿಲ್ಲ. ಪುನಃ ಆಟಕ್ಕೆ ಕುಳಿತನು. ಕಮಲೆಗೂ ಈ ಏರ್ಪಾಟೇ ಸರಿಯಾಗಿ ತೋರಿತು. ಆಟಕ್ಕೋಸ್ಕರ ಹಸನನಿಗಾಗಿ ಕಾಯಬೇಕಾಗಿರಲಿಲ್ಲ. ನಿದ್ರೆ ಬರುವವರೆಗೂ ಹರಟುತ್ತಿರಬಹುದು. ಹಸನನೂ ಸುಖವಾಗಿ ಆ ಜೀವನಕ್ಕೆ ಹೊಂದಿಕೊಂಡು ಹೋದನು. ರಷೀದಳ ಅಸಮಾಧಾನ ದೃಷ್ಟಿಯಿಂದ ತಪ್ಪಿಸಿಕೊಂಡುದು ತನ್ನ ಅದೃಷ್ಟವೆಂದೇ ತಿಳಿದನು. ಲಲಿತೆ ಏನು ಕೆಲಸ ಹೇಳಿದರೂ ಸಂತೋಷವಾಗಿ ಮಾಡುತ್ತಿದ್ದನು. ವೆಂಕಟೇಶಯ್ಯನಲ್ಲಿ ಮಾತ್ರ ತನ್ನವರೆಂಬ ಭಾವನೆ ಅವನಿಗುಂಟಾಗಲಿಲ್ಲ. ಆತನು ಇವನನ್ನೇನೂ ಬಯ್ಯದಿದ್ದರೂ ಆತ್ಮೀಯತೆಯಿರಲಿಲ್ಲ. ಅವ್ಯಕ್ತರೀತಿಯಲ್ಲಿ, ತನ್ನನ್ನು ಹೊರೆಯಾಗಿ ಕಾಣುತ್ತಿರುವಂತೆ ಅವನಿಗೆ ತೋರುತ್ತಿತ್ತು. ಆದರೆ ದಿವಸದಲ್ಲಿ ಬಹಳಹೊತ್ತು ಆತನು ಮನೆಯಲ್ಲಿರುತ್ತಿರಲಿಲ್ಲವಾದುದರಿಂದ ಅವನಿಗಷ್ಟು ತೊಂದರೆ ಕಾಣುತ್ತಿರಲಿಲ್ಲ.

* * * * *

ಆ ದಿನ ರಜಾ. ವೆಂಕಟೇಶಯ್ಯ ಊಟಮಾಡಿ ಮಲಗಿದ್ದನು; ಲಲಿತೆ ಮಾತನಾಡುತ್ತಾ ಕುಳಿತಿದ್ದಳು. ಕಮಲೆಯೂ ಹಸನನೂ ಆಡುತ್ತಿದ್ದರು. ಕಮಲೆ ಒಳಗೆ ಬಂದು "ಅಮ್ಮಾ ಆರುಕಾಸು ಕೊಡು" ಎಂದಳು.

ಮಾತಿನಲ್ಲಿ ಮಗ್ನಳಾಗಿದ್ದ ಲಲಿತೆ ಅವಳಕಡೆ ಗಮನ ಕೊಡಲಿಲ್ಲ. ಕಮಲೆ ಪೀಡಿಸತೊಡಗಲು ವೆಂಕಟೇಶಯ್ಯ "ಯಾಕೆ ಕಾಸು, ಕಮಲೂ?" ಎಂದನು.

"ಹಸನ್ ಮಿಠಾಯಿ ತರ್ತಾನಂತೆ."

"ಕೊಟ್ಟು ಕಳುಹಿಸಬಾರದೆ?" ಲಲಿತೆಗೆ ಹೇಳಿದನು.

"ಈ ಮಧ್ಯಾಹ್ನ ಮಿಠಾಯಿ ಇಲ್ಲದಿದ್ದರೇನು? ಬಿಸಿಲಲ್ಲಿ ಸುಮ್ಮನೆ ಪೋಲಿ ತಿರಗ್ತಾನೆ."

ವೆಂಕಟೇಶಯ್ಯ ಬೇಸರದಿಂದ "ಹೋದರೆ ಹೋಗ್ತಾನೆ, ಕೊಟ್ಟು ಕಳುಹಿಸು" ಎಂದನು.

ಅವನ ಮಾತಿನ ರೀತಿಯನ್ನು ಕೇಳಿ ಲಲಿತೆ ಬೆಚ್ಚಿದಳು. ವೆಂಕಟೇಶಯ್ಯನಿಗೆ ಹಸನನಿನ್ನೂ ಹೊರಗಿನವನೇ ಎಂಬ ಅರಿವು ಅವಳಿಗೂ ಉಂಟಾಯಿತು. ಹಸನನೆಂದೋ ಕಂಡುಕೊಂಡಿದ್ದ ಭಾವನೆ ಲಲಿತೆಗೀಗ ತಿಳಿಯಿತು. ಆ ಹುಡುಗನಲ್ಲಿ ಅವಳಿಗಿದ್ದ ಮರುಕ ಹೆಚ್ಚಾಯಿತು. ಮೇಜಿನ ಮೇಲಿದ್ದ ಆರುಕಾಸನ್ನು ತಾನೇ ಹಸನನ ಕೈಗೆ ಕೊಟ್ಟು "ಈವತ್ತು ತಂದು ಬಿಡು, ಹಸನ್; ಇನ್ನುಮೇಲೆ ಹೀಗೆ ಮಧ್ಯಾಹ್ನವೆಲ್ಲಾ ಅಲೆಯಬಾರದು. ಕೂತುಕೊಂಡು ಓದಬೇಕು. ನೀನು ಜಾಣನಾಗಬೇಡವೆ, ಹಸನ್?" ಎಂದು ಪ್ರೀತಿಯಿಂದ ಅವನ ಬೆನ್ನಮೇಲೆ ಕೈಯಾಡಿಸಿದಳು. ಹಸನನಿಗೆ ಇದ್ದಕ್ಕಿದ್ದಂತೆ ಕಣ್ಣಲ್ಲಿ ನೀರು ಬಂತು. ಲಲಿತೆಯ ಸಹಾನುಭೂತಿಯಿಂದಲೋ, ತನ್ನ ಆಶ್ರಿತಸ್ಥಿತಿಯನ್ನು ನೆನೆದೋ ಹೇಳಬಲ್ಲವರಾರು? ಲಲಿತೆಯ ಕೈಯನ್ನು ಹಿಡಿದುಕೊಂಡು "ಬೇಗ ಬಂದ್ಬಿಡ್ತೀನಿ. ಬಂದು ಗಣಿತ ಮಾಡ್ತೀನಿ" ಎಂದನು. ಲಲಿತೆ "ನೀನು ಜಾಣ" ಎನ್ನಲು, ಒಂದು ಉಸಿರಿಗೆ ಬಾಗಿಲುದಾಟಿ ಹೋದನು.

ಕಮಲೆ ಬಾಗಿಲಲ್ಲಿ ಆಕಳಿಸುತ್ತಾ ಕುಳಿತಿದ್ದಳು. ವೆಂಕಟೇಶಯ್ಯ ನಿಗೆ ನಿದ್ರೆ ಹತ್ತಿತ್ತು. ಲಲಿತೆ ಅಲ್ಲೇ ಕುಳಿತು ಕಸೂತಿ ಹಾಕುತ್ತಿದ್ದಳು. ಹೊರಗೇನೋ ಗದ್ದಲವಾಗಲು ಲಲಿತ ಕುತೂಹಲದಿಂದ ಕಿಟಕಿಯಾಚೆ ನೋಡಿದಳು. ರಸ್ತೆಯ ಕೊನೆಯಲ್ಲಿ ಜನರ ಗುಂಪೊಂದು ಓಡಿಬರುತ್ತಿತ್ತು. ಆ ಗದ್ದಲದಲ್ಲಿ ಸ್ಪಷ್ಟವಾಗಿ ಏನೂ ಕೇಳಿಬರುತ್ತಿರಲಿಲ್ಲ. ತಟ್ಟನೆ ಲಲಿತೆ "ಅಯ್ಯೋ! ಹಸನ್" ಎಂದು ಕೂಗಿದಳು. ವೆಂಕಟೇಶಯ್ಯನೂ ಗಲಾಟೆಗೆಚ್ಚತ್ತು ಕಿಟಕಿಯಿಂದ ಹೊರಗೆ ನೋಡುತ್ತಿದ್ದನು. ನಿಜವಾಗಿಯೂ ಹಸನ್! ಎಲ್ಲಿಯೋ ಬಿದ್ದು ಮಂಡಿ ತರೆದುಕೊಂಡು ಪಾಯಿಜಾಮೆಯೆಲ್ಲಾ ರಕ್ತವಾಗಿತ್ತು. ಉಸಿರು ಒಗೆದು ಬಂದಿದ್ದರೂ ಗಾಬರಿಯಾಗಿ ಓಡುತ್ತಿದ್ದನು. ಅವನ ಹಿಂದೆ ೧೦-೧೫ ಜನ ದೊಣ್ಣೆಗಳನ್ನು ಹಿಡಿದುಕೊಂಡು ಓಡಿ ಬರುತ್ತಿದ್ದರು. "ಮಾರೋ, ಮಾರೋ," ಎಂಬ ಕೂಗೊಂದು ಸ್ಪಷ್ಟವಾಗಿ ಕೇಳಿಸತೊಡಗಿತು. ಲಲಿತೆ ಓಡಲು ಪ್ರಯತ್ನಿಸಿದಳು. ವೆಂಕಟೇಶಯ್ಯನು ಜಗ್ಗಿಯಾಗಿ ಅವಳ ಕೈ ಹಿಡಿದು "ಎಲ್ಲಿಗೆ ಹೋಗುತ್ತೀ, ನಿಲ್ಲು" ಎಂದು ಹಲ್ಲು ಕಚ್ಚಿಕೊಂಡು ಕೇಳಿದನು.

"ಅವನನ್ನು ಕೊಲ್ಲುತ್ತಾರೆ!" ಲಲಿತೆ ಕೂಗಿಕೊಂಡಳು. ಬಿಡಿಸಿಕೊಳ್ಳಲು ಪ್ರಯತ್ನಿಸಿದಳು. ವೆಂಕಟೇಶಯ್ಯನ ಕೈಯನ್ನು ಪರಚಿದಳು. ಕಚ್ಚಿದಳು. ಆತನು ಬಿಡಲಿಲ್ಲ.

ಅಷ್ಟು ಹೊತ್ತಿಗೆ ಹಸನನು ಮನೆಗೆ ತೀರ ಹತ್ತಿರ ಬಂದನು. "ಅವನು ಒಳಗೆ ಬಂದರೆ ದೇವರೇ ಗತಿ" ಎಂದು ವೆಂಕಟೇಶಯ್ಯನೆಂದುದು ಲಲಿತೆಗೆ ಕೇಳಿಸಿತು. ಅವಳೂ ಕಿಟಕಿಯಿಂದ ಹೊರಗೆ ನೋಡಿದಳು. ಒಬ್ಬ ದೊಡ್ಡ ಆಳು ಕಾಲಲ್ಲಿ ಒದ್ದುದರಿಂದ ಹಸನನು ಬಿದ್ದುಬಿಟ್ಟನು. ತಟ್ಟನೆ ಏಳೆಂಟು ದೊಣ್ಣೆಗಳ ಪೆಟ್ಟು ಅವನಮೇಲೆ ಬಿದ್ದು, ತಲೆಯೊಡೆದು ರಕ್ತಪ್ರವಾಹ ಚಿಮ್ಮಿತು. ಕಣ್ಣುಗುಡ್ಡೆ ಹೊರಗೆ ಬಂದು ಭಯಂಕರವಾಗಿ ಕಾಣುತ್ತಿತ್ತು. ಪ್ರಾಣ ತಟ್ಟನೆ ಹಾರಿಹೋಗಿತ್ತು. ವೆಂಕಟೇಶಯ್ಯ ಮಂಕುಹಿಡಿದವನಂತೆ ನೋಡುತ್ತಿದ್ದನು.—ಮೈಯಲ್ಲಿ ಹಠಾತ್ತನೆ ವಿದ್ಯುತ್ಪ್ರವಾಹವಾದಂತಾಯಿತು: ಪುಟ್ಟ ಕಮಲೆ ಆ ಗುಂಪಿನಲ್ಲಿ ನುಗ್ಗಿದ್ದಳು.

ಲಲಿತೆಯ ಕೈಯನ್ನು ಬಿಟ್ಟು ವೆಂಕಟೇಶಯ್ಯ ಓಡಿದನು. ಪ್ರಜ್ಞೆ ತಪ್ಪಿದ್ದ ಲಲಿತೆ ನೆಲಕ್ಕೆ ಜಾರಿದಳು. ಬೀದಿಯ ಬಾಗಿಲನ್ನು ತೆಗೆಯಲು ವೆಂಕಟೇಶಯ್ಯ ಸಾಹಸಪಟ್ಟನು. ನಡುಗುವ ಕೈಗಳಿಗೆ ಚಿಲಕಗಳೇ ಸಿಕ್ಕವು. ಸಿಕ್ಕಿದಮೇಲೂ ಹೊರಗಡೆ ಚಿಲಕಕ್ಕೆ ಕಡ್ಡಿ ಸಿಕ್ಕಿಸಿದ್ದುದರಿಂದ ಬಾಗಿಲನ್ನು ತೆಗೆಯಲು ಬಹಳ ಸಾಹಸಪಡಬೇಕಾಯಿತು. ಬಲವನ್ನೆಲ್ಲಾ ಪ್ರಯೋಗಿಸಿ ಬಾಗಿಲನ್ನು ಎಳೆದು ತೆಗೆಯುವ ವೇಳೆಗೆ ಗುಂಪು ಮಾಯವಾಗಿತ್ತು. ಪುಟ್ಟ ಶವಗಳೆರಡು ಹಿಂದೂ—ಮುಸ್ಲಿಂ ಕಲಹಕ್ಕಾಹುತಿಯಾಗಿ ಬಿದ್ದಿದ್ದುವು.

# ಪಶ್ಚಾತ್ತಾಪ

"ಮಡಿ, ಮಡಿ! ಸದಾ ಮಡಿ! ಅದೇನು ಸುಡುಗಾಡು ಮಡಿಯೋ! ಎಂದಿಗೆ ತೀರುತ್ತೋ!" ಹುಬ್ಬುಗಂಟು ಹಾಕಿಕೊಂಡು ಸುಬ್ಬು ಮನೆ ಬಿಟ್ಟು ಹೊರಟನು.

ಶಾರದೆಗೂ ಬೇಸರ. ತಾನೆಷ್ಟು ಉಪಚಾರ ಮಾಡಿದರೂ ಎಷ್ಟು ಸರಿನೋಡಿಕೊಂಡುಹೋದರೂ ಇವನ ಬೇಸರ ಕಡಮೆಯಾಗುವುದಿಲ್ಲವಲ್ಲಾ ಎಂಬ ಪೇಚಾಟ. ಪಾಪ, ಅವಳ ತಪ್ಪಲ್ಲ. ಅವಳು ಶುದ್ಧ ವೈದಿಕರ ಮನೆಯ ಹುಡುಗಿ. ಅವಳ ತಾಯಿ ಮನೆಗೆಲಸಗಳನ್ನು ತೀರಿಸಿಕೊಂಡು, ಲಕ್ಷಣವಾಗಿ ತಲೆ ಬಾಚಿಕೊಂಡು, ಮಡಿಯಾಗಿ ನಿಂತುದನ್ನೇ ಅವಳು ಅರಿಯಳು. ಅವಳ ತಂದೆಯಂತೂ ತನ್ನ ವೈದಿಕ ವೃತ್ತಿಯನ್ನು ಮುಗಿಸಿಕೊಂಡು ಮನೆಗೆ ಊಟಕ್ಕೆ ಬರುವುದೇ ಸಂಜೆಯಾಗುತ್ತಿತ್ತು. ಇಂತಹ ವಾತಾವರಣದಲ್ಲಿ ಒಂಟಿಯಾಗಿ ಬೆಳೆದವಳು ಶಾರದೆ. ಸುಬ್ಬುವಿಗೆ ಈ ಕಾಲದ ನಾಗರಿಕ ತರುಣಿಯರಂತೆ ತನ್ನ ಹೆಂಡತಿಯೂ ಇರಬೇಕೆಂಬ ಆಸೆ. ತನ್ನೊಡನೆ ಓಡಾಡಿಕೊಂಡು, ತನ್ನ ಸ್ನೇಹಿತರೊಡನೆ ಧಾರಾಳವಾಗಿ ಮಾತನಾಡಿಕೊಂಡು ಅವಳಿರಬೇಕೆಂದು ಅವನಾಸೆ. ಶಾರದೆಗೆ ಇವೆಲ್ಲವನ್ನೂ ಹೊಸದಾಗಿ ಕಲಿಯಲು ಸಾಧ್ಯವಾಗಲಿಲ್ಲ. ಅನಾಚಾರವನ್ನು ಕಂಡರೆ ಅವಳಿಗೆ ಹೆದರಿಕೆ. ಯಾವ ಮೈಲಿಗೆ ಸೋಕುವುದೋ ಎಂಬ ಭಯ. ಸುಬ್ಬುವಿನ ಸ್ನೇಹಿತರು ಮನೆಗೆ ಬಂದರೆ ಬಾಗಿಲ ಹಿಂದೆ ಅಡಗುತ್ತಿದ್ದಳು. ಇದೆಲ್ಲವನ್ನೂ ಕಂಡರೆ ಸುಬ್ಬುವಿಗೆ ಮೈಯೆಲ್ಲಾ ಕಿಡಿ ಕಿಡಿ. ಮುಖ್ಯವಾಗಿ ಶಾರದೆಯ ತಂದೆಯ ತಪ್ಪು. ಯಾವನಾದರೊಬ್ಬ ವೈದಿಕನಿಗೆ ಮಗಳನ್ನು ಕೊಟ್ಟು ಮದುವೆಮಾಡಿದ್ದರೆ ಶಾರದೆ ಸುಖವಾಗಿರುತ್ತಿದ್ದಳು. "ಈಗಿನ ಕಾಲದ ಹುಡುಗ. ಹೆಂಡತಿಯನ್ನು ಸುಖವಾಗಿಟ್ಟುಕೊಂಡಿರುತ್ತಾನೆ" ಎಂದು ಆಲೋಚಿಸಿ ಮಗಳನ್ನು ಸುಬ್ಬುವಿಗೆ ಕೊಟ್ಟಿದ್ದರು. "ಹುಡುಗಿ ಲಕ್ಷಣವಾಗಿದ್ದಾಳೆ. ಅವರ ತಂದೆಗೆ ಬೇಕಾದಷ್ಟು ಆಸ್ತಿ ಇದೆ. ಒಬ್ಬಳೇ

ಮಗಳು," ಎಂದು ಸುಬ್ಬು ಒಪ್ಪಿಕೊಂಡಿದ್ದನು. ಮುಂದೆ ಒದಗಬಹುದಾದ ಕಠಿಣ ಸಮಸ್ಯೆಗಳು ಇಬ್ಬರ ಮನಸ್ಸಿಗೂ ಹೊಳೆಯಲಿಲ್ಲ.

ಮದುವೆಯಾದ ಸ್ವಲ್ಪ ದಿನಕ್ಕೇ ಇದರ ಪರಿಣಾಮಗಳು ಕಾಣಲಾರಂಭಿಸಿದವು. ಸುಬ್ಬು, ಶಾರದೆಗೆ ಕಾಗದ ಬರೆದನು. ಒಂದು, ಎರಡು, ಮೂರು ಕಾಗದಗಳನ್ನು ಬರೆದನು. ಶಾರದೆಯಿಂದ ಉತ್ತರವೇ ಇಲ್ಲ. ಸುಬ್ಬುವಿಗೆ ಬಹಳ ಬೇಸರವಾಯಿತು. ದೀಪಾವಳಿಗೆ ಹೋದಾಗ ಕೇಳಿ ಬಿಡುವುದು, ಎಂದು ನಿರ್ಧರಿಸಿಕೊಂಡು ಹೊರಟನು. ಹೆಂಡತಿಗಾಗಿ ಆರಿಸಿ ಒಂದು ಸೀರೆಯನ್ನು ಕೊಂಡನು. ಆ ದಿನವೆಲ್ಲಾ ಗಲಾಟೆ; ಹಬ್ಬ, ಊಟ, ಜಸರು. ಅವನ ಮಾವನ ಸ್ನೇಹಿತರೆಲ್ಲಾ ಎಡಬಿಡದೆ ಮುತ್ತಿಕೊಂಡಿದ್ದರು. ಸಾಯಂಕಾಲ ಆರತಿಯ ವೇಳೆಯಲ್ಲಿ ಶಾರದೆ ತಲೆಯೆತ್ತಿ ನೋಡಲಿಲ್ಲ, ಬಗ್ಗಿಸಿದ ಅವಳ ಮುಖ ಕೂಡ ಕಾಣಿಸದಿರಲು ಸುಬ್ಬು ಹತಾಶನಾಗಿ ಹೋಗಿ ಮಲಗಿದನು. ಮಾರನೆಯ ದಿನ "ಆದುದಾಗಲಿ, ಮಾತನಾಡಿಸಲೇಬೇಕು," ಎಂದುಕೊಂಡು ಎದ್ದನು, ಶಾರದೆಯ ಸದ್ದೇ ಇರಲಿಲ್ಲ. ಎಲ್ಲಾ ಕಡೆಯಲ್ಲೂ ಹುಡುಕಿದ ಮೇಲೆ ಅಡಿಗೆ ಮನೆಯಲ್ಲಿ ತಾಯಿಯ ಹತ್ತಿರ ಇದ್ದಳೆಂದು ತಿಳಿಯಿತು. ಕೆಲಸದವನನ್ನು ಕೂಗಿ "ಸ್ನಾನಕ್ಕೆ ನೀರು ಸರಿಯಾಗಿದೆಯೇ, ಕೇಳು ?" ಎಂದು ಹೇಳಿಕಳುಹಿಸಿದನು. ಶಾರದೆ ನೀರು ಸರಿಮಾಡಲು ಹೋದಾಗ ಬಚ್ಚಲು ಮನೆಯಲ್ಲಿ ಅವಳನ್ನು ಮಾತನಾಡಿಸಬಹುದೆಂಬ ಆಸೆ. ಚೌಕವನ್ನು ಹಿಡಿದುಕೊಂಡು ಬಚ್ಚಲು ಮನೆಗೆ ಹೋದಾಗ ಅಡಿಗೆಯವನು ನೀರು ಸರಿಮಾಡುತ್ತಿದ್ದನು. ಸ್ನಾನಮಾಡಿಕೊಂಡು ಹಿಂತಿರುಗಿದಾಗ ಕೋಣೆಯಲ್ಲಿ ಕಿಟಕಿಯ ಹತ್ತಿರ ಶಾರದೆಯೊಬ್ಬಳೇ ನಿಂತಿದ್ದುದನ್ನು ನೋಡಿ ಪುನಃ ಆಸೆ ಮೂಡಿತು. ಹಿಂದೆ ಹೋಗಿ ಮೆಲ್ಲಗೆ "ಶಾರದಾ" ಎಂದನು. ಶಾರದೆಯು ಬೆಚ್ಚಿ ಬಿದ್ದಳು. ಅವಳು ಓಡದಹಾಗೆ ಕೈಯನ್ನು ಸುಬ್ಬು ಬಿಗಿಯಾಗಿ ಹಿಡಿದುಕೊಂಡು "ಯಾಕಷ್ಟು ಭಯ, ಶಾರದಾ ? ನಿನ್ನನ್ನು ತಿಂದು ಬಿಡುತ್ತೇನೆಯೇ ?" ಎಂದನು.

ಶಾರದೆ ಮಾತಿಲ್ಲ. ಅವಳ ಮುಖವೆಲ್ಲಾ ಕೆಂಪಾಗಿ ಬೆವರುತ್ತಿತ್ತು.

"ನಾನಿಲ್ಲಿಗೆ ಬಂದದ್ದೇಕೆ? ನಿನ್ನೊಡನೆ ಮಾತನಾಡುವುದಕ್ಕಲ್ಲವೇ? ನೀನು ಮಾತನಾಡದಿದ್ದರೆ ನಾನು ಇನ್ನು ಮೇಲೆ ಬರುವುದೇ ಇಲ್ಲ."

ಶಾರದೆಗೆ ಭಯದಿಂದ ಕಣ್ಣುಗಳಲ್ಲಿ ನೀರು ತುಂಬಿತು. ಒರೆಸ ಬೇಕೆಂದು ಸುಬ್ಬು ಚೌಕಕ್ಕೆ ಕೈ ಹಾಕಿದನು. ಸಡಿಲವಾದ ಹಿಡಿತದಿಂದ ತಪ್ಪಿಸಿಕೊಂಡು ಶಾರದೆ ಒಂದೇ ಉಸಿರಿಗೆ ಅಡಿಗೆ ಮನೆಯನ್ನು ಸೇರಿದಳು.

ಆ ದಿನ ಸಾಯಂಕಾಲವೇ ಬೇಸರದಿಂದ ಸುಬ್ಬು ಊರಿಗೆ ಹೊರಟು ಬಂದನು. ತಿರುಗಿ ಶಾರದೆಗೆ ಕಾಗದವನ್ನೂ ಬರೆಯಲಿಲ್ಲ. ಅವರ ಮನೆಗೆ ಹೋಗಲೂ ಇಲ್ಲ.

ಶಾರದೆ ಮನೆಗೆ ಬಂದ ಮೇಲೂ ಹಾಗೆಯೆ. ಸದಾ ಮಡಿ, ಮಡಿ; ಸುಬ್ಬುವಿಗೆ ಸಾಕಾಗಿ ಹೋಯಿತು. ಏಕಾದಶಿ ಬಂದರೆ ಉಪವಾಸ, ಹೆರಳು ಕೆದರಿಕೊಂಡು ಬಾಡಿದ ಮುಖ. ಮನೆಗೆ ಹೋಗುವುದಕ್ಕೇ ಸುಬ್ಬುವಿಗೆ ಇಷ್ಟವಿಲ್ಲ. ಬೆಳಗಾದರೆ ಒಂದು ಉಪವಾಸ, ಒಂದು ವ್ರತ. ಬರಬರುತ್ತಾ ಇಬ್ಬರ ಹಾದಿಯೂ ಬೇರೆಯಾಗುತ್ತ ಬಂತು. ಬೆಳಗ್ಗೆ ಎದ್ದು ತನ್ನ ಸ್ನಾನ, ಜಪ, ಮಡಿ ಪೂಜೆಗಳಲ್ಲಿ ಶಾರದೆ ಲೀನಳಾಗುತ್ತಿದ್ದಳು. ಸುಬ್ಬು ಊಟಕ್ಕೆ, ನಿದ್ದೆಗೆ ವಿನಾ ಮನೆಯನ್ನೇ ಸೇರುತ್ತಿರಲಿಲ್ಲ. ಊಟಮಾಡುವಾಗಲೂ ಜೊತೆಯಲ್ಲಿ ಶಾರದೆ ಇರುತ್ತಿರಲಿಲ್ಲ. ಅವಳ ಜಪವೇ ಅಷ್ಟುಹೊತ್ತಿಗೆ ಮುಗಿಯುತ್ತಿರಲಿಲ್ಲ. ರಾತ್ರಿ ಕೆಲಸವೆಲ್ಲಾ ಮುಗಿದು ಬಂದು ಮಲಗುವ ವೇಳೆಗೆ ಸುಬ್ಬುವಿಗೆ ಎರಡು ಘಂಟೆಯ ನಿದ್ರೆ ಮುಗಿದಿರುತ್ತಿತ್ತು. ಇದೇ ಅಭ್ಯಾಸವಾಗಿ ಹೋಗಿದ್ದರೂ ಒಂದೊಂದು ದಿನ ಸುಬ್ಬುವಿಗೆ ಬಹಳ ಅಸಮಾಧಾನವಾಗುತ್ತಿತ್ತು. ಈ ದಿನವೂ ಹಾಗೆಯೇ ಜುಗುಪ್ಸೆಯಿಂದ ಸುಬ್ಬು ತನ್ನ ಸ್ನೇಹಿತನ ಮನೆಗೆ ಹೊರಟಿದ್ದನು.

ವಿಶ್ವನ ಮನೆ ಸುಬ್ಬುವಿನ ಮನೆಯಿಂದ ಒಂದು ಫರ್ಲಾಂಗ್ ದೂರವಿರಬಹುದು. ವಿಶ್ವನ ಹೆಂಡತಿ ಹೆರಿಗೆಗೆ ತವರುಮನೆಗೆ ಹೋಗಿದ್ದುದರಿಂದ ಸುಬ್ಬು ಮನಸ್ಸು ಬಂದಾಗ ಅವನ ಮನೆಗೆ ಹೋಗಿ ಬರಲು ಅನುಕೂಲವಾಗಿತ್ತು. ಇಬ್ಬರೂ ಒಟ್ಟಿಗೆ ಓದಿ, ಒಂದೇ ಸಮನಾಗಿ

ಸ್ನೇಹವನ್ನು ಬೆಳೆಸಿಕೊಂಡು ಬಂದಿದ್ದರು. ಸುಬ್ಬು ನೇರವಾಗಿ ಅಲ್ಲಿಗೆ ಹೋದನು.

"ಬಾರೋ, ಸುಬ್ಬೂ." ವಿಶ್ವನ ವಿಶ್ವಾಸದ ಸ್ವಾಗತ ಕೇಳಿಸಿತು. ಸದಾ ಸಂತೋಷ ಸ್ವಭಾವದ ವಿಶ್ವನ ಧ್ವನಿ ಈ ದಿನ ಹೆಚ್ಚು ಸಂತೋಷವನ್ನು ವ್ಯಕ್ತಪಡಿಸುತ್ತಿತ್ತು.

"ಏನಯ್ಯಾ, ಬಹಳ ಉಲ್ಲಾಸ? ಕಾಗದಗೀಗದ ಬಂತೋ?" ಸುಬ್ಬು ಕೇಳಿದನು.

"ಇನ್ನೂ ನಿನಗೆ ಕೇಳಿಸಲಿಲ್ಲವೆ, ಮಗುವಿನ ಗಲಾಟೆ? ನನ್ನ ಹೆಂಡತಿ ಬೆಳಗ್ಗೆ ಬಂದಳು."

"ಆದರೆ ನಾನು ಬರುತ್ತೇನಪ್ಪ. ನನ್ನಿಂದ ತೊಂದರೆಯಾಗಬಾರದು," ಸುಬ್ಬು ಎದ್ದನು.

"ಕೂತುಕೋಳ್ಳೊ. ತೊಂದರೆಯೂ ಇಲ್ಲ, ಏನೂ ಇಲ್ಲ. ಸರಸೂ, ಸುಬ್ಬು ಬಂದಿದ್ದಾನೆ." ಸರಸ್ವತಿ ಸುಂದರಿ. ಆದರೆ ಬರಿಯ ಕಡೆದ ಕಲ್ಲಿನ ಸೌಂದರ್ಯವಲ್ಲ. ಆ ಮುಖದಲ್ಲಿ ಸರಳತೆಯೂ ಸೌಜನ್ಯವೂ ಉಕ್ಕುತ್ತ, ಯಾರಿಗಾದರೂ ಅವಳನ್ನು ಇನ್ನೊಮ್ಮೆ ನೋಡಬೇಕೆನ್ನಿಸುವಂತಿತ್ತು. ಸರಸಿ ಹೆಸರಿಗೆ ತಕ್ಕಂತೆ ಸರಸಿ. ಅವಳ ಮುಖದಲ್ಲಿ ಮಂದಹಾಸ ಸದಾ ಸುಳಿಯುತ್ತಿತ್ತು. ಸರಸಿ ಆ ಮಾತು, ಈ ಮಾತು ಆಡಿ ಎದ್ದು "ಸ್ವಲ್ಪ ಕಾಫಿ ತರುತ್ತೇನೆ," ಎಂದು ಒಳಗೆ ಹೋದಳು.

ಇನ್ನೈದು ನಿಮಿಷಕ್ಕೆ ಒಂದು ತಟ್ಟೆಯಲ್ಲಿ ಎರಡು ಬಟ್ಟಲು ಕಾಫಿಯನ್ನಿಟ್ಟುಕೊಂಡು ಒಬ್ಬ ಹುಡುಗಿ ತಂದಳು. ವಿಶ್ವ "ಏನು ಪಾರ್ವತಿ, ನೀನು ಕೆಲಸಮಾಡಲು ಪ್ರಾರಂಭಿಸಿದೆ?" ಎನ್ನಲು ಪಾರ್ವತಿ ನಾಚಿಕೆಯಿಂದ ನಕ್ಕು ಒಳಕ್ಕೆ ಹೊರಟುಹೋದಳು. "ಅವಳು ನನ್ನ ನಾದಿನಿ, ಪಾರ್ವತಿ" ಎಂದು ವಿಶ್ವ ವಿವರಿಸಿದನು. ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಸುಬ್ಬು ಮನೆಗೆ ಹೊರಟನು.

ಸುಬ್ಬುವಿಗೆ ಸರಸಿಯೇನೋ ಚೆನ್ನಾಗಿ ಗುರುತಿತ್ತು. ಆದರೆ ಪಾರ್ವತಿಯೂ ಒಹುಬೇಗ ಬಳಕೆಯಾದಳು. ಅವಳೂ ಸರಸಿಯಂತೆ

ಸರಸಿ. ಹೊಸಬರನ್ನು ಕಂಡರೆ ಸಂಕೋಚವಿರದಿದ್ದುದರಿಂದ ಎಂಟು ದಿನಗಳಲ್ಲಿ ಊರೆಲ್ಲಾ ಅವಳಿಗೆ ಪರಿಚಯವಾಗಿತ್ತು. ಶಾರದೆಯನ್ನೂ ಒಂದೆರಡುಸಲ ನೋಡಿಕೊಂಡು ಹೋದಳು. ಅವಳು ಮನೆಗೆ ಬಂದರೆ ಶಾರದೆಗೆ ಒಂದು ಬಿರುಗಾಳಿ ಬಂದ ಅನುಭವವಾಗುತ್ತಿತ್ತು. ಅವಳ ಕಾರ್ಯ ಕ್ರಮವೆಲ್ಲಾ ಎಷ್ಟುಮಟ್ಟಿಗೆ ಬದಲಾಯಿಸುತ್ತಿತ್ತೆಂದರೆ ಒಂದೊಂದು ದಿನ ಜಪಮಾಡುವುದನ್ನು ಕೂಡ ಮರೆತು ಬಿಡುತ್ತಿದ್ದಳು. ಅವಳೆದುರಿಗೆ ಮಡಿಯ ಮಾತನ್ನೆತ್ತುವುದಕ್ಕೇ ಶಾರದೆಗೆ ನಾಚಿಕೆಯಾಗುತ್ತಿತ್ತು.

"ಇವೆಲ್ಲಾ ಅರವತ್ತು ವರ್ಷವಾದಮೇಲೆ ಮಾಡಬೇಕು ಕಾಣ್ರೀ. ಈಗ ಸುಖವಾಗಿ ತಿಂದು ತಿರುಗಿಕೊಂಡಿರದೆ ಮಡಿಯೇನು ಬಂತು?" ಎನ್ನುವಳು.

ಸುಬ್ಬುವಿಗೆ ವಿಶ್ವನ ಮನೆ ಬೇರೆಯೆಂಬ ಅಭಿಪ್ರಾಯವೇ ಅಳಿಸಿ ಹೋಯಿತು. ಬಿಡುವಿದ್ದ ಹೊತ್ತನ್ನೆಲ್ಲಾ ಅಲ್ಲಿಯೇ ಕಳೆಯ ತೊಡ ಗಿದನು. ಒಂದು ದಿನ ಮಾತನಾಡುತ್ತಿರುವಾಗ, "ವಿಶ್ವ, ನಿನ್ನ ನಾದನಿಗೆ ಬೇಗ ಮದುವೆ ಮಾಡಿಬಿಡಪ್ಪಾ. ಇಲ್ಲದಿದ್ದರೆ ಈ ಊರಿನ ಹುಡುಗರಿಗೆ ಯಾರಿಗೂ ಉಳಿಗಾಲವಿಲ್ಲ" ಎಂದನು. ಅಲ್ಲಿಯೇ ಕುಳಿತಿದ್ದ ಪಾರ್ವತಿ ಯ ಮುಖ ಹಠಾತ್ತನೆ ಗಂಭೀರವಾಯಿತು. ತುಟಿಗಳ ಮೇಲಿದ್ದ ನಗು ಮಾಯವಾಗುವುದಕ್ಕೆ ಮೊದಲೇ ಕಣ್ಣುಗಳಲ್ಲಿ ನೀರು ತುಂಬಿ ಬಂತು. ಅಲ್ಲಿಂದ ಎದ್ದು ಹೊರಟು ಹೋದಳು.

ಸುಬ್ಬು ಗಾಬರಿಯಿಂದ "ಯಾಕೋ?" ಎಂದನು. ವಿಶ್ವನೂ ದುಃಖದಿಂದ "ಅವಳನ್ನು ಕಟ್ಟಿಕೊಂಡು ಸಂಸಾರಮಾಡುವ ಪುಣ್ಯ ಅವಳ ಗಂಡನಿಗಿರಲಿಲ್ಲ. ಮದುವೆಯಾದ ತಿಂಗಳಿಗೇ ತೀರಿಕೊಂಡ." ಸುಬ್ಬುವಿನ ಮನಸ್ಸಿನಲ್ಲಿ ವಿವಿಧ ಭಾವನೆಗಳು ತೇಲಿಹೋದವು. ಪಾರ್ವತಿ ವಿಧವೆ! ಹಾಸ್ಯಮಯಿ, ಸ್ನೇಹಮಯಿ. ಪಾರ್ವತಿ ಸಂನ್ಯಾಸಿನಿ ಯಾಗಿ ಕಾಲಕಳೆಯಬೇಕು. ಅಷ್ಟುರೂಪವನ್ನು ಕೊಟ್ಟು, ಮರಳು ಗಾಡಿನಲ್ಲಿ ಸುರಿದ ನೀರಿನಂತೆ ವ್ಯರ್ಥಮಾಡಲೆಣಿಸಿದ ಬ್ರಹ್ಮನಿಗೆ ಕಣ್ಣಿದೆಯೆ? ಇದುವರೆಗೂ ಹೀಗಿರಬಹುದೆಂಬ ಅನುಮಾನವೇ ಸುಬ್ಬು

ಏಗಿರಲಿಲ್ಲ. ವ್ಯಥೆಯಿಂದ "ತಿಳಿಯಲಿಲ್ಲ ವಿಶ್ವ. ಬರುತ್ತೇನೆ" ಎಂದು ಎದ್ದು ಬಂದನು.

* * * * *

ಅಂದಿನಿಂದ ಅರಿವಿಲ್ಲದೆಯೇ ಪಾರ್ವತಿಯ ವಿಚಾರವಾಗಿ ಸುಬ್ಬುವಿನ ಭಾವನೆ ಬದಲಾಯಿಸುತ್ತ ಬಂತು. ಅವಳು ಕಷ್ಟವನ್ನರಿಯದ ಹಸುಳೆಯಲ್ಲ. ತನ್ನ ಕಷ್ಟದ ಆಳವನ್ನರಿಯದ ಮುಗ್ಧೆ. ಮುಂದೆ ಈ ನಗುಮುಖ ಲೋಕದ ತೀವ್ರ ಕಟ್ಟಳೆಗೆ ಸಿಕ್ಕಿ ನಲುಗಿ ಮ್ಲಾನವಾಗುವುದು. ಪಾರ್ವತಿಗೆ ಈ ಕಷ್ಟವೇ ಎಂದು ಸುಬ್ಬು ಮರುಗಿದನು. ಅಂದಿನಿಂದ ಪಾರ್ವತಿಯೂ ಸ್ವಲ್ಪ ಬದಲಾಯಿಸಿದಳು. ತನ್ನ ಜೀವನ ಬೇರೆ ಹುಡುಗಿಯರ ಜೀವನದ ಹಾಗಲ್ಲವೆಂಬ ಭಾವನೆ ಅಂದು ತಟ್ಟನೆ ಅವಳ ಹೃದಯದಲ್ಲೆಚ್ಚತ್ತಿತು. ಮೊದಲಿನ ಉಲ್ಲಾಸ ಮಾಯವಾಗಿ, ಬಾಲ್ಯವನ್ನು ಕಳೆದುಕೊಂಡು ದೊಡ್ಡವಳಾದಳು.

ವಿಶ್ವನ ಮನೆಗೆ ಹೋಗಿ ಬರುವುದು ಸುಬ್ಬುವಿಗೆ ಒಂದು ಅವಶ್ಯ ಕಾರ್ಯವಾಗಿ ಹೋಗಿತ್ತು. ದಿನಕ್ಕೆ ಒಂದು ಸಲವಾದರೂ ಹೋಗಿ ಬರದಿದ್ದರೆ ಅವನ ಮನಸ್ಸು ನಿಲ್ಲುತ್ತಿರಲಿಲ್ಲ. ಪಾರ್ವತಿಯೂ ಸರಸಿಯೂ ಎಂದಿನಂತೆ ಸಲಿಗೆಯಾಗಿಯೇ ಇದ್ದರೂ ಒಂದು ಅವ್ಯಕ್ತಭಾವನೆ ಮೂವರ ನಡುವೆ ರೂಪುಗೊಂಡಿತ್ತು. ಪಾರ್ವತಿಯ ವಿಚಾರದಲ್ಲಿ ತನಗಿದ್ದುದು ಸಹಾನುಭೂತಿಯೆಂದೇ ಸುಬ್ಬು ಬಗೆದಿದ್ದನು. ಆದರೆ ಅದು ಪ್ರೇಮದ ಮೊದಲ ಮೆಟ್ಟಲೆಂದು ಅವನು ಆಗ ತಿಳಿಯಲಿಲ್ಲ. ತಿಳಿದ ಮೇಲೂ ಹಿಂದಕ್ಕೆ ಹೆಜ್ಜೆ ಇಡುವ ಪ್ರಯತ್ನ ಮಾಡಲಿಲ್ಲ.

ಶಾರದೆಗೆ ಇದೊಂದೂ ತಿಳಿಯದು. ಮನೆಗೆಲಸಗಳಲ್ಲಿ ನಿರತಳಾದ ಅವಳು ಕೂಪಕೂರ್ಮದಂತೆ ಹೊರಗಿನ ಪ್ರಪಂಚದ ಕಡೆ ಗಮನವನ್ನೇ ಕೊಡುತ್ತಿರಲಿಲ್ಲ. ಸುಬ್ಬು ಅವಳ ವಿಚಾರದಲ್ಲಿ ಯಾವಾಗಲೂ ಉದಾಸೀನನೇ. ಈಗಲೂ ವ್ಯತ್ಯಾಸವೇನೂ ಕಾಣಲಿಲ್ಲ. ಈಚೆಗೆ ಅವಳ ಮಡಿ ಪೂಜೆಗಳನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಂಡು ಅವನು ಟೀಕಿಸದೆ ಇರುತ್ತಿದ್ದುದರಿಂದ ಶಾರದೆಯ ಲೋಕಯಾತ್ರೆ ಸುಸೂತ್ರವಾಗಿ ನಡೆದು ಹೋಗುತ್ತಿದ್ದಿತು.

ಸರಸಿಗೆ ಯೋಚನೆಗಿಟ್ಟುಕೊಂಡಿತು. ವಿಶ್ವ ಮನೆಯಲ್ಲಿದ್ದಾಗಲೂ ಇಲ್ಲದಿದ್ದಾಗಲೂ ಸುಬ್ಬು ಹೀಗೆ ಸದಾ ತಮ್ಮ ಮನೆಗೆ ಬರುತ್ತಿರುವುದು ಅಷ್ಟು ಸಮಂಜಸವಾಗಿರಲಿಲ್ಲ. ಪಾರ್ವತಿ ಬಾಲವಿಧವೆ. ಅವಳ ಹೆಸರು ಕೆಡುವುದು ಬಹು ಸುಲಭ. ತನ್ನ ಹೊಣೆಗಾರಿಕೆಯಲ್ಲಿದ್ದಾಗ ಅವಳ ಹೆಸರಿಗೆ ಕಳಂಕದ ಸಂಶಯವೂ ತಗುಲದ ಹಾಗೆ ನೋಡಿಕೊಳ್ಳಬೇಕಾದುದು ತನ್ನ ಕರ್ತವ್ಯ. ವಿಶ್ವ ಈ ವಿಚಾರಕ್ಕೆ ಅಷ್ಟು ಗಮನ ಕೊಡಲಿಲ್ಲ. "ಪಾಪ! ಎಳೆಯ ಹುಡುಗಿ. ನಾಲ್ಕು ದಿನ ಹುಡುಗಾಟ ವಾಡುತ್ತಾಳೆ. ದುಃಖಕ್ಕೇ ಹುಟ್ಟಿರುವ ಆ ಹೆಣ್ಣನ್ನು ನಾವು ಏಕೆ ಹಿಂಸಿಸಬೇಕು?" ಎಂಬುದು ಅವನ ಅಭಿಪ್ರಾಯ. ಸರಸಿ ಚಿಂತಿಸಿ ಚಿಂತಿಸಿ ಸುಬ್ಬುವಿಗೆ ಖಂಡಿತವಾಗಿ ಹೇಳಿಯೇ ಬಿಡಬೇಕೆಂದು ನಿರ್ಧರಿಸಿದಳು. ಅಷ್ಟುಹೊತ್ತಿಗೆ ಸುಬ್ಬು ಬಂದು "ವಿಶ್ವಾ" ಎಂದು ಕೂಗಿದನು.

"ಅವರು ಮನೆಯಲ್ಲಿಲ್ಲ." ಸರಸಿ ಒಳಗಿನಿಂದಲೇ ಉತ್ತರಕೊಟ್ಟಳು. ಎಂದಿನಂತೆ ಬಾಗಿಲು ತೆಗೆದು ಒಳಕ್ಕೆ ಕರೆಯಲಿಲ್ಲ.

"ಸುಮ್ಮನೆ ಹೀಗೇ ಬಂದೆ." ಸುಬ್ಬುವಿನ ಧ್ವನಿ ನಿರಾಸೆಯಿಂದ ಭಾರವಾಗಿತ್ತು. ಆದರೂ ಸರಸಿ ಬಾಗಿಲು ತೆರೆಯದಿದ್ದುದರಿಂದ ಸುಬ್ಬು ಹಿಂದಿರುಗಬೇಕಾಯಿತು.

ಅದುವರೆಗೂ ಆ ಮನೆಗೆ ಹೋಗಿ ಬರುವುದು ತನ್ನ ಮನಶ್ಶಾಂತಿಗೆ ಎಷ್ಟು ಆವಶ್ಯಕವೆಂಬುದು ಅವನ ಮನಸ್ಸಿಗೆ ಹೊಳೆದಿರಲಿಲ್ಲ. ಪಾರ್ವತಿಯ ನಗೆಯೂ, ನುಡಿಯೂ ತನ್ನ ಜೀವನಲತೆಗೆ ಅವಶ್ಯ ಜಲಧಾರೆಯೆಂಬುದು ಈ ದಿನ ತಟ್ಟನೆ ಅವನ ಮನಸ್ಸಿಗೆ ಹೊಳೆಯಿತು. ಅದು ಪಾಪಾಲೋಚನೆಯೆಂದು ಕೂಡ ತೋರಲಿಲ್ಲ. ಹೇಗೂ ಶಾರದೆಗೆ ತನ್ನಲ್ಲಿ ಅಕ್ಕರೆಯಿಲ್ಲ. ಅವಳ ಪೂಜೆ, ಮಡಿಗಳು ಅವಳಿಗಿದ್ದರೆ ಸರಿ. ತಾನು ಪಾರ್ವತಿಯನ್ನೂ ಮದುವೆ ಮಾಡಿಕೊಳ್ಳಕೂಡದೇಕೆ? ಮಾಡಿಕೊಂಡು ಜೀವನದ ಸವಿಯನ್ನು ಕಾಣಕೂಡದೇಕೆ? ಆ ಪಾಪದ ಹೆಣ್ಣಿನ ಜೀವನವನ್ನೂ ತನ್ನ ಪ್ರೇಮದಿಂದ ಹಗುರ ಮಾಡಬಾರದೇಕೆ? ಹೀಗೆ ಚಿಂತಿಸುತ್ತಾ ತಾನು ಮಾಡಬೇಕೆಂದಿದ್ದ ಕಾರ್ಯ ಎಲ್ಲರಿಗೂ ಹಿತಕರವಾದುದೆಂದೇ ಭಾವಿಸಿದನು. ಸ್ವಾರ್ಥಕ್ಕೆ ಆ ಕಾರ್ಯದಲ್ಲಿ ಅತ್ಯಲ್ಪಸ್ಥಾನವಿದೆಯೆಂದು ಮನಸ್ಸನ್ನು ಸಮಾ

ಧಾನ ಮಾಡಿಕೊಂಡನು. ಮನೆಗೆ ಹೋಗಿ ಎಷ್ಟು ವಿಧವಾಗಿ ಚಿಂತಿಸಿದರೂ ತಪ್ಪೇನೂ ತೋರಲಿಲ್ಲ. ವಿಶ್ವನನ್ನು ಕೇಳಿಯೇ ಬಿಡಬೇಕೆಂದು ನಿರ್ಧರಿಸಿದನು.

ತನ್ನ ಜೀವನಪಥದಲ್ಲಿ ಎಂತಹ ಮಾರ್ಪಾಟು ನಡೆದುಹೋಗು ತ್ತಿದೆಯೆಂಬ ಅರಿವೇ ಇಲ್ಲದೆ ಶಾರದೆ ಅಡಿಗೆಮನೆಯಲ್ಲಿದ್ದಳು. ಬಾಗಿಲು ತಟ್ಟಿದ ಸದ್ದಾಗಲು, ತೆಗೆದು, "ವಿಶ್ವನಾಥರಾಯರು ಬಂದಿದ್ದಾರೆ" ಎಂದು ಗಂಡನಿಗೆ ಹೇಳಿದಳು. ಸುಬ್ಬುವಿಗೆ ತನ್ನ ಕೆಲಸಕ್ಕೆ ದೈವಸಹಾಯವಿದೆ ಯೆಂದೇ ತೋರಿ ಎದ್ದು ಬಂದನು. ಏನು ಸುಬ್ಬೂ, ಮನೆಗೆ ಬಂದಿದ್ದೆ ಯಂತೆ? ಸರಸು ಹೇಳಿದಳು. "

" ಸುಮ್ಮನೆ ಬಂದಿದ್ದೆ. ಬಾಗಿಲ ಹಿಂದಿನಿಂದಲೇ ಹೊರಡೆಂದು ಅಪ್ಪಣೆಮಾಡಿದರು. ಬಂದು ಬಿಟ್ಟೆ." ವಿಶ್ವ ನಗುತ್ತಾ "ಪಾಪ ! ಅವಳು ತಾನೇ ಏನು ಮಾಡುತ್ತಾಳೆ? ಪಾರ್ವತೀದು ಅವಳಿಗೆ ಒಂದು ದೊಡ್ಡ ಹೊಣೆಯಾಗಿದೆ. ಅದೂ ನಿಜವೇ ! ನಿನ್ನಂಥ ಹುಡುಗರೆಲ್ಲಾ ಸದಾ ಮನೆಗೆ ಹೋಗುತ್ತಿದ್ದರೆ ಜನ ಏನೆಂದುಕೊಳ್ಳುತ್ತಾರೆ?"

ಸುಬ್ಬು ಗಂಭೀರವಾಗಿ " ಪಾರ್ವತಿಯನ್ನು ನಾನೇ ಮದುವೆ ಮಾಡಿಕೊಂಡರೆ? " ಎಂದುಬಿಟ್ಟನು. ವಿಶ್ವ ಕಿವಿಯನ್ನೇ ನಂಬಲಾರದೆ ಹೇಳುವುದಕ್ಕೇನೂ ತೋರದೆ ಸುಮ್ಮನಿದ್ದನು. ಅಡಿಗೆ ಮನೆಯಲ್ಲಿ ಒಂದು ತಟ್ಟೆ ಧಡೀರನೆ ನೆಲದಮೇಲೆ ಬಿದ್ದ ಸದ್ದಾಯಿತು. ಎಚ್ಚರವಾ ದಂತಾಗಿ ವಿಶ್ವ "ನೀನೆ? ತಮಾಷೆಯೋ? "

''ತಮಾಷೆಯಲ್ಲ, ಸತ್ಯವಾಗಿ. ನೀವು ಒಪ್ಪಿದರೆ ಪಾರ್ವತಿಯನ್ನು ನಾನು ಮದುವೆ ಮಾಡಿಕೊಳ್ಳುತ್ತೇನೆ. "

" ಮದುವೆಯಾಗಿದೆಯಲ್ಲಾ. "

" ಆದರೇನು? ಎಷ್ಟು ಜನ ಎರಡನೆಯ ಮದುವೆ ಮಾಡಿಕೊಳ್ಳು ವುದಿಲ್ಲ? "

ಸುಮ್ಮನಿದ್ದು ವಿಶ್ವ ಮನೆಗೆ ಹೊರಟನು.

ಸುಬ್ಬು ಒಳಗೆ ಹೋಗಲು ಬಾಗಿಲ ಹಿಂದೆ ಶಾರದೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಸುಬ್ಬು ಆಡಿದ ಪ್ರತಿಯೊಂದು ಮಾತೂ ಅವಳಿಗೆ ಕೇಳಿಸಿತ್ತು. ಸುಬ್ಬು, "ಇದೇನು?" ಎಂದನು.

ಶಾರದೆಗೆ ಹೆಚ್ಚು ಮಾತನಾಡಿ ಅಭ್ಯಾಸವಿಲ್ಲ. ಮಾತು ಹೊರಡುವುದಕ್ಕೆ ಅಡ್ಡಿಯಾಗಿ ದುಃಖ ಒತ್ತರಿಸಿ ಬರುತ್ತಿದ್ದುದರಿಂದ ಸ್ಪಷ್ಟವಾಗಿಯೂ ಕೇಳುತ್ತಿರಲಿಲ್ಲ. "ನೀಪಿನ್ನೊಂದು ಮದುವೆ ಮಾಡಿಕೊಳ್ಳಬೇಡಿ" ಎಂದು ಬಿಕ್ಕಳಿಸುತ್ತ ಒದರಿದಳು. ಪ್ರೇಮದ ಮುಸುಕು ಹರಿದುಹೋಗಿದ್ದುದರಿಂದ ಅವಳ ದುಃಖ ಸುಬ್ಬುವಿಗೆ ನಗೆಯ ವಿಷಯವಾಯಿತು. "ಈಗ ಅಳುವುದಕ್ಕೇನಾಯಿತು? ನಿನಗೇನಾದರೂ ಪ್ಯೈಲಿಗೆ ತಾಕಿತೆ?" ಎಂದು ವ್ಯಂಗ್ಯವಾಗಿ ಹೇಳಿ ಸುಬ್ಬು ಹೊರಕ್ಕೆ ಹೊರಟು ಹೋದನು.

* * * * *

ಶಾರದೆಗೆ ಸುಬ್ಬುವಿನ ಋಣಾನುಬಂಧ ಹರಿದು ಹೋಗಿ ಆಗಲೇ ಎರಡು ವರ್ಷಗಳಾಗಿದ್ದವು. ಅವಳ ಜೀವನ ಯಂತ್ರದಂತೆ ನಡೆದು ಹೋಗುತ್ತಿದ್ದಿತು. ಆಸೆನಿರಾಸೆಗಳಿಲ್ಲ; ಪ್ರೇಮದ ಹಂಗಿಲ್ಲ; ಸುಖದ ಹಂಬಲವಿಲ್ಲ. ತೌರುಮನೆಯನ್ನು ಸೇರಿದಂದಿನಿಂದ ಬಾಲ ಸಂನ್ಯಾಸಿನಿಯಾಗಿ ಕಾಲಕಳೆಯುತ್ತಿದ್ದಳು. ತಾವು ಎಷ್ಟೋ ಆಸೆಯಿಂದ ಏರ್ಪಡಿಸಿದ ಅವಳ ಜೀವನಯಾತ್ರೆ ತಟ್ಟನೆ ಮಧ್ಯದಲ್ಲಿ ಮುರಿದುಬಿತ್ತೆಂದು ಅವಳ ಮುದಿ ತಾಯಿ ತಂದೆಗಳು ಸದಾಕಾಲವೂ ಕೊರಗುತ್ತಿರುವಂತಾಯಿತು.

ಶಾರದೆ ದೇವರ ಮುಂದೆ ಕಣ್ಣುಮುಚ್ಚಿ ಕುಳಿತರೆ ಅವಳಿಗೆ ಇಹಲೋಕದ ಜ್ಞಾನವೇ ಇದ್ದಹಾಗೆ ತೋರುತ್ತಿರಲಿಲ್ಲ. ಆದರೆ ಇರುತ್ತಿರಲಿಲ್ಲವೆ? ಹಿಂದಿನ ದಿನಗಳ ಸ್ಮರಣೆಯೇ ಬರುತ್ತಿರಲಿಲ್ಲವೆ? ಮುಚ್ಚಿದ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿರಲಿಲ್ಲವೆ? ತನ್ನ ಅವಿವೇಕದ ಸಲುವಾಗಿ ಪತಿಸೌಖ್ಯವನ್ನು ಕಳೆದುಕೊಂಡು ದುಃಖಕ್ಕೀಡಾದೆನೆಂಬ ಚಿಂತೆ ಅವಳ ಹೃದಯವನ್ನು ಸುಡುತ್ತಿರಲಿಲ್ಲವೆ? ಅವಳ ವೇದನೆಯ ಆಳ ಅವಳಿಗೂ ಅವಳು ಪೂಜಿಸುತ್ತಿದ್ದ ದೇವದೇವನಿಗೂ

ಮಾತ್ರ ಗೊತ್ತಿತ್ತು. ಒಬ್ಬರೊಡನೆಯೂ ಅವಳು ತನ್ನ ದುಃಖವನ್ನು ತೋಡಿಕೊಳ್ಳುತ್ತಿರಲಿಲ್ಲ.

ಅಕಸ್ಮಾತ್ ಮನೆಯ ಮುಂದೆ ಗಾಡಿ ನಿಂತ ಸದ್ದಾಯಿತು. ಸುಬ್ಬು ಗಾಡಿಯಿಂದಿಳಿದು ಮನೆಯೊಳಕ್ಕೆ ಬಂದನು. ಅವನ ಮಾವನವರು ಸಂಭ್ರಮಾಶ್ಚರ್ಯಗಳಿಂದ ಎದುರಿಗೆ ಬಂದು "ಕೂತುಕೊಳ್ಳಿ" ಎಂದರು.

"ಇಲ್ಲ, ಅವಸರವಾದ ಕೆಲಸವಿದೆ. ಸ್ವಲ್ಪ ಶಾರದೆಯನ್ನು ನೋಡಬೇಕಾಗಿತ್ತು."

ಶಾರದೆ ಬಂದಳು. ಎಷ್ಟು ತಡೆದರೂ ಅವಳ ಹೃದಯ ಹುಚ್ಚುಹುಚ್ಚಾಗಿ ಬಡಿದುಕೊಳ್ಳುತ್ತಿತ್ತು.

"ಶಾರದಾ, ಮನೆಗೆ ಬರುತ್ತೀಯಾ?"

ಆಶ್ಚರ್ಯದಿಂದ ಪ್ರತ್ಯುತ್ತರ ಹೊರಡಲಿಲ್ಲ. "ಪಾರ್ವತಿ?" ಎಂದಳು.

ಪಾರ್ವತಿ ಹೋಗಿ ತಿಂಗಳಾಯಿತು. ಶಾರದಾ, ಒಂದು ಎಳೆಯ ಮಗುವಿದೆ, ನೋಡುವವರಿಲ್ಲ. ನಿನಗೆ ಅನ್ಯಾಯಮಾಡಿದೆ. ಮರೆತು, ನೀನು ಬರುವೆಯಾದರೆ?"

ಶಾರದೆಯ ಹೃದಯ ಪುನಃ ಕಲ್ಲಾಯಿತು. ಪಾರ್ವತಿ ಹೋದರೆ ಅವಳ ಮಗುವನ್ನು ಸಾಕುವುದಕ್ಕೆ ತಾನು ಬೇಕಾಯಿತು. ಅವಳಿದ್ದಾಗ ತನ್ನ ನೆನಪೇ ಇಲ್ಲ. ಬೇಸರದಿಂದ "ಇಲ್ಲ, ನಾನು ಬರುವುದಿಲ್ಲ. ಬೇಕಾದರೆ ಮಗುವನ್ನು ಇಲ್ಲಿಗೆ ಕಳುಹಿಸಿ. ಸಾಕಿ ದೊಡ್ಡದನ್ನಾಗಿ ಮಾಡಿ ಕೊಡುತ್ತೇನೆ."

ಹತಾಶನಾಗಿ ಸುಬ್ಬು ಹಿಂತಿರುಗಿದನು.

# ಕಲ್ಯಾಣಿ

ಮಾತನಾಡಿದರೆ ಮನೆ ಮಾರ್ದನಿಗೊಡುತ್ತಿತ್ತು. ಹಗಲನ್ನು ಕಲ್ಯಾಣಿ ಹೇಗೋ ಕಳೆಯುತ್ತಿದ್ದಳು. ರಾತ್ರಿಯಾಗುತ್ತಾ ಬಂದಂತೆ ಅವಳ ಧೈರ್ಯ ಮಾಯವಾಗುತ್ತಿತ್ತು. ಸುತ್ತಲೂ ಜನರಿದ್ದರೂ ಶ್ಮಶಾನದಲ್ಲಿದ್ದಂತಿತ್ತು. ಒಂದು ಮನೆಯ ಬಾಗಿಲಾದರೂ ತೆರೆದಿರುತ್ತಿರಲಿಲ್ಲ. ದೀಪಗಳನ್ನು ಕೂಡ ಹಚ್ಚುತ್ತಿರಲಿಲ್ಲ. ಹಳ್ಳಿ ಪಾಳುಬಿದ್ದಂತಿತ್ತು. ಹಗಲು ಹೊತ್ತೇ ಜನ ಸಂಚಾರವಿರುತ್ತಿರಲಿಲ್ಲ. ಅನಿವಾರ್ಯವಾಗಿ ಹೊರಗೆ ಹೋಗಬೇಕಾದವರು ಕಳ್ಳತನ ಮಾಡುವವರಂತೆ ಅತ್ತಿತ್ತ ನೋಡುತ್ತ ಮೆಲ್ಲಗೆ ಹೋಗುವರು. ಕೆಲವೇ ದಿನಗಳ ಹಿಂದೆ ಇದೇ ಹಳ್ಳಿ ಆನಂದ ದಿಂದ ತುಂಬಿ ತುಳುಕುತ್ತಿತ್ತು. ಇದ್ದುದು ಸ್ವಲ್ಪ ಮನೆಗಳಾದರೂ ಮಕ್ಕಳಿಂದ ತುಂಬಿ ನಂದಗೋಕುಲದಂತಿತ್ತು. ಕತ್ತಲಾದರೂ ಬೀದಿ ಯಲ್ಲಿ ಮಕ್ಕಳ ಕೋಲಾಹಲ ಮುಗಿಯುತ್ತಿರಲಿಲ್ಲ. ಸಂಜೆಯಾಗುವ ಮೊದಲೇ ಮನೆ ಮನೆಯಲ್ಲೂ ದೀಪಗಳು ಬೆಳಗುತ್ತಿದ್ದವು.

ಕಲ್ಯಾಣಿಯದು ಪುಟ್ಟ ಸಂಸಾರ. ಶಾಂತೆಯೊಬ್ಬಳೇ ಮಗಳು. ಕೇಶವನು ಪಟ್ಟಣದಲ್ಲಿ ವ್ಯಾಪಾರ ಮಾಡುತ್ತಿದ್ದರೂ ಅಲ್ಲಿ ಮನೆಮಾಡಲು ಇಷ್ಟಪಡಲಿಲ್ಲ. ಬೇಕಾದ ಸೌಕರ್ಯಗಳನ್ನೆಲ್ಲಾ ಹಳ್ಳಿಯಲ್ಲೇ ಮಾಡಿ ಕೊಂಡಿದ್ದನು. ಕತ್ತಲಾಗುವವೇಳೆಗೆ ಗಾಡಿಕಟ್ಟಿಸಿಕೊಂಡು ಮನೆಗೆ ಬಂದು ಬಿಡುತ್ತಿದ್ದನು. ಆ ಗಾಡಿಯ ಸದ್ದು ಕೇಳಿದ ಮೇಲೆಯೇ ಶಾಂತೆ ಮನೆ ಸೇರುತ್ತಿದ್ದುದು. ಕೇಶವನೂ ಅವಳಿಗಾಗಿ ಏನಾದರೊಂದು ಆಟದ ಸಾಮಾನನ್ನು ತರಲು ಮರೆಯುತ್ತಿರಲಿಲ್ಲ.

ಎರಡು ತಿಂಗಳ ಹಿಂದೆ ಈ ಸುಖಜೀವನ ಕೊನೆಗಂಡಿತ್ತು. ಅವನ ಅಂಗಡಿ ಸುಟ್ಟು ನಾಶವಾದ ದಿನ ಪ್ರಾಣದೊಡನೆ ಹಿಂದಕ್ಕೆ ಬರುವುದೇ ಪ್ರಯಾಸವಾಯಿತು. ಅಂದಿನಿಂದ ಯಾವ ಹೊತ್ತಿನಲ್ಲಿ ಏನೋ ಎಂಬ ಗಾಬರಿ ತಪ್ಪಿರಲಿಲ್ಲ. ಆರ್ಥಿಕ ಸ್ಥಿತಿ ಕೆಡುತ್ತಾ ಒಬ್ಬೊಬ್ಬ ರನ್ನಾಗಿ ಆಳುಗಳನ್ನು ಕಳುಹಿಸಬೇಕಾಯಿತು. ಕಡೆಗುಳಿದವರು ಅವರು

ಮೂರೇ ಜನ. ಬಡತನದ, ಕ್ಷಾಮದ ಭೀತಿ ಎಲ್ಲೆಲ್ಲೂ ಆವರಿಸಿತ್ತು. ಪಕ್ಕದ ಹಳ್ಳಿ ಲೂಟಿಯಾಯಿತೆಂಬ ವರ್ತಮಾನ ಹಠಾತ್ತನೆ ಬಂತು. ಆ ಹಳ್ಳಿಯಲ್ಲಿದ್ದ ಕೇಶವನ ತಮ್ಮನ ವರ್ತಮಾನವೇ ತಿಳಿಯಲಿಲ್ಲ. ಹೇಗೋ ಧೈರ್ಯಮಾಡಿಕೊಂಡು ಕೇಶವನು, ವಿಚಾರಿಸಿಕೊಂಡು, ಸಾಧ್ಯವಾದರೆ ತಾಯಿಯನ್ನು ಕರೆತರಬೇಕೆಂದು ಹೊರಟನು.

ಈಗ ಮನೆಗೆಲ್ಲಾ ಕಲ್ಯಾಣಿಯೊಬ್ಬಳೇ. ಆರು ಘಂಟೆಗೇ ಕತ್ತಲಾಗುತ್ತ ಬಂದಿತ್ತು. ಆಕಾಶದ ತುಂಬ ಮೋಡಗಳು ಕವಿಯುತ್ತಾ ಬಂದಿದ್ದವು. ಮನೆ ಒಂದು ದೊಡ್ಡ ಅರಣ್ಯದಂತೆ ತೋರುತ್ತಿತ್ತು. ಮನೆಯ ತುಂಬ ಆಳುಗಳು ಓಡಾಡುತ್ತಿದ್ದು ಸ್ಥಳ ಸಾಲದೆಂದಿದ್ದ ಕಾಲ ಮರೆಯಾಗಿ ಬಹಳ ದಿನಗಳಾಗಿದ್ದವು. ಕಲ್ಯಾಣಿ ದೇವರ ಮುಂದೆ ಸಣ್ಣ ಹಣತೆಯೊಂದನ್ನು ಹಚ್ಚಿ ಕೈಮುಗಿದು ಕುಳಿತಳು. ಮೂರು ವರ್ಷದ ಶಾಂತೆಯೂ ಪಕ್ಕದಲ್ಲಿ ಒರಗಿ ಕುಳಿತುಕೊಂಡು ಬಿಡುಗಣ್ಣುಗಳಿಂದ ಮನೆಯ ನಾಲ್ಕು ಮೂಲೆಗಳನ್ನೂ ನೋಡುತ್ತಿದ್ದಳು. ಮೆಲ್ಲಗೆ ಬಹುಮೆಲ್ಲಗೆ, ತನಗೇ ಕೇಳಿಸದಷ್ಟು ಕ್ಷೀಣವಾದ ಧ್ವನಿಯಿಂದ ಕಲ್ಯಾಣಿ ರಾಮಭಜನೆಗಾರಂಭಿಸಿದಳು. ಶಾಂತೆ ಹತ್ತಿರಕ್ಕೆ ಸರಿದು ತನ್ನ ಧ್ವನಿಯನ್ನೂ ಸೇರಿಸಿದಳು. ಗೋಡೆಯಮೇಲೆ, ದೀಪದ ಬೆಳಕಿನಲ್ಲಿ ಮಹತ್ತರವಾಗಿ ಅಲುಗಾಡುತ್ತಿದ್ದ ತನ್ನ ನೆರಳನ್ನೇ ನೋಡುತ್ತಾ, ಶಾಂತೆ ಭಜನೆಮಾಡುತ್ತಿದ್ದಳು. ಇದ್ದಕ್ಕಿದ್ದಂತೆ ಒಂದು ನಾಯಿ ಊಳಿಡಲಾರಂಭಿಸಿತು. ಅದರ ಜತೆಗೆ ಇನ್ನೊಂದು, ಮತ್ತೊಂದು ಸೇರಿಕೊಂಡು ಬ್ರಹ್ಮಾಂಡವೇ ಬಿರಿಯುವ ಹಾಗೆ ಕೂಗಲಾರಂಭಿಸಿದುವು. ಕಲ್ಯಾಣಿಯ ಹೃದಯ ಆ ಶಬ್ದಗಳನ್ನೆಲ್ಲಾ ಮೀರಿಸಿ ಒಡಿದುಕೊಳ್ಳುತ್ತಿತ್ತು. ಅವಳಿಗೇ ಅರಿವಿಲ್ಲದೆ ಧ್ವನಿ ಏರಿತು. ಗಟ್ಟಿಯಾಗಿ ಭಜನೆ ಮಾಡಲಾರಂಭಿಸಿದಳು. "ಪತಿತಪಾವನ ಸೀತಾರಾಂ." ಶಾಂತೆ ಭಜನೆಯನ್ನು ನಿಲ್ಲಿಸಿ ತಾಯಿಯ ತೊಡೆಯಮೇಲಕ್ಕೆ ಹತ್ತಿದಳು. ಭಯದಿಂದ ಕಲ್ಯಾಣಿ ಹುಚ್ಚಿಯಂತೆ, ಮೈಮೇಲಿನ ಪರಿವೆಯಿಲ್ಲದೆ, ಕೈ ತಟ್ಟುತ್ತಾ ಭಜನೆ ಮಾಡುತ್ತಿದ್ದಳು.

ಬಾಗಿಲು ತಟ್ಟಿದ ಸದ್ದಾಯಿತು. ಗಾಬರಿಯಿಂದ, ಕಲ್ಯಾಣಿ ಭಜನೆಯನ್ನು ನಿಲ್ಲಿಸಿದಳು. ಎರಡೂ ಕೈಗಳಿಂದ ಶಾಂತೆ ತಾಯಿಯ

ಕತ್ತನ್ನು ತಬ್ಬಿದಳು. ಮತ್ತೊಂದು ಸಲ ಬಾಗಿಲುಬಡಿದ ಸದ್ದಾಯಿತು. ಕೇಶವನಿರಬಹುದೆಂದು ಕಲ್ಯಾಣಿಗೆ ಅರೆಕ್ಷಣ ಧೈರ್ಯ ಬಂದು "ಯಾರದು?" ಎಂದಳು. "ನಾನಮ್ಮಾ." ತೀರ ಅಪರಿಚಿತ ಧ್ವನಿ. ಹೊರಗಡೆ ಜೋರಾಗಿ ಮಳೆ ಬೀಳುತ್ತಿದ್ದಿತೆಂದು ಕಲ್ಯಾಣಿಗೆ ಆಗತಾನೆ ತಿಳಿಯಿತು. ಆ ಮಳೆಯ ಅವಾಂತರದಲ್ಲಿ ಧ್ವನಿ ಕ್ಷೀಣವಾಗಿ ಕೇಳಿಸಿತು. ಕಲ್ಯಾಣಿಯ ಕೈ ಕಾಲು ತಣ್ಣಗಾದುವು. ಪ್ರಯತ್ನಪೂರ್ವಕವಾಗಿ, ಶಾಂತೆಯನ್ನೂ ಎತ್ತಿಕೊಂಡು ಬಾಗಿಲ ಬಳಿಗೆ ಬಂದು ಮತ್ತೊಂದು ಸಲ ಗಟ್ಟಿಯಾಗಿ "ಯಾರು?" ಎಂದಳು.

"ಬಾಗಿಲು ತೆಗೆಯಮ್ಮಾ."

ಪಕ್ಕದ ಕೋಣೆಯ ಕಿಟಕಿಯಿಂದ ಕಲ್ಯಾಣಿ ಇಣಿಕಿ ನೋಡಿದಳು. ಒಬ್ಬ ಮುದುಕಿ ಚಳಿಯಿಂದ ನಡುಗುತ್ತಾ ನಿಂತಿದ್ದಳು. ಅವಳುಟ್ಟಿದ್ದ ಬಟ್ಟೆಯೆಲ್ಲಾ ಒದ್ದೆಮುದ್ದೆಯಾಗಿ ಮೈಗಂಟಿಕೊಂಡಿತ್ತು.

ಕಲ್ಯಾಣಿ ಬಾಗಿಲನ್ನು ತೆಗೆದಳು. ಮುದುಕಿ ನಡುಗುತ್ತಾ ಒಳಕ್ಕೆ ಬಂದಳು.

"ಯಾರಮ್ಮಾ, ನೀನು?"

"ನಾನೊಬ್ಬ ಗರೀಬ ಹೆಂಗಸೂಮ್ಮಾ, ಗತಿ ಇಲ್ದೋಳು." ಅವಳ ಮಾತಿನ ರೀತಿಯನ್ನು ನೋಡಿ ಕಲ್ಯಾಣಿ "ನೀನು ಮುಸಲ್ಮಾನರವಳೇ? ಎಂದಳು.

ಮುದುಕಿ ಹೌದೆಂದು ತಲೆಯಾಡಿಸಿದಳು. ಕಲ್ಯಾಣಿ ತನ್ನದೊಂದು ಒಣಗಿದ ಸೀರೆಯನ್ನು ಕೊಡಲು ಅದನ್ನುಟ್ಟು ಮುದುಕಿ ಒಂದು ಕಂಭವನ್ನೊರಗಿ ಕುಳಿತಳು.

ಕಲ್ಯಾಣಿಗೆ ಆ ಸಮಯದಲ್ಲಿ ಆ ಮುದುಕಿಯೂ ಒಂದು ನೆರವಾಗಿ ತೋರಿದಳು. ಮುದುಕಿ ಹೆಚ್ಚು ಮಾತುಕತೆಯಾಡುತ್ತಿರಲಿಲ್ಲ; ಕೆಲಸ ಮಾಡುವ ಶಕ್ತಿಯೂ ಇರಲಿಲ್ಲ. ತನ್ನ ಕೆಲಸವನ್ನಷ್ಟು ಮಾಡಿಕೊಂಡು ಕಂಭಕ್ಕೆ ಒರಗಿ ಕುಳಿತುಕೊಳ್ಳುತ್ತಿದ್ದಳು. ಶಾಂತೆ ಅವಳ ಬಳಿ ಕುಳಿತು ಆಟವಾಡುತ್ತಿದ್ದರೂ, ಅವಳಲ್ಲಾಗಲಿ, ಅವಳ ಆಟದಲ್ಲಾಗಲಿ, ಮುದುಕಿಗೆ

ಕುತೂಹಲವಿರಲಿಲ್ಲ. ಆದರೂ ಕಲ್ಯಾಣಿಗೆ ಆ ಜೀವ ಜತೆಯಾಗಿ ತೋರು ತ್ತಿತ್ತು. ಅವಳ ಹಿಂದಿನ ಕತೆಯನ್ನು ತಿಳಿಯಲು ಮಾಡಿದ ಸಾಹಸವೆಲ್ಲಾ ವ್ಯರ್ಥವಾಯಿತು.

"ಎಲ್ಲಾ ಹೋದುವು, ಬಿಡಮ್ಮಾ," ಎಂದು ಒಂದೇ ವಾಕ್ಯದಲ್ಲಿ ತನ್ನ ಜೀವನ ಚರಿತ್ರೆಯನ್ನು ಮುಗಿಸಿ ಬಿಡುತ್ತಿದ್ದಳು. ಆ ರಾತ್ರಿ ಮಾತ್ರ ಅನೇಕ ವೇಳೆ, "ಅಮಿರ್, ಅಮಿರ್," ಎಂದು ಕನವರಿಸುವಳು. "ಬೆಂಕಿ, ಬೆಂಕಿ," ಎಂದು ಬೆವರುತ್ತಾ ಏಳುವಳು. ಹಾಗೆದ್ದ ಮೇಲೆ ಪುನಃ ನಿದ್ರೆಮಾಡದೆ ಕಂಭಕ್ಕೆ ಒರಗಿ ಸುಮ್ಮನಿರುವಳು.

ಕಲ್ಯಾಣಿಗೆ ಆ ಜೀವನವೇ ಅಭ್ಯಾಸವಾಯಿತು. ತಿಂಗಳಾದರೂ ಕೇಶವನ ವರ್ತಮಾನವೇ ಬರಲಿಲ್ಲ. ಮನೆಯಲ್ಲಿದ್ದ ಕಾಳೂ ಮುಗಿಯುತ್ತ ಬಂದಿತ್ತು. ಹೇಳಿಕಳುಹಿಸಲು ಕೂಡ ಯಾರೂ ಇರಲಿಲ್ಲ. ಮುಂದಿನ ಆಲೋಚನೆ ಮಾಡಲು ಕೂಡ ಶಕ್ತಿಯಿಲ್ಲದೆ, ದೇವರ ಮೇಲೆ ಭಾರ ಹಾಕಿ ಇದ್ದುಬಿಟ್ಟಳು.

ರಾತ್ರಿ ಹಠಾತ್ತನೆ ಗಲಭೆಯೆದ್ದಿತು. ಎರಡು ಮೂರು ದಿನದಿಂದ ಬೀದಿಯಲ್ಲಿ ಹೊಸಬರ ಓಡಾಟ ಹೆಚ್ಚಿ ಏನೋ ಗುಜು ಗುಜು ಗಲಾಟೆ. 'ಹರಹರ ಮಹಾದೇವ್!' ಎಂಬ ಭೀಷಣನಿನಾದ ಕಲ್ಯಾಣಿಯನ್ನು ಎಚ್ಚರಗೊಳಿಸಿತ್ತು. ಶಾಂತೆಯೂ ಮುದುಕಿಯೂ ಮಲಗಿದ್ದರು. ಹತ್ತಾರು ಜನರು ಪಂಜುಗಳನ್ನು ಹಚ್ಚಿಕೊಂಡು ಬೀದಿಯಲ್ಲಿ ಹೊರಟಿ ದ್ದರು. ದ್ವೇಷದ ಕಿಚ್ಚು ಪ್ರತೀಕಾರದ ಎಣ್ಣೆಯಿಂದ ಉದ್ದೀಪ್ತವಾಗಿ ಆ ಮನುಷ್ಯರ ಮುಖಗಳ ಮೇಲೆ ಕಾಣಿಸಿಕೊಂಡು ಅವುಗಳನ್ನು ವಿಕಾರ ವಾಗಿ ಮಾಡಿತ್ತು. ಪಂಜುಗಳ ಬೆಳಕಿನಲ್ಲಿ ಆ ಜನರ ಗುಂಪು ಪಿಶಾಚಿ ಗಳ ತಂಡದಂತೆ ತೋರುತ್ತಿತ್ತು. ಕಲ್ಯಾಣಿಗೆ ದಿಕ್ಕು ತೋರದಂತಾ ಯಿತು. ಕಿಟಕಿಯ ಕಂಬಿಗಳನ್ನು ಭದ್ರವಾಗಿ ಹಿಡಿದು ನಿಂತಿದ್ದಳು. ಗುಂಪು ಮನೆಯನ್ನು ದಾಟಿ ಹೊರಟು ಹೋಗಲು ದೀರ್ಘವಾದೊಂದು ನಿಟ್ಟುಸಿರನ್ನು ಬಿಟ್ಟಳು. ಆದರೆ ಕ್ಷಣಕಾಲ ಮಾತ್ರ. ಮರುಕ್ಷಣದಲ್ಲಿ ಭಯಂಕರವಾದ ಗೋಳಾಟದ ಸದ್ದು ಕೇಳಿಸಿತು. ಮುಸಲ್ಮಾನರ ಮನೆ ಗಳಿದ್ದ ಕಡೆ ದೊಡ್ಡ ಉರಿಯೆದ್ದಿತು. ತನ್ನ ಹೆಸರಿನಲ್ಲಿ ನಡೆಯುತ್ತಿದ್ದ

ಅನ್ಯಾಯಗಳನ್ನು ಸಹಿಸಲಾರದೆ ಈಶ್ವರನು ಪ್ರಳಯರುದ್ರನಾಗಿ ನಾಲಗೆಯಿಂದ ಬ್ರಹ್ಮಾಂಡವನ್ನೇ ಸವರುತ್ತಿರುವನೋ ಎನ್ನುವಂತೆ ಅಗ್ನಿ ಜ್ವಾಲೆ ಮನೆ ಮನೆಯನ್ನೂ ನೆಕ್ಕಿ ಮುಂದೆ ನಡೆಯುತ್ತಿತ್ತು. ಮಕ್ಕಳ ಚೀರಾಟ, ಹೆಂಗಸರ ಗೋಳಾಟ ಕಲ್ಯಾಣಿಗೂ ಕೇಳಿಸುತ್ತಿದ್ದವು. ಅವಳಿಗೆ ಬುದ್ಧಿ ಭ್ರಮಣೆಯಾದಂತಾಗಿ "ಅಯ್ಯೋ, ಅಯ್ಯೋ" ಎಂದು ನರಳುತ್ತಾ ಕಿಟಕಿಯಮೇಲೆ ತಲೆಯಿಟ್ಟಳು. ಕಾಲಿಗೇನೋ ಸಿಕ್ಕಿದಂತಾಯಿತು. ಮುದುಕಿ ಎದ್ದು ಬಂದು ಎರಡು ಕಾಲುಗಳನ್ನೂ ಹಿಡಿದಿದ್ದಳು. ಭಯದಿಂದ ಅವಳ ಮುಖ ಪ್ರೇತದ ಮುಖದಂತಾಗಿತ್ತು. ಕಲ್ಯಾಣಿ ಅವಳ ಕೈ ಹಿಡಿದೆಬ್ಬಿಸಲು "ಅಮೀರ್, ಅಮೀರ್" ಎಂದು ಮುದುಕಿ ಮೂರ್ಛೆ ಹೋದಳು.

ಕಲ್ಯಾಣಿಗೆ ದಿಗಿಲಾಯಿತು. ತನ್ನ ಮನೆಯಲ್ಲಿ ಮುಸಲ್ಮಾನಳಿರುವುದು ತಿಳಿದರೆ ತನ್ನ ಮನೆಗೂ ಬೆಂಕಿಯೇ ಗತಿ. ಅವಳನ್ನೇನು ಮಾಡುವುದು? ಅಪರಿಚಿತರು ಎರಡು ಮೂರು ದಿನದಿಂದ ತನ್ನ ಮನೆಯ ಸುತ್ತಲೂ ತಿರುಗುತ್ತಿದ್ದುದು, ಕಿಟಕಿಯಲ್ಲಿ ಒಬ್ಬಿಬ್ಬರು ನೋಡಿದುದು, ಎಲ್ಲಾ ಕಲ್ಯಾಣಿಗೀಗ ಅರ್ಥವಾಯಿತು. ತನಗಿನ್ನು ಉಳಿಗಾಲವಿಲ್ಲವೆಂದೇ ನಿರ್ಧರಿಸಿದಳು. ಒಂದರೆಕ್ಷಣ ಮುದುಕಿಯ ಮೇಲೆ ಆಕ್ರೋಶವುಂಟಾಗಿ "ಇದೆಲ್ಲಿಯ ಪ್ರಾರಬ್ಧ," ಎನ್ನಿಸಿತು. ಆದರೆ ಮರುಕ್ಷಣ ತನ್ನ ಕಾಠಿನ್ಯಕ್ಕೆ ನಾಚಿಕೊಂಡು ಮುದುಕಿಯನ್ನು ಸರಿಯಾಗಿ ಮಲಗಿಸಿ ತಲೆಗೆ ನೀರು ತಟ್ಟಿದಳು. ತಟ್ಟನೆ ಒಂದು ಆಲೋಚನೆ ಹೊಳೆಯಲು ದೇವರ ಬಳಿಯಿದ್ದ ವಿಭೂತಿಯನ್ನು ತಂದು ಮುದುಕಿಯ ಮುಖಕ್ಕೆ ಹಚ್ಚಿದಳು.

ಸ್ವಲ್ಪಹೊತ್ತಿಗೆ ಜ್ಞಾನ ಬಂದು ಮುದುಕಿ ಎದ್ದು ಕುಳಿತಳು. ಶಾಂತೆ ಹಾಸಿಗೆಯ ಮೇಲೆ ಬಿದ್ದುಕೊಂಡು ದೊಡ್ಡದಾಗಿ ಕಣ್ಣುಬಿಟ್ಟುಕೊಂಡು ನೋಡುತ್ತಿದ್ದಳು. ವಯಸ್ಸಿಗೆ ಮೀರಿದ ಅನುಭವ ಅವಳಿಗೆ ಬಂದು ಹೋಗಿತ್ತು. ಆಗಿನ ಅಪಾಯವೆಲ್ಲಾ ಅರ್ಥವಾದಂತೆ ಸದ್ದುಮಾಡದೆ ಮಲಗಿದ್ದಳು. ಗುಂಪು ಹಿಂತಿರುಗುವ ಸದ್ದು ಕೇಳಿಸಿತು. ಕಲ್ಯಾಣಿ ಧೈರ್ಯ ತಂದುಕೊಳ್ಳಲು ಭಜನೆಗಾರಂಭಿಸಿದಳು. "ಸಬ್ ಕೋ ಸನ್ಮತಿ

ದೇ ಭಗವಾನ್." ಶಾಂತೆಯೂ ಮಲಗಿಕೊಂಡೇ ಹಾಡುತ್ತಿದ್ದರೂ ಆ ಕಡೆ ಜ್ಞಾನವಿಲ್ಲದೆ ಕಿಟಕಿಯನ್ನೇ ನೋಡುತ್ತಿದ್ದಳು. ಕಲ್ಯಾಣಿ ಗಟ್ಟಿಯಾಗಿ ಭಜನೆ ಮಾಡುತ್ತಿದ್ದಳು. ಶಾಂತೆ "ಅಮ್ಮಾ" ಎಂದು ಚೀರಿದಳು. ಕಿಟಕಿಯಲ್ಲಿ ಕಾಣುತ್ತಿದ್ದ ಅಪರಿಚಿತ ಮುಖವೊಂದನ್ನು ನೋಡಿ, ಕಲ್ಯಾಣಿಗೆ ಜೀವವೇ ಹಾರಿ ಹೋದಂತಾಯಿತು.

"ಕಲ್ಯಾಣೀ."

ಧ್ವನಿಯನ್ನು ಕೇಳಿ ಅವಳೆದೆಯಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಕೇಶವನೂ ಈ ಗುಂಪಿಗೆ ಸೇರಿದ್ದನೆ? ಗಾಬರಿಯಿಂದ ಚೇತನ ಶಕ್ತಿಯೇ ಹೋದಂತಾಗಿ ಕಲ್ಯಾಣಿ ಸುಮ್ಮನೆ ಕುಳಿತಳು. ಕೇಶವನು ಪುನಃ ಬಾಗಿಲು ಬಡಿಯುತ್ತಾ, "ಕಲ್ಯಾಣೀ" ಎಂದು ಕೂಗಿದನು. ಅವಳೆದ್ದು ಬಾಗಿಲು ತೆರೆಯಲು ಕೇಶವನೊಡನೆ ಹತ್ತಾರು ಜನರು ಒಳಕ್ಕೆ ನುಗ್ಗಿದರು. ಎಲ್ಲರ ಮುಖದಲ್ಲಿಯೂ ರಕ್ತದಲ್ಲಿ ಮಿಂದು ಬಂದ ಪಿಶಾಚ ಕಳೆಯಿತ್ತು. ಮಾನವ ಸಂಸ್ಕಾರಕ್ಕೆ ಜಲಾಂಜಲಿಯನ್ನಿತ್ತು ಮೃಗಗಳೂ ಮಾಡಲು ಹೇಸುವ ಕೆಲಸಗಳನ್ನು ಮಾಡಿ ಬಂದಿದ್ದ ಅವರಲ್ಲಿ ಮನುಷ್ಯ ಲಕ್ಷಣವೇ ಇರಲಿಲ್ಲ.

ಕಲ್ಯಾಣಿಗೆ ತಟ್ಟನೆ ಧೈರ್ಯ ಬಂತು. ಧೈರ್ಯವಾಗಿಯೇ "ಯಾರಿವರು?" ಎಂದಳು.

ಕೇಶವನು "ಮನೆಗೆ ಮುಸಲ್ಮಾನರವಳನ್ನು ಹೊಗಿಸಿದ್ದೀಯಾ?" ಎಂದನು.

"ಇಲ್ಲವಲ್ಲಾ"

"ಅವಳು ಯಾರು?"

"ನನ್ನ ತಾಯಿ."

"ಸುಳ್ಳು, ನಿನಗೆ ತಾಯಿಯೇ ಇಲ್ಲ. ಹೊಡೆಯಿರೋ," ಎಂದು ಕೇಶವನು ಕಿರಿಚಿದನು.

ಶಬ್ದವೇ ಹೊರಡದೆ ಸುಮ್ಮನೆ ಬಾಯಲುಗಿಸುತ್ತಾ ಮುದುಕಿ ಕಂಬದ ಬಳಿ ಕುಳಿತಿದ್ದಳು. ಭಯದಿಂದ ಅವಳ ಜ್ಞಾನವೇ ಹೋಗಿತ್ತು.

ಇವರು ತನ್ನನ್ನು ಕೊಲ್ಲಲು ಬಂದವರೆಂಬ ಅರಿವೂ ಅವಳಿಗಿರಲಿಲ್ಲ. ಕಲ್ಯಾಣಿ ಮುದುಕಿಗೆ ಅಡ್ಡವಾಗಿ ನಿಂತಿದ್ದಳು. ಮುದುಕಿ ಇದ್ದಕ್ಕಿದ್ದಂತೆ "ಅಲ್ಲಾ ಅಲ್ಲಾ," ಎಂದಳು.

"ಅಲ್ಲಾನಂತೆ! ಬಲಿಹಾಕಿ!" ಎನ್ನುತ್ತಾ ಗುಂಪು ಮುಂದಕ್ಕೆ ನುಗ್ಗಿತು. ಕಲ್ಯಾಣಿ ಕೇಶವನ ಕೈಯನ್ನು ಬಿಗಿಯಾಗಿ ಹಿಡಿದಳು. ಉಳಿದವರು ಒಂದರೆಕ್ಷಣ ಸುಮ್ಮನೆ ನಿಂತರು.

ಕೇಶವನಿಗೆ ಅವಮಾನವಾದಂತಾಗಿ ಕೈಯನ್ನು ಕೊಸರಿಕೊಂಡು ದೊಣ್ಣೆಯನ್ನೆತ್ತಿ ಮುದುಕಿಯ ತಲೆಯಮೇಲೆ ಹೊಡೆದನು.

ಕಲ್ಯಾಣಿಗೆ ಜ್ಞಾನ ಬರುವ ವೇಳೆಗೆ ಶಾಂತೆ ಪಕ್ಕದಲ್ಲಿ ಅಳುತ್ತಾ "ರಘುಪತಿ ರಾಘವ ರಾಜಾರಾಂ, ಪತಿತ ಪಾವನ ಸೀತಾರಾಂ," ಹೇಳುತ್ತಿದ್ದಳು.

---

# ಗುರುಪೀಠ.

ಸಂಜೆಯ ಪೂಜೆ ಮುಗಿದಿತ್ತು. ಸ್ವಾಮಿಗಳು ದೇವಿಯ ಮುಂದೆ ಹಾಗೇ ಕುಳಿತಿದ್ದರು. ಎರಡು ಮೂರು ಸಲ ಚಂದ್ರಶೇಖರ ಶಾಸ್ತ್ರಿಗಳು ಕೆಮ್ಮಿದರೂ ಸ್ವಾಮಿಗಳಿಗೆ ಆ ಕಡೆ ಗಮನವೇ ಇರಲಿಲ್ಲ. ಇಪ್ಪತ್ತು ವರ್ಷದ ಹಿಂದಿನ ಚಿತ್ರಗಳು ಅವರ ಕಣ್ಣಮುಂದೆ ಸುಳಿದು ಹೋಗುತ್ತಿದ್ದುವು.

ಮಳೆಗಾಲ ; ಒಂದೇಸಮನೆ ಮಳೆ ಸುರಿಯುತ್ತಿತ್ತು. ಸ್ವಾಮಿಗಳು ಊರಿಗೆ ಬಂದಾಗ ಮಾಧವನಿಗಿನ್ನೂ ಹತ್ತೇ ವರ್ಷ. ತಂದೆಯೊಡನೆ ಸ್ವಾಮಿಗಳನ್ನು ನೋಡಲು ಹೋಗಿದ್ದನು. ಮಾತಿನಲ್ಲಿ ಅವರು ಚತುರರೆಂದು ಖ್ಯಾತಿಪಡೆದಿದ್ದರೂ ಮಾಧವನಿಗೆ ಮಾತು ಅರ್ಥವಾಗುತ್ತಿರಲಿಲ್ಲವಾದುದರಿಂದ ಸ್ವಲ್ಪ ಹೊತ್ತಿನಲ್ಲೇ ಬೇಸರವುಂಟಾಯಿತು. ವಿಧಿಯಿಲ್ಲದೆ ಅತ್ತಿತ್ತ ನೋಡುತ್ತಾ ಕುಳಿತನು. ಬಾಗಿಲಲ್ಲಿ ನೆರೆಮನೆಯ ಗೌರಿಯ ಮುಖ ಕಾಣಿಸಿದಮೇಲಂತೂ ಅವನಿಂದ ತಡೆಯಲಸಾಧ್ಯವಾಗಿ ಮೇಲಕ್ಕೆದ್ದನು. ಅವನ ತಂದೆ "ಸುಮ್ಮನೆ ಕೂತುಕೋ" ಎಂದು ಗದರಿಸಲು ನಿರ್ವಾಹವಿಲ್ಲದೆ ಸುಮ್ಮನಾದನು. ಸ್ವಾಮಿಗಳು ತಟ್ಟನೆ "ನಿಮ್ಮ ಹುಡುಗನ ವಯಸ್ಸೇನು ?" ಎಂದರು.

"ಹತ್ತಾಯಿತು."

"ಹುಡುಗ ತುಂಬಾ ಲಕ್ಷಣವಾಗಿದ್ದಾನೆ."

ಮಾಧವನ ಕೆನ್ನೆ ಕೆಂಪಾಯಿತು. ಹೆಚ್ಚು ಲಕ್ಷಣವಾಗಿ ಕಾಣುವ ಹಾಗೆ ಗಂಭೀರವಾಗಿ ಕುಳಿತುಕೊಂಡನು. ಸ್ವಲ್ಪಹೊತ್ತಿಗೆಲ್ಲಾ ಮನೆಗೆ ಹೊರಟರು. ಮಾಧವ ಹಿಡಿಸಲಾಗದ ಸಂತೋಷದಿಂದ, ಮನೆಯ ಬಾಗಿಲನ್ನು ದಾಟಿದೊಡನೆಯೇ "ಅಮ್ಮಾ, ಈವತ್ತು ಸ್ವಾಮಿಗಳು ನನ್ನನ್ನು ನೋಡಿದರು," ಎಂದು ಕೂಗಿಕೊಂಡನು. ಅಡಿಗೆಮನೆಯಲ್ಲಿದ್ದ ಲಕ್ಷ್ಮಮ್ಮನು ಅಲ್ಲಿಂದಲೇ "ಏನೋ ಹಾಗೆಂದರೆ ?" ಎಂದರು.

"ನನ್ನ ವಯಸ್ಸು ಕೇಳಿದರು, ಲಕ್ಷಣವಾಗಿದ್ದಾನೆ ಎಂದರು. ಅಪ್ಪನ್ನ ಕೇಳು ಬೇಕಾದರೆ."

"ಅಯ್ಯೋ!ಹಾಳು ಸನ್ಯಾಸಿಯದೃಷ್ಟಿ ನಿನ್ನ ಮೇಲೆ ಏಕೆ ಬಿತ್ತಪ್ಪಾ." ಎಂದು ಹಂಚಿಕಡ್ಡಿಯನ್ನು ತಂದು ಮಾಧವನಿಗೆ ದೃಷ್ಟಿ ತೆಗೆದರು. ಅವನಿಗೊಂದೂ ಅರ್ಥವಾಗಲಿಲ್ಲ. ದಿನ ಬೆಳಗಾದರೆ ಮಠಕ್ಕೆ ಹೋಗಿ ಭಕ್ತಿಯಿಂದ ತೀರ್ಥಪ್ರಸಾದಗಳನ್ನು ತೆಗೆದುಕೊಂಡು ದೇವರಂತೆ ಪೂಜಿಸುತ್ತಿದ್ದ ಗುರುಗಳನ್ನು "ಹಾಳು ಸನ್ಯಾಸಿ," ಎಂದುದೇಕೆಂದು ತಿಳಿಯಲಿಲ್ಲ.

ಮಾರನೆಯ ಮಧ್ಯಾಹ್ನ ಊಟಕ್ಕೆ ಕುಳಿತಿದ್ದಾಗ ಮಠದ ವ್ಯವಸ್ಥಾಪಕರಾದ ಚಂದ್ರಶೇಖರ ಶಾಸ್ತ್ರಿಗಳು ಬಂದರು. ಶಂಕರ ಶಾಸ್ತ್ರಿಗಳು ಬೇಗಬೇಗ ಊಟಮಾಡಿ ಎದ್ದು ಹೋದರು. ಬಹಳ ಹೊತ್ತು ಮಾತುಕಥೆಗಳಾದಮೇಲೆ ಚಂದ್ರಶೇಖರ ಶಾಸ್ತ್ರಿಗಳು "ಯಾವುದಕ್ಕೂ ಸರಿಯಾಗಿ ನಾಳೆ ಉತ್ತರ ಹೇಳಿ" ಎಂದು ಹೊರಟು ಹೋದರು.

ಅನಂತರ ಸ್ವಲ್ಪ ಹೊತ್ತಿಗೆ ಶಂಕರಶಾಸ್ತ್ರಿಗಳು ಹೆಂಡತಿಯನ್ನು ಕರೆದು ಬಾಗಿಲು ಮುಚ್ಚಿ ಚರ್ಚೆನಡೆಸಿದರು. ಮನೆಯ ವಾತಾವರಣವು ಭಾರವಾಗಿತ್ತು. ತಲೆಬಾಚಿಸಿಕೊಳ್ಳಲು ಸೀತೆ ತಾಯಿಯನ್ನು ಕರೆದಾಗ "ಸ್ವಲ್ಪ ಇರು," ಎಂದು ಲಕ್ಷ್ಮಮ್ಮ ಒಳಗಿನಿಂದಲೇ ಉತ್ತರಕೊಟ್ಟರು. ಮಗು ಎದ್ದು ಅತ್ತಾಗಲೂ ಸೀತೆಯೇ ಸಮಾಧಾನ ಮಾಡಬೇಕಾಯಿತು. ವಿಚಾರವೇನೆಂದು ಮಾಧವ ಕೈ ಸನ್ನೆಯಿಂದ ಸೀತೆಯನ್ನು ಕೇಳಿದಾಗ ಅವಳು ತಲೆಯಾಡಿಸಿದಳು. ಎಷ್ಟೋ ಹೊತ್ತಾದಮೇಲೆ ಕಣ್ಣೊರಸಿಕೊಳ್ಳುತ್ತಾ ಲಕ್ಷ್ಮಮ್ಮ ಹೊರಗೆ ಬಂದು ಸೀತೆಯ ತಲೆ ಬಾಚತೊಡಗಿದರು. ಮಾಧವ ಹತ್ತಿರ ಕುಳಿತುಕೊಂಡು "ಏಕಮ್ಮಾ, ಏನಾಯಿತು?" ಎಂದು ಕೇಳಿದಾಗ ತಡೆಯಲಾರದೆ ಲಕ್ಷ್ಮಮ್ಮ ಬಿಕ್ಕಿ ಬಿಕ್ಕಿ ಅತ್ತುಬಿಟ್ಟರು. ಶಂಕರ ಶಾಸ್ತ್ರಿಗಳು ಕಳ್ಳತನ ಮಾಡಿದವರಂತೆ, ಮಾಧವನ ಕಡೆ ನೋಡಲು ಕೂಡ ಹೆದರಿದಂತೆ ಓಡಾಡುತ್ತಿದ್ದರು.

ರಾತ್ರಿ ಊಟವಾದಮೇಲೆ ತಂದೆತಾಯಿಗಳಲ್ಲಿ ಪುನಃ ಚರ್ಚೆಗಾರಂಭವಾಯಿತು. ಬಾಗಿಲು ತೆಗೆದಾಗ "ಅವನಿಗೇನು, ರಾಜಪದವಿಯಿರುತ್ತೆ. ನಮ್ಮ ಬಡತನವೂ ನೀಗುತ್ತೆ" ಎಂದು ಶಂಕರ ಶಾಸ್ತ್ರಿಗಳೆಂದರು.

ಮಾಧವನಿಗೆ ನಿದ್ರೆ ಹಿಡಿಯುವುದರಲ್ಲಿತ್ತು. ಪಕ್ಕದಲ್ಲಿ ಯಾರೋ ಮಲಗಿ ಅಳುತ್ತಿದ್ದಂತಾಯಿತು. ತಿರುಗಿ ನೋಡಿದರೆ ತಾಯಿ. ಆಕೆಯು ಕುತ್ತಿಗೆಯನ್ನಪ್ಪಿಕೊಂಡು "ಏಕಮ್ಮಾ?" ಎಂದನು.

"ಏನೂ ಇಲ್ಲ ಕಂದ, ಮಲಗು" ಎಂದು ಆಕೆಯೂ ಅಪ್ಪಿಕೊಂಡು ಮಲಗಿದಳು.

ಮಾಧವ ತಾಯಿಯನ್ನು ಕಂಡದ್ದು ಅದೇ ಕಡೆಯಾಯಿತು. ಮಾರನೆಯದಿನ ಚಂದ್ರಶೇಖರ ಶಾಸ್ತ್ರಿಗಳು ಬಂದು ಮಾಧವನನ್ನೂ ಅವನ ತಂದೆಯನ್ನೂ ಮಠಕ್ಕೆ ಕರೆದುಕೊಂಡು ಹೋದರು. ಆ ದಿನವೆಲ್ಲಾ ಅಲ್ಲಿಯೇ ಇದ್ದು ಮಠದ ಪರಿವಾರದೊಡನೆ ಮಾಧವ ಊರನ್ನು ಬಿಟ್ಟಿದ್ದನು. ಶಂಕರ ಶಾಸ್ತ್ರಿಗಳೂ ಸ್ವಲ್ಪ ದೂರ ಹೋಗಿ ಬಿಟ್ಟು ಬಂದರು. ಬರುವಾಗ ಕೆಲವು ದಿನಗಳಲ್ಲೇ ಲಕ್ಷ್ಮಮ್ಮನನ್ನೂ ಕರೆದುಕೊಂಡು ಬರುವುದಾಗಿ ಅವನನ್ನು ನಂಬಿಸಿದ್ದರು.

ಹತ್ತುವರ್ಷದ ಹುಡುಗನಿಗೆ ಸಂನ್ಯಾಸವೇ! ಮಾಧವನ ಮೈ ಜುಮ್ಮೆಂದಿತು. ಲೋಕದ ಯಾವ ಅನುಭವವನ್ನೂ ಅರಿಯದ ಹಸುಗೂಸಿಗೆ ಎಂತಹ ಹೊರೆ! ಆದರೆ ಜೀವನದಲ್ಲಿ ಅತೃಪ್ತಿ ಮೊಳೆಯಲು ಅನೇಕ ವರ್ಷಗಳು ಹಿಡಿದುವು. ದೊಡ್ಡ ಸ್ವಾಮಿಗಳು ಸ್ಥಾನಕ್ಕೆ ಅರ್ಹರಾಗಿದ್ದರು. ಅವರಲ್ಲಿದ್ದ ಅಪಾರ ಪಾಂಡಿತ್ಯಕ್ಕೆ ಸರಳತೆ ಮೆರುಗು ಕೊಟ್ಟಿತ್ತು. ಕಠಿಣವಾದ ವಿದ್ಯಾಭ್ಯಾಸ ಕ್ರಮವೂ ಮಾಧವನಿಗೆ ಅವರ ವಿಶ್ವಾಸದಿಂದ ಹಗುರವಾಗಿತ್ತು. ಅವರು ತೀರಿಹೋಗಿ ತಾನೇ ಮಠಾಧಿಪತಿಯಾಗುವವರೆಗೂ ಹೊಣೆಯ ಭಾರ ತೋರಲಿಲ್ಲ. ಆಗಲೂ ಹಿಂದಿನ ಸ್ವಾಮಿಗಳ ಆದರ್ಶವೂ ತನ್ನ ವಿದ್ಯಾಭ್ಯಾಸ ಕಠಿಣ ವ್ರತನಿಯಮಗಳೂ ಕರ್ತವ್ಯ ಪಾಲನೆಯನ್ನು ಸುಲಭವಾಗುವಂತೆ ಮಾಡಿದ್ದುವು.

ಇಪ್ಪತ್ತು ವರ್ಷಗಳ ನಂತರ ತನ್ನ ಊರಿಗೆ ಪುನಃ ಬಂದಿದ್ದನು. ಇಷ್ಟು ವರ್ಷಗಳ ಸಂಯಮದಿಂದಲೂ ಆ "ತನ್ನ" ತನ ಮಾಯವಾಗಿರಲಿಲ್ಲ. ಸಂನ್ಯಾಸಿಯಾದರೂ ಮಾಯೆಯ ಮಡುವನ್ನು ದಾಟಲಾಗಲಿಲ್ಲ. ಊರು ಸಮೀಪಿಸಿದಂತೆಲ್ಲಾ ಮಾಧವನ ಮನಸ್ಸಿನಲ್ಲಿ ಉಲ್ಲಾಸ ಹೆಚ್ಚು

ತ್ತಿತ್ತು. ತಾನು ಹುಟ್ಟಿ, ಬೆಳೆದು ಆಡಿದ ಸ್ಥಳಗಳೆಲ್ಲಾ ಕೈಚಾಚಿ ಸ್ವಾಗತ ವೀಯುತ್ತಿರುವಂತೆ ತೋರಿತು. ಅದೇ ತಾನು ಮರಕೋತಿಯಾಡು ತ್ತಿದ್ದ ಮಾವಿನತೋಪು. ಪಲ್ಲಕ್ಕಿ ಮನೆಯ ಮುಂದೆಯೇ ಸಾಗಿಹೋಯಿತು. ಆದರೆ ಮನೆಮಾತ್ರ ತಾನರಿತಿದ್ದ ಮನೆಯಲ್ಲ, ಪಾಳುಬಿದ್ದಂತೆ ಅಂಗಳದಲ್ಲೆಲ್ಲಾ ಹುಲ್ಲು ಬೆಳೆದುಕೊಂಡಿತ್ತು. ತಾಯಿತಂದೆಗಳು ತೀರಿ ಹೋದ ವೃತ್ತಾಂತ ಮಾಧವನಿಗೆ ಮುಟ್ಟಿತ್ತು. ಆದರೆ ಸೀತೆ, ರಾಜ, ಎಲ್ಲರೂ ಎಲ್ಲಿ? ಮನೆಯನ್ನು ನೋಡಿ ಮಾಧವನ ಉತ್ಸಾಹ ಅರ್ಧಕ್ಕಿಳಿಯಿತು. ಪೂಜೆಗೆ ಎಷ್ಟೋ ಜನ ಬಂದು ಹೋದರು. ಅವರಲ್ಲಿ ಹಲ ಕೆಲವರು ಹಳೆಯ ಗೆಳೆಯರಿರಬಹುದು. ಮಾಧವನಿಗೆ ಜ್ಞಾಪಕವಿಲ್ಲ; ಅವರಿಗೂ ಇಲ್ಲ. ಕೆಲವರು ಪರಿಚಯವನ್ನು ಹೇಳಿಕೊಂಡರೂ, ಅರೆ ಮರೆತ ಹಿಂದಿನ ಜೀವನದ ಸವಿನೆನಪುಗಳ ತಂತಿಯನ್ನು ಮಿಡಿಯಲಾರದೆ ಹೋದರು. ಮಾಧವ ನಿಟ್ಟುಸಿರು ಬಿಟ್ಟನು. ಚಂದ್ರಶೇಖರ ಶಾಸ್ತ್ರಿಗಳಿನ್ನೊಮ್ಮೆ ಕೆಮ್ಮಿದರು. ಸ್ವಾಮಿಗಳು ಎದ್ದು "ಸ್ವಲ್ಪ ಸುತ್ತಾಡಿಕೊಂಡು ಬರುತ್ತೇನೆ" ಎಂದರು. ಚಂದ್ರಶೇಖರ ಶಾಸ್ತ್ರಿಗಳ ಮಗ ನರಸಿಂಹನೂ ಜತೆಯಲ್ಲಿ ಹೊರಟನು.

ಸ್ವಾಮಿಗಳು "ಬೇಡ, ಒಬ್ಬನೇ ಹೋಗಿ ಬರುತ್ತೇನೆ" ಎಂದರು.

ನರಸಿಂಹ—"ಕತ್ತಲಾಯಿತು. ದಾರಿತಪ್ಪಿದರೆ—."

ಸ್ವಾಮಿಗಳು "ಈ ಊರಿನಲ್ಲಿ ನಾನು ದಾರಿ ತಪ್ಪುತ್ತೇನೆಯೆ?" ಎಂದು ನಕ್ಕು ಬೇಗ ಬೇಗ ಹೊರಟರು. ಊರಾಚೆಯ ಮಾವಿನ ತೋಪಿನ ಕಡೆ ಹೊರಟಾಗ ಬಾಲ್ಯ ಪುನಃ ತಲೆದೋರಿದಂತಿತ್ತು. ಕೆಳಗೆ ಬಾಗಿದ್ದ ರೆಂಬೆಯಮೇಲೆ ಕುಳಿತು ಸ್ವಲ್ಪ ಶಾಂತಿಯನ್ನು ಪಡೆದರು. ಎಷ್ಟು ಹೊತ್ತು ಆ ರೆಂಬೆಯ ಮೇಲೆ ಕುಳಿತಿದ್ದೆನೆಂಬ ಅರಿವೇ ಆತನಿಗೆ ಇರಲಿಲ್ಲ. ತೀರ ಕತ್ತಲಾದುದನ್ನು ನೋಡಿ ಬೆಚ್ಚಿ, "ರಾತ್ರಿಪೂಜೆಯ ಹೊತ್ತಾಯಿತೋ ಏನೋ," ಎಂದುಕೊಂಡು ಛತ್ರದ ಕಡೆಗೆ ಹೊರಟರು. ನಾಲ್ಕು ಹೆಜ್ಜೆ ಇಡುವುದರೊಳಗಾಗಿ ಯಾರೋ ಹೆಂಗಸು ಹಿಂದಿನಿಂದ ಬಂದಳು. ಚಿಕ್ಕಂದಿನಲ್ಲಿ ಆ ತೋಪಿನಲ್ಲಿ "ಮೋಹಿನಿ" ಪಿಶಾಚಿಯಿದೆಯೆಂದು ಕಥೆ ಕೇಳಿದ್ದುದರಿಂದ ಒಂದರೆನಿಮಿಷ ಗಾಬರಿಯಾಯಿತು,

ಹೆಂಗಸು ತೀರ ಹತ್ತಿರ ಬಂದು ನಮಸ್ಕರಿಸಿದಳು. ಮಾಧವ ಮಾತನಾಡದೆ ಮುಂದೆ ಹೊರಟುದನ್ನು ನೋಡಿ, "ನಾನು; ಗೌರಿ" ಎಂದಳು. ಮಾಧವನ ಹೃದಯದಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಇಪ್ಪತ್ತುವರ್ಷಗಳಕಾಲ ಹೆಂಗಸಿನೊಡನೆ ಮುಖಕೊಟ್ಟು ಮಾತನಾಡಿ ರಲಿಲ್ಲ. ಅಭ್ಯಾಸ ತಪ್ಪಿದ ಗಾಬರಿಯಿಂದ, "ಯಾರು, ನೆರೆಮನೆಯ ಗೌರಿಯೆ?" ಎಂದನು.

"ಗುರುತು ಸಿಕ್ಕಲಿಲ್ಲವೇ?"

"ಇಪ್ಪತ್ತು ವರ್ಷವಾಯಿತಲ್ಲಾ," ಮಾಧವನಿಗೇ ತಿಳಿಯಲಿಲ್ಲ, ತನ್ನ ನಿಟ್ಟುಸಿರನ ಅರ್ಥ.

ಸ್ವಲ್ಪಹೊತ್ತು ಸುಮ್ಮನಿದ್ದು, "ನಮ್ಮ ಮನೆಯೇಕೆ ಪಾಳುಬಿದ್ದಿದೆ? ಅಪ್ಪ ಅಮ್ಮನೇನೋ ಸತ್ತರೆಂದು ತಿಳಿಯಿತು. ಆದರೆ ರಾಜನೆಲ್ಲಿ? ಸೀತೆಯೆಲ್ಲಿ?

"ನಿಮಗದೊಂದೂ ತಿಳಿಯದೆ? ನಿಮ್ಮನ್ನು ಮಠದವರು ಕರೆದು ಕೊಂಡು ಹೋದ ತಿಂಗಳಿಗೇ ಖಾಯಿಲೆಯಾಗಿ ರಾಜ ತೀರಿಹೋದ. ಮಠದ ಹಣಕ್ಕೆ ಆಸೆಪಟ್ಟರೆ ವಂಶ ನಿಲ್ಲುವುದಿಲ್ಲವೆಂದು ನಿಮ್ಮ ತಾಯಿ ಗೋಳಾಡುತ್ತಲೇ ಇದ್ದರು. ನಿಮ್ಮ ತಂದೆಯವರೂ ಬಹುಕಾಲ ಸುಖ ವನ್ನು ಉಣ್ಣಲಿಲ್ಲ. ಸೀತೆಯ ಗಂಡ ಹೋದನೆಂಬ ಗೋಳಿನಲ್ಲೇ ನಿಮ್ಮ ತಾಯಿಯೂ ಹೋಗಿಬಿಟ್ಟರು."

"ಸೀತೆ ಗಂಡ ಹೋದನೆ? ಅವಳೆಲ್ಲಿದ್ದಾಳೆ?"

"ಅತ್ತೆ ಮನೆಯಲ್ಲೇ ಇದ್ದಾಳೆ. ಮಠದವರೇ ಅವಳಿಗಷ್ಟು ಹಣ ಕೊಡುತ್ತಾರೆ."

ಮಾಧವ ಅಲ್ಲೇ ಒಂದು ಕಲ್ಲು ಬಂಡೆಯಮೇಲೆ ಕುಳಿತನು. ವಂಶನಾಶವಲ್ಲದೆ ಮತ್ತೇನು? ಮಗನು ಮಠಾಧಿಪತಿಯಾಗಿ ತಾವೆಲ್ಲಾ ಸುಖಜೀವನವನ್ನು ಮಾಡುವೆವೆಂದುಕೊಂಡು ತಂದೆ ತನ್ನನ್ನು ಸಮಾಜದ ಹುಚ್ಚಿಗೆ ಬಲಿಕೊಟ್ಟಾಗ ಹಿಂದೆ ನಿಂತು ವಿಧಿ ಎಷ್ಟು ನಕ್ಕಿತೋ!

"ಮೃದುವಾಗಿ, ಗೌರೀ, ನೀನು ಸುಖವಾಗಿದ್ದೀ ತಾನೆ?"

"ನನಗೆಲ್ಲಿಯ ಸುಖ?"

ಚಕಿತನಾಗಿ ಮಾಧವನು ತಲೆಯೆತ್ತಿ ನೋಡಿದನು. ಗೌರಿಯ ಹಣೆಯೂ ಬರಿದಾಗಿತ್ತು. ಅವಳೂ ತನ್ನಂತೆ ಸಂನ್ಯಾಸಿನಿ. ಸಮಾಜದ ಕಠಿಣನಿಯಮಗಳಿಗೆ ಬಲಿಯಾದವಳು. ಪ್ರಪಂಚದಲ್ಲಿ ಇಂತಹ ಯಜ್ಞ ಪಶುಗಳು ಎಷ್ಟೋ! ಕುತೂಹಲದಿಂದ "ನೀನಿಲ್ಲಿಗೇಕೆ ಬಂದೆ, ಗೌರಿ?" ಎಂದು ಕೇಳಿದನು. ಗೌರಿ ಉತ್ತರಕೊಡಲಿಲ್ಲ, ಸುಮ್ಮನೆ ಎದ್ದು ನಿಂತಳು. ದೂರದಲ್ಲಿ ಲಾಂದ್ರದ ಬೆಳಕು ಕಾಣಿಸಿತು.

"ನನ್ನನ್ನು ಹುಡುಕುತ್ತಿರಬಹುದು. ಬಾ, ಗೌರಿ, ಹೋಗ್ಗೋಣ" ಎಂದು ಮಾಧವ ಎದ್ದನು.

"ನೀವು ಹೊರಡಿ" ಎಂದು ಗೌರಿ ತೋಪಿನಲ್ಲಿ ಮರೆಯಾದಳು.

ಮಾಧವ ಛತ್ರವನ್ನು ಸೇರಿದನು. ಎಂದಿನಂತೆ ಧ್ಯಾನದಲ್ಲಿ ತಲ್ಲೀನನಾಗಲು ಅವನಿಗೆ ಸಾಧ್ಯವಾಗಲಿಲ್ಲ. ಇಪ್ಪತ್ತುವರ್ಷಗಳಿಂದ ಸುಪ್ತವಾಗಿದ್ದ ಮನಸ್ಸಿನ ಆಸೆಗಳನ್ನು ಗೌರಿ ಚೇತನಗೊಳಿಸಿದ್ದಳು. ಆ ದಿನ ಸ್ವಾಮಿಗಳ ಎದುರಿಗೆ ತಾನು ಹೋಗದೆ ಇದ್ದಿದ್ದರೆ! ತನ್ನ ತಂದೆ ಹಣಕ್ಕಾಸೆಪಟ್ಟು ತನ್ನ ಜೀವನವನ್ನು ಮಾರಲು ಒಪ್ಪದಿದ್ದಿದ್ದರೆ! ವ್ಯರ್ಥವಾದ ಆಲೋಚನೆಗಳು ಅಳಿಸಲಾಗದ, ಮರಸಲಾಗದ, ನಡೆದುಹೋದ ಕಾರ್ಯಗಳು. ಸಮಾಜ ಒಂದು ಆದರ್ಶವನ್ನು ಕಂಡುಕೊಳ್ಳಬೇಕಾದರೆ ಒಂದು ಜೀವದ ಬಲಿಯಾಗಬೇಕೆ? ಹೊರಗೆ ನೋಡಲು ಅನರ್ಘ್ಯವಾದ ವಸ್ತ್ರಾಭರಣಗಳು, ಪರಿವಾರ, ಸಂಪತ್ತು. ಒಳಹೊಕ್ಕು ನೋಡಿದರೆ ಏಕಾಂಗಿಯಾದ, ನಿರಾಸೆಯ ಮೂರ್ತಿ. ಪೂಜೆ ಎಂದಿನಂತೆ ನಡೆದಿತ್ತು. ಸ್ವಾಮಿಗಳು ಮಾತ್ರ ಐಹಿಕ ಸುಖಾಭಿಲಾಷಿಯಾದ ಮಾಧವನಾಗಿದ್ದನು.

ಮಾರನೆಯ ದಿನ ಪ್ರಯಾಣ ಸಿದ್ಧತೆಗಳು ನಡೆಯುತ್ತಿದ್ದುವು. ಮಾಧವ ಚಂದ್ರಶೇಖರ ಶಾಸ್ತ್ರಿಗಳನ್ನು "ಸಾಮಾನು ಕಟ್ಟಿಸುತ್ತಿದ್ದೀರಾ?" ಎಂದು ಕೇಳಿದನು.

"ಹೌದು, ಸಂಜೆಗೆ ಪ್ರಯಾಣ."

' "ಈವತ್ತಿದ್ದು ನಾಳೆ ಹೊರಡುವುದಕ್ಕಾಗುವುದಿಲ್ಲವೇ?".

ಸಂಜೆ ತೋಪಿಗೆ ಹೋಗಬೇಕೆಂಬ ತೀವ್ರಾಭಿಲಾಷೆ ಮಾಧವನನ್ನು ಆವರಿಸಿತ್ತು.

"ಎಲ್ಲಾ ಏರ್ಪಾಟು ಮಾಡಿ ಆಗಿದೆ."

ಮಾತನಾಡಿ ಫಲವಿಲ್ಲವೆಂದು ಮಾಧವ ಸುಮ್ಮನಾದನು. ಸಂಜೆ ಪಲ್ಲಕ್ಕಿ ತೋಪಿನ ಪಕ್ಕದಲ್ಲಿ ಹೋದಾಗ ಮರದ ಮರೆಯಲ್ಲಿ ಗೌರಿ ನಿಂತಂತಿದ್ದಿತು.

* * * * *

ಮಾಧವ ಮರದ ರೆಂಬೆಯಮೇಲೆ ಕುಳಿತಿದ್ದನು. ಗೌರಿ ನಿಂತಿದ್ದಳು.

"ಈವತ್ತು ನಾನಿಲ್ಲಿಗೆ ಬರುತ್ತೇನೆಂದು ನಿನಗೆ ಹೇಗೆ ತಿಳಿಯಿತು ಗೌರಿ?"

"ನಾನು ದಿನವೂ ಇಷ್ಟು ಹೊತ್ತಿಗೆ ಇಲ್ಲಿಗೆ ಬರುತ್ತೇನೆ. ನೀವು ಇನ್ನೊಮ್ಮೆ ನನ್ನನ್ನು ನೋಡದಿರಲಾರಿರಿ ಎಂದು ನನ್ನ ಮನಸ್ಸು ಹೇಳುತ್ತಿತ್ತು. ದಿನವೂ ಕಾಯುತ್ತಿದ್ದುದು ಈವತ್ತು ಸಾರ್ಥಕವಾಯಿತು ಆ ದಿನ ಹೇಳದೆ ನೀವು ಊರು ಬಿಟ್ಟುದಕ್ಕಾಗಿ ನಾನೆಷ್ಟು ಅತ್ತೆನೋ."

ಈಗಲೂ ಗೌರಿಯ ಕಣ್ಣುಗಳಲ್ಲಿ ನೀರು ಮಿಂಚುತ್ತಿತ್ತು. ಒರಸಿಕೊಳ್ಳಲು ಕೈಯೆತ್ತಿದಾಗ ಮಾಧವನ ಭುಜಕ್ಕೆ ಸೋಕಲು ಅವನಿಗೆ ಮೈ ಮೇಲೆ ಮುಳ್ಳೆದ್ದಿತು. ತಟ್ಟನೆ ಎದ್ದು, "ಗೌರೀ, ಇದು ಹುಚ್ಚು. ಇದರಿಂದ ನನಗೂ ಸುಖವಿಲ್ಲ, ನಿನಗೂ ಇಲ್ಲ. ನಮ್ಮಿಬ್ಬರ ಜೀವನದಲ್ಲೂ ಈ ಭಾವನೆಗಳಿಗೆ ಅವಕಾಶವಿಲ್ಲ. ಏನೋ ಹುಚ್ಚಿನ ಆವೇಶದಲ್ಲಿ ಈ ದಿನ ಬಂದು ಬಿಟ್ಟೆ. ಇನ್ನು ಮೇಲೆ ಬರದಿರಲು ಪ್ರಯತ್ನಿಸುತ್ತೇನೆ" ಎಂದನು. ಗೌರಿ ಅವನನ್ನೇ ದೃಷ್ಟಿಸಿ ನೋಡುತ್ತಾ ನಿಂತಳು. ಕಣ್ಣುಗಳಲ್ಲಿ ಧಾರಾಳವಾಗಿ ನೀರು ಹರಿದು ಹೋಗುತ್ತಿತ್ತು.

"ಬರಲೇ ಗೌರಿ?"

"ನಿಮಗೆ ತೊಂದರೆಯಾದರೆ ಬರಬೇಡಿ. ನನಗೇನೋ ನೀವು ಬಂದು, ಅರೆಗಳಿಗೆ ಮಾತನಾಡಿದರೆ ಸುಖವಿದೆ. ನಾನು ತಪ್ಪದೆ ನಿಮಗಾಗಿ ಕಾಯುತ್ತೇನೆ. ದೇವರು ಮಾಡಿಸಿದ ಹಾಗಾಗಲಿ" ಎಂದಳು.

ಅವಳ ನಿರ್ಧಾರದ ಮಾತು ಮಾಧವನ ಮನಸ್ಸನ್ನು ಕಲಕಿತು. ಕಡೆಯಮಾತಾಗಿ "ಬೇಡ, ಗೌರಿ, ಅದರಲ್ಲಿ ಬಹಳ ತೊಂದರೆಯಿದೆ," ಎಂದು ಹೇಳಿ ಹೊರಟನು. ಸ್ವಲ್ಪದೂರ ಹೋಗಿ ತಿರುಗಿ ನೋಡಲು ಗೌರಿ ನಿರಾಸೆಯ ಮೂರ್ತಿಯಂತೆ ಆ ರೆಂಬೆಯ ಮೇಲೆಯೇ ಕುಳಿತಿದ್ದಳು.

* * * * *

ಚಂದ್ರಶೇಖರ ಶಾಸ್ತ್ರಿಗಳ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ಸ್ವಾಮಿಗಳ ವರ್ತನೆಯಲ್ಲಿ ಅನುಮಾನ ತಲೆದೋರಿತ್ತು. ವ್ರತನಿಯಮಗಳು ಮೊದಲಿನಂತೆ ನಡೆಯುತ್ತಿದ್ದರೂ ಮಾಧವನ ಮನಸ್ಸು ಎಲ್ಲಿಯೋ ಹಾರಾಡುತ್ತಿತ್ತು. ಅವನು ತಮ್ಮ ಅಂಕೆಮೀರಿ ಹೋದನೆಂಬ ಗಾಬರಿ ಶಾಸ್ತ್ರಿಗಳಿಗುಂಟಾಗಿತ್ತು. ಸಂಜೆ ತಿರುಗಾಡಲು ಹೋದವರು ಎರಡು ಮೂರು ಘಂಟೆಯಾದರೂ ಹಿಂದಿರುಗುತ್ತಿರಲಿಲ್ಲ. ರಾತ್ರಿಯ ಪೂಜೆ ಪ್ರಾರಂಭವಾಗುವುದೇ ಹತ್ತು ಘಂಟೆಯಾಗುತ್ತಿತ್ತು. ನರಸಿಂಹ ಹೇಳಿದ ವರ್ತಮಾನ ಬೇರೆ ಬಾಧಿಸುತ್ತಿತ್ತು. ಈ ದಿನ ಕೇಳಿಯೇ ಬಿಡಬೇಕೆಂದು ನಿರ್ಧರಿಸಿದರು. ಅದೇ ತಾನೆ ಊಟಮುಗಿಸಿ ಸ್ವಾಮಿಗಳು ಯಾವುದೋ ಪುಸ್ತಕವನ್ನು ಹಿಡಿದು ಕುಳಿತಿದ್ದರು. ಚಂದ್ರಶೇಖರ ಶಾಸ್ತ್ರಿಗಳನ್ನು ನೋಡಿ " ಏನು ಶಾಸ್ತ್ರಿಗಳೆ? " ಎಂದರು.

" ದೇಹದಲ್ಲಿ ಹೇಗಿದೆ? "

" ನನಗೇನಾಗಿದೆ? "

"ಕೆಲವು ದಿನದಿಂದ ಏನೋ ಸ್ವಸ್ಥವಾಗಿರುವ ಹಾಗಿಲ್ಲ. ಉತ್ತರ ದೇಶದ ಕಡೆ ಪ್ರವಾಸ ಹೋಗೋಣವೆ?"

" ಈಗೇಕೆ? ನನಗೇನೂ ಆಗಿಲ್ಲ. "

"ಆ ಕಡೆಯಲ್ಲಾ ಹೋಗಿ ಬಹಳ ದಿನಗಳಾದುವು. ಹೋಗಿ ಬರುವುದೊಳ್ಳೆಯದು."

" ಈಗೇನೂ ಬೇಡ. "

" ನಾನು ಸ್ಪಷ್ಟವಾಗಿ ಮಾತನಾಡಲೆ? "

ಮಾಧವನ ಹೃದಯ ಹೊಡೆದುಕೊಳ್ಳಲಾರಂಭಿಸಿತು. " ಯಾವ ವಿಚಾರ? "

" ವಾಸ್ತವಾಂಶವನ್ನು ತಿಳಿಸುವುದಾದರೆ ಕೇಳುತ್ತೇನೆ. "

ಶಾಸ್ತ್ರಿಗಳ ಧ್ವನಿ ಗಡುಸಾಗಿ ಅವರ ಮಾತುಗಳು ಅಪರಾಧಿಯನ್ನು ವಿಚಾರಿಸುವ ನ್ಯಾಯಾಧೀಶನ ವ್ಯಾಕರಣೆಯಂತಿತ್ತು.

"ಹೇಳಿ."—ಮಾಧವ ನಾಲಗೆಯಿಂದ ತುಟಿಯನ್ನು ಸವರಿಕೊಂಡನು.

" ತಾವು ಆಗಾಗ ಸಂಜೆ ಪಕ್ಕದ ಊರಿಗೆ ಹೋಗುತ್ತೀರಂತೆ. ಅದೂ ಕೇವಲ ವ್ಯಾಯಾಮಕ್ಕಾಗಿ ಅಲ್ಲವಂತೆ. "

" ಯಾರು ಹೀಗೆಲ್ಲಾ ಹೇಳಿದವರು? "

" ನರಸಿಂಹನೇ ಹೇಳಿದ. ಬೇರೆಯವರು ಹೇಳಿದ್ದರೆ ನಾನು ನಂಬುತ್ತಲೇ ಇರಲಿಲ್ಲ.ಅ ವನೇ ಒಂದು ದಿನ ನಿಮ್ಮ ಹಿಂದೆ ಬಂದನಂತೆ. ಮಾವಿನ ತೋಪಿನಲ್ಲಿ ಒಬ್ಬ ಹೆಂಗಸಿನೊಡನೆ ಮಾತನಾಡುತ್ತಿದ್ದರಂತೆ."

ಮಾಧವ ಸುಮ್ಮನಿದ್ದುದನ್ನು ನೋಡಿ ಶಾಸ್ತ್ರಿಗಳು " ನೀವು ಇಲ್ಲವೆಂದು ಹೇಳಿದರೆ ಸಾಕು. ನಾನು ಒಪ್ಪಿಕೊಳ್ಳುತ್ತೇನೆ. "

ತನ್ನ ತಪ್ಪು ಬಯಲಿಗೆ ಬಂದುದನ್ನು ನೋಡಿ ಮಾಧವನಿಗೆ ಒಂದು ವಿಧವಾದ ಅಸ್ವಾಭಾವಿಕ ಧೈರ್ಯ ಬಂತು.

" ಇಲ್ಲವೆಂದು ಹೇಳಲಾರೆ. "

ಚಂದ್ರಶೇಖರ ಶಾಸ್ತ್ರಿಗಳಿಗೆ ವಿಪರೀತ ಕೋಪ ಬಂತು. "ತಮ್ಮ ಮಾತಿನ ವೈಪರೀತ್ಯ ತಿಳಿದಿದೆಯೇ? ತಮಗೆ ಆಗಿರುವ ದೀಕ್ಷೆಯೇನು? ವಿದ್ಯಾಭ್ಯಾಸವೇನು? ಕ್ಷಣಿಕ ಸುಖಕ್ಕಾಗಿ ಮಠದ ಮರ್ಯಾದೆ ಕಳೆಯುತ್ತೀರಾ? ಸಮಾಜದಲ್ಲಿ ತಲೆಯೆತ್ತಲು ಸಾಧ್ಯವೆ?"

ಕೋಪದಿಂದ ಕೆಂಪಾದ ಅವರ ಮುಖವನ್ನು ನೋಡಿ ಮಾಧವನಿಗೆ ಗಾಬರಿಯಾಯಿತು. ತಪ್ಪನೊಪ್ಪಿಕೊಳ್ಳುವುದೇ ಒಳ್ಳೆಯದೆಂದು ತೋರಿತು. ಆದರೆ ಹಿಂದಿನ ಸಂಜೆ ತನ್ನ ತೋಳ ಸೆರೆಯಲ್ಲಿ ಮಲಗಿ ತನ್ನನ್ನೇ ನಂಬಿದ್ದ ಕಣ್ಣುಗಳಿಂದ ನೀರನ್ನುದುರಿಸುತ್ತಾ ಬೀಳ್ಕೊಟ್ಟ ಗೌರಿಯ ನೆನಪು ಧೈರ್ಯ ಕೊಟ್ಟಿತು.........ಅವಳೊಬ್ಬಳನ್ನೇ ಸಮಾಜದ ಧಿಕ್ಕಾರಕ್ಕೆ ಬಲಿ

ಕೊಟ್ಟು ತಾನು ಜಾರಿಕೊಂಡರೆ ಹುಟ್ಟೇ ವ್ಯರ್ಥವಾಗುವುದೆನ್ನಿಸಿತು. ಧೈರ್ಯವಾಗಿಯೇ ಉತ್ತರಕೊಟ್ಟನು.

"ಸಮಾಜದ ಹುಚ್ಚಿಗೆ ಇದೇ ನನ್ನ ಪ್ರತೀಕಾರವೆಂದಿಟ್ಟುಕೊಳ್ಳಿ. ಹತ್ತುವರ್ಷದ ಹುಡುಗನಿಗೆ ಸಂನ್ಯಾಸ ಕೊಟ್ಟು ಸಮಾಜ ತನ್ನ ಉದ್ಧಾರವಾಗುವುದೆಂದು ಬಗೆದರೆ ಅದಕ್ಕೆ ನಾನೇನು ಮಾಡಬಹುದೀತು? ಈಗ ನಿಮ್ಮ ಮಠವನ್ನು ಬಿಡಲು ಸಿದ್ಧನಾಗಿದ್ದೇನೆ. ಬೇರೆ ಯಾರನ್ನಾದರೂ ಈ ಸ್ಥಾನಕ್ಕೆ ಬಲಿಕೊಡಿ."

ಶಾಸ್ತ್ರಿಗಳ ಮೈ ಕಿಡಿಕಿಡಿಯಾಯಿತು. ಹುಬ್ಬು ಗಂಟಿಕ್ಕಿಕೊಂಡು ಹಲ್ಲು ಕಚ್ಚಿಕೊಂಡೇ ಹೇಳಿದರು. "ರಾಜೀನಾಮೆ ಕೊಟ್ಟು ಎದ್ದು ಹೋಗುವುದಕ್ಕೆ ಇದೇನು ಸರ್ಕಾರಿ ನೌಕರಿ ಎಂದುಕೊಂಡಿದ್ದೀರಾ? ಅದೆಲ್ಲಾ ಸಾಧ್ಯವಿಲ್ಲ. ಮಠವನ್ನು ಬಿಟ್ಟು ನೀವೊಬ್ಬ ಮುಂಡೆಯನ್ನು ಕಟ್ಟಿಕೊಂಡು ತಿರುಗುತ್ತಿದ್ದರೆ ಮಠದ ಮರ್ಯಾದೆ ನಿಲ್ಲುತ್ತದೆಯೇ? ಈಗ ನಿಮಗೆರಡೇ ದಾರಿ. ಇಲ್ಲಾ, ಈ ದುರ್ವ್ಯಾಪಾರಗಳನ್ನು ನಿಲ್ಲಿಸುತ್ತೇನೆಂದು ದೇವಿಯನ್ನು ಮುಟ್ಟಿ ಆಣೆಮಾಡಿ; ಇಲ್ಲದಿದ್ದರೆ ಪರಲೋಕದ ಸಿದ್ಧತೆಯನ್ನು ಮಾಡಿಕೊಳ್ಳಿ."

ಮಾಧವನ ಹೃದಯ ಬಡಿದುಕೊಳ್ಳಲಾರಂಭಿಸಿತು. ಶಾಸ್ತ್ರಿಗಳ ಮುಖದ ಮೇಲಿನ ನಿರ್ಧಾರ ಭಯಂಕರವಾಗಿ ಕಾಣಿಸಿತು. ಅವನ ಅನುಮಾನವನ್ನು ನೋಡಿ ಶಾಸ್ತ್ರಿಗಳು "ಸಂಜೆಗೆ ಹೇಳಿದರೆ ಸಾಕು. ಈಗ ಪೂಜೆಯಾಗಲಿ" ಎಂದು ಎದ್ದರು. ಅವರ ಮುಖದಲ್ಲಿ ತಿರಸ್ಕಾರದ ನಗುವಿತ್ತು.

ಮಾಧವನಿಗೆ ವಿಪರೀತ ಕೋಪವುಂಟಾಯಿತು. ಯಾರ ತಪ್ಪಿಗೆ ಯಾರಿಗೆ ಶಿಕ್ಷೆ? ಬಂಧನದಿಂದ ಪಾರಾಗಲಾರದ ತನ್ನ ದುರ್ಬಲತೆಗಾಗಿ ನೊಂದುಕೊಂಡನು. ಶಾಸ್ತ್ರಿಗಳು ತೋರಿದ ಎರಡು ಹಾದಿಗಳಿಗೂ ಹೆಚ್ಚೇನೂ ವ್ಯತ್ಯಾಸವಿರಲಿಲ್ಲ. ಒಂದು ಮರಣವಾದರೆ ಇನ್ನೊಂದು ಸಜೀವ ಮರಣ. ತಾನು ಯಾವ ಹಾದಿ ಹಿಡಿದರೂ ಗೌರಿಗೇನೂ ಸುಖವಿಲ್ಲ. ನರಳುತಿದ್ದ

ಜೀವನಕ್ಕೆ ವಿಷ ಬೆರಸಿ ಆಯಿತು. ಅವಳ ಕಷ್ಟವನ್ನು ಹಗುರ ಮಾಡುವ ಹಾಗಿಲ್ಲ. ಸಂಜೆಗೊಂದು ಸಲ ಹೋಗಿ ಅವಳಿಗೆ ಹೇಳಿ ಬಂದು ಬಿಡುವು ದೆಂದು ನಿರ್ಧರಿಸಿ ಬೇಗ ಬೇಗ ಪೂಜೆಯನ್ನು ಮುಗಿಸಿ ಹೊರಟನು. ಬಾಗಿಲಿಗೆ ಹೋಗುವ ವೇಳೆಗೆ ಶಾಸ್ತ್ರಿಗಳು ಎದುರಿಗೆ ಬಂದು "ಅಪ್ಪಣೆ ಯಾದರೆ ಉತ್ತರ ದೇಶಕ್ಕೆ ಪ್ರಯಾಣಕ್ಕೆ ಏರ್ಪಾಡು ಮಾಡುತ್ತೇನೆ" ಎಂದರು.

ಮಾಧವನು ನಿರಾಸೆಯಿಂದ ಭಾರವಾದ ಧ್ವನಿಯಲ್ಲಿ "ಆಗಬಹುದು" ಎಂದು, ಒಳಗೊಂದು ಚಾಪೆಯ ಮೇಲೆ ಹೋಗಿ ಬಿದ್ದುಕೊಂಡನು.

ತೋಪಿನಲ್ಲಿ ಕಾದು ಕಾದು ಗೌರಿ ತೀರ ಕತ್ತಲಾದಮೇಲೆ ಮನೆಗೆ ಹೋದಳು.

---

# ಚಿರದುಃಖಿ

ಕಿಟ್ಟನಿಗೆ ಬಹಳ ಜನ ಸ್ನೇಹಿತರಿರಲಿಲ್ಲ. ಒಂದು ವಿಧವಾದ ಮುಖ ಹೇಡಿತನ ಅವನನ್ನು ಎಲ್ಲರಿಂದ ಬೇರೆಮಾಡಿತ್ತು. ಆಟಪಾಟಗಳಲ್ಲಿಯೂ, ಯಾವ ಸಂಘ ಸಮಿತಿಗಳಲ್ಲೂ ಭಾಗವಹಿಸದೆ ಇದ್ದುದರಿಂದ ಯಾರೂ ಅವನ ತಂಟೆಗೆ ಹೋಗುತ್ತಿರಲಿಲ್ಲ. ಪುಸ್ತಕಪಿಶಾಚಿಯೆಂದು ಎಲ್ಲಾ ಹುಡುಗರಿಗೂ ಅವನನ್ನು ಕಂಡರೆ ತಿರಸ್ಕಾರ. ತರಗತಿಯಲ್ಲಿ ಯಾವಾಗಲೂ ಮೊದಲನೆಯವನಾಗಿದ್ದರೂ ಯಾರೂ ಅವನಿಗೆ ಹೆಚ್ಚು ಮನ್ನಣೆಯನ್ನು ಕೊಡುತ್ತಿರಲಿಲ್ಲ. ತಿರಸ್ಕಾರದೊಂದಿಗೆ ಸ್ವಲ್ಪ ಮಾತ್ಸರ್ಯವೂ ಸೇರಿ ಅವನನ್ನು ದೂರ ಸರಿಸಿದ್ದರು. ಕಿಟ್ಟನಿಗೆ ಎಲ್ಲರೊಡನೆ ಸೇರಬೇಕೆಂಬ ಸಹಜವಾದ ಆಸೆಯಿದ್ದರೂ ಮುಖಹೇಡಿತನ ಅಡ್ಡಬರುತ್ತಿದ್ದಿತು. ತಳ್ಳಿಕೊಂಡು ಹೋಗಿ ಎಲ್ಲರೊಡನೆ ಬೆರೆತು ತಿರುಗುವ ಸಾಹಸ ಮಾಡಲಾರದಿದ್ದುದರಿಂದ ಅವನ ಸ್ನೇಹಿತರು ಬರಿಯ ನಿರ್ಜೀವ ಪುಸ್ತಕಗಳೇ ಆದುವು. ಅವುಗಳನ್ನು ಎಷ್ಟು ಹೃದಯಕ್ಕೆ ಆತುಕೊಂಡರೂ ಅವನಿಗೆ ಜೀವನ ಆಗಾಗ ಕಹಿಯೆನ್ನಿಸುತಿತ್ತು.

ಅವನ ಮನೆಯ ವಾತಾವರಣವೆಂತಹುದೆಂದು ಯಾರಿಗೂ ತಿಳಿಯದು. ತಿಳಿಯುವ ಕುತೂಹಲವೂ, ಯಾರಿಗೂ ಇರಲಿಲ್ಲ. ಅವನೊಬ್ಬ ತಬ್ಬಲಿ ಹುಡುಗ. ಚಿಕ್ಕಪ್ಪನೊಬ್ಬನು ಅವನ ಏಕಮಾತ್ರ ಬಂಧು.

ವಿದ್ಯಾರ್ಥಿವೇತನ ತಪ್ಪದೆ ಬರುತ್ತಿದ್ದುದರಿಂದ ಕಿಟ್ಟನ ವಿದ್ಯೆ ಸಾಗುತ್ತಿದ್ದಿತು. ಹುಟ್ಟಿದಂದಿನಿಂದಲೂ ಸಹಾನುಭೂತಿಯಿಲ್ಲದ ವಾತಾವರಣದಲಿ ಬೆಳೆದ ಕಿಟ್ಟ ಯಾವಾಗಲೂ ಒಂಟಿಯೇ; ಎಲ್ಲರಿಗೂ ದೂರನಾದವನೇ. ಉಪಾಧ್ಯಾಯರುಗಳಿಗೂ ಅವನನ್ನು ಕಂಡರೆ ಅಸಡ್ಡೆ. ನಾಲ್ಕು ಜನರೊಡನೆ ಓಡಾಡಲು ಅರಿಯದ ಮನುಷ್ಯ, ಎಷ್ಟು ಓದಿದರೇನು, ಎಷ್ಟು ಬುದ್ಧಿವಂತನಾದರೇನು ಎಂಬ ತಿರಸ್ಕಾರ.

ಶಂಕರ ಹೊಸದಾಗಿ ಕಾಲೇಜಿಗೆ ಸೇರಿದ್ದನು. ಪ್ರತಿಯೊಂದು ಪರೀಕ್ಷೆಯಲ್ಲೂ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣನಾಗುತ್ತಿದ್ದ ಕಿಟ್ಟನೂ ಅದೇ ಕಾಲೇಜಿನಲ್ಲಿ ಅದೇ ಹಾಸ್ಟೆಲಿನಲ್ಲಿ ಇದ್ದನೆಂದು ತಿಳಿದಾಗ

ನಿಂದ ಶಂಕರನಿಗೆ ಅವನನ್ನು ನೋಡಲು ಕುತೂಹಲ. ಕಿಟ್ಟನು ಅವನ ಕನಸಿನ ಆದರ್ಶ ವ್ಯಕ್ತಿಯಾಗಿದ್ದನು. ಆದರೆ ಹಾಸ್ಟೆಲಿಗೆ ಸೇರಿ ಎಂಟು ದಿನಗಳಾದರೂ ಕಿಟ್ಟನ ಸುದ್ದಿಯೇ ಇಲ್ಲ. ಖಾಯಿಲೆಯಾಗಿ ಅವನು ಬರದಿರಬಹುದೆಂದು ಎಂಟು ದಿನ ಕಾದನು. ಕಡೆಗೊಬ್ಬ ಹುಡುಗನನ್ನು ವಿಚಾರಿಸಲು, "ಕಿಟ್ಟನೇ? ನಿನ್ನ ರೂಮಿನಲ್ಲೇ ಇದ್ದಾನೆ. ದಪ್ಪ ಕನ್ನಡಕ ಗಳನ್ನು ಹಾಕಿಕೊಂಡು ಸದಾ ಓದುತ್ತಿರುತ್ತಾನೆ." ಶಂಕರನಿಗೆ ಸ್ವಲ್ಪ ಅಸಮಾಧಾನವಾಯಿತು. ಅವನ ಕನಸಿನ ಕಿಟ್ಟ ಇನ್ನೂ ಭವ್ಯವ್ಯಕ್ತಿ. ಆದರೂ ಕಿಟ್ಟನೊಡನೆ ಸ್ನೇಹ ಬೆಳಸಬೇಕೆಂಬ ಕುತೂಹಲ ಅಳಿಯಲಿಲ್ಲ.

ಸಾಯಂಕಾಲವಾದಾಗ ಮೆಲ್ಲಗೆ ಕಿಟ್ಟನ ಮೇಜಿನ ಬಳಿಗೆ ಹೋದನು. ಯಾರೂ ಮಾತನಾಡಿಸಿ ಅಭ್ಯಾಸವಿಲ್ಲದುದರಿಂದ ಕಿಟ್ಟ ತಡಬಡಿಸುತ್ತಾ ಎದ್ದುನಿಂತು "ಏನು ಬೇಕು?" ಎಂದನು. ಶಂಕರನ ಆದರ್ಶವ್ಯಕ್ತಿ ತೀರ ಮಾಯವಾದನು. ಆದರೆ ಆ ಸ್ಥಾನದಲ್ಲಿ ನಿಂತಿದ್ದ ಕಿಟ್ಟನ ವಿಷಯದಲ್ಲಿ ಗಾಢವಾದ ಕನಿಕರ ಉತ್ಪನ್ನವಾಯಿತು. ಅಲ್ಲಿಗೇ ತನ್ನ ಕುರ್ಚಿಯನ್ನು ಎಳೆದುಕೊಂಡು ಹರಟುವುದಕ್ಕೆ ಪ್ರಾರಂಭಿಸಿದನು. ಮೊದಮೊದಲು ಮಾತುಗಳು ಹೊರಡುವುದೇ ಕಷ್ಟವಾದರೂ ಬರಬರುತ್ತಾ ಕಿಟ್ಟ ಮನ ಬಿಚ್ಚಿ ಮಾತನಾಡಲಾರಂಭಿಸಿದನು. ಮುಖ ಹೇಡಿಗಳ ಬಾಳೇ ಹೀಗೆ! ಸ್ವಲ್ಪ ಸಹಾನುಭೂತಿಯೂ ವಿಶ್ವಾಸವೂ ಕಂಡರೆ ಆಯಿತು, ಹೃದಯದ ರಹಸ್ಯಗಳನ್ನೆಲ್ಲಾ ಬಿಚ್ಚುವರು. ಕಿಟ್ಟ ಶಂಕರನ ಸಹಾನುಭೂತಿಯ ಬೆಳಕಿನಲ್ಲಿ ಅರಳಿ ತನ್ನ ಚಿಕ್ಕಪ್ಪನ ವಿಚಾರವನ್ನೆಲ್ಲಾ ತಿಳಿಸಿದನು. ತಂದೆತಾಯಿಗಳಿಲ್ಲದ ತನ್ನ ತಬ್ಬಲಿ ಜೀವನದಲ್ಲಿ ಶಂಕರ ತೋರಿದ ಅನುತಾಪ ಅವನ ಹೃದಯವನ್ನು ಉಲ್ಲಾಸದಿಂದ ತುಂಬಿತು. ತನ್ನ ಆಸೆ ಅಭಿಲಾಷೆಗಳನ್ನೆಲ್ಲಾ ಶಂಕರನ ಮುಂದೆ ವಿಸ್ತರಿಸಿದನು. ಶಂಕರನೂ ಉತ್ಸಾಹದಿಂದ ಕೇಳಿದನು. ಆ ದಿನ ಮೊಳೆತ ಸ್ನೇಹ ಅವರಿಬ್ಬರನ್ನೂ ಗಾಢವಾಗಿ ಬಿಗಿಯಿತು. ಯಾರೊಡನೆಯೂ ಮಾತನಾಡದ ಕಿಟ್ಟ ಶಂಕರನನ್ನು ಕಂಡೊಡನೆ ಬೇರೆ ಮನುಷ್ಯನಾಗುವನು. ಸಂಜೆಯ ಹೊತ್ತು ತಿರುಗಾಡಲುಹೋಗಿ ಇಬ್ಬರೂ ಹರಟೆಯಲ್ಲಿ ಈ ಲೋಕವನ್ನೇ ಮರೆಯುತ್ತಿದ್ದರು.

ಪರೀಕ್ಷೆ ಇನ್ನೆರಡೇ ತಿಂಗಳು ಉಳಿದಿತ್ತು. ಹುಚ್ಚು ಹರಟೆಗಳಲ್ಲಿ ಸದಾಕಾಲವನ್ನೂ ಕಳೆಯುತ್ತಿದ್ದವರೂ ಪುಸ್ತಕಗಳನ್ನು ಹಿಡಿದು ಕೂಡ ಲಾರಂಭಿಸಿದರು. ಶಂಕರನ ಹರಟೆಯೂ ಕಡಮೆಯಾಯಿತು. ರಾತ್ರಿ ಹನ್ನೆರಡು ಘಂಟೆಯಾದರೂ ಹಾಸ್ಟೆಲಿನ ದೀಪಗಳು ಆರುತ್ತಿರಲಿಲ್ಲ. ಒಂದು ರಾತ್ರಿ ಹನ್ನೊಂದು ಘಂಟೆ. ಶಂಕರ ಏಕಾಗ್ರತೆಯಿಂದ ಪುಸ್ತಕವನ್ನು ಹಿಡಿದು ಕುಳಿತಿದ್ದನು. ಇದ್ದಕ್ಕಿದ್ದಂತೆ ಸದ್ದಾಗಲು ತಿರುಗಿನೋಡಿದನು. ಕಿಟ್ಟ ಮೇಜಿನಮೇಲೆ ಮುಖವನ್ನಿಟ್ಟುಕೊಂಡು ಬಿಕ್ಕಿಬಿಕ್ಕಿ ಅಳುತ್ತಿದ್ದನು. ಶಂಕರ ಮನೆಯಿಂದೇನಾದರೂ ಕೆಟ್ಟಸುದ್ದಿ ಬಂತೇನೋ ಎಂದು ಹೆದರಿ ದನು. ಎದ್ದು ಹೋಗಿ ಅವನ ಭುಜದ ಮೇಲೆ ಕೈಯಿಟ್ಟು "ಯಾಕೋ?" ಎಂದು ಮೃದುವಾಗಿ ಕೇಳಿದನು. ಕಿಟ್ಟನ ಅಳು ಹೆಚ್ಚಾಯಿತು. "ನನ್ನ ಕಣ್ಣಿಗೇನೋ ಬಂದಿದೆ, ಶಂಕರಾ, ಏನೂ ಕಾಣುವುದೇ ಇಲ್ಲ" ಎಂದು ಬಿಕ್ಕುತ್ತಾ ಹೇಳಿದನು. ಶಂಕರ ಕಿಟ್ಟನ ತಲೆಯನ್ನು ಮುಟ್ಟಿ ನೋಡಿದನು. ಹಣೆ ಸುಡುತ್ತಿತ್ತು. "ಈಗ ಮಲಗಿಕೊ. ನಾಳೆ ಡಾಕ್ಟರಿಗೆ ತೋರಿಸೋಣ. ಕಣ್ಣಿಗೆ ತುಂಬಾ ಕೆಲಸವಾಯಿತು. ಅದ ರಿಂದ ಹೀಗಾಗಿರಬೇಕು. ನಾಳೆ ಸರಿಹೋಗುತ್ತೆ" ಎಂದನು.

"ನಿಜವಾಗಿ ಸರಿಹೋಗಬಹುದಲ್ಲವೇ, ಶಂಕರಾ?" ಎಂದು ಕಿಟ್ಟ ವ್ಯಾಕುಲ ಧ್ವನಿಯಿಂದ ಕೇಳಿದನು. "ಸರಿಹೋಗದೆ ಏನಾಗುತ್ತೆ?" ಎಂದು ಶಂಕರ ಧೈರ್ಯ ಹೇಳುತ್ತಾ ಅವನನ್ನು ಹಾಸಿಗೆಯಲ್ಲಿ ಮಲಗಿಸಿ ದನು. ಆ ದಿನ ರಾತ್ರಿಯೆಲ್ಲಾ ಕಿಟ್ಟನಿಗೆ ನಿದ್ರೆಯಿಲ್ಲ. ಚಿಂತಾತರಂಗಗಳು ಅವನ ತಲೆಯಲ್ಲಿ ಭೋರ್ಗರೆದು ಹರಿದು ಹೋಗುತ್ತಿದ್ದುವು. "ಪರೀಕ್ಷೆಗೆ ಇನ್ನೆರಡೇ ತಿಂಗಳು. ಈ ವರ್ಷ ತೇರ್ಗಡೆಯಾಗದಿದ್ದರೆ ತನ್ನ ಗತಿಯೇನು?" ಅವನ ಜೀವನ ಪಥವನ್ನೇ ಬದಲಿಸುವ ಪ್ರಶ್ನೆಗಳು ಎದ್ದಿದ್ದುವು. ಆ ಘೋರಸಂದೇಹದ ಸನ್ನಿವೇಶದಲ್ಲಿ ನಿದ್ದೆಯೆಲ್ಲಿಯದು? ಹೊರಳುತ್ತಾ ಆ ರಾತ್ರಿಯನ್ನು ನೂಕಿದನು.

* * * * *

ದುಃಖಭಾರದಿಂದ ಹುಚ್ಚನಂತಾಗಿದ್ದ ಕಿಟ್ಟನು ವ್ಯಸನದಿಂದ ತನ್ನ ಚಿಕ್ಕ ಗಂಟನ್ನು ಕಟ್ಟುತ್ತಿದ್ದನು. ವೈದ್ಯನು ಅನುಮಾನಕ್ಕೆ ಆಸ್ಪದವೇ

ಕೊಡಲಿಲ್ಲ. ಕಣ್ಣುಗಳು ಬಹಳ ಕೆಟ್ಟಿರುವುವೆಂದೂ, ಅವುಗಳನ್ನು ಪೀಡಿಸಿದರೆ ತೀರ ಕುರುಡಾಗುವ ಸಂಭವವಿದೆಯೆಂದೂ ಹೇಳಿದ್ದನು. ಅದಿಲ್ಲದೆ ಈಗಲೇ ಎಚ್ಚತ್ತುಕೊಂಡು ಕಣ್ಣುಗಳಿಗೆ ವಿಶ್ರಾಂತಿಕೊಟ್ಟರೆ ಸ್ವಲ್ಪಮಟ್ಟಿಗಾದರೂ ದೃಷ್ಟಿ ಉಳಿಯಬಹುದೆಂದು ಹೇಳಿದ್ದನು. ಇನ್ನೆಲ್ಲಿಯ ಓದು! ಇನ್ನೆಲ್ಲಿಯ ಪರೀಕ್ಷೆ! ಕಿಟ್ಟನ ಕನಸಿನ ಆಸೆಗಳೆಲ್ಲವೂ ಮಣ್ಣುಗೂಡಿದವು ಜೀವನ ಬಹುಭಾರವೆನಿಸಿ ಕಣ್ಣೀರು ಸೋರುತ್ತಿದ್ದಿತು.

ಶಂಕರನಿಗೂ ದುಗುಡ. ಯಾವರೀತಿಯಲ್ಲಿ ಸಮಾಧಾನ ಹೇಳಿ ಅವನ ದುಃಖವನ್ನು ಕಡಮೆ ಮಾಡಲು ಸಾಧ್ಯ? ಏನೂ ತೋರದೆ ಅವನು ಸಾಮಾನುಗಳನ್ನು ಕಟ್ಟುವುದನ್ನು ನೋಡುತ್ತಿದ್ದನು. ಕಟ್ಟಿದ್ದಾದಮೇಲೆ ಕಿಟ್ಟನು "ಹೋಗಿ ಬರುತ್ತೇನೆಂದು" ಹೇಳಿ ಶಂಕರನ ಕೈಹಿಡಿದನು. ಇಬ್ಬರ ಗಂಟಲೂ ಬಿಗಿದು ಬಂದು ಗಳಗಳನೆ ಅತ್ತು ಬಿಟ್ಟರು.

* * * * *

ಕಿಟ್ಟ ಚಿಕ್ಕಪ್ಪನ ಮನೆಯನ್ನು ಸೇರಿ ಆಗಲೇ ಮೂರು-ನಾಲ್ಕು ತಿಂಗಳಾದವು. ಎಂತಹ ಮಹತ್ವಾಕಾಂಕ್ಷೆ ಮಣ್ಣುಗೂಡಿತೆಂದು ಅವನ ಚಿಕ್ಕಪ್ಪನಿಗೂ ಕನಿಕರ. ಇಷ್ಟು ಚಿಕ್ಕವಯಸ್ಸಿನಲ್ಲಿ ಕುರುಡಾದರೆ ಆ ನಿಡಿದಾದ ಜೀವನ ಪಥವನ್ನು ನೂಕಿ ನಡೆಯುವುದು ಹೇಗೆಂದು ಚಿಂತಿಸಿದಾಗಲೆಲ್ಲಾ ಆತನ ಕಣ್ಣು ಹನಿಗೂಡುವುವು. ಕಿಟ್ಟನು ಮನೆಗೆಲಸಗಳಲ್ಲಿ ನೆರವಾಗಲು ಪ್ರಯತ್ನಿಸಿದನು. ಆದರೆ ಸದಾ ಪುಸ್ತಕಪ್ರಪಂಚದಲ್ಲಿ ಮುಳುಗಿದ್ದ ಅವನಿಗೆ ಪ್ರಪಂಚಜ್ಞಾನ ಕಡಮೆ. ಒಂದೊಂದುಸಲ ಅವನ ತಪ್ಪುಗಳಿಂದ ಅವನ ಚಿಕ್ಕಮ್ಮನಿಗೆ ಬೇಸರವಾಗುವುದು. ಓದು ಮುಗಿಸಿ, ಎಲ್ಲಿಯಾದರೂ ನೆಲಸಿ, ಅವನ ಜೀವನವನ್ನು ನೋಡಿಕೊಳ್ಳುವನೆಂದಿದ್ದ ಆಸೆ ಬರಿದಾಯಿತು. ಸದಾಕಾಲವೂ ಇವನೊಬ್ಬ ಹೊರೆಯೆಂಬ ಅಸಮಾಧಾನ ಆಕೆಯ ನಡತೆಯನ್ನು ಕಠಿಣಮಾಡಲಾರಂಭಿಸಿತು.

ಒಂದು ದಿನ ಕಿಟ್ಟನ ಚಿಕ್ಕಪ್ಪನು ವರ್ತಮಾನ ಪತ್ರಿಕೆಯನ್ನು ಓದುತ್ತಾ "ಕಿಟ್ಟಾ, ನೋಡಿದೆಯಾ? ನಿನ್ನ ಸ್ನೇಹಿತ ಶಂಕರನೇ ಈ ಸಲ ಪರೀಕ್ಷೆಯಲ್ಲಿ ಮೊದಲನೆಯವನು."

ಕಿಟ್ಟನ ಮನಸ್ಸಿನಲ್ಲಿ ಒಂದು ವಿಧವಾದ ವೇದನೆಯುಂಟಾಯಿತು. ತನಗೆ ಬರಬೇಕಾಗಿದ್ದ ಸ್ಥಾನ, ತನ್ನದೇ ಆಗಿದ್ದ ಸಂಭಾವನೆ ಶಂಕರನದಾ

ಯಿತು. ಅವನು ತನ್ನಲ್ಲಿ ವಿಶ್ವಾಸ ತೋರಿದ ಮೊದಲ ವ್ಯಕ್ತಿ, ತನ್ನ ಸ್ನೇಹ ವನ್ನು ಸೂರೆಗೊಂಡಿದ್ದ ಒಬ್ಬನೇ ಗೆಳೆಯ, ಎಂದೆಷ್ಟು ಸಮಾಧಾನಮಾಡಿ ಕೊಂಡರೂ ಕಿಟ್ಟನ ಹೃದಯದಲ್ಲಿ ಮಾತ್ಸರ್ಯದ ಮೊಳಕೆ ಅಳಿಯಲಿಲ್ಲ. ಮಾರನೆಯ ದಿನವೇ ಶಂಕರನ ಕಾಗದ ಕಿಟ್ಟನ ಕೈಸೇರಿತು. ಶಂಕರನ ಹಾಗೆಯೇ ಶಂಕರನ ಕಾಗದ: ಅದೇ ಸರಳವಾದ ಸ್ನೇಹಪೂರಿತವಾದ ವಾಕ್ಯಗಳು. "ನೀನು ಕಾಲೇಜನ್ನು ಬಿಟ್ಟುದರಿಂದ ಈ ಸ್ಥಾನ ನನ್ನ ದಾಯಿತು. ನಾನು ನೆಗೆದು ಬಿದ್ದಿದ್ದರೂ ನಿನ್ನನ್ನು ಮೀರಿಸಲು ಆಗುತ್ತಿರ ಲಿಲ್ಲ." ಎಂದು ಬರೆದಿದ್ದನು. ಆದರೆ ಕಿಟ್ಟನಿಗೆ ಸಮಾಧಾನವಾಗಲಿಲ್ಲ. ತನ್ನ ಹೀನ ಅದೃಷ್ಟಕ್ಕೆ ಯಾರು ಹೊಣೆಯೆಂದು ಆಲೋಚಿಸಿಕೊಂಡರೂ ಆ ಅದೃಷ್ಟದ ವಿಷಯದಲ್ಲಿನ ಅಸಮಾಧಾನ ಕುಗ್ಗಲಿಲ್ಲ.

ಮೀನಾಕ್ಷಿಯೂ ಕಿಟ್ಟನಂತೆ ತಬ್ಬಲಿ ಹುಡುಗಿ. ರಾಮಯ್ಯ ನವರಿಗೆ ಕಿಟ್ಟು ಅಣ್ಣನ ಮಗನಾದರೆ ಮೀನಾಕ್ಷಿ ತಂಗಿಯ ಮಗಳು. ಮಕ್ಕಳಿಲ್ಲದ ರಾಮಯ್ಯನವರೇ ಇಬ್ಬರನ್ನೂ ಸಾಕಿ ದೊಡ್ಡವರನ್ನಾಗಿ ಮಾಡಿದ್ದರು. ಮೊದಲಿನಿಂದಲೂ ಅವರ ಜೀವನಪಥ ಏರ್ಪಡಿಸಿದ್ದಂತೆ ಯೇ ಇತ್ತು. ಕಿಟ್ಟನ ವಿದ್ಯಾಭ್ಯಾಸ ಮುಗಿದು ಅವನು ಯಾವುದಾದರೂ ಕೆಲಸಕ್ಕೆ ಸೇರಿಕೊಂಡು ಸಂಪಾದಿಸುವ ಹಾಗಾದರೆ ಮೀನಾಕ್ಷಿಯನ್ನು ಅವನಿಗೆ ಕೊಟ್ಟು ಮದುವೆಮಾಡಿ, ಒಳ್ಳೆಯರೀತಿಯಲ್ಲಿ ಇಬ್ಬರ ಹೊಣೆ ಗಾರಿಕೆಯನ್ನೂ ತೀರಿಸಿಕೊಳ್ಳಬಹುದೆಂದು ಎಣಿಸಿದ್ದರು. ಅಕಸ್ಮಾತ್ತಾಗಿ ಕಿಟ್ಟನಿಗೆ ಒದಗಿದ ಸಂಕಟ ಒಂದು ದೊಡ್ಡ ಚಿಂತೆಯನ್ನೇ ತಂದು ಹಾಕಿತ್ತು. ಊಟವಾಗಿ ವೀಳ್ಯದೆಲೆಯನ್ನು ಸವಿಯುತ್ತಾ ರಾಮಯ್ಯನವರು ಒಂದು ದಿಂಬಿಗೆ ಒರಗಿಕೊಂಡು ಕುಳಿತಿದ್ದರು.

ಶಾರದಮ್ಮನವರು ಎಲೆಗಳನ್ನು ಮಡಿಸಿಕೊಡುತ್ತಾ, "ಮೀನಾಕ್ಷಿ ಯ ಮದುವೆ ಮಾಡಬೇಡವೆ?" ಎಂದರು.

"ಅವಸರವೇನು? ಕಿಟ್ಟನ ಕಣ್ಣು ಸರಿಹೋಗಲಿ. ನೋಡೋಣ."

"ಅದೆಲ್ಲಾಗುತ್ತೆ. ಅದು ಸರಿಹೋಗುವುದು ಅನುಮಾನವೇ." ಎಲ್ಲೋ ಪೇಟೆಗೆ ಹೋಗಿದ್ದ ಕಿಟ್ಟ ಬಂದುದಕ್ಕೆ ಅಷ್ಟಾಗಿ ಗಮನ ಕೊಡದೆ ಶಾರದಮ್ಮ ಮಾತನ್ನು ಮುಂದುವರಿಸಿದರು. "ಬರದುವೇಳೆ ಸರಿ

ಹೋದರೂ ಅವನು ಇನ್ನು ಓದಿ ದೊಡ್ಡ ಕೆಲಸಕ್ಕೆ ಬರುವುದು ಅಸಂಭವ. ನಾವು ಸಾಕಿದ ಹುಡುಗರಲ್ಲಿ ಒಬ್ಬನ ಗತಿಯೇನೋ ಹೀಗಾದರೂ ಮಿಾನಿಯ ಸುಖಕ್ಕೂ ನಾವು ಕಂಟಕ ತರಬೇಕೆ? ಮದುವೆಯಾದ ಮೇಲೆ, ಏನಾದರೂ ಅಪಾಯವುಂಟಾದರೆ ಅವಳ ಅದೃಷ್ಟವೆನ್ನಬಹುದು. ಈಗೇನು ಕೊಳ್ಳೆ ಹೋಗಿದೆ? ಅವಳು ಜನ್ಮಾವಧಿ ಕುರುಡನೊಡನೆ ಸಂಸಾರ ಮಾಡಬೇಕೆ? ಅದೇ, ಕಿಟ್ಟನ ಸ್ನೇಹಿತನಿದ್ದಾನಲ್ಲ, ಅವನನ್ನು ಒಂದುಸಲ ಕರೆಸಿ ನೋಡಿ ಒಪ್ಪಿದರೆ ಅವನಿಗೇ ಕೊಡಬಹುದಲ್ಲ. ''

ಕಿಟ್ಟ ಇದನ್ನೆಲ್ಲಾ ಕೇಳಿದನು. ಅದುವರೆಗೂ ಅವನ ಭವಿಷ್ಯ ಅಷ್ಟುಸ್ಪಷ್ಟವಾಗಿ ಕಂಡಿರಲಿಲ್ಲ. ತಾನು ಕುರುಡ! ತನ್ನ ಜೀವನ ಬರಡು! ತನ್ನಿಂದ ಸಾಧ್ಯವಾಗುವುದು ಯಾವುದೂ ಇಲ್ಲ. ವಿದ್ಯೆಯ ಮಹತ್ವಾಕಾಂಕ್ಷೆಗಳು ಮಣ್ಣುಗೂಡಿದಂತೆಯೇ. ಮಿಾನಾಕ್ಷಿಯೊಡನೆ ಕಲ್ಪಿಸಿಕೊಂಡಿದ್ದ ತನ್ನ ಸಂಸಾರಚಿತ್ರವೂ ಮಣ್ಣುಗೂಡಬೇಕೆಂದರಿತನು. ಮೊದಲಿನಿಂದಲೂ ಸ್ವಾರ್ಥವನ್ನು ಹಿಂದೆ ತಳ್ಳಿ ಅಭ್ಯಾಸವಿದ್ದುದರಿಂದ ಈಗಲೂ ಚಿಕ್ಕಮ್ಮನ ವಾದ ಸಮಂಜಸವೆಂದೇ ಒಪ್ಪಿಕೊಂಡನು. ಕುರುಡನೊಡನೆ ಸಂಸಾರ! ಮಿಾನಿಗೆ ಅದೆಂದಿಗೂ ಸರಿಯಾದ ಜೀವನವಲ್ಲ. ಆದರೂ ಅಂದು ಮೊಳೆತ ಮಾತ್ಸರ್ಯ ಕುಡಿಯಿಡಲು ಪ್ರಾರಂಭಿಸಿತು. ಶಂಕರ! ತನ್ನ ಜೀವನದ ಸವಿಯನ್ನೆಲ್ಲಾ ಹೀರಲು ಗೆಳೆಯನೆಂದು ಮೋಸದಿಂದ ತನ್ನ ಹೃದಯವನ್ನು ಅಪ್ಪಿದ ವಿಷಲತೆಯವನು. ಆದರೂ ತನ್ನ ವಿಧಿಗೆ ಶಂಕರನೇಕೆ ಹೊಣೆಯಾದಾನೆಂದು ವಿವೇಕ ಉಸಿರುತ್ತಿತ್ತು.

ಮಿಾನಿ ಹಳ್ಳಿಯ ಹುಡುಗಿ. ಮುಚ್ಚುಮರೆಯನ್ನು ಅರಿಯಳು. ತಾನು ಕಿಟ್ಟನ ಹೆಂಡತಿಯಾಗುವೆನೆಂದು ಅವಳು ಖಂಡಿತಮಾಡಿಕೊಂಡಿದ್ದಳು. ಆದರೂ ಅವನನ್ನು ಹಾಸ್ಯಮಾಡುವುದನ್ನು ಬಿಟ್ಟಿರಲಿಲ್ಲ. ಅವನ ಮುಖಹೇಡಿತನವನ್ನು ಹಾಸ್ಯಮಾಡಿ ನಗುವಳು. ಓದಿನಲ್ಲಿ ಅವನಿಗಿದ್ದ ತೀವ್ರಾಸಕ್ತಿಯನ್ನೂ ಪರಿಹಾಸ್ಯಮಾಡುವಳು. ಕಿಟ್ಟನಿಗೆ ಅವಳ ಹಾಸ್ಯದಲ್ಲಿ ಆನಂದ. ತನ್ನ ನ್ಯೂನತೆಗಳನ್ನು ನೆನೆದು ಅವನೂ ನಗುವನು. ಆದರೆ ಈಗ ಮಿಾನಿಗೆ ಕಿಟ್ಟನನ್ನು ಕಂಡು ಕನಿಕರ. ಒಂದು ವಿಧವಾದ ರಕ್ಷಕಭಾವ. ಓದಿ ದೊಡ್ಡ ಕೆಲಸಕ್ಕೆ ಸೇರುವನೆಂಬ ಆಕಾಂಕ್ಷೆ

ಯಿದ್ದಾಗ ಅವನಲ್ಲಿರದಿದ್ದ ಅಕ್ಕರೆ, ಕುರುಡನಾಗಿ ದಿಕ್ಕಿಲ್ಲದೆ ಚಿಕ್ಕಪ್ಪನ ಮನೆಯನ್ನು ಸೇರಿದ ಕಿಟ್ಟನಲ್ಲಿ ಅವಳಿಗುಂಟಾಗಿದ್ದಿತು. ಮಿಾನಿಯ ಪರಿಹಾಸ ಕಡಮೆಯಾದುದೂ ಕಿಟ್ಟನಿಗೆ ನೋವನ್ನುಂಟುಮಾಡಿತ್ತು. ಮಿಾನಿಯ ಸಹಾನುಭೂತಿ ಅವನ ದುಃಖವನ್ನು ಹೆಚ್ಚುಮಾಡಿತ್ತು. ಮಣ್ಣುಗೂಡಿದ ಅವನ ಮಹತ್ವಾಕಾಂಕ್ಷೆಯಿಂದಾದ ಯಾತನೆಯ ಆಳ ವೆಷ್ಟೆಂಬುದು ತೀರ ಅರಿಯದಿದ್ದರೂ ಅಲ್ಪಸ್ವಲ್ಪವಾಗಿ ಮಿಾನಿಗೂ ತಿಳಿ ದಿತ್ತು. ಆ ಊಹೆಯಿಂದ ಅವಳ ಹೃದಯ ಮೆದುವಾಗಿಹೋಗಿತ್ತು.

ಕಿಟ್ಟ ತುಳಸಿಯ ಕಟ್ಟೆಯ ಮೇಲೆ ಕುಳಿತಿದ್ದನು. ಮಿಾನಿಯೂ ಅಲ್ಲಿಯೇ ಏನೋ ಹೊಲಿಯುತ್ತಾ ಕುಳಿತಿದ್ದಳು.

"ಕತ್ತಲಾಗುತ್ತಾ ಬಂತು, ಮಿಾನಾ. ಹೊಲಿದರೆ ಕಣ್ಣಿಗೆ ಆಯಾಸವಾಗುತ್ತೆ."

ಮಿಾನಿಗೆ ಬಹಳ ಕನಿಕರವಾಯಿತು. ಯಾವಾಗಲೂ ಕಿಟ್ಟನಿಗೆ ಕಣ್ಣಿನ ಚಿಂತೆಯೇ. ಮೃದುವಾಗಿ "ಇಲ್ಲ. ಹೊಲಿಯುವುದಿಲ್ಲ" ಎಂದಳು. ಒಂದಾನೊಂದು ಕಾಲದಲ್ಲಿ ಕಿಟ್ಟ ಹಾಗೇನಾದರೂ ಹೇಳಿದ್ದರೆ "ಅಹಾ! ನಿಮ್ಮ ಕಣ್ಣುಗಳಿರುವ ಚಂದಕ್ಕೆ ಇನ್ನೊಬ್ಬರಿಗೆ ಬುದ್ಧಿ ಹೇಳ ಬೇಕು" ಎಂದು ಗೇಲಿಮಾಡುತ್ತಿದ್ದಳು. ಕಿಟ್ಟ "ನೀನು ಬಹಳ ಒಳ್ಳೆ ಯವಳು ಮಿಾನಾ. ಮದುವೆಯಾದ ಮೇಲೂ ನಿನಗೆ ನನ್ನಲ್ಲಿ ಇದೇ ಅಭಿಮಾನವಿರಬೇಕು."

ಮಿಾನಿಯ ಮುಖ ಕೆಂಪಾಯಿತು. "ಥೂ ಏನೋ ಹುಡುಗಾಟ."

"ಹುಡುಗಾಟವೆಲ್ಲಿ ಬಂತು ಮಿಾನಾ. ನಾನು ಈಗ ಹುಡುಗನಲ್ಲ. ಬಹಳ ಮುದುಕನಾಗಿದ್ದೇನೆ. ಆಯುಸ್ಸು ಮಾತ್ರ ಮುಗಿಯುಲಿಲ್ಲ."

"ಕೆಟ್ಟಮಾತುಗಳನ್ನ ಆಡಬಾರದು."

"ಶಂಕರ ಬಹಳ ಒಳ್ಳೆಯ ಹುಡುಗ. ಬುದ್ಧಿವಂತ. ಅವನನ್ನು ಮದುವೆಯಾದರೆ ನೀನು ಸುಖವಾಗಿರುತ್ತೀ."

"ನಾನು ಯಾರನ್ನೂ ಮದುವೆಯಾಗುವುದಿಲ್ಲ."

ಶಂಕರ!—ಇದು ಮಾನಿಗೆ ಹೊಸ ವರ್ತಮಾನ. ಅದುವರೆಗೆ ಪತಿಯ ಸ್ಥಾನಕ್ಕೆ ಕಿಟ್ಟನೊಬ್ಬನಿಗೇ ಅಧಿಕಾರವೆಂದಿದ್ದ ಅವಳಿಗೆ ಈ ಹೊಸ ಆಲೋಚನೆ ತಲೆದೋರಿತು. ಅವಳು ಬೇರೆ ಹುಡುಗರನ್ನು ನೋಡಿಯೇ ಇರಲಿಲ್ಲ.

* * * *

"ನಿನ್ನ ಸ್ನೇಹಿತನಿಗೆ ಕಾಗದ ಬರಿ. ರಜದಲ್ಲಿ ಎರಡು ದಿನ ಬಂದು, ಹೋಗಲಿ. ಅವನಿಗೂ ಹೊಸಸ್ಥಳ. ನಿನಗೂ ಸ್ವಲ್ಪ ಬೇಜಾರು ಹೋಗುತ್ತೆ" ರಾಮಯ್ಯನವರು ಕಿಟ್ಟನಿಗೆ ಹೇಳಿದರು. ಕಿಟ್ಟನಿಗೆ ಅಳ ಬೇಕೋ ನಗಬೇಕೋ ತಿಳಿಯಲಿಲ್ಲ. ತನಗೇನೂ ತಿಳಿಯದೆಂದು ತನ್ನ ಚಿಕ್ಕಪ್ಪ ಹಾಗೆ ಹೇಳಿದ್ದನು. ಶಂಕರ ಬರುವುದು ತನ್ನ ಬೇಸರ ಕಳೆಯುವುದಕ್ಕೆ! ತನ್ನ ಸುಖಕ್ಕೆ ಕೊಡಲಿಯಾಗಿ ಅಲ್ಲ! ಒಂದು ಸಲ ವಿಧಿಯೊಡನೆ ಹೋರಾಡಿಬಿಡಬೇಕೆನ್ನಿಸಿತು. ಚಿಕ್ಕಪ್ಪನೊಡನೆ, "ಇಲ್ಲ, ಶಂಕರ ಬರಬೇಕಾಗಿಲ್ಲ. ಮಾನಿಯನ್ನು ನಾನೇ ಮದುವೆ ಮಾಡಿಕೊಂಡು ಏನಾಗುತ್ತೋ ನೋಡಿಬಿಡುತ್ತೇನೆ," ಎಂದು ಹೇಳೋಣವೆನ್ನಿಸಿತು.

ಆದರೆ ಒಳ್ಳೆಯ ಕಾಲದಲ್ಲಿಯೇ ಇರದ ದುರಭಿಮಾನ ಈಗೆಲ್ಲಿಂದ ಬರಬೇಕು? ಸುಖವನ್ನು ಹಿಡಿತದಲ್ಲಿ ಸಿಕ್ಕಿಸಿ ಹೀರುವ, ಬೇರೆಯವರ ನೆಮ್ಮದಿಯ ಚಿಂತೆಯಿಲ್ಲದೆ ತಮ್ಮ ಸುಖವನ್ನು ಸಾಧಿಸುವ ಅದೃಷ್ಟಶಾಲಿಗಳ ಗುಂಪಿಗೆ ಕಿಟ್ಟ ಸೇರಿರಲಿಲ್ಲ. ತ್ಯಾಗದಲ್ಲಿ ಸುಖವೆನ್ನುವ ಜಾತಿಗೆ ಸೇರಿದ್ದ ಕಿಟ್ಟನಿಂದ ವಿಧಿ ನಿರಂತರವೂ ಅವನ ಸುಖವೆಲ್ಲದರ ತ್ಯಾಗವನ್ನೇ ಬಯಸಿತು. ಈಗಲೂ ಹಾಗೆಯೇ ಆಯಿತು. ಕಿಟ್ಟ ಶಂಕರನಿಗೆ ಕಾಗದ ಬರೆಯಲು ಅವನು ಆಹ್ವಾನವನ್ನು ಸ್ವೀಕರಿಸಿದನು.

ಬಂದ ಸ್ವಲ್ಪ ದಿನಕ್ಕೇ ಶಂಕರನಿಗೆ ಬೇಸರವಾಯಿತು. ಕಿಟ್ಟ ಮೊದಲಿನ ಹಾಗಿರಲಿಲ್ಲ. ಏನೋ ಅಭಿಪ್ರಾಯವನ್ನು ಮುಚ್ಚಿಡುವುದಕ್ಕೆ ಪ್ರಯತ್ನಪಡುತ್ತಿರುವಂತಿತ್ತು. ಹರಿದ ಸ್ನೇಹದ ತಂತುವನ್ನು ತೇಪೆ ಹಾಕಿ ಸೇರಿಸಲಾಗಲಿಲ್ಲ.

ಮಾನಿ ಶಂಕರನಿಗೆ ಹೊಸವ್ಯಕ್ತಿಯಲ್ಲ. ಕಿಟ್ಟ ಅವಳ ವಿಚಾರವಾಗಿ ಎಷ್ಟೋ ಕಥೆಗಳನ್ನು ಹೇಳಿದ್ದನು. ಅವಳ ಚಿತ್ರ ವಾಸ್ತವ

ವಾಗಿಯೂ ಶಂಕರ ಕಲ್ಪಿಸಿಕೊಂಡಂತೆಯೇ ಇತ್ತು. ಕಿಟ್ಟನ ಪ್ರೇಮ ಚಿತ್ರವಾಗಿಯೇ ಇದ್ದಳು.

ತಾನು ಮರುದಿನ ಹೊರಡಬೇಕೆಂದೂ ಏನೋ ಅವಸರದ ಕೆಲಸ ವಿರುವುದಾಗಿಯೂ ಶಂಕರ ರಾಮಯ್ಯನವರಿಗೆ ತಿಳಿಸಿದನು. ಅಂದು ಸಂಜೆ ಸ್ನೇಹಿತರಿಬ್ಬರೂ ತಿರುಗಾಡಲು ಹೊರಟರು. ಒಂದು ಅಶ್ವತ್ಥಕಟ್ಟೆ. ಗಾಳಿ ಎಲೆಗಳನ್ನು ನಡುಗಿಸುತ್ತಾ ಜುಯ್ಯೆಂದು ಬೀಸುತ್ತಿತ್ತು. ಸುತ್ತ ಯಾರೂ ಜನರೇ ಇರಲಿಲ್ಲ. ಪ್ರಕೃತಿಯೇಲ್ಲಾ ಮೌನವಾಗಿತ್ತು. ಕಿಟ್ಟ "ಈ ಸಲ ನಿನಗೆ ನಮ್ಮೂರು ಬಹಳ ಬೇಸರವಾಯಿತಲ್ಲವೇ?" ಎಂದನು.

"ಬೇಸರವೇನು? ಏನೂ ಇಲ್ಲ."

"ಕುರುಡನ ಜೀವನ ಎಲ್ಲರಂತೆ ಅಲ್ಲ, ಶಂಕರಾ. ಈಗ ನಾನು ಬಹಳ ಬದಲಾಯಿಸಿದ್ದೇನೆ. ಕಣ್ಣಿಲ್ಲದ ಮೇಲೇನಿದೆ? ಆಸೆಯೆ; ಅಭಿಲಾಷೆಯೆ? ಯಾವ ವಿಷಯದಲ್ಲಿಯೂ ಉತ್ಸಾಹವಿಲ್ಲದೆ ಹೋಗಿದೆ. ಆದರೆ ಕ್ರಮೇಣ ಸರಿ ಹೋಗಬಹುದು. ಮೊದಲು ದಿನವಿದ್ದ ದುಃಖದ ತೀವ್ರತೆ ಈ ದಿನವಿದೆಯೇ?"

ಶಂಕರ ಸುಮ್ಮನೇ ಕೇಳುತ್ತಿದ್ದನು.

"ಇನ್ನೊಂದು ಪ್ರಾರ್ಥನೆಯಿದೆ, ಶಂಕರಾ. ಮಿಾನಿ ಬಹಳ ಒಳ್ಳೆಯ ಹುಡುಗಿ. ನಮ್ಮ ಚಿಕ್ಕಪ್ಪನಿಗೂ ಅದೇ ಆಸೆಯಿದೆ. ನೀನು ಅವಳನ್ನು ಮದುವೆಯಾಗಲು ಒಪ್ಪಬೇಕು." ಶಂಕರನಿಗೆ ಆಶ್ಚರ್ಯ ವಾಯಿತು. ಹಾಗೆ ಹೇಳಲು ಕಿಟ್ಟನಿಗೆ ಎಷ್ಟು ಕಷ್ಟವಾಯಿತೆಂಬುದು ಶಂಕರನಿಗೂ ಸ್ವಲ್ಪಮಟ್ಟಿಗೆ ತಿಳಿಯಿತು. ಮಿಾನಿಯಮೇಲೆ ಕಿಟ್ಟನಿಗೆಷ್ಟು ಪ್ರೇಮವಿತ್ತೆಂಬುದು ಶಂಕರನಿಗೆ ತಿಳಿದಿತ್ತು.

"ನೀನಲ್ಲವೆ, ಅವರನ್ನು ಮದುವೆಯಾಗುವುದು?"

ಕಿಟ್ಟನು ನೊಂದ ನಗುವನ್ನು ನಕ್ಕು, "ನನಗಿನ್ನೆಲ್ಲಿಯ ಮದುವೆ? ಎಲ್ಲಿಯ ಸಂಸಾರ? ಕಣ್ಣುಗಳೊಡನೆ ಆ ಆಸೆಗಳಿಗೂ ತಿಲಾಂಜಲಿಯಾಯಿತು. ದೇವರು ನನ್ನ ಮೇಲೆ ಹೊರಿಸಿರುವ ಭಾರವನ್ನು, ಪಾಪ, ಅವಳ

ಮೇಲೇಕೆ ಹೊರಿಸಲಿ? ನೀನು ಒಪ್ಪುವೆಯಾ?" ಶಂಕರ "ನೋಡೋಣ" ಎಂದನು. ಇಬ್ಬರೂ ಮಾತನಾಡುತ್ತಾ ಮನೆಗೆ ಬಂದರು. ಊಟವಾದ ಮೇಲೆ ರಾಮಯ್ಯನವರೂ ಪ್ರಸ್ತಾಪಮಾಡಿದರು. ಅವರಿಗೂ ಅದೇ ಉತ್ತರ ಹೇಳಿ ಮರುದಿನ ಶಂಕರ ಊರಿಗೆ ಹೋದನು.

ಮಿನಿಯೂ ಶಂಕರನ ನಡತೆಯನ್ನು ಮೆಚ್ಚಿದಳು. ಆದರೆ ಮರು ಕ್ಷಣವೇ ತನ್ನ ಬುದ್ಧಿಯನ್ನು ನಿಂದಿಸಿಕೊಂಡಳು. ಕಿಟ್ಟನನ್ನೇ ಮದುವೆ ಯಾಗುವೆನೆಂದಿದ್ದು ಈಗ ಅವನ ಕಣ್ಣು ಹೋದುವೆಂದು ಕೈಬಿಡುವುದೇ? ಎಂದಿಗಿಂತ ಈಗ ಅವನಿಗೆ ತಾನು ಹೆಚ್ಚು ಅಗತ್ಯವಲ್ಲವೆ?

ಶಂಕರ ಊರಿಗೆ ಹೋದಮೇಲೆ ಅವನ ತಂದೆ ಕಾಗದ ಬರೆದರು. ತಾವು ಇನ್ನು ಕೆಲವು ದಿನಗಳೊಳಗಾಗಿ ಮಿನಿಯನ್ನು ನೋಡಲು ಬರುವು ದಾಗಿಯೂ, ಜಾತಕಗಳು ಸರಿಹೋದರೆ ಸಂಬಂಧವೇರ್ಪಡಬಹುದೆಂದೂ ಬರೆದಿದ್ದರು.

ಕಿಟ್ಟನೇ ಮಿನಿಗೆ ಈ ಸಮಾಚಾರವನ್ನು ಹೇಳಿದನು. "ನಿನ್ನ ಮದುವೆಯಲ್ಲಿ ನನಗೇನು ಉಡುಗೊರೆ ಮಿನಾ?" ಎಂದು ಬಹು ಮೃದು ವಾಗಿ ಕೇಳಿದನು. ಅವಳ ಹೆಸರನ್ನು ಗಟ್ಟಿಯಾಗಿ ಉಚ್ಚರಿಸಿದರೆ ನೋವುಂ ಟಾಗುವುದೆನ್ನುವಷ್ಟು ಮೃದುವಾಗಿ ಕರೆದನು. ಮಿನಿ ತಲೆಯೆತ್ತಿದಳು.

"ನನಗೇನು ಗೊತ್ತು?"

"ಶಂಕರನನ್ನೇ ಕೇಳುತ್ತೇನೆ."

"ನಾನು ಬೇರೆ ಯಾರನ್ನೂ ಮದುವೆಯಾಗುವುದಿಲ್ಲ."

ಆ "ಬೇರೆ" ಎಂಬ ಮಾತು ಕಿಟ್ಟನ ಹೃದಯದಲ್ಲಿ ಸಂತೋಷದ ತೆರೆಗಳನ್ನೆಬ್ಬಿಸಿತು.

"ಮತ್ತೆ ಯಾರನ್ನು ಮಾಡಿಕೊಳ್ಳುವೆ?"

"ಯಾರನ್ನೋ."

"ನನ್ನನ್ನೇ?"

ಆಸೆ ಅವನ ಮಾತಿನಲ್ಲಿ ತುಂಬಿತ್ತು. ಮಿನಿ ನಿರುತ್ತರ.

"ಕುರುಡನನ್ನು ಕಟ್ಟಿಕೊಳ್ಳುವೆಯಾ?"

"ಒಂದು ವೇಳೆ ನಾನು ಕುರುಡಾಗಿದ್ದರೆ?" ಮಾನಿ ಕೇಳಿದಳು.

ಕಿಟ್ಟನ ಹೃದಯ ಉಲ್ಲಾಸದಿಂದ ಅರಳಿತು. ಕಣ್ಣು ಹೋದಂದಿನಿಂದ ಅವನು ಅಷ್ಟು ಸಂತೋಷವನ್ನು ಅನುಭವಿಸಿರಲಿಲ್ಲ.

ಶಂಕರನ ತಂದೆತಾಯಿಗಳು ಮಾನಿಯನ್ನು ನೋಡಲು ಬಂದಿದ್ದರು. ಮಾನಿ ಸುಂದರಿ. ಗುಣವತಿ, ಅವಳನ್ನು ಸೊಸೆಯಾಗಿ ಒಪ್ಪಲು ಅವರಿಗೆ ಬಹುಕಾಲ ಹಿಡಿಯಲಿಲ್ಲ. ಜಾತಕಗಳನ್ನು ನೋಡಿ ಊರಿನಿಂದ ಕಾಗದ ಬರೆಯುವುದಾಗಿ ಹೇಳಿ ಹೊರಟರು.

ಶಾರದಮ್ಮ ಮಾನಿಯನ್ನು ಕೇಳಿದರು.

"ಒಪ್ಪಿದೆಯಾ ನಿನ್ನ ಗಂಡನನ್ನ?"

"ಯಾರು?"

ಏನೂ ಅರಿಯದವಳಂತೆ ಮಾನಿ ಕೇಳಿದಳು.

"ಇದೇನೇ ಹೀಗೆ ಹೇಳುತ್ತೀ? ಶಂಕರನನ್ನು ನೋಡಲಿಲ್ಲವೆ? ನಮ್ಮ ಕಿಟ್ಟನ ಸ್ನೇಹಿತ."

ಮಾನಿ "ನಾನು ಅವರನ್ನು ಮದುವೆಯಾಗುವುದಿಲ್ಲ," ಎಂದಳು.

ಶಾರದಮ್ಮನಿಗೆ ಗಾಬರಿಯಾಯಿತು. ಮಾನಿಯದು ಒಂದೇ ಹಠ. ಕಡೆಗೆ, "ಮಹಾ ದೊಡ್ಡ ಮನುಷ್ಯಳು ನೀನು, ಹೇಳಿದಂತೆ ಕೇಳದಿದ್ದರೆ ಕೈಕಾಲು ಕಟ್ಟಿ ಮಣೆಯಮೇಲೆ ಕೂಡಿಸುತ್ತಾರೆ" ಎಂದರು. ಮಾನಿ ನಿರುತ್ತರ. ಅಷ್ಟುಹೊತ್ತಿಗೆ ರಾಮಯ್ಯನವರು ಬಂದರು.

"ನೋಡಿ. ಇವಳ ಹಾರಾಟ, ಮದುವೆ ಮಾಡಿಕೊಳ್ಳುವುದಿಲ್ಲವಂತೆ. ಶಂಕರನಂತಹ ಗಂಡು ಸಿಕ್ಕಬೇಕಾದರೆ ಪುಣ್ಯಮಾಡಿರಬೇಕು."

ರಾಮಯ್ಯನವರು ಮೃದುವಾಗಿ "ಯಾಕಮ್ಮಾ" ಎಂದರು. ಮಾನಿ ಕಣ್ಣುತುಂಬ ನೀರು ತುಂಬಿಕೊಂಡು ಸುಮ್ಮನೆ ನಿಂತಿದ್ದಳು.

ಶಾರದಮ್ಮನೇ ಪುನಃ ಹೇಳಿದರು. "ಇದೆಲ್ಲಾ ನಮ್ಮದೇ ತಪ್ಪು. ಹುಟ್ಟುತ್ತ ಮಕ್ಕಳಿಗೆ ಗಂಡ-ಹೆಂಡತಿ ಎಂದು ಹೆಸರಿಡುವುದು. ಅವರು

ಅದೇ ಭಾವನೆಯಲ್ಲಿ ಬೆಳೆಯುವುದು.'' ರಾಮಯ್ಯನವರ ಕಣ್ಣಲ್ಲೂ ನೀರು ಬಂತು. ಮಿಾನಿ ಖಂಡಿತವಾಗಿ ಹೇಳಿಬಿಟ್ಟಳು. "ನಾನು ಬೇರೆ ಯಾರನ್ನೂ ಮದುವೆಯಾಗುವುದಿಲ್ಲ.''

ಶಾರದಮ್ಮ "ಅವನಿಗೇ ಹೇಳಬಾರದೆ, ಹೇಳಿನೋಡೆಂದು, ಯಾವುದೊ ಹುಚ್ಚು ಕನಿಕರದಿಂದ ಹಠಮಾಡಿ ಜೀವನವನ್ನೇ ಹಾಳುಮಾಡಿ ಕೊಳ್ಳುತ್ತಾಳೆ. ಈ ಕನಿಕರವೆಷ್ಟು ದಿನ ಉಳಿಯುತ್ತೆ?''

ಕಣ್ಣು ಮಸಕಾದಂದಿನಿಂದ ಕಿಟ್ಟನಿಗೆ ಬೇರೊಂದು ಇಂದ್ರಿಯವೇ ಜನಿಸಿದಂತಿತ್ತು. ಮಾತಿನ ರೀತಿಯಲ್ಲಿ ಸ್ವಲ್ಪ ಬದಲಾವಣೆಯಾದರೂ ಜನರ ಅಭಿಪ್ರಾಯವನ್ನು ಊಹಿಸುವ ಶಕ್ತಿಯನ್ನು ಪಡೆದಿದ್ದನು. ಶಂಕರನ ತಂದೆತಾಯಿಗಳು ಬಂದು ಹೋದುದನ್ನು ಅವನು ಅರಿತಿದ್ದನು. ಅವರು ಮಿಾನಿಯನ್ನು ಒಪ್ಪಿದುದೂ ತಿಳಿದಿದ್ದಿತು. ಆದರೂ ಸ್ವಾರ್ಥದ ಕುಡಿ ನಿಶ್ಶೇಷವಾಗಿ ಅಳಿದಿರಲಿಲ್ಲ. ಮಿಾನಿಗೆ ತನ್ನಮೇಲೆ ಪ್ರೇಮವಿದ್ದು ತನ್ನನ್ನೇ ಮದುವೆಯಾದರೆ! ತನ್ನ ಪ್ರಯತ್ನಕ್ಕೂ ಮಿಾರಿ ಮಿಾನಿ ಹಠ ಮಾಡಿ ತನ್ನನ್ನೇ ಮದುವೆಯಾದರೆ! ವಿಧಿ ನೀಡಿದ ಇದೊಂದು ವರವನ್ನಾ ದರೂ ತಾನು ಬಾಚಿಕೊಂಡರೆ! ಉತ್ತರಕ್ಷಣದಲ್ಲಿ ವಿವೇಕ ಅದು ಸಾಧ್ಯ ವಿಲ್ಲವೆಂದಿತು. ಮಿಾನಿಯನ್ನು ಮದುವೆಯಾದರೆ ಅದು ವಿಷ ಬೆರತ ಸಂ ಸಾರವಾಗುವುದು. ಅವಳು ಹುಚ್ಚಿಯಂತೆ ಹಠಹಿಡಿದರೂ ಬುದ್ಧಿಹೇಳು ವುದು ತನ್ನ ಕರ್ತವ್ಯ.

ಕರ್ತವ್ಯ! ಹೆಜ್ಜೆ ಹೆಜ್ಜೆಗೂ ಕರ್ತವ್ಯ! ಕರ್ತವ್ಯಕ್ಕಾಗಿ ಎಷ್ಟು ಸುಖವನ್ನು ಬಲಿಕೊಡುವುದು? ಕರ್ತವ್ಯ ಬಹು ಕಠಿಣದೇವತೆ. ಆದರೆ ಅದನ್ನು ಮರೆಹೊಕ್ಕವರಿಗೆ ಪಶ್ಚಾತ್ತಾಪದ ದಾರುಣ ವೇದನೆಯಿಲ್ಲ. ಅದನ್ನು ನಡಸಿದವರಿಗೆ ಶಾಂತಿಯ ತಂಗದಿರು ಖಂಡಿತವಾಗಿ ದೊರೆಯು ವುದು. ಆದರೆ ನಿಸ್ಸಾರವಾದ ಶಾಂತಿ! ಜೀವನದ ತುಮುಲ ಯುದ್ಧದಲ್ಲಿ ಧುಮುಕಿ ಬರುವ ಕಷ್ಟವನ್ನೋ ಸುಖವನ್ನೋ ಅನುಭವಿಸುವುದರಲ್ಲಿರುವ ಸೊಬಗು ಶಾಂತಿಯ ನಿರಾಸೆಯಲ್ಲೆಲ್ಲಿದೆ? ಆದರೆ ತನ್ನ ಸುಖಕ್ಕಾಗಿ ಮಿಾನಿ ಯ ಸುಖವನ್ನು ಬಲಿಕೊಡುವ ಸ್ವಾತಂತ್ರ್ಯ ತನಗಿಲ್ಲ. ಮೊದಲೇ ಒಳ ಜೀವನದ ಮನುಷ್ಯ! ಆದರ್ಶಪ್ರಪಂಚದ ಮೇಲೆ ಕಣ್ಣು. ಕಣ್ಣು

ಹೋದಂದಿನಿಂದ ಹೊರಜೀವನ ಅವನ ಪಾಲಿಗೆ ಇಲ್ಲದಂತಾಗಿಯೇ ಹೋಗಿದ್ದಿತು. ಅವನಲ್ಲಿ ಕರ್ತವ್ಯದ ಕೂಗು ಗೆದ್ದುದರಲ್ಲಿ ಆಶ್ಚರ್ಯವೇನಿದೆ?

ಮನಸ್ಸಿನ್ನೂ ಅಸ್ವಸ್ಥವಾಗಿದ್ದಾಗಲೇ ರಾಮಯ್ಯನವರು ಅವನೊಡನೆ ಪ್ರಸ್ತಾಪಮಾಡಿದರು.

"ಮೀನಿ ಹಠ ಹಿಡಿದಿದ್ದಾಳೆ. ನಿನ್ನ ಕಣ್ಣು ಸರಿಯಾಗಿದ್ದರೆ ಬೇರೆ ಯೋಚನೆಗೇ ಹೋಗುತ್ತಿರಲಿಲ್ಲ. ಈಗ ಹಾಗೆ ಮಾಡುವುದು ನ್ಯಾಯವಲ್ಲ. ಏನೋ ಪೆಚ್ಚುಹುಡುಗಿ. ಕನಿಕರದಿಂದ ಹಾಗೆ ಆಡುತ್ತಾಳೆ. ನೀನಾದರೂ ಹೇಳಿ ನೋಡು."

ಕಿಟ್ಟನಿಗೆ ತಟ್ಟನೆ ಎಚ್ಚರವಾದಂತಾಯಿತು. ಸ್ವಾರ್ಥ ಹರಡಿದ್ದ ಮುಸುಕು ಹರಿಯಿತು. ಮೀನಿ ತನ್ನನ್ನು ಮದುವೆಯಾಗುವುದು ಪ್ರೇಮದಿಂದಲ್ಲ. ಕನಿಕರದಿಂದ, ಕನಿಕರ ಕ್ರಮೇಣ ಮರೆಯಾದರೆ ಉಳಿಯುವುದು ಬರಿಬಾಳು. ತನ್ನ ಭ್ರಾಂತಿಗೆ ತಾನೇ ನಕ್ಕನು.

ಕಾಳ್ಗತ್ತಲೆ. ಬೆಳಕಿನಲ್ಲಿಯೇ ಸರಿಯಾಗಿ ಕಣ್ಣುಕಾಣದ ಕಿಟ್ಟನಿಗೆ ಆ ನಟ್ಟಿರುಳಿನಲ್ಲಿ ಊರ ಕೆರೆಯ ದಡವನ್ನು ಸೇರುವುದು ಬಹು ಕಷ್ಟವಾಯಿತು. ಅವನ ಹೃದಯದಲ್ಲಿ ಮಾತ್ರ ಇನ್ನೂ ದಟ್ಟವಾದ ಇರುಳು ತುಂಬಿಕೊಂಡಿತ್ತು. ಕೆರೆಯ ದಡದಲ್ಲಿ ಕುಳಿತು ನೀರಿನಲ್ಲಿ ಕಾಲನ್ನು ಇಳಿಬಿಟ್ಟನು. ಬಹು ತಣ್ಣಗಿದ್ದಿತು. ಕಿಟ್ಟ ನಡುಗಿದನು. ವಿಧಿಯಮೇಲೆ ಬಹು ಆಕ್ರೋಶವುಂಟಾಯಿತು. ಜೀವನದ ಪ್ರಾತಃಕಾಲದಲ್ಲಿ ತಾನು ಊಹಿಸಿ ಹಿಗ್ಗುತ್ತಿದ್ದ ಮಹತ್ವಾಕಾಂಕ್ಷೆಗಳೇನು? ಈ ದಿನ ವಿಶಾಲ ಪ್ರಪಂಚದಲ್ಲಿ ಒಬ್ಬೊಂಟಿಗನಾಗಿ ಕೆರೆಯ ದಡದಮೇಲೆ ಕುಳಿತಿರುವ ತನ್ನ ಅವಸ್ಥೆಯೇನು? ವಿಧಿಯನ್ನು ಹಿಡಿತದಲ್ಲಿ ಸಿಕ್ಕಿಸಿ ತನ್ನ ಹಣೆಬರಹವನ್ನು ತಿದ್ದಿಸುವ ಹಾಗಿದ್ದರೆ!

Ah Love! Could thou and I with Fate conspire,
To grasp this sorry scheme of things entire,
Would not we shatter it to bits and then,
Remould it nearer to the Heart's desire.

ಸಾಧ್ಯವಿಲ್ಲ, ಒಂದೊಂದಾಗಿ ತನ್ನ ಸರ್ವಸ್ವವನ್ನೂ ವಿಧಿ ಕಿತ್ತು ಕೊಂಡಿತು. ಈಗ ಮಿಾಸಿಯ ಹಠದಿಂದ ತನ್ನ ಜೀವನವನ್ನೂ ಒಲಿಕೇಳು ತ್ತಿದ್ದಿತು. ಈಗಲೂ ಮಿಾಸಿಯನ್ನು ಒಪ್ಪಿಸಬಹುದೋ ಏನೋ! ಕಿಟ್ಟ ನಿಗೆ ಜೀವ ಭಾರವಾಗಿ ತೋರಿತು. ಒಬ್ಬರಿಗೆ ಸದಾ ಹೊರೆಯಾದ ಆಶಾರಹಿತವಾದ ಜೀವನವನ್ನು ಎಷ್ಟುಕಾಲ ಹೊತ್ತರೇನು? ತನಗೂ ಸುಖವಿಲ್ಲ. ಬೇರೆಯವರಿಗೂ ಇಲ್ಲ. ಜಲರಾಶಿ ಕಿಟ್ಟನ ದುಃಖಜೀವನ ವನ್ನು ಕೊನೆಗಾಣಿಸಿತು.

ಜನ ಕಾಲುಜಾರಿ ಬಿದ್ದನೆಂದರು. ಕಣ್ಣುಕಾಣದವನು ಅಷ್ಟು ದೂರ ಹೋದುದು ತಪ್ಪೆಂದರು. ರಾಮಯ್ಯನೂ ಶಾರದಮ್ಮನೂ ಮನಸ್ಸು ಸ್ವಲ್ಪ ಅಳುಕಿದರೂ ಆಕಸ್ಮಿಕಘಟನೆಯೆಂದು ಸಮಾಧಾನ ಮಾಡಿಕೊಂಡರು. ಮಿಾಸಿಗೆ ಮಾತ್ರ ಅದು ಆಕಸ್ಮಿಕವಲ್ಲವೆಂದು ಖಂಡಿ ತವಾಗಿ ತಿಳಿದಿತ್ತು. ಅವಳು ಶಂಕರನ ಹೆಂಡತಿಯಾಗಿ ಸುಖಸಂಸಾರ ದಲ್ಲಿದ್ದಾಗಲೂ ಕೂಡ ಕಿಟ್ಟನ ದುಃಖಜೀವನದ ದುರಂತ ಪರಿಣಾಮ ಸದಾ ಅವಳ ಕಣ್ಣಿಗೆ ಕಟ್ಟಿದಂತಿದ್ದಿತು.

# ಸೋದರಿಕೆ

ಮಾಧವರಾಯರು ಬೀದಿ ಬಾಗಿಲನ್ನು ತೆರೆದು ಪೇಟೆಯ ಕಡೆಗೆ ಹೊರಟರು. ಕೈಯಲ್ಲಿದ್ದ ಚೀಲವನ್ನು ಹೆಗಲ ಮೇಲೇರಿಸುವ ವೇಳೆಗೆ ರಂಗ ಎದುರಿಗೆ ಬಂದನು.

" ಏನು ಮಾವಾ ? ಪೇಟೆಗೆ ಹೊರಟಂತಿದೆ ? "

" ಓ ! ರಂಗನೇ ? ಈವತ್ತು ಕಾಲೇಜಿಲ್ಲವೇ ? "

" ಶನಿವಾರವಲ್ಲವೇ ? "

" ಹೌದು. ಮರೆತಿದ್ದೆ. ನಮ್ಮ ನಳಿನಿಯೂ ಮನೇಲೇ ಇದ್ದಾಳೆ. "

" ನಿಮ್ಮನ್ನೊಂದು ಮಾತು ಕೇಳಬೇಕು ಮಾವಾ. "

" ಏನಪ್ಪಾ ಅದು ? " ಕುತೂಹಲದಿಂದ ತಲೆಯೆತ್ತಿದರು.

ರಂಗನು ಸೊಗಸಾದ ಸೂಟನ್ನು ಧರಿಸಿದ್ದನು. ಕ್ರಾಪು ಬಾಚಿಕೊಂಡಿದ್ದನು. ಅವನು ಹಾಕಿದ್ದ ಗಂಧದ ವಾಸನೆ ಅರ್ಧ ಫರ್ಲಾಂಗು ಹರಡಿತ್ತು.

" ನೀವು ಮಗಳಿಗೆ ಮದುವೆ ಮಾಡುತ್ತೀರೆಂದು ಕೇಳಿದೆ. "

" ಅದರಲ್ಲಿ ಅಷ್ಟು ಆಶ್ಚರ್ಯವೇನು ? "

" ಏನೂ ಇಲ್ಲ. ವರ ಗೊತ್ತಾಯಿತೇ ? "

" ಸುಮಾರಾಗಿ ಗೊತ್ತಾದ ಹಾಗೆ. "

" ನೀವು ಖಂಡಿತ ಹೀಗೆ ಮಾಡಕೂಡದು ಮಾವಾ. ಮೊದಲಿನಿಂದಲೂ ನನಗೇ ಮಾತುಕೊಟ್ಟು ಈಗ ಹೀಗೆ ಮಾಡಬಹುದೆ ? "

" ಮಾತುಕೊಟ್ಟ ಜ್ಞಾಪಕವಿಲ್ಲವಲ್ಲಾ. "

" ಮಾತೆಂದರೆ ಆಣೆಯಿಡಬೇಕೆ ? ನಾನೂ ಅಮ್ಮನೂ ಇಬ್ಬರೂ ಖಂಡಿತ ಮಾಡಿಕೊಂಡಿದ್ದೆವು. ನೀವು ನಮಗೆ ತಿಳಿಸದೆ ಹೀಗೆಲ್ಲಾ ಏರ್ಪಾಟು ಮಾಡುವಿರಿ ಅಂದುಕೊಂಡಿರಲಿಲ್ಲ. "

ತೋರಗೊಡದಿದ್ದರೂ ಮಾಧವರಾಯರ ಕೋಪ ಏರುತ್ತಿತ್ತು.

“ ನೀವು ಏನೇನೋ ಅಂದುಕೊಂಡರೆ ನಾನೇನು ಮಾಡೋ ಕಾಗುತ್ತೆ? ”

“ ನಳಿನಿಯನ್ನು ನನಗೆ ಕೊಟ್ಟು ಮದುವೆಮಾಡುವುದಕ್ಕೆ ಏನು ಅಭ್ಯಂತರ ? ”

ಸೋದರಳಿಯನ ಉದ್ಧಟತನವನ್ನು ಸಹಿಸಲಾರದೆ ಮಾಧವರಾಯರು “ ಅಭ್ಯಂತರವೆ? ನಾಚಿಕೆಯಿಲ್ಲದೆ ಕೇಳುವೆಯಲ್ಲ! ”

“ ಇರಬಹುದು ; ಒಂದೆರಡು ಸಲ ತೇರ್ಗಡೆಯಾಗದೆ ಇರಬಹುದು. ಆಗುತ್ತೆ. ಒಂದೆರಡು ವರ್ಷ ನಿಧಾನವಾದರೇನಂತೆ? ಇಷ್ಟಾಗಿ ನಾವಷ್ಟು ಬಡವರಲ್ಲ. ನಾನು ಸಂಪಾದಿಸಿಯೇ ತಿನ್ನಬೇಕಾಗಿಲ್ಲ. ಅಪ್ಪ ಸಂಪಾದಿಸಿದ್ದಾನೆ ! ”

“ ನಿಮ್ಮಪ್ಪನೇ ! ಆ ಅಪ್ಪನ ಮಗನೆಂದೇ ಅಭ್ಯಂತರ. ಪಾಪ ! ಶಾಂತೆ ಅವನನ್ನು ಕಟ್ಟಿಕೊಂಡು ಕಷ್ಟಪಟ್ಟದ್ದನ್ನು ನೋಡಿ ನೋಡಿ ಸಾಕಾಗಿತ್ತು. ಅವನು ಹೋದನಲ್ಲಾ ಎಂದು ನೆಮ್ಮದಿಯಾಗಿರದೆ, ನಳಿನಿಯನ್ನು ನಿನಗೆ ಕೊಟ್ಟು ಜೀವಮಾನವೆಲ್ಲಾ ಕೊರಗಬೇಕೆ ? ಸಾಕಪ್ಪಾ, ನಿಮ್ಮ ಸಹವಾಸ. ”

ಕೋಪದ ಭರದಲ್ಲಿ, ತಾವಾಡಬೇಕೆಂದಿದ್ದ ಮಾತುಗಳಿಗಿಂತ ಹೆಚ್ಚು ಮಾತುಗಳನ್ನಾಡಿಬಿಟ್ಟಿದ್ದರು. ರಂಗನಾಥನಿಗೂ ಬಹಳ ಕೋಪಬಂದು ಮುಖವೆಲ್ಲಾ ಕೆಂಪಾಯಿತು. ಹಲ್ಲುಗಳನ್ನು ಕಚ್ಚಿಕೊಂಡೇ “ ನೋಡೋಣ ಮಾವಾ ! ನಳಿನಿಯನ್ನು ನಾನೇ ಮದುವೆಯಾಗುತ್ತೇನೆ. ಆದಾಗದಿದ್ದರೆ ನನಗೆ ಕೊಡಲಿಲ್ಲವಲ್ಲಾ ಎಂದು ನೀವು ಬದುಕಿರುವಷ್ಟು ದಿನವೂ ಗೋಳಾಡುವಂತೆ ಮಾಡುತ್ತೇನೆ. ” ಎಂದು ಹೇಳಿ ಹೊರಟು ಹೋದ.

ಮಾಧವರಾಯರು ಪೇಟೆಯಲ್ಲಿ ತರಕಾರಿಯನ್ನೇನೋ ಕೊಂಡು ಕೊಂಡರು. ಆದರೆ ಅವರ ಮನಸ್ಸು ಎಲ್ಲೋ ಸಂಚರಿಸುತ್ತಿತ್ತು. ಶಾಂತೆ ಅವರ ಒಬ್ಬಳೇ ತಂಗಿ. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದು ಕೊಂಡುದರಿಂದ ಅವಳ ಲಗ್ನವನ್ನೂ ಮಾಧವರಾಯರೇ ಮಾಡಿದ್ದರು.

ಆದರೆ ಅದು ಸುಖ ಸಂಸಾರವಾಗಲಿಲ್ಲ. ಶ್ರೀನಿವಾಸರಾಯರ ಅನೇಕ ದುರ್ವ್ಯಸನಗಳಿಗೆ ಕೊರಗುವುದೇ ಶಾಂತೆಯ ಕೆಲಸವಾಗಿತ್ತು. ಆಕೆ ಹೆಚ್ಚಾಗಿ ಬಾಯಿಬಿಡದಿದ್ದರೂ ಮಾಧವರಾಯರಿಗೂ ಆ ಗೋಳು ತಕ್ಕ ಮಟ್ಟಿಗೆ ತಿಳಿದಿತ್ತು. ಆತ ಹೋದಮೇಲೆ ತಂಗಿಯ ಮಗನೆಂದು ರಂಗ ನಾಥನಲ್ಲಿ ವಿಶ್ವಾಸನ್ನೇನೊ ಇಟ್ಟಿದ್ದರು. ಆದರೂ ಬರಬರುತ್ತ ಅವನೂ ತಂದೆಯ ಹಾದಿಯನ್ನೇ ಹಿಡಿಯುವಂತೆ ತೋರಿತು. ಮೆಡಿಕಲ್ ಕಾಲೇಜನ್ನು ಸೇರಿ ನಾಲ್ಕುವರ್ಷಗಳಾಗಿದ್ದರೂ ಇನ್ನೂ ಎರಡನೆಯ ತರ ಗತಿಯಿಂದ ಮುಂದಕ್ಕೆ ಹೆಜ್ಜೆಯನ್ನಿಟ್ಟಿರಲಿಲ್ಲ. ತಂದೆಯ ಆಸ್ತಿ ಬೇಕಾದ ಷ್ಟಿದ್ದುದರಿಂದ ಬೇರೆ ವಿಲಾಸವನ್ನೂ ಅವನು ಒಲ್ಲೆನೆಂದಿರಲಿಲ್ಲ. ಆದುದ ರಿಂದ, ಚಿಕ್ಕಂದಿನಲ್ಲಿ ಒಂದೊಂದು ಸಲ ಅವನನ್ನು ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಯೋಚಿಸಿದ್ದರೂ ಈಚೆಗೆ ಮಾಧವರಾಯರು ಆ ಮಾತನ್ನು ಬಿಟ್ಟೇ ಬಿಟ್ಟಿದ್ದರು.

" ಒಳಕ್ಕೆ ಬಂದು ಹೋಗಣ್ಣಾ " ತೋಟದಲ್ಲಿ ತಿರುಗುತ್ತಿದ್ದ ಶಾಂತೆ ಕೂಗಿದಳು.

ತಂಗಿಯ ಮನೆ ಹತ್ತಿರವಾಯಿತೆಂಬ ಪರಿವೆ ಮಾಧವರಾಯರಿಗಿರ ಲಿಲ್ಲ. ಬೆಚ್ಚಿ, ಒಳಗೆ ಹೋದರು. ಆಗಿನ ಮನಸ್ಸಿನ ಸ್ಥಿತಿಯಲ್ಲಿ ತಂಗಿ ಯೊಡನೆ ಕುಳಿತು ಮಾತನಾಡಲು ಅವರಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ನೋಡಿದಮೇಲೆ ಹೋಗದಿರುವುದು ಹೇಗೆ? " ಇಷ್ಟು ಬಿಸಿಲಿನಲ್ಲಿ ಎಲ್ಲೋ, ಹೊರಟಿದ್ದೀಯಲ್ಲಾ? "

"ಏನೋ ರಜಾ ಇತ್ತು. ಅಷ್ಟು ತರಕಾರಿ ತರೋಣವೆಂದು ಬಂದೆ."

ಶಾಂತೆ ಕಣ್ಣೊರಸಿಕೊಳ್ಳುತ್ತಾ " ರಂಗನಾಥ ಬಂದಿದ್ದ " ಎಂದಳು.

ಮಾಧವರಾಯರು ಸುಮ್ಮನಿದ್ದರು.

"ನಿನ್ನನ್ನು ನೋಡಿದ್ದನಂತೆ! ನಳಿನಿಗೆ ವರನನ್ನು ಹುಡುಕುತ್ತಿದ್ದೀ ಯಂತೆ."

"ಇನ್ನೇನು ಗೊತ್ತಾದ ಹಾಗೇ."

" ನೀನು ಹೀಗೆ ಮಾಡಬಹುದೇನಣ್ಣಾ? ನನ್ನ ಸೊಸೆಯಾಗುವ ಳೆಂದು ಆಸೆಯಿಟ್ಟುಕೊಂಡಿದ್ದೆನಲ್ಲಾ. "

" ಶಾಂತಾ, ನೀನೇ ಹೀಗೆನ್ನಬಹುದೆ? ತಿಳಿದೂ, ತಿಳಿದೂ. "

"ನೀನೇ ಹೀಗೆಂದರೆ ಅವನಿಗೆ ಹೆಣ್ಣುಕೊಡುವವರು ಯಾರಣ್ಣಾ?"

ಮಾಧವರಾಯರು ತುಸುಕೋಪದಿಂದ " ಅದಕ್ಕೆ ನನ್ನ ಮಗಳ ಕೊರಳು ಕುಯ್ಯಬೇಕೆನ್ನುವೆಯಾ? "

ಶಾಂತೆಯ ಕಣ್ಣುಗಳಲ್ಲಿ ಧಾರಾಳವಾಗಿ ನೀರು ಸುರಿಯಲಾರಂಭಿಸಿತು. " ಅದೇಕೆ ಹಾಗೆನ್ನುತ್ತೀಯಣ್ಣಾ? "

" ನಿನಗೆ ಹೊಸದಾಗಿ ಹೇಳಬೇಕೆ, ಶಾಂತಾ? ನೀನು ಪಟ್ಟ ಕಷ್ಟ ಸಾಲದೆ? ಅಪ್ಪನಂತೆ ಮಗ! ಇವನಿಗೆ ನಳಿನಿಯನ್ನು ಕೊಟ್ಟು ಮದುವೆ ಮಾಡಿದರೆ ಅವಳ ಗೋಳನ್ನು ನೋಡಿ ನನ್ನ ಜತೆಗೆ ನೀನೂ ಅಳಬೇಕಾಗುತ್ತೆ. "

" ಹೋದವರು ಹೋದರು, ಅವರನ್ನೇಕೆ ಬಯ್ಯುತ್ತೀ? ಏನೋ, ನನ್ನ ಅದೃಷ್ಟ ಹಾಗಿತ್ತು. ಇವಳ ಅದೃಷ್ಟ ಚನ್ನಾಗಿದ್ದು ರಂಗನಾಥ ಸುಖವಾಗಿಯೇ ಬಾಳಬಹುದು. "

ಮಾಧವರಾಯರಿಗೆ ಪುನಃ ಕೋಪ ಮಿತಿಮೀರಿತು. "ಅದೃಷ್ಟವಂತೆ, ಅದೃಷ್ಟ! ಏನೋ, ಆ ಚಂಡಾಲನ ಕುಲಗೋತ್ರಗಳು ತಿಳಿಯದೆ ನಿನ್ನನ್ನು ಮದುವೆ ಮಾಡಿಕೊಟ್ಟು ಬೇಕಾದಷ್ಟು ಕಣ್ಣೀರನ್ನುಂಡೆ. ತಿಳಿದೂ ತಿಳಿದೂ ಈ ಘಾತುಕನಿಗೆ ನಳಿನಿಯನ್ನು ಕೊಡಲಾರೆ. ಹಗಲು ಕಂಡ ಭಾವಿಗೆ ರಾತ್ರಿ ಅವಳನ್ನ ನೂಕಲೆ? "

" ಹೋಗಲಿ. ಸ್ವಲ್ಪಕಾಫಿಯನ್ನು ತೆಗೆದುಕೊಂಡು ಹೋಗಣ್ಣಾ."

" ಕಾಫಿಯೂ ಬೇಡ, ಎಂಥಾದ್ದೂ ಬೇಡ " ಎಂದು ರಭಸದಿಂದ ಹೊರಟೇ ಬಿಟ್ಟರು. ಹೊರಬಾಗಿಲಿಗೆ ಹೋಗುವವೇಳೆಗೆ ಸ್ವಲ್ಪ ಕೋಪ ಇಳಿಯಲು ನಿಧಾನವಾಗಿ ಹಿಂದಿರುಗಿದರು. " ಪಾಪ! ಶಾಂತಳ ತಪ್ಪೇನು? ಪಡಬಾರದ ಕಷ್ಟಗಳನ್ನೆಲ್ಲಾ ಅನುಭವಿಸಿ ಆಯಿತು. ಮಗನೆಂದರೆ ಅಭಿಮಾನವಿಲ್ಲದಿರುವುದೆ?" ಎಂದುಕೊಂಡರು. ಒಳಕ್ಕೆ ಹೋಗಿದ್ದ ತಂಗಿ

ಯನ್ನು "ಶಾಂತಾ! ಕೊಡಮ್ಮಾ ಕಾಫಿ" ಎಂದು ಕುರ್ಚಿಯಮೇಲೆ ಕುಳಿತರು.

* * * * *

ನಳಿನಿ ತಲೆ ಬಾಚಿಕೊಂಡು, ಜಡೆಯ ಕೊನೆಗೆ ರಿಬ್ಬನ್ ಕಟ್ಟುತ್ತಿದ್ದಳು. ಮಾಧವರಾಯರು ಪಕ್ಕದ ಕೋಣೆಯಲ್ಲಿ ಮಲಗಿಕೊಂಡು ವೃತ್ತಪತ್ರಿಕೆಯನ್ನು ಓದುತ್ತಿದ್ದರು. "ಅಪ್ಪಾ, ಸಾಯಂಕಾಲ ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವವಂತೆ, ನಾನೂ ಹೋಗಿ ಬರಲೆ?"

"ಮೆಡಿಕಲ್ ಕಾಲೇಜಿಗೂ ನಿನಗೂ ಏನು ಸಂಬಂಧ?"

"ರಂಗ ಕರೆದ, ನಾಟಕವಿದೆಯಂತೆ. ಹೋಗಿ ಬರಲೆ?"

"ಬೇಡ. ಖಂಡಿತ ಬೇಡ."

"ಏಕಪ್ಪಾ?" ನಳಿನಿಯ ಧ್ವನಿಯಲ್ಲಿ ಅಳುವಿನ ಪ್ರಾರಂಭವಿತ್ತು.

"ಹೋಗಬೇಡವೆಂದರೆ ಹೋಗಕೂಡದು. ಎಲ್ಲಾದಕ್ಕೂ ಕಾರಣ ಹೇಳುವುದಕ್ಕಾಗುವುದಿಲ್ಲ."

ರಂಗ ಕಾರ್ಯಕ್ರಮವನ್ನು ಇಷ್ಟುಬೇಗ ಪ್ರಾರಂಭಿಸುವನೆಂದು ಮಾಧವರಾಯರು ತಿಳಿದಿರಲಿಲ್ಲ. ನಳಿನಿಗೆ ಅಸಮಾಧಾನವಾಯಿತು. ತಿಳಿದೂ ತಿಳಿಯದ ವಯಸ್ಸು. ತನ್ನ ಮಾತಿಗೆ ಯಾರಾದರೂ ಬದಲಾಡಿದರೆ ಸ್ವಾತಂತ್ರ್ಯಕ್ಕೆ ಕುಂದುಂಟಾಯಿತೆಂದುಕೊಳ್ಳುವ ಕಾಲ. ಅದರಲ್ಲೂ ಮಾಧವರಾಯರು ಸಾಧಾರಣವಾಗಿ ಯಾವುದಕ್ಕೂ ಬೇಡವೆನ್ನುತ್ತಿರಲಿಲ್ಲ.

"ಹಾಗಾದರೆ ಬರುವುದಿಲ್ಲವೆಂದು ಹೇಳಲೆ?" ಎಂದು ಗಡುಸಾಗಿ ಕೇಳಿದಳು.

"ಏನೂ ಬೇಡ. ನಾನೇ ಹೇಳುತ್ತೇನೆ."

ನಳಿನಿಗೆ ಅರ್ಥವಾಗಲಿಲ್ಲ. ಬಿಡಿಸಿ ಹೇಳಲು ಮಾಧವರಾಯರಿಗೆ ಇಷ್ಟವಿಲ್ಲ. ಒಳಗಿನಿಂದ ಸುಂದರಮ್ಮನವರು "ನಳಿನೀ" ಎಂದು ಕೂಗಿದರು. ನಳಿನಿ ಒಳಕ್ಕೆ ಹೋದಳು. "ಬೇಗ ತಿಂಡಿ ತಿನ್ನು, ಎಲ್ಲೋ ಹೋಗುತ್ತೇನೆಂದೆ?"

“ ಇಲ್ಲ. ಅಪ್ಪ ಬೇಡವೆಂದರು. ” ತಡೆದಿದ್ದ ಕಣ್ಣೀರು ಧಾರಾಕಾರವಾಗಿ ಇಳಿಯಿತು. ಸುಂದರಮ್ಮನಿಗೂ ಅರ್ಥವಾಗಲಿಲ್ಲ.

“ ಹೋಗದಿದ್ದರೇನು? ತಿಂಡಿ ತಿನ್ನು ” ಎಂದರು.

“ ನನಗೇನೂ ಬೇಡ ” ಎಂದು ನಳಿನಿ ತನ್ನ ಕೊಠಡಿಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡಳು.

ಸುಂದರಮ್ಮ ಕಾಫಿಲೋಟವನ್ನು ಹಿಡಿದುಕೊಂಡು ಮಾಧವರಾಯರ ಬಳಿಗೆ ಹೋದರು. “ ಅದೇಕೆ ನಳಿನಿಯನ್ನು ಕಾಲೇಜಿಗೆ ಹೋಗಬೇಡವೆಂದಿರಂತೆ? ”

ಮಾಧವರಾಯರಿಗೆ ತೀರ ಬೇಜಾರಾಯಿತು. “ ಹೌದು, ಅಂದೆ. ”

“ ಅದೇಕೆ? ”

“ ಏತಕ್ಕೋ. ”

“ ಪಾಪ! ತುಂಬಾ ಮನಸ್ಸಿಗೆ ಹಚ್ಚಿಕೊಂಡಿದ್ದಾಳೆ. ಒಂದು ಘಂಟೆಯಿಂದ ಸಿದ್ಧವಾಗುತ್ತಿದ್ದಾಳೆ. ಇಷ್ಟಾಗಿ ರಂಗನ ಜತೆಯಲ್ಲಿ ಹೋಗುತ್ತಾಳೆ, ಬರುತ್ತಾಳೆ. ”

“ಅದಕ್ಕೇ ಬೇಡವೆಂದಿದ್ದು. ”

“ ನಿಮ್ಮ ತಂಗಿ ಮಗನಲ್ಲವೆ? ”

“ ಅಲ್ಲ! ನಮ್ಮ ಭಾವನ ಮಗ. ” ಏನೋ ನಡೆದಿರಬೇಕೆಂದು ಸುಂದರಮ್ಮ ಆ ಮಾತನ್ನು ಬಿಟ್ಟು “ಜಾತಕ ಸರಿ ಹೋಯಿತೆ?” ಅಂದರು.

ಮಾಧವರಾಯರು ಸ್ವಲ್ಪ ಸಮಾಧಾನವಾಗಿ “ಹೌದಂತೆ, ಈವತ್ತು ಕಾಗದ ಬಂತು. ”

“ ಹಾಗಾದರೆ ಬೇಗ ಲಗ್ನ ಇಡಿಸಿ ಬಿಡಿ. ಏತಕ್ಕೆ ಸಾವಕಾಶ ಮಾಡಬೇಕು? ”

“ ನಾನೂ ಹಾಗೇ ಅಂದುಕೊಂಡೆ. ”

ಬೀದಿಬಾಗಿಲು ತೆರೆದ ಸದ್ದಾಯಿತು. ನಳಿನಿ ಕೋಣೆಯ ಕಿಟಿಕಿಯಿಂದ ನೋಡಿದಳು. ಮಾಧವರಾಯರು ಬೇಗ ಎದ್ದು ಹೋಗಿ ರಂಗನನ್ನು ನೋಡಿ “ ಏನು? ” ಎಂದರು.

" ನಳಿನಿ ಕಾಲೇಜ್ ಡೇಗೆ ಬರುತ್ತೇನೆಂದಿದ್ದಳು. "

ಸೊಗಸಾದ ಉಡುಪನ್ನು ಧರಿಸಿದ್ದ ಅವನನ್ನು ಸೀಳಬೇಕೆನ್ನು ವಷ್ಟು ಆಕ್ರೋಶ ಮಾಧವರಾಯರಿಗುಂಟಾಯಿತು. " ಇಲ್ಲ, ಬರುವು ದಿಲ್ಲ. "

" ಏಕೆ? ಅವಳಿಗೆ ಮೈಯಲ್ಲಿ ಸರಿಯಾಗಿಲ್ಲವೆ? "

ರಂಗನ ಮುಖದಮೇಲೆ ತಿರಸ್ಕಾರದ ನಗೆ ಮೂಡಿತು. ಮಾಧವ ರಾಯರಿಗೆ ಸಹಿಸಲಾಗಲಿಲ್ಲ. ಇವನೊಡನೆ ಸಭ್ಯತೆಯೇನು ಎನಿಸಿ, " ಇಲ್ಲ, ಸ್ವಸ್ಥವಾಗಿದ್ದಾಳೆ, ನಿನ್ನೊಡನೆ ಕಳುಹಿಸಲಾಗುವುದಿಲ್ಲ. ನಾನೇ ಬೇಡವೆಂದೆ " ಎಂದರು.

ರಂಗ ಮಾತನಾಡದೆ ಹೊರಟು ಹೋದ. ಆದರೆ ತಿರಸ್ಕಾರದ ನಗೆಯಿನ್ನೂ ಮರೆಯಾಗಿರಲಿಲ್ಲ.

* * * * *

ರಾಮಚಂದ್ರನೂ ರಂಗನ ಸಹಪಾಠಿಯೇ. ಕಾಲೇಜನ್ನು ಇಬ್ಬರೂ ಒಟ್ಟಿಗೆ ಸೇರಿದರೂ, ರಂಗ ಮೊದಲನೆಯ ತರಗತಿಯನ್ನು ದಾಟುವವೇಳೆಗೆ ರಾಮಚಂದ್ರ ಕಾಲೇಜನ್ನೇ ದಾಟಿದ್ದನು. ರಾಮ ಚಂದ್ರನನ್ನು ಕಂಡರೆ ರಂಗನಿಗೆ ತಿರಸ್ಕಾರ. " ಪುಸ್ತಕದ ಹುಳು. ಅದಕ್ಕೆ ಪ್ರಪಂಚಜ್ಞಾನವೇನಿದೆ?" ಎನ್ನುವನು. ರಾಮಚಂದ್ರ ವ್ಯಾಸಂಗ ಮುಗಿದ ಮೇಲೆ ಹಾಸನದಲ್ಲಿ ವೈದ್ಯ ವೃತ್ತಿಯನ್ನಾರಂಭಿಸಿದನು. ಅವನಿಗೆ ಈ ಲೋಕದಲ್ಲಿ ಬಂಧುವೆಂದರೆ ಇದ್ದುದು ತಾಯಿ. ತನ್ನ ವ್ಯಾಸಂಗಕ್ಕೋ ಸ್ಕರ ಯಾವ ಕಷ್ಟವನ್ನೂ ಲೆಕ್ಕಿಸದ ಆ ತಾಯಿಯನ್ನು ಎಷ್ಟು ಸುಖ ವಾಗಿಟ್ಟುಕೊಂಡರೂ ತನ್ನ ಋಣ ತೀರುವುದಿಲ್ಲವೆಂದು ಅವನ ನಂಬಿಕೆ. ತಾನು ಮದುವೆಯಾಗಲಿಲ್ಲವೆಂದು ಹಗಲಿರುಳೂ ಆಕೆ ಚಿಂತಿಸುತ್ತಿದ್ದುದನ್ನು ನೋಡಿ ಅವನು ಬೇಗನೆ ಮದುವೆಗೆ ಒಪ್ಪಿದನು. ನಳಿನಿ ಬಂದಮೇಲೆ ತನ್ನ ಅದೃಷ್ಟವನ್ನು ಮೆಚ್ಚಿಕೊಂಡನು. ಮೊದಲಿನಿಂದಲೂ ಸನ್ಯಾಸಿ ಯಂತೆ ಸುಖಕ್ಕಾಸೆಪಡದೆ ವ್ಯಾಸಂಗವನ್ನೇ ತಪಸ್ಸಾಗಿಮಾಡಿಕೊಂಡು ಬಂದಿದ್ದನು. ಪ್ರತಿಫಲವಾಗಿ ಪರೀಕ್ಷೆಗಳಲ್ಲೆಲ್ಲಾ ಚೆನ್ನಾಗಿ ತೇರ್ಗಡೆ ಹೊಂದಿದನು. ಹಾಸನದಲ್ಲಿ ನೆಲಸಿದಮೇಲೂ ಅವನು ಮನಸ್ಸಿಟ್ಟು

ಕೆಲಸಮಾಡುತ್ತಿದ್ದನು. ಜತೆಗೆ ಅವನ ಸರಳ ಸ್ವಭಾವವನ್ನೂ ಜನರು ಮೆಚ್ಚಿದ್ದುದರಿಂದ ಹಣದ ಅಭಾವವೇನೂ ಇರಲಿಲ್ಲ. ನಳಿನಿ ಅವನ ಜೀವನವನ್ನು ಹಗುರವಮಾಡಿದ್ದಳು. ಮೊದಲಿನಂತೆಯೇ ರೋಗಿಗಳ ಉಪಚಾರದಲ್ಲಿ ಶ್ರದ್ಧೆಯಿದ್ದರೂ, ಅದೇ ಜೀವನದ ಗುರಿಯೆಂಬ ಭಾವನೆ ಮರೆಯಾಗಿ ಕರ್ತವ್ಯದ ಕಾಠಿಣ್ಯ ಕಡಮೆಯಾಯಿತು. ಅದುವರೆಗೂ ಅವನು ಕಾಣದಿದ್ದ ಸವಿಯನ್ನು ನಳಿನಿ ಜೀವನದಲ್ಲಿ ತೋರಿಸಿಕೊಟ್ಟಳು. ನಳಿನಿಯೂ ಸುಖವಾಗಿದ್ದಳು. ಅವಳಿಗಿದ್ದ ಅಸಮಾಧಾನವೆಂದರೆ ರಾಮ ಚಂದ್ರ ತಾಯಿಗೆ ತೋರಿಸುತ್ತಿದ್ದ ತೀವ್ರ ವಿಧೇಯತೆ. ಆಕೆಯ ಒಂದು ಮಾತಿಗಾಗಿ ಯಾವ ಕೆಲಸವನ್ನಾದರೂ ನಿಲ್ಲಿಸುವನು. ಅದರಿಂದ ನಳಿನಿಗೆ ಸ್ವಲ್ಪ ತಿರಸ್ಕಾರ ಬೆರೆತ ಬೇಸರ. ಅವನು ತನ್ನ ಮಾತಿನಂತೆ ನಡೆದರೆ ಅದು ರಸಿಕತೆ! ತಾಯಿಯಲ್ಲಿ ವಿಶ್ವಾಸವಿಟ್ಟರೆ "ಇವನೇನು ಎಳೆ ಮಗುವೆ; ತಾಯಿಗೆ ಹೀಗೆ ಹೆದರುವುದಕ್ಕೆ?" ಎಂಬ ತಿರಸ್ಕಾರ.

ನಳಿನಿ ಬಾಗಿಲಲ್ಲಿ ನಿಂತು ರಾಮಚಂದ್ರನ ಬರವನ್ನೇ ಎದುರು ನೋಡುತ್ತಿದ್ದಳು. ಆ ದಿನ ಸಿನಿಮಾಗೆ ಹೋಗುವುದೆಂದು ಮೊದಲೇ ನಿಶ್ಚಯವಾಗಿತ್ತು. ರಾತ್ರಿಯ ಅಡಿಗೆಯನ್ನು ಬೇಗ ಮಾಡಿಟ್ಟು, ತಿಂಡಿ ಕಾಫಿಯನ್ನು ಸಿದ್ಧಪಡಿಸಿ ಬಾಗಿಲಲ್ಲಿ ನಿಂತಿದ್ದಳು. ದೂರದಲ್ಲಿ ರಾಮ ಚಂದ್ರನ ಬೈಸಿಕಲ್ಲನ್ನು ನೋಡಿ ಒಳಗೆ ಹೋಗಿ ಕನ್ನಡಿಯ ಮುಂದೆ ನಿಂತು ಕುಂಕುಮವನ್ನು ಸರಿಪಡಿಸಿಕೊಂಡಳು. ರಾಮಚಂದ್ರ ಬೈಸಿಕಲ್ಲನ್ನು ಗೋಡೆಗೆ ಒರಗಿಸಿದನು. ನಳಿನಿ ಆ ದಿನ ಅಲಂಕಾರಕ್ಕೆ ಹೆಚ್ಚು ಗಮನ ಕೊಟ್ಟಿದ್ದಳು. ಕರಿಯ ಸೀರೆಯನ್ನುಟ್ಟು ಬಿಳಿಯ ಕುಪ್ಪಸವನ್ನು ತೊಟ್ಟಿದ್ದಳು. ಮಾಂಗಲ್ಯದ ಜತೆಗೆ ಒಂದೇ ಒಂದು ಮುತ್ತಿನ ಹಾರ. ಬಿಳೀ ರೋಜಾಹೂ ಭಾರವಾದ ಜಡೆಯಲ್ಲಿ ಕಾರ್ಮೋಡದ ಮಧ್ಯೆ ಇಣಿಕಿ ನೋಡುವ ಚಂದ್ರನಂತಿತ್ತು. ರಾಮಚಂದ್ರನ ಹೆಜ್ಜೆಯ ಸದ್ದಾಯಿತು. ಒಳಗೆ ಬರುವನೆಂದು ನಳಿನಿ ಬಾಗಿಲ ಕಡೆ ತಿರುಗಿದಳು. ಅಷ್ಟರಲ್ಲಿ ಒಳಗಿನಿಂದ ಆತನ ತಾಯಿ 'ರಾಮೂ' ಎಂದು ಕೂಗಿದರು. ರಾಮಚಂದ್ರ ಹಾಗೇ ತಿರುಗಿ ಒಳಗೆ ಹೋದನು. ನಳಿನಿಯ ಉತ್ಸಾಹ ಕಡಮೆಯಾಯಿತು. ಅನಂತರ ಹತ್ತುನಿಮಿಷ ಬಿಟ್ಟು ಅವನು ಬರುವ ವೇಳೆಗೆ

ಯಾವುದೋ ಕಸೂತಿ ಕೆಲಸ ಹಿಡಿದುಕೊಂಡು ಕುಳಿತಿದ್ದಳು. ರಾಮಚಂದ್ರನೂ ಹೆಚ್ಚು ಮಾತನಾಡದೆ ಅಲ್ಲೇ ಇಟ್ಟಿದ್ದ ದೋಸೆಯನ್ನು ತಿನ್ನಲಾರಂಭಿಸಿದನು. ನಳಿನಿ ತಡೆಯಲಾರದೆ "ಸಿನಿಮಾಗೆ ಹೋಗೋಣವೆ?" ಎಂದಳು. ಎಲ್ಲಿಯೋ ನೋಡುತ್ತಿದ್ದ ರಾಮಚಂದ್ರ "ಅಮ್ಮ ದೇವಸ್ಥಾನಕ್ಕೆ ಹೋಗಬೇಕಂತೆ" ಎಂದನು. ನಳಿನಿ ಬೇಸರದಿಂದ 'ಓ' ಎಂದಳು. ರಾಮಚಂದ್ರನಿಗೆ ಅವಳ ಬೇಸರ ಅರ್ಥವಾಯಿತು. "ನೀನೂ ದೇವಸ್ಥಾನಕ್ಕೆ ಬಾ; ಹೋಗಿಬರೋಣ. ಎರಡನೆಯ ಆಟಕ್ಕೆ ಹೋಗೋಣ" ಎಂದನು. ನಳಿನಿ ಎದ್ದು ಹೊರಗೆ ಹೋಗುತ್ತಾ "ನಾನು ಬರುವುದಿಲ್ಲ" ಎಂದಳು.

ರಾಮಚಂದ್ರ ತಾಯಿಯೊಡನೆ ಹೊರಟು ಹೋದಮೇಲೆ ನಳಿನಿಗೆ ಬಹಳ ಬೇಸರವಾಯಿತು. ಸಂಜೆ ಎಲ್ಲಿಯಾದರೂ ತಿರುಗಾಡಿಕೊಂಡು ಬರದಿದ್ದರೆ ಅವಳಿಗೆ ಯಾವಾಗಲೂ ಬೇಸರವೇ. ಈ ದಿನವಂತೂ ಸಿನಿಮಾಗೆ ಹೋಗಬೇಕೆಂದು ಮಧ್ಯಾಹ್ನದಿಂದ ಸಿದ್ಧವಾಗಿದ್ದಳು. ರಾಮಚಂದ್ರನ ವರ್ತನೆ ಅವಳ ಅಭಿಮಾನಕ್ಕೆ ಏಟುಕೊಟ್ಟಂತಾಗಿತ್ತು. "ತನ್ನನ್ನು ಕರೆದುಕೊಂಡು ಹೋಗದೆ ತಾಯಿಯನ್ನು ಕರೆದುಕೊಂಡು ಹೋದನಲ್ಲಾ" ಎಂಬ ಅಸಮಾಧಾನದಿಂದ ಬೀದಿ ಬಾಗಿಲಲ್ಲಿ ನಿಂತಿದ್ದಳು.

"ಏನು ನಳಿನೀ ?"

ನಳಿನಿಯ ಮುಖ ಸಂತೋಷದಿಂದ ಅರಳಿತು.

"ರಂಗಾ ! ಇಲ್ಲಿ ಯಾವಾಗ ಬಂದೆ?"

"ಬೆಳಗ್ಗೆ ಬಂದೆ."

"ಈಗ ನಿನಗೆ ಕಾಲೇಜಿಲ್ಲವೆ?"

"ಕಾಲೇಜಿಗೆ ಸಲಾಂ ಹೊಡೆದು ಆಗಲೇ ಆರು ತಿಂಗಳಾಯ್ತು."

"ಹಾಗಾದರೆ ಈಗೇನು ಮಾಡುತ್ತಿದ್ದೀ?"

"ಇನ್ನೆಷ್ಟು ವರ್ಷ ನೋಡೋಕಾಗುತ್ತೆ? ಅಲ್ಲಿ ಮೇಷ್ಟ್ರುಗಳಿಗೆಲ್ಲಾ ನನ್ನ ಮೇಲೆ ಹೊಟ್ಟೆ ಉರಿ. ಯಾವುದೋ ಕಾರಣದಿಂದ

ಫೇಲ್ ಮಾಡಿಸಿಬಿಡುತ್ತಾರೆ. ನನಗೂ ಬೇಜಾರಾಗಿ ಬಿಟ್ಟುಬಿಟ್ಟೆ. ಹೀಗೇ ಓಡಾಡಿಕೊಂಡಿದ್ದೇನೆ."

"ಬಾ ಒಳಕ್ಕೆ. ಸ್ವಲ್ಪ ಕಾಫಿ ತಕೋ."

"ಏನು, ಒಬ್ಬಳೇ ಇರುವ ಹಾಗಿದೆ? ರಾಮಚಂದ್ರನೆಲ್ಲಿ?"

ರಂಗ ನಳಿನಿಯನ್ನು ಹಿಂಬಾಲಿಸಿದನು.

"ಅವರಮ್ಮನ ಜತೆಯಲ್ಲಿ ದೇವಸ್ಥಾನಕ್ಕೆ ಹೋದರು."

ನಳಿನಿಯ ಧ್ವನಿಯಲ್ಲಿದ್ದ ಬೇಸರ ರಂಗನಿಗೆ ತಿಳಿಯಿತು. "ನೀನೂ ಎಲ್ಲಿಗೋ ಹೊರಟಿರುವ ಹಾಗಿದೆ?"

"ಸಿನಿಮಾಗೆ ಹೋಗೋಣವೆಂದರು. ಅಷ್ಟರೊಳಗೆ ದೇವಸ್ಥಾನಕ್ಕೆ ಹೋಗಬೇಕಾಯಿತು."

"ನಾನೂ ಸಿನಿಮಾಗೆ ಹೊರಟಿದ್ದೇನೆ ಬರುತ್ತೀಯಾ?"

ನಳಿನಿಗೆ ಸ್ವಲ್ಪ ಅಳುಕಿತು. ಅವಳಿಗೂ ರಂಗನ ನಡತೆ ಸ್ವಲ್ಪ ಮಟ್ಟಿಗೆ ತಿಳಿದಿದ್ದಿತು. ಆದರೆ ದುರಭಿಮಾನ ನಡುವೆ ತಲೆಹಾಕಿತು. ರಾಮಚಂದ್ರ ಅಷ್ಟು ಅಸಡ್ಡೆಯಿಂದ ಹೊರಟುಹೋಗಿದ್ದರೆ ತಾನು ಮಾತ್ರ ಅವನ ಒಪ್ಪಿಗೆಯ ನಿರೀಕ್ಷೆಯಲ್ಲಿರಬೇಕೆ? ಇಷ್ಟಾಗಿ ಹೇಳಿ ಕೇಳಿ ರಂಗ ಸೋದರತ್ತೆಯ ಮಗ. ಹುಟ್ಟಿದಂದಿನಿಂದ ಪರಿಚಿತನಾದವನು. ಅವನನ್ನು ಕಂಡರೇನು ಹೆದರಿಕೆ? ಅವನೊಡನೆ ಹೋದರೇನು ತಪ್ಪು? ಎಂದು ಆಲೋಚಿಸಿ, ಆಳಿಗೆ ತಿಳಿಸಿ, ರಂಗನೊಡನೆ ಹೊರಟಳು. ರಂಗ ಹೋಗುತ್ತಾ ಅವಳ ಸಮಾಚಾರವನ್ನೆಲ್ಲಾ ವಿಚಾರಿಸಿದ. ಅವಳ ದುರಭಿಮಾನವೇ ತನಗೆ ಸಹಕಾರಿಯಾಗುವುದೆಂದು ಸಂತೋಷಪಟ್ಟ.

ಸಿನಿಮಾದಿಂದ ಹಿಂದಿರುಗುವ ವೇಳೆಗೆ ರಾತ್ರಿ ಹತ್ತುಘಂಟೆಯಾಗಿತ್ತು. ನಳಿನಿಯ ಧ್ವನಿಯನ್ನು ಕೇಳಿ ರಾಮಚಂದ್ರ ಹೊರಗೆ ಬಂದನು. ರಂಗನನ್ನು ನೋಡಿ ವಿಶ್ವಾಸದಿಂದ "ಯಾವಾಗ ಬಂದೆ ರಂಗಾ? ನಳಿನಿ ಹೇಗೆ ಸಿನಿಮಾಗೆ ಹೋದಳೋ ಎಂದು ಯೋಚನೆಯಾಗಿತ್ತು. ನೀನು ಬಂದುದು ತಿಳಿಯಲೇ ಇಲ್ಲ."

"ನಾನು ಬಂದದ್ದು ಈವತ್ತೇ."

" ಎಲ್ಲಿ ಇಳಿದಿದ್ದೀ? "

" ಹೋಟಲಿನಲ್ಲಿದ್ದೇನೆ. "

" ಚೆನ್ನಾಯಿತು, ನಾನು ಈ ಊರಿನಲ್ಲಿದ್ದೂ ನೀನು ಹೋಟಲಿನಲ್ಲಿರಬೇಕೆ? ಬಾ ಒಳಕ್ಕೆ. ಜವಾನನ ಕೈಲಿ ನಿನ್ನ ಹಾಸಿಗೆಯನ್ನು ತರಿಸುತ್ತೇನೆ. "

" ಯಾಕಪ್ಪಾ! ನಿಮಗೆಲ್ಲಾ ತೊಂದರೆ. "

" ತೊಂದರೆಯೇನು? ಸ್ನೇಹಿತರು ಇರುವುದೇಕೆ? ಬಂದು ಬಿಡು. " ಎಂದು ಹೇಳಿ ರಂಗನ ಸಾಮಾನು ತರಲು ಆಳನ್ನು ಕಳುಹಿಸಿದನು.

* * * * *

"ನಾನು ಖಂಡಿತವಾಗಿ ರಾತ್ರಿ ಊರಿಗೆ ಹೊರಡಬೇಕು, ನಳಿನಿ"— ರಂಗ ನಳಿನಿಯೊಡನೆ ಪಗಡೆಯಾಡುತ್ತ ಕುಳಿತಿದ್ದ.

" ಏನಷ್ಟವಸರ? "

" ಅವಸರವೇನು ಬಂತು? ನಾನು ಬಂದು ಹದಿನೈದು ದಿನವಾಯಿತು. "

" ಆದರೇನಂತೆ? ಅದೋ ಆರು ಬಿತ್ತು. ನಿನ್ನ ಜತೆ ಹೋಯಿತು. "

" ಅದಕ್ಕೇ ನಾನಾಡುವುದಿಲ್ಲ. ಯಾವಾಗಲೂ ನೀನೇ ಗೆಲ್ಲುತ್ತೀ." ಎಂದು ಆಟವನ್ನು ಕೆಡಿಸಿ ರಂಗ ಎದ್ದನು.

"ಕೊನೆಯವರೆಗೂ ಒಂದು ಆಟವನ್ನಾದರೂ ನೀನು ಆಡುವುದಿಲ್ಲ."

" ಏನು ಮಾಡುವುದು ಹೇಳು? ಅದು ಕೆಲವರ ಹಣೆಬರಹ. ಪ್ರಾರಂಭಮಾಡಿದ ಕೆಲಸವನ್ನು ಕೊನೆಮುಟ್ಟಿಸುವುದಕ್ಕೂ ಕೇಳಿಕೊಂಡು ಬಂದಿರಬೇಕು. "

ಒಳಗಿನಿಂದ " ನಳಿನೀ " ಎಂದು ಪಾರ್ವತಮ್ಮನವರು ಕೂಗಿದರು. ಬೇಸರದಿಂದ ನಳಿನಿ ಒಳಗೆ ಹೋದಳು.

" ಮೂರುಹೊತ್ತೂ ಏನು ಆಟ? ನನಗೇಕೋ ಮೈ ಕೈ ನೋಯುತ್ತಿದೆ. ಸ್ವಲ್ಪ ಮೆಣಸಿನ ಕಷಾಯ ಮಾಡು. "

ನಳಿನಿ ಮಾರುತ್ತರ ಕೊಡದೆ ಒಲೆ ಹೊತ್ತಿಸಿದಳು.

ರಾಮಚಂದ್ರ ಬರುವ ವೇಳೆಗೆ ಪಾರ್ವತಮ್ಮನಿಗೆ ವಿಪರೀತ ಜ್ವರ ಬಂದಿತ್ತು. ಅರ್ಧರ್ಧ ಜ್ಞಾನದಲ್ಲಿದ್ದರು. ಆ ದಿನ ರಂಗ ಪ್ರಯಾಣದ ಮಾತೆತ್ತಲಾಗಲಿಲ್ಲ. ೨—೩ ದಿನಗಳಾದ ಮೇಲೆ ಜ್ವರವಿಳಿದರೂ ಪಾರ್ವತಮ್ಮನಿಗೆ ಎದ್ದು ಕುಳಿತುಕೊಳ್ಳುವ ಶಕ್ತಿಯೂ ಇರಲಿಲ್ಲ. ಈ ಸಮಯದಲ್ಲಿ ರಂಗ ರಾಮಚಂದ್ರನಿಗೆ ನೆರವಾದನು; ರಾಮಚಂದ್ರ ವಿಧಿಯಿಲ್ಲದೆ ಹೊರಗೆ ಹೋಗಬೇಕಾದಾಗ ಮುದುಕಿಯ ಹತ್ತಿರವಿರುವುದು, ಆಕೆಗೆ ಹೊತ್ತು ಹೊತ್ತಿಗೆ ಔಷಧ ಕೊಡುವುದು, ಎಲ್ಲಾ ಕೆಲಸವನ್ನೂ ವಹಿಸಿಕೊಂಡನು.

"ಏಕೆ ನಳಿನೀ, ಸುಮ್ಮನೆ ಕುಳಿತೆ?" ರಾಮಚಂದ್ರನೆಂದನು.

ನಳಿನಿ ಸುಮ್ಮನಿದ್ದಳು.

"ಸ್ವಲ್ಪ ಹೊರಗೆ ಹೋಗಿ ಸುತ್ತಿಕೊಂಡು ಬಾ. ಯಾವಾಗಲೂ ಮನೆಯಲ್ಲೇ ಇದ್ದರೆ ನಿನಗೂ ಖಾಯಿಲೆ ಬರುತ್ತೆ."

"ನೀವು?"

"ಅಮ್ಮನ ಹತ್ತಿರ ಯಾರೂ ಇಲ್ಲವಲ್ಲಾ."

"ರಂಗ ಇರ್ತ್ತಾನೆ."

"ನೀನೂ ರಂಗ ಹೋಗಿಬನ್ನಿ. ಅವನ ಮೇಲೆ ಎಷ್ಟು ಕೆಲಸ ಹಾಕೋಕಾಗುತ್ತೆ?"

"ಹಾಗಾದರೆ ನಾನೂ ಹೋಗುವುದಿಲ್ಲ."

ಅಷ್ಟು ಹೊತ್ತಿಗೆ ರಂಗ ಅಲ್ಲಿಗೆ ಬಂದನು. "ಈವತ್ತು ರಾತ್ರಿ ನಾನು ಊರಿಗೆ ಹೊರಡುತ್ತೇನಪ್ಪಾ" ಎಂದನು.

ರಾಮಚಂದ್ರ "ಯಾಕೋ, ಏನವಸರ?" ಎಂದನು.

ನಳಿನಿ ಕುತೂಹಲದಿಂದ ತಲೆಯೆತ್ತಿದಳು.

"ಎಷ್ಟು ದಿನವಾಯಿತು ನಾನು ಬಂದು!"

"ನೀನು ಬಂದದ್ದು ಎಷ್ಟೋ ಸಹಾಯವಾಯಿತು. ಈಗ ಅಮ್ಮನೂ ಸ್ವಸ್ಥವಾಗಿದ್ದಾಳೆ. ನಾಲ್ಕು ದಿನವಿದ್ದು ಹೋಗು."

"ಇಲ್ಲಪ್ಪಾ, ಈವತ್ತೇ ಹೊರಡುತ್ತೇನೆ."

"ನೋಡು ನಳಿನೀ! ಇವನಾಡುವುದು. ನೀನೂ ಹೊರಟು

ಹೋದರೆ ನಳಿನಿಗೆ ಹೊತ್ತೇ ಹೋಗುವುದಿಲ್ಲ."

"ಮಹಾ ನಾನು ಮಾಡುವುದು! ಇಲ್ಲ. ಹೊರಡುತ್ತೇನೆ."

* * * * *

ರೈಲಿನಲ್ಲಿ ದಿಂಬಿಗೆ ಒರಗಿಕೊಂಡು ರಂಗ ಆಲೋಚಿಸುತ್ತಿದ್ದನು. ತಾನು ಹಾಸನಕ್ಕೆ ಬಂದುದೇಕೆ? ಮಾಧವರಾಯರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಲ್ಲವೆ? ತಾನು ಮಾಡಿದುದೇನು? ನಾಲ್ಕುದಿನ ಅವರ ಮನೆಯಲ್ಲಿದ್ದು, ರಾಮಚಂದ್ರನ ತಾಯಿಗೆ ಸೇವೆ ಮಾಡಿ ಹಿಂದಿರುಗಿದುದು! ರಾಮಚಂದ್ರನ ಅಕೃತ್ರಿಮ ಸ್ನೇಹ ಅವನ ಮನಸ್ಸನ್ನು ಸೂರೆಗೊಂಡಿತ್ತು. ಅವನ ತಿಳಿಮನಸ್ಸಿನಲ್ಲಿ ಸಂದೇಹಕ್ಕೆ ಸ್ಥಾನವೇ ಇರಲಿಲ್ಲ. ಹೇಗೆ ನಡೆದುಕೊಂಡರೂ ಅವನಿಗೆ ಕೆಟ್ಟ ಅಭಿಪ್ರಾಯವೇ ಬರುತ್ತಿರಲಿಲ್ಲ. ಅಂತಹವನಿಗೆ ಮೋಸಮಾಡಿದರೆ ಮಗುವಿಗೆ ದ್ರೋಹಮಾಡಿದಂತೆ. ರೈಲು ಅವನನ್ನು ನಳಿನಿಯಿಂದ ದೂರದೂರವಾಗಿ ಎಳೆದೊಯ್ಯುತ್ತಿತ್ತು. ರಾಮಚಂದ್ರನ ಸಂಸಾರವನ್ನು ಹಾಳುಮಾಡಿಯಾದರೂ ಅವಳನ್ನು ಪಡೆಯಬೇಕೆನ್ನುವಷ್ಟು ಅಪೇಕ್ಷೆ ರಂಗನಿಗಿರಲಿಲ್ಲ. ಮೊದಲಿನಿಂದಲೂ ತನಗೇ ಮಾವ ಮಗಳನ್ನು ಕೊಡುವನೆಂಬ ನಿರೀಕ್ಷೆಯಲ್ಲಿದ್ದುದರಿಂದ ಅದು ನಡೆಯದಿರಲು ಮಾವನ ಮೇಲೆ ಕೋಪ ಕೆರಳಿತ್ತು.

ಮೈಸೂರು ನಿಲ್ದಾಣ ಸಿಕ್ಕಿತು. ನಿಧಾನವಾಗಿ ತನ್ನ ಕೈ ಚೀಲವನ್ನು ಹಿಡಿದುಕೊಂಡು ನಡೆದುಬರುತ್ತಿರಲು ಮಾಧವರಾಯರು ಕಾಣಿಸಿದರು. ಯಾರೋ ಸ್ನೇಹಿತರನ್ನು ಬೀಳ್ಕೊಡಲು ಅವರು ನಿಲ್ದಾಣಕ್ಕೆ ಬಂದಿದ್ದರು. ರಂಗ ಬೇಕೆಂತಲೇ ಅವರ ಹತ್ತಿರ ಹೋದನು.

"ಎಲ್ಲಿಗೆ ಹೋಗಿದ್ದೆ ರಂಗಾ?"

"ಹಾಸನಕ್ಕೆ." ಅಣಕದ ನಗೆ ಅವನ ತುಟಿಗಳಲ್ಲಿ ಕಾಣಿಸಿಕೊಂಡಿತು. ಮಾಧವರಾಯರಿಗೆ ಅವನ ಬೆದರಿಕೆ ಜ್ಞಾಪಕ ಬಂದು ಗಾಬರಿಯಿಂದ "ಹಾ?" ಎಂದರು.

"ಹೌದು ಮಾವಾ, ನಳಿನಿಯನ್ನು ನೋಡಿದ್ದೆ."

"ನಿನಗೇನು ಕೆಲಸ ಅಲ್ಲಿ?" ಸ್ವಲ್ಪ ಜೋರಾಗಿಯೇ ಕೇಳಿದರು.

"ನನಗೆ ಕೆಲಸವೂ ಇಲ್ಲ. ಕಾರ್ಯವೂ ಇಲ್ಲ. ನಳಿನಿಯನ್ನು ನೋಡೋಣವೆಂತಲೇ ಹೋದೆ."

ಮಾಧವರಾಯರಿಗೆ ಮುಖ ಕೆಂಪಾಯಿತು. "ಕಾಲೇಜನ್ನು ಬಿಟ್ಟುಬಿಟ್ಟೆ. ಬೇರೆ ಕೆಲಸವೂ ಇಲ್ಲ. ಸುಮ್ಮನೆ ಅಲೆಯುತ್ತಾ ಎಷ್ಟು ದಿನ ವಿರುತ್ತೀ?"

"ಸಾಧ್ಯವಾದಷ್ಟು ದಿನ" ಎಂದು ಹೇಳಿ ರಂಗ ಹೊರಟು ಹೋದನು.

ಮಾಧವರಾಯರು ಮನೆಗೆ ಬಂದರೂ ಅವರ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ರಂಗ ಎಷ್ಟುದೂರ ಹೋಗುವನೆಂಬ ನೆಚ್ಚಿಕೆಯಿಲ್ಲ. ಶಾಂತೆಯ ಕೂಡ ಹೇಳೋಣವೇ, ಎಂದು ಯೋಚಿಸಿದರು. ಆದರೆ ಅದರಿಂದ ಪ್ರಯೋಜನವಿಲ್ಲ. ಅವಳ ಮಾತೇನೂ ನಡೆಯುವ ಹಾಗಿಲ್ಲ.

"ನಳಿನೀಗೆ ಕಾಗದ ಬರೆಯೋಣವೇ?" ಎಂದುಕೊಂಡರು. ಆದರೆ ಎದುರಿಗೆ ಎರಡು ಮಾತು ಹೇಳಬಹುದು, ಈ ವಿಚಾರಗಳನ್ನೆಲ್ಲಾ ಕಾಗದದಲ್ಲಿ ಬರೆಯುವುದು ಕಷ್ಟ. ಕೊನೆಗೆ ಸುಮ್ಮನಾದರು.

ಮಾಧವರಾಯರನ್ನು ನೋಡಿದ ಮೇಲೆ ರಂಗನ ಮನಸ್ಸು ಕಲಕಿತು. ರಾಮಚಂದ್ರನ ಸ್ನೇಹದಿಂದ ಮೊಳೆಯುತ್ತಿದ್ದ ಸಾತ್ವಿಕತೆ ಮಾಯವಾಯಿತು. ಹೇಗಾದರೂ ಮಾಡಿ ಈ ಮಾಧವರಾಯರ ಸೊಕ್ಕನ್ನು ಮುರಿಯಬೇಕು. ತನ್ನನ್ನು ನೋಡಿದಾಗಲೆಲ್ಲಾ ಕಸಕ್ಕಿಂತ ಕಡೆಯಾಗಿ ಕಾಣುವರು. ಅವರಿಗೆ ನೋವುಂಟಾಗಬೇಕಾದರೆ ನಳಿನಿಯಿಂದಲೇ. ರಾಮಚಂದ್ರನ ಸ್ನೇಹ ವಿಶ್ವಾಸಗಳನ್ನು ಬದಿಗೊತ್ತಿ ಮಾವನ ಮೇಲೆ ಸೇಡು ತೀರಿಸಿಕೊಳ್ಳಬೇಕು ಎನ್ನಿಸಿತು.

* * * * *

ಪಾರ್ವತಮ್ಮನಿಗೆ ಪೂರ್ತಿ ಗುಣವಾಗಲೇ ಇಲ್ಲ. ಅವರು ಎದ್ದು ಓಡಾಡಿ ಅನೇಕ ದಿನಗಳಾದುವು. ಮನೆ ಆಸ್ಪತ್ರೆಯಾಗಿತ್ತು. ರಾಮಚಂದ್ರನಿಗಂತೂ ಬಿಡುವೇ ಇರಲಿಲ್ಲ. ಹೊರಗೆ ಕೆಲಸ ಮುಗಿಸಿಕೊಂಡು ಬಂದರೆ ಮನೆಯಲ್ಲಿ ತಾಯಿಯ ಉಪಚಾರ. ನಳಿನಿಗೆ ಬಹಳ ಬೇಸರವಾಗಿ ಹೋಗಿತ್ತು.

" ತಾಯಿಗೆ ಖಾಯಿಲೆಯಾದರೆ ಅವರೇನು ಮಾಡುವರು " ಎಂದು ಸಮಾಧಾನಮಾಡಿಕೊಳ್ಳಲು ಪ್ರಯತ್ನಿಸುವಳು.

ಮೊದಲಿನಿಂದಲೂ ಬೇರೊಬ್ಬರ ಮನೋಗತವನ್ನು ಅನುಸರಿಸಿ ನಡೆಯುವುದನ್ನೇ ಅವಳು ಅರಿಯಳು. ತಂದೆಯ ಮನೆಯಲ್ಲಿ ಒಬ್ಬಳೇ ಮಗಳಾಗಿ, ಯಾವ ತೊಂದರೆಯನ್ನೂ ಕಾಣದೆ ಬೆಳೆದಿದ್ದಳು. ಅವಳಾಡಿದ ಮಾತಿಗೆ ಮಾರುತ್ತರವೇ ಇರುತ್ತಿರಲಿಲ್ಲ. ಇಲ್ಲಿ ರಾಮಚಂದ್ರನೂ ಹಾಗೆಯೇ; ಅವಳ ಕೆಲಸವನ್ನೂ ತಾನೇ ಹೊತ್ತುಮಾಡುತ್ತಿದ್ದನು. ಆದರೂ ನಳಿನಿಗೆ ಸಮಾಧಾನವಿರಲಿಲ್ಲ. ಬೆಳಗಾದರೆ, ಸಂಜೆಯಾದರೆ ಅಡಿಗೆ ಕೆಲಸ; ಮಾತನಾಡುವವರು ಕೂಡ ಇರಲಿಲ್ಲ. ರಾಮಚಂದ್ರ ಮನೆಗೆ ಬಂದರೆ ತಾಯಿಯೊಡನೆ ಮಾತನಾಡುತ್ತಾ ಕೂಡುವುದು ನಳಿನಿಗೆ ಬೇಸರ. ಏಕೆಂದರೆ ಅವರಿಬ್ಬರ ನಡುವೆ ತಾನಾಡುವ ಮಾತೇ ಇರಲಿಲ್ಲ.

ಬೀದಿಯಲ್ಲಿ ಬೈಸಿಕಲ್ಲಿನ ಸದ್ದಾಯಿತು. ರಾಮಚಂದ್ರನಿರಬಹು ದೆಂದು ನಳಿನಿ ಬಾಗಿಲು ತೆರೆಯಲು ಅಂಚೆಯವನೊಂದು ಟೆಲಿಗ್ರಾಂ ಹಿಡಿದು ನಿಂತಿದ್ದನು. ತೆಗೆದುಕೊಂಡು ನಳಿನಿ ಓದಿದಳು. " ನಿಮ್ಮ ತಂದೆಯವರಿಗೆ ತುಂಬಾ ಖಾಯಿಲೆಯಾಗಿದೆ. ತಕ್ಷಣ ಹೊರಟು ಬಾ. ನಾನು ನಿಲ್ದಾಣದಲ್ಲಿ ಕಾದಿರುತ್ತೇನೆ—ರಂಗ " ಎಂದಿತ್ತು. ನಳಿನಿಗೆ ಗಾಬರಿಯಾಗಿ ಬೇಗಬೇಗ ಸಾಮಾನು ಕಟ್ಟಿದಳು. ಅಷ್ಟುಹೊತ್ತಿಗೆ ರಾಮಚಂದ್ರ ಬಂದು "ಏನು ನಳಿನೀ?" ಎಂದನು. ನಳಿನಿ ಟೆಲಿಗ್ರಾಮನ್ನು ಕೈಗೆ ಕೊಟ್ಟಳು. ರಾಮ ಚಂದ್ರ ಓದಿನೋಡಿಕೊಂಡು "ಬೆಳಗ್ಗೆ ಅವರಿಂದಲೇ ಕಾಗದ ಬಂತಲ್ಲವೆ?" ಎಂದನು.

" ಏನಾಯಿತೋ ಏನೋ. "

" ನಾನೇ ಒಂದು ಟೆಲಿಗ್ರಾಂ ಕೊಡಲೇನು? "

" ಬೇಡ. ನಾನು ಈ ರೈಲಿಗೇ ಹೊರಡುತ್ತೇನೆ. "

" ಒಬ್ಬಳೇ ಹೋಗುತ್ತೀಯಾ? "

" ಭಯವೇನು? ಕತ್ತಲಾಗುವುದರೊಳಗಾಗಿ ಮನೆ ಸೇರುತ್ತೇನೆ. "

ಎಂದೂ ನೋವನ್ನರಿಯದ ನಳಿನಿಗೆ ತಂದೆಯ ಖಾಯಿಲೆಯೆಂಬ ವರ್ತಮಾನ ಹೆಚ್ಚು ಗಾಬರಿಯನ್ನುಂಟುಮಾಡಲಿಲ್ಲ. ರಾಮಚಂದ್ರನ ಮನೆಯ ವೈವಿಧ್ಯವಿಲ್ಲದ ವಾತಾವರಣದಿಂದ ಕೆಲವು ದಿನ ತಪ್ಪಿಸಿಕೊಂಡು ಹೋಗುವುದು ಅವಳಿಗೆ ಸಂತೋಷವನ್ನೇ ಉಂಟುಮಾಡಿತು. ರೈಲು ಮೈಸೂರನ್ನು ಸಮೀಪಿಸುತ್ತ ಅವಳ ಉಲ್ಲಾಸ ಹೆಚ್ಚುತ್ತಿತ್ತು. ಸ್ವಲ್ಪ ಸ್ವಲ್ಪ ಕತ್ತಲಾಗುತ್ತ ಬಂದಿತ್ತು. ಕಿಟಕಿಯಿಂದ ಹೊರಗೆ ತಲೆಹಾಕಿ ಕೊಂಡು ನಳಿನಿ ಕತ್ತಲಲ್ಲಿ ಸೇರಿಹೋಗುತ್ತಿದ್ದ ಜಗತ್ತನ್ನು ನೋಡುತ್ತಿದ್ದಳು. ಕೃಷ್ಣರಾಜಸಾಗರದಲ್ಲಿ ರೈಲು ನಿಂತಿತು.

"ನಳಿನೀ."

ಆಶ್ಚರ್ಯದಿಂದ ನಳಿನಿ ಸುತ್ತಲೂ ನೋಡಿದಳು. ರಂಗನನ್ನು ನೋಡಿ, "ಇದೇನು ರಂಗಾ ಇಲ್ಲಿದ್ದೀ" ಎಂದಳು.

"ಇಲ್ಲೇ ಟ್ಯಾಕ್ಸಿ ತಂದಿದ್ದೇನೆ. ಅದರಲ್ಲಿಯೇ ಮೈಸೂರಿಗೆ ಹೋಗೋಣ."

"ಅಷ್ಟು ಗಾಬರಿಯೇ ರಂಗಾ? ತಂದೆಯವರು ಹೇಗಿದ್ದಾರೆ?"

"ಎಲ್ಲಾ ಹೇಳ್ತೀನಿ. ನೀನು ಮೊದಲು ಇಳಿ."

ನಳಿನಿ ಗಾಡಿಯಿಂದ ಇಳಿದು ನಿಲ್ದಾಣದ ಹೊರಗೆ ನಿಂತಿದ್ದ ಟ್ಯಾಕ್ಸಿಗೆ ರಂಗನನ್ನು ಹಿಂಬಾಲಿಸಿದಳು. ಅವಳು ಹತ್ತಲು ಸ್ಥಳಬಿಟ್ಟು ರಂಗ ಸರಿದು ನಿಂತನು. ಅವನೂ ಹತ್ತಲು ಕಾರು ಹೊರಟಿತು. ರಂಗ ಎಂದಿನಂತೆ ಮಾತನಾಡದೆ ಸುಮ್ಮನಿರಲು ನಳಿನಿಗೆ ಗಾಬರಿಯಾಗಿ "ತಂದೆ ಯವರಿಗೆ ಹೇಗಿದೆ ರಂಗಾ?" ಎಂದಳು.

"ಅವನಿಗೇನು ಕಲ್ಲುಗುಂಡಿನ ಹಾಗಿದ್ದಾನೆ." ರಂಗನ ಧ್ವನಿಯಲ್ಲಿ ಅಡಕವಾಗಿದ್ದ ದ್ವೇಷವನ್ನು ಗ್ರಹಿಸಿ ನಳಿನಿ ನಡುಗಿದಳು. ಆದರೂ ಧೈರ್ಯ ಮಾಡಿ "ಮತ್ತೆ ಟೆಲಿಗ್ರಾಂ ಕೊಟ್ಟು ನನ್ನನ್ನೇಕೆ ಕರೆಸಿದೆ?" ಎಂದಳು.

"ನನಗೇ ಬೇಕಾಗಿತ್ತು."

ನಳಿನಿಗೆ ಅವನ ಅಭಿಪ್ರಾಯವಿನ್ನೂ ಸಂಪೂರ್ಣವಾಗಿ ಅರ್ಥವಾಗ ಲಿಲ್ಲ. ಕಿಟಕಿಯಿಂದ ಹೊರಗೆ ನೋಡಿದಳು, ಕಾರು ವೇಗವಾಗಿ ಹೋಗುತ್ತಿತ್ತು.

"ಇದು ಮೈಸೂರು ರಸ್ತೆ ಅಲ್ಲ" ಎಂದಳು.

"ಅಲ್ಲ. ಬೃಂದಾವನದ ರಸ್ತೆ."

ನಳಿನಿಗೆ ತೀರ ಹೆದರಿಕೆಯಾಯಿತು. ರಂಗ ಪಿಶಾಚಿಯ ಹಾಗೆ ತೋರಿದನು.

"ನನ್ನನ್ನು ಮೈಸೂರಿಗೆ ಕರೆದುಕೊಂಡು ಹೋಗು ರಂಗಾ." ನಳಿನಿಯ ತುಟಿಗಳು ಅದುರಿ ಕಣ್ಣುಗಳು ತುಂಬಿಬಂದುವು. ರಂಗ ಅವಳ ಹೆಗಲ ಮೇಲೆ ಕೈ ಹಾಕಿ ಹತ್ತಿರಕ್ಕೆಳೆದುಕೊಂಡು "ನಿಧಾನವಾಗಿ ಹೋಗೋಣ, ನಳಿನೀ" ಎಂದನು. ನಳಿನಿ ಅವನ ಚರ್ಯೆಯಿಂದ ಹೆದರಿ ಮಾತಿಲ್ಲದೆ ಕಣ್ಣೀರು ಸುರಿಸುತ್ತಿದ್ದಳು.

"ಏಕೆ ನಳಿನೀ, ಸುಮ್ಮನೆ ಕುಳಿತೆ? ಒಂದೆರಡು ದಿನ ಬೃಂದಾವನದಲ್ಲಿ ಸುಖವಾಗಿದ್ದು ನಿಮ್ಮಪ್ಪನ ಮನೆಗೆ ಹೋಗುವಿಯಂತೆ."

"ನೀನು ಮನೆಗೆ ಕರೆದುಕೊಂಡು ಹೋಗುತ್ತೀಯೆಂದು ನಂಬಿ ಅವರು ಕಳುಹಿಸಿದರು."—ನಳಿನಿ ಬಿಕ್ಕುತ್ತಾ ಹೇಳಿದಳು.

ಇದುವರೆಗೂ ರಂಗನ ದೃಷ್ಟಿಪಥದಲ್ಲಿದ್ದುದು ಮಾಧವರಾಯರ ಚಿತ್ರ ಮಾತ್ರ. ಅವರ ತಿರಸ್ಕಾರಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊಳ್ಳಬೇಕೆಂಬ ಒಂದೇ ಧ್ಯೇಯವಿತ್ತು. ನಳಿನಿಯ ಮಾತಿನಿಂದ ರಾಮಚಂದ್ರನ ಸ್ನೇಹಮೂರ್ತಿ ಜ್ಞಾಪಕಕ್ಕೆ ಬಂತು. ತಾನು ಹಾಸನಕ್ಕೆ ಹೋದಾಗ ಅವನು ತನ್ನಲ್ಲಿ ತೋರಿದ್ದ ನಿಷ್ಕಪಟ ಸ್ನೇಹ, ಅಕೃತ್ರಿಮವಾದ ಆದರಗಳು ನೆನಪಿಗೆ ಬಂದು, ದ್ವೇಷದ ನಿಷ್ಠುರಭಾವವನ್ನು ಸ್ವಲ್ಪ ತಗ್ಗಿಸಿತು. ಅಷ್ಟು ಹೊತ್ತಿಗೆ ಬೃಂದಾವನದ ಫಲಾಹಾರ ಮಂದಿರದೆದುರಿಗೆ ಕಾರು ನಿಂತಿತು.

"ಸ್ವಲ್ಪ ಹೊತ್ತಿರು" ಎಂದು ಡ್ರೈವರನಿಗೆ ಹೇಳಿ ಮೊದಲೇ ಗೊತ್ತುಮಾಡಿದ್ದ ಒಂದು ಕೊಠಡಿಗೆ ಹೋದನು. ನಳಿನಿಯೂ ಪ್ರಜ್ಞೆ ತಪ್ಪಿದವಳಂತೆ ಹಿಂಬಾಲಿಸಿದಳು. ಗಾಬರಿಯಲ್ಲಿ ವಿಚಾರಶಕ್ತಿ ಶೂನ್ಯವಾಗಿತ್ತು.

ಕೊಠಡಿಗೆ ಹೋಗಿ ಒಬ್ಬ ಆಳನ್ನು ಕರೆದು ರಂಗ ಕಾಗದ ಲೇಖನಿಗಳನ್ನು ತರಿಸಿದನು. ಅವನು ಏನನ್ನೋ ಬರೆಯುತ್ತಿರಲು ನಳಿನಿ ಮಂತ್ರ ಮುಗ್ಧಳಂತೆ ಅವನನ್ನೇ ನೋಡುತ್ತಿದ್ದಳು.

"ಈ ಸಲ ಏಳು ಹೋಗೋಣ." ನಳಿನಿಗೇನೂ ಅರ್ಥವಾಗದೆ ಬೊಂಬೆಯಂತೆ ಅವನ ಹಿಂದೆ ಹೋದಳು. ಕಾರಿನಲ್ಲಿ ಕುಳಿತು ಅರ್ಧ ಘಂಟೆಯಲ್ಲಿ ಮಾಧವರಾಯರ ಮನೆಗೆ ಬಂದರು. ರಂಗನು ಅವಳ ಕೈಗೆ ಕಾಗದವನ್ನು ಕೊಟ್ಟು, "ಇದನ್ನು ನಿಮ್ಮ ತಂದೆಗೆ ಕೊಡು" ಎಂದು ಹೇಳಿ, ಕಾರಿನಲ್ಲಿಯೇ ಹೊರಟುಹೋದನು.

ನಳಿನಿಯನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು.

"ಇದೇನು ನಳಿನೀ? ಹೇಳದೆ ಕೇಳದೆ ಬಂದು ಬಿಟ್ಟೆ? ಸ್ಟೇಷನ್ನಿಗೆ ಕೂಡ ಯಾರೂ ಬರಲಿಲ್ಲ."

"ರಂಗ ಬಂದಿದ್ದ." ಎಂದು ಅವನ ಕಾಗದವನ್ನು ತಂದೆಯ ಕೈಲಿಟ್ಟಳು. ಮಾಧವರಾಯರು ಹೆದರಿ ಓದಿದರು.

"ಈ ದಿನ ಅನಾಯಾಸವಾಗಿ ನಳಿನಿ ನನ್ನ ಕೈಗೆ ಸಿಕ್ಕಿದ್ದಳು. ಅದಕ್ಕಿಂತ ನಿನ್ನ ದುರಭಿಮಾನ ನನ್ನ ಕೈಗೆ ಸಿಕ್ಕಿತ್ತು. ಒಂದೇ ಏಟಿಗೆ ಅದನ್ನು ಮುರಿದು ಪುಡಿ ಮಾಡಬೇಕೆಂಬ ಅಭಿಲಾಷೆಯಿತ್ತು. ಆದರೆ ವಿಧಿಗೆ ಅದು ಇಷ್ಟವಾಗಲಿಲ್ಲ. ರಾಮಚಂದ್ರನ ಸ್ಮರಣೆ ಅಡ್ಡಿ ಬಂತು. ಅವನಂತಹ ಮನುಷ್ಯರೂ ಈ ಲೋಕದಲ್ಲಿ ಒಬ್ಬರಿಬ್ಬರಿರುವುದರಿಂದ ಇನ್ನೂ ಮಳೆ ಬೆಳೆಗಳಾಗುತ್ತಿವೆ. ಅವನ ಯೋಗ್ಯತೆಯನ್ನು ಅರ್ಥಮಾಡಿಕೊಳ್ಳಲು ಕೂಡ ನಿನಗಾಗಲೀ, ನಳಿನಿಗಾಗಲೀ ಸಾಧ್ಯವಿಲ್ಲ. ಪೂರ್ವ ಜನ್ಮದ ಅದೃಷ್ಟದಿಂದ ಅವನು ನಿನ್ನಂತಹವನಿಗೆ ಅಳಿಯನಾಗಿದ್ದಾನೆ. ಆದರೆ ನನಗೆ ಅದೇ ತೊಂದರೆಯಾಯಿತು. ಅವನೂ ನಿನ್ನಂಥವನೇ ಆಗಿದ್ದರೆ ಅನುಮಾನಿಸದೆ ಸೇಡು ತೀರಿಸಿಕೊಳ್ಳುತ್ತಿದ್ದೆ. ಅವನ ಸ್ನೇಹಕ್ಕೆ ಎರಡೆಣಿಸುವುದು ಅಸಾಧ್ಯವಾದುದರಿಂದ ನಳಿನಿ ಪಾರಾದಳು. ಇಲ್ಲದಿದ್ದರೆ ನಾಯಿಪಾಡು ಮಾಡಿ ನಿನ್ನೆದುರಿಗೆ ಎಸೆಯುತ್ತಿದ್ದೆ." ಎಂದು

ಬರೆದಿದ್ದನು. ಮಾಧವರಾಯರು ನಿಧಾನವಾಗಿ ಓದಿ ಹರಿದುಹಾಕಿದರು. ಆ ಸಂಜೆ ಏನು ನಡೆಯಿತೆಂದು ಅವರು ನಳಿನಿಯನ್ನು ಕೇಳಲಿಲ್ಲ. ಅವಳಾಗಿ ಹೇಳಲೂ ಇಲ್ಲ.

———

# ಆತ್ಮಾರ್ಪಣೆ

ಸಾಮಿ ಕಾಗದವನ್ನು ಇನ್ನೊಮ್ಮೆ ಓದಿದನು. ಹುಬ್ಬು ಗಂಟಿಕ್ಕಿ ಮತ್ತೆ ಮತ್ತೆ ಓದಿದನು. ತನ್ನ ನಿರ್ಬಲತೆಗಾಗಿ ನೊಂದುಕೊಂಡನು. ಅವನ ತಂದೆ ಬಹು ವ್ಯಸನದಿಂದ ಬರೆದಿದ್ದರು. "ನಿನ್ನ ವಿದ್ಯಾಭ್ಯಾಸಕ್ಕಾಗಿ, ಇದ್ದುದನ್ನೆಲ್ಲಾ ಮಾರಿ ಆಯಿತು. ಸ್ವಲ್ಪ ಸಾಲವೂ ಆಗಿದೆ. ನೀನು, ಬೇರೆ ವಿಚಾರಗಳಿಗೆ ಗಮನ ಕೊಡದೆ ಓದುವುದರಲ್ಲಿಯೇ ಮನಸ್ಸಿಡು" ಎಂದು ಬರೆದಿದ್ದರು. ಅವರು ಬರೆದಿದ್ದುದು ಅಕ್ಷರಶಃ ನಿಜವಾದ ಮಾತು. ಸಾಮಿ ಓದಿ ವಿದ್ಯಾವಂತನಾದರೆ ತಮ್ಮ ಕಷ್ಟಗಳು ನೀಗುವುದೆಂದು ಆತನು ನಂಬಿದ್ದರು. ತೃಪ್ತಿಯಾಗಿ ಉಣ್ಣದೆ ಗಟ್ಟಿಯಾಗಿ ಉಡದೆ ಹಣವನ್ನು ಕೂಡಿಟ್ಟು ಸಾಮಿಗೆ ಕಳುಹಿಸುತ್ತಿದ್ದರು. ಸಾಮಿಯೂ ಬುದ್ಧಿವಂತ, ಪ್ರತಿಯೊಂದು ಪರೀಕ್ಷೆಯಲ್ಲಿಯೂ ಶ್ರೇಷ್ಠರೀತಿಯಲ್ಲಿಯೇ ಉತ್ತೀರ್ಣನಾಗುತ್ತಿದ್ದನು. ಇನ್ನೊಂದು ವರ್ಷ ಓದಿದರೆ ಪದವೀಧರನಾಗುತ್ತಿದ್ದನು. ಆದರೆ ಈಗ ಸಾಮಿಯ ಮನಸ್ಸು ಸ್ವಸ್ಥವಾಗಿರಲಿಲ್ಲ. ಆ ಕ್ರಾಂತಿಮಾಸದಲ್ಲಿ ಯಾರ ಮನಸ್ಸು ಸ್ವಸ್ಥವಾಗಿದ್ದೀತು? ಅದರಲ್ಲಿಯೂ ಬಿಸಿರಕ್ತದ ಯಾವ ತರುಣ ಹಿಂದೆ ನಿಲ್ಲಬಲ್ಲವನಾಗಿದ್ದನು? ದೇಶಕ್ಕೆ ದೇಶವೇ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಲು ಎದ್ದು ನಿಂತು ಬಲಿಕೇಳುತ್ತಿರಲು ಹಿಂದೆ ನಿಲ್ಲುವ ಹೇಡಿ ಮನವು ಸಾಮಿಗಿರಲಿಲ್ಲ. ಪಾಠಗಳಲ್ಲಿ ಮುಂದಾಗಿದ್ದಂತೆಯೇ ಈ ಚಳುವಳಿಯಲ್ಲಿಯೂ ಮುಂದಾದನು. ಯಾವ ವೇದಿಕೆಯ ಮೇಲೆಯೂ ಸಾಮಿಯೇ, ಯಾವ ಮೆರವಣಿಗೆಯ ಮುಂದೆಯೂ ರಾಷ್ಟ್ರಧ್ವಜವನ್ನು ಹಿಡಿದು ನಡೆಯುತ್ತಿದ್ದವನು ಸಾಮಿಯೇ. ಅವನ ಉಪಾಧ್ಯಾಯರು ಕರೆದು ಹೇಳಿದರು. ಸಾಮಿ "ನಾನು ಮಾಡುತ್ತಿರುವ ಕೆಲಸ ಸರಿಯೆಂದು ನಿಮಗೆ ತೋರುವುದಿಲ್ಲವೆ? ನೀವೂ ಭಾರತೀಯರಲ್ಲವೆ? ನಿಮ್ಮ ಮನಸ್ಸನ್ನೂ ಮಾರಿದ್ದೀರ? ದಾಸ್ಯಶೃಂಖಲೆ ನಿಮ್ಮನ್ನು ಅಷ್ಟು ಬಿಗಿಯಾಗಿ ಬಿಗಿದಿದೆಯೆ? ಎಂದು ಕೇಳಿದನು. ಅವರಿಗೆ ಇವನ ಉದ್ಧಟತನ ಸರಿಬರದೆ ಸುಮ್ಮನಾದರು.

ಸ್ವಾಮಿಗೆ ಇದು ಕಠಿಣಪರೀಕ್ಷೆ. ತಂದೆಯ ಕಾಗದವನ್ನು ಅಲ್ಲವೆನ್ನುವಂತಿಲ್ಲ. ಉಪಾಧ್ಯಾಯರನ್ನು ಸುಲಭವಾಗಿ ಬಾಯಿಮುಚ್ಚಿಸಿದಂತೆ ಇಲ್ಲಿ ಮುಚ್ಚಿಸುವ ಹಾಗಿಲ್ಲ. ಏಕೆಂದರೆ ಆ ಬುದ್ಧಿವಾದದ ಹಿಂದೆ ನಿಜವಾದ ತ್ಯಾಗವಿದ್ದಿತು. ತನ್ನ ವಿದ್ಯಾಭ್ಯಾಸಕ್ಕಾಗಿ ಆ ಮುದಿತಾಯಿ ತಂದೆಗಳು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ತನ್ನ ತಾಯಿ ಆಸೆಪಟ್ಟು ಬಣ್ಣವಾದ ಸೀರೆಗೆ ದುಡ್ಡನ್ನು ಖರ್ಚುಮಾಡಿದುದು ಅವನಿಗೆ ಜ್ಞಾಪಕವಿಲ್ಲ. ಚಿಕ್ಕವನಾಗಿದ್ದಾಗಿನಿಂದಲೂ ಅವರಿಬ್ಬರ ಸಕಲ ಪ್ರಪಂಚವೂ ಸ್ವಾಮಿಯೇ ಆಗಿದ್ದನು. ಸ್ವಾಮಿಗೆ ಇಷ್ಟವಾದ ತಿಂಡಿ; ಸ್ವಾಮಿಗೆ ಒಪ್ಪುವ ಬಟ್ಟೆ; ಇನ್ನು ಸ್ವಾಮಿಯನ್ನು ಶ್ರೀಮಂತನನ್ನಾಗಿ ಮಾಡುವ ವಿದ್ಯಾಭ್ಯಾಸ; ಇವೇ ಅವರ ಜೀವನದ ಗುರಿಯಾಯಿತು. ಸ್ವಾಮಿಯೇ ಅವರ ಜೀವನ ಸರ್ವಸ್ವ.

ಈ ವಿಚಾರವನ್ನೆಲ್ಲಾ ಸ್ವಾಮಿಯೂ ಅರಿತಿದ್ದನು. ಆದರೆ ತಾಯ್ನಾಡಿನ ಕರೆ ಕಡಿಮೆಯಾದುದಾಗಿರಲಿಲ್ಲ. ಇದರಷ್ಟು ಗಟ್ಟಿಯಾಗಿ ಕೇಳಿಸುವ ಧ್ವನಿಯಲ್ಲದಿದ್ದರೂ ಇದಕ್ಕಿಂತ ಕಡಿಮೆ ತೀಕ್ಷ್ಣವಾದುದಾಗಿರಲಿಲ್ಲ. ಸ್ವಾಮಿಗೆ ಆ ಕರೆಯ ತೀಕ್ಷ್ಣತೆಯ ಮುಂದೆ ತನ್ನ ವಿದ್ಯಾಭ್ಯಾಸ ನಿಸ್ಸಾರವಾಗಿ ಕಂಡಿತು. ತನ್ನ ತ್ಯಾಗ ಬರಿಯ ಮಾತಿನಲ್ಲಿಯೇ ಪರ್ಯವಸಾನವಾಗಬೇಕಾಯಿತೆ? "ಇಲ್ಲ" ವೆಂದು ಮನಸ್ಸನ್ನು ಗಟ್ಟಿಮಾಡಿಕೊಂಡನು. ಪುನಃ ಕಾಗದವನ್ನು ಓದಿದನು. ಎದುರಿಗೆ ದೀಪದ ಬೆಳಕು ಸರಿಯಾಗಿ ಬೀಳುವ ಕಡೆ ಪೂಜ್ಯ ಜವಹರರ ಭಾವಚಿತ್ರ! ಎಂತಹ ಬದುಕು! ಕೊನೆ ಮೊದಲಿಲ್ಲದ ತ್ಯಾಗ! ಕಣ್ಣುಗಳಲ್ಲಿ ಬಾಂಧವರ ದಾಸ್ಯಕ್ಕಾಗಿ ಮರುಕವು ತೆರೆತೆರೆಯಾಗಿ ಹರಿದು ಬರುತ್ತಿದ್ದರೂ, ಸ್ವಾತಂತ್ರ್ಯವನ್ನು ಸಾಧಿಸುವೆನೆಂಬ ಹಠ ಆ ಬಿಗಿದ ತುಟಿಗಳಲ್ಲಿ ಎದ್ದು ಕಾಣುತ್ತಿದ್ದಿತು. ಸ್ವಾಮಿಗೆ ನೋಡನೋಡುತ್ತ ರೋಮಾಂಚವೆದ್ದಿತು. ಬದುಕಿದರೆ ಹಾಗೆ ಬದುಕಬೇಕು. "ಹುಟ್ಟಿದನು, ಇದ್ದನು, ಸತ್ತನು" ಎಂಬುದು ತನ್ನ ಜೀವನಚರಿತ್ರೆಯ ಸಾರಾಂಶವಾಗಬಾರದು. ಸ್ವಾಮಿ ಮೇಲೆದ್ದು ನಿಂತು ಜವಹರರ ಚಿತ್ರವನ್ನು ಎವೆಯಿಕ್ಕದೆ ನೋಡಿದನು. "ತನ್ನ ನಿರ್ಧಾರವು ಒಣಕೀರ್ತಿಗಾಗಿ ಅಲ್ಲ. ಸರಿಯವರ ಮೆಚ್ಚುಗೆಗಾಗಿ ಅಲ್ಲ. ತನ್ನ ತ್ಯಾಗ ದೇಶಕ್ಕೆ ಆವಶ್ಯಕ. ಇದರಿಂದ ತಂದೆತಾಯಿಗಳ

ಕೆಲಸವನ್ನು ಮುಗಿಸಿಕೊಂಡು ಮಿಕ್ಕ ಕಾಲವನ್ನೆಲ್ಲಾ ಹಾಸಿಗೆಯಲ್ಲಿಯೇ ಕಳೆಯುತ್ತಿದ್ದರು.

ಸಾಮಿ ಬಿಡುಗಡೆ ಹೊಂದಿ ಹೊರಗೆ ಬರುವ ವೇಳೆಗೆ ಎಲ್ಲಾ ತರ ಗತಿಗಳಿಗೂ ಪರೀಕ್ಷೆಯ ಸಮಯ. "ಕೆಲವು ತಿಂಗಳ ಕೆಳಗೆ ನಿಜವಾಗಿ ದೇಶದಲ್ಲೆಲ್ಲಾ ಅಷ್ಟು ಕ್ರಾಂತಿಯುಂಟಾಗಿದ್ದೀತೆ?" ಎಂದು ಅನುಮಾನ ಬರುವಷ್ಟು ಶಾಂತವಾದ ವಾತಾವರಣ ಸ್ಕೂಲು ಕಾಲೇಜುಗಳನ್ನು ಆವರಿಸಿದ್ದಿತು. ಸಾಮಿಯ ಸಹಪಾಠಿಗಳೆಲ್ಲರೂ ತಮ್ಮ ತಮ್ಮ ವಿದ್ಯಾಭ್ಯಾಸದಲ್ಲಿ ಮಗ್ನರಾಗಿದ್ದರು. ಅವರೆಲ್ಲರೂ ಸಾಮಿಯ ಇರುವಿಕೆಯನ್ನೇ ಮರೆತಂತಿದ್ದಿತು. ಅಭ್ಯಾಸಬಲದಿಂದ ಸಾಮಿ ಹಾಸ್ಟೆಲಿನ ಕಡೆಗೇ ಹೋದನು. ಇವನು ಹೋಗುವ ವೇಳೆಗೆ, ಇವನ ಸ್ನೇಹಿತನಾದ ಶಂಕರ ಬಾಗಿಲಿಗೆ ಬಂದನು. ಸಾಮಿಗೆ ಶಂಕರನ ಉತ್ತೇಜನ ಪ್ರತಿಯೊಂದು ಕೆಲಸದಲ್ಲಿಯೂ ಸಹಾಯಕವಾಗಿದ್ದಿತು.

"ಶಂಕರಾ"

"ಓ! ಸಾಮಿ! ಯಾವಾಗ ಬಂದೆ? ಬಾ ಒಳಕ್ಕೆ" ಮಾತಿನಲ್ಲಿ ಆಹ್ವಾನವಿದ್ದರೂ ಧ್ವನಿಯಲ್ಲಿ ಸ್ವಲ್ಪ ಗಾಬರಿಯೇ ಇತ್ತು.

ಸಾಮಿ ಒಳಕ್ಕೆ ಹೋಗಿ ಕುಳಿತು "ಏನು ಸಮಾಚಾರ? ನಾನು ಹೋದಮೇಲೆ ಏನು ನಡೆಯಿತು?

"ಒಂದು ತಿಂಗಳು ಎಲ್ಲಾ ಸ್ಕೂಲು ಕಾಲೇಜುಗಳೂ ಸ್ಟ್ರೈಕ್. ಒಬ್ಬರೂ ಹೋಗಲಿಲ್ಲ. ನಿತ್ಯ ಮೆರವಣಿಗೆಗಳು. ಆಮೇಲೆ ಯಥಾಪ್ರಕಾರ ಎಲ್ಲರೂ ಬರುತ್ತಿದ್ದಾರೆ. ಇನ್ನು ಹದಿನೈದು ದಿನವಿದೆ, ಪರೀಕ್ಷೆ."

ಅಭ್ಯಾಸ ಬಲದಿಂದ "ಪರೀಕ್ಷೆ" ಯೆನ್ನುತ್ತಲೂ ಸಾಮಿಗೆ ಗಾಬರಿಯಾಯಿತು. ತನ್ನ ಹುಚ್ಚಿಗೆ ತಾನೇ ನಕ್ಕನು. ಆರುತಿಂಗಳು ಸೆರೆಯಲ್ಲಿದ್ದ ತನಗೂ ಪರೀಕ್ಷೆಗೂ ಎಲ್ಲಿಯ ಸಂಬಂಧ?

"ನೀನು ಚೆನ್ನಾಗಿ ಓದುತ್ತಿದ್ದೀಯಾ?"

"ಏನೋ ಕೈಲಾದಮಟ್ಟಿಗೆ; ದುಡ್ಡು ಕಟ್ಟಿ ಆಗಿದೆಯಲ್ಲಾ!"

ಸಾಮಿಗೆ ಬಹಳ ಬೇಸರವಾಯಿತು. ತಾನು ಪಟ್ಟ ಶ್ರಮವೂ, ಮಾಡಿದ ಭಾಷಣಗಳೂ ಒಬ್ಬನಲ್ಲಿಯೂ ಪರಿಣಾಮಕಾರಿಯಾಗಲಿಲ್ಲವೆ? ಆ ಕ್ರಾಂತಿಮಾಸದಲ್ಲಿ ಸ್ವರಾಜ್ಯ ಸಿಕ್ಕಲು ಮೂರು ದಿನಗಳು ಉಳಿದಿದ್ದಂತೆ ಇದ್ದುವು. ಈಗ ಪುನಃ ಆ ಆಸೆ ದೂರ, ಬಹುದೂರ, ಭವಿಷ್ಯತ್ತಿನ ಮುಸುಕಿನಲ್ಲಿ ಸೇರಿಹೋಯಿತು. ಸಾಮಿಯನ್ನು ನಿರಾಸೆ ಆವರಿಸಿತು.

"ಬರುತ್ತೇನಪ್ಪಾ! ನಿನ್ನ ಓದಿಗೆ ಅಡ್ಡಿಯಾದೀತು," ಎಂದು ಎದ್ದನು. ಅವನ ಮಾತಿನ ವ್ಯಂಗ್ಯಾರ್ಥ ಶಂಕರನಿಗೆ ತಿಳಿದರೂ, ಅವನು ಕುರ್ಚಿ ಬಿಟ್ಟು ಎದ್ದುದು ಎಷ್ಟೋ ನೆಮ್ಮದಿಯಾಯಿತು. ತಾನೂ ಎದ್ದು "ಬರ್ತಾ ಇರು. ಏನೂ ತೊಂದರೆಇಲ್ಲ"ಎಂದನು. ಸಾಮಿ ಸುಮ್ಮನೆ ಹೊರಟು ತನ್ನ ಕೊಠಡಿಯನ್ನು ಸೇರಿದನು. ಇವನ ಸಾಮಾನುಗಳನ್ನೆಲ್ಲಾ ಹಳ್ಳಿಗೆ ಸಾಗಿಸಿಬಿಟ್ಟಿದ್ದರು. ಆದರೂ ಸಾಮಿಗೆ ಚಪಲ. ಯಾರೋ ಹೊಸ ಹುಡುಗ ತನ್ನ ಮೇಜಿನ ಬಳಿ ಕುಳಿತು ಓದುತ್ತಿದ್ದನು. ಹೊಸಬನಿರಲಾರ, ಆದರೂ ತನಗೆ ಪರಿಚಯವಿಲ್ಲ. ಹಾಗೆಯೇ ಹಿಂತಿರುಗಲು ತಿರುಗಿದನು. ದೀಪದ ಕೆಳಗೆ ಜವಹರರ ಚಿತ್ರ ಹಾಗೆಯೇ ಇದ್ದಿತು. ಸಾಮಿ ಮಂತ್ರ ಮುಗ್ಧನಂತೆ ಅದರೆದುರಿಗೆ ಹೋಗಿ ನಿಂತನು. ಅದುವರೆಗೆ ಅವನನ್ನು ಆವರಿಸಿದ್ದ ನಿರಾಸೆ ತಟ್ಟನೆ ಮಾಯವಾಯಿತು. ತನ್ನ ಪ್ರಯತ್ನವೆಲ್ಲಾ ವ್ಯರ್ಥವೆ? ಹಾಗಾದರೆ ಆ ಮಹಾನುಭಾವನ ಜೀವನ ವ್ಯರ್ಥವೆ? ಇಲ್ಲ! ಎಂದಿಗೂ ಇಲ್ಲ! ಭಾರತೀಯರು, ತಾವೂ ಒಂದು ಜನಾಂಗವೆಂದು ಅರಿತು ತಲೆಯೆತ್ತಿ ನಿಲ್ಲುವಹಾಗೆ ಮಾಡಿದ ಆತನ ತ್ಯಾಗವೂ ಕಾರ್ಯವೂ ಎಂದಿಗೂ ವ್ಯರ್ಥವಲ್ಲ. ಆತನ ಮಹಾಕಾರ್ಯಕ್ಕೆ ಅಣುಮಾತ್ರ ಸಹಾಯ ಮಾಡಿದ ತನ್ನ ಜೀವನವೂ ವ್ಯರ್ಥವಲ್ಲ. "ಕ್ಷಮಿಸಿ, ಈ ಪಠ ನನ್ನದು" ಎಂದು ಅದನ್ನು ಮೊಳೆಯಿಂದ ತೆಗೆದುಕೊಂಡು ಹೊರಟನು.

* * * * *

ಸೀತಮ್ಮನವರು ಎಳೆಬಿಸಿಲನ್ನು ಕಾಯಿಸುತ್ತಾ ಕಾಲು ನೀಡಿಕೊಂಡು ಕುಳಿತಿದ್ದರು. ಈಚೆಗೆ ಆಕೆಗೆ ತನ್ನಷ್ಟಕ್ಕೆ ತಾನೇ ಮಾತನಾಡಿಕೊಳ್ಳುವ ಅಭ್ಯಾಸ ಬಂದುಹೋಗಿತ್ತು, ಮನಸ್ಸಿನ ಗೋಳನ್ನು ಯಾರೊಡನೆಯೂ

ತೋಡಿಕೊಳ್ಳುವಂತಿಲ್ಲ. ಯಾರಾದರೂ ತನ್ನ ಮಗನನ್ನು ಬಯ್ದರೆ ಆ ದುಃಖವೂ ಆಕೆಗೇ ತಗುಲುತ್ತಿತ್ತು. ಸುಬ್ಬರಾಯರಂತೂ ಸಾಮಿಯ ಹೆಸರನ್ನು ಕೂಡ ಉಚ್ಚರಿಸುತ್ತಿರಲಿಲ್ಲ. ಸೀತಮ್ಮನವರು ಆ ಮಾತನ್ನೆತ್ತಿದರೆ ಸುಬ್ಬರಾಯರಂತೆಯೇ ಬುಸುಗುಟ್ಟುತ್ತಿದ್ದರು. ಯಾರ ಬಯ್ಗಳೂ ತನ್ನ ಕಂದನಿಗೆ ತಟ್ಟದಿರಲೆಂದು ಭಗವಂತನಲ್ಲಿ ಮೊರೆಯಿಡುತ್ತಿರುವುದೇ ಆಕೆಯ ಕೆಲಸವಾಯಿತು. ಈ ದಿನವೂ ಎಂದಿನಂತೆ ಸಾಮಿಯ ವಿಷಯವನ್ನೇ ಚಿಂತಿಸುತ್ತಾ ಕುಳಿತಿದ್ದರು.

"ಹುಡುಗರಿಗೆಲ್ಲಾ ಪರೀಕ್ಷೆಯಂತೆ. ಅದು ಮುಗಿಯುತ್ತಲೇ ಎಲ್ಲರೂ ಊರಿಗೆ ಹೋಗುತ್ತಾರೆ. ಸಾಮಿಯೂ ಹೋದವರ್ಷ ಬಂದಿದ್ದ. ಇಲ್ಲೇ ತುಳಸಿ ಕಟ್ಟೆಯಮೇಲೆ ಕೂತುಕೊಂಡು ತನ್ನ ಸ್ನೇಹಿತರ ವಿಷಯವನ್ನೆಲ್ಲಾ ಹೇಳುತ್ತಿದ್ದ. ಇನ್ನು ಸಾಮಿಯೆಲ್ಲಿ? ರಜ ಬಂದರೇನು? ಬಿಟ್ಟರೇನು?" ಹೀಗೆ ಚಿಂತಿಸುತ್ತಾ ಆಕೆಯ ಕಣ್ಣುಗಳು ತುಂಬಿ ಬಂದು ಬತ್ತಿದ ಕೆನ್ನೆಗಳಮೇಲೆ ನೀರು ಧಾರಾಕಾರವಾಗಿ ಸುರಿಯತೊಡಗಿತು. ಹರಿದು, ಹರಿದು, ನೀರು ಆ ಕೆನ್ನೆಗಳಮೇಲೆ ಕಾಲುವೆಗಳನ್ನು ಕೊರೆದಂತಿದ್ದಿತು.

ಆಗ ತಾನೆ ರೈಲಿನಿಂದ ಬಂದ ಸಾಮಿ ತಾಯಿಯ ಗೋಳನ್ನು ನೋಡಿದನು. ತನ್ನ ಅಭ್ಯುದಯವನ್ನೇ ಗುರಿಯಾಗಿಟ್ಟುಕೊಂಡಿದ್ದ ಆ ಜೀವದ ನೋವಿನ ಆಳ ಅವನ ಹೃದಯವನ್ನು ಕಲಕಿತು. ಓಡಿ ಬಂದು, ತಾಯಿಯನ್ನು ತಬ್ಬಿಕೊಂಡು, "ಅಮ್ಮಾ" ಎಂದನು. ಸೀತಮ್ಮನವರು ಬೆಚ್ಚಿದರು. ತಮ್ಮ ಕಣ್ಣನ್ನು ತಾವೇ ನಂಬಲಾರದೆಹೋದರು. ಪುನಃಪುನಃ ಸಾಮಿಯ ಮೈದಡವಿದರು. ಎಷ್ಟು ಬಾರಿ ತಡವಿದರೂ ಆಕೆಯ ತೃಷ್ಣೆ ಆರುವಂತಿರಲಿಲ್ಲ. "ಬಂದೆಯಾ ಸಾಮಿ! ಎಷ್ಟು ಸಣ್ಣಗಾಗಿದ್ದೀಯಪ್ಪ? ಈ ಕಷ್ಟ ನಿನಗೆಲ್ಲಿ ಬಂತಪ್ಪಾ, ತಂದೆ? ಏಳು, ಊಟಕ್ಕೇಳು, ಅಡುಗೆ ಆಗಿದೆ." ಸಾಮಿ ಮಾತೇ ಇಲ್ಲ. ವೇದಿಕೆಗಳ ಮೇಲೆ ಸಂತತವಾಗಿ ಹರಿದು ಬರುತ್ತಿದ್ದ ವಾಗ್ಝರಿ ಈ ಮೂಕಪ್ರೇಮದ ಎದುರಿಗೆ ಬತ್ತಿಹೋಯಿತು. ಎಳೆಯ ಮಗುವಿನಂತೆ ಸಾಮಿಯೂ ಅಳುತ್ತಿದ್ದನು.

* * * * *

ಸಾಮಿಯ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ತಾಯಿಯ ವಾತ್ಸಲ್ಯ ಎರಡು ದಿನ ಮನಸ್ಸಿಗೆ ಶಾಂತಿಯನ್ನು ನೀಡಿತು. ತಂದೆಗೂ ತನಗೂ ನಡುವೆ ಒಂದುಗೋಡೆಯೇ ಎದ್ದಂತಿದ್ದಿತು. "ತಾನು ಮಾಡಿದುದೇ ಸರಿ" ಎಂದು ಎಷ್ಟು ನಿರ್ಧರವಿದ್ದರೂ ಸಾಮಿಗೆ ತಂದೆಯೆದುರು ತಾನೊಬ್ಬ ಅಪರಾಧಿಯೆಂಬ ಭಾವನೆ ತಲೆದೋರುತ್ತಿತ್ತು. ತಾಯಿಯ ಎದುರಿಗೆ ತನ್ನ ಧ್ಯೇಯಗಳನ್ನು ವಿವರಿಸಿ, ಮನಸ್ಸಿಗೆ ಬಂದಹಾಗೆ ಗಾಳಿ ಗೋಪುರಗಳನ್ನು ಕಟ್ಟುವನು. ತಂದೆಯ ಎದುರಿಗೆ ಮಾತಿಲ್ಲ. ಸುಬ್ಬರಾಯರಿಗೂ ಹಾಗೆಯೇ ಆಗಿದ್ದಿತು. ಈ ಮಗನು ಅವರಿಗೆ ತೀರ ಹೊಸವ್ಯಕ್ತಿಯಾಗಿ ಕಂಡನು. ತನ್ನ ಆಸೆ ಅಭಿಲಾಷೆಗಳಿಗೂ ಅವನ ಧ್ಯೇಯಗಳಿಗೂ ಸಂಬಂಧವೇ ಇರಲಿಲ್ಲ. ತಂದೆ ಮಕ್ಕಳಿಗೆ ಹೆಚ್ಚು ಮಾತನಾಡುವ ಧೈರ್ಯವೇ ಇರಲಿಲ್ಲ.

ಬರಬರುತ್ತ ಸಾಮಿಗೆ ದಿನಗಳನ್ನು ನೂಕುವುದೇ ಕಷ್ಟವಾಯಿತು. ಆ ಹಳ್ಳಿಯಲ್ಲಿ ಎಲ್ಲರಿಗೂ ಸಾಮಿಯ ವಿಷಯದಲ್ಲಿ ಕುತೂಹಲವಿದ್ದಿತೇ ಹೊರತು, ತಮ್ಮ ಆಶೋತ್ತರಗಳಲ್ಲಿ ಭಾಗಕೊಡುವ ಬಾಂಧವ್ಯವಿರಲಿಲ್ಲ. "ವಿದ್ಯಾವಂತರು ಸರ್ಕಾರಿ ನೌಕರಿಗಳಿಗಾಗಿ ತಲ್ಲಣಿಸದೆ ಜನಸೇವೆಗೆ ನಿಂತರೆ ಭಾರತದ ಶೃಂಖಲೆಗಳು ತಾವಾಗಿ ಹರಿದು ಹೋಗುವುವೆ"ಂದು ತಾನೇ ಅನೇಕ ಸಲ ವೇದಿಕೆಗಳಮೇಲೆ ನಿಂತು ಭಾಷಣ ಮಾಡಿದ್ದನು. ಆದರೆ ತಾನು ಕಲಿತ ಸೂತ್ರಾತ್ಮಕವಿದ್ಯೆಯನ್ನು ಕಾರ್ಮಿಕ ಪ್ರಪಂಚಕ್ಕೆ ಇಳಿಸಲು ಸಾಮಿಗೆ ಮಾರ್ಗ ತೋರದೆ ಹೋಯಿತು. ಪುಸ್ತಕ, ವಿಶ್ವವಿದ್ಯಾನಿಲಯಗಳ ಪ್ರಪಂಚಕ್ಕೂ, ವಾಸ್ತವವಾದ ಕಠಿಣ ಪ್ರಪಂಚಕ್ಕೂ ಇದ್ದ ವ್ಯತ್ಯಾಸಕ್ಕೆ ಮನಸ್ಸನ್ನು ತಟ್ಟನೆ ಹೊಂದಿಸಿಕೊಳ್ಳಲಾರದೆ ಹೋದನು. ಫಲಿತಾಂಶವಾಗಿ ಸಾಮಿ ಆ ಹಳ್ಳಿಯಲ್ಲೂ ಒಬ್ಬೊಂಟಿಗನಾಗಿಯೇ ಉಳಿದನು.

* * * *

ಮೂರನೆಯ ವರ್ಷ ಸಾಮಿ ಪುನಃ ಕಾಲೇಜಿಗೆ ಸೇರಿದನು. ಅವನ ತಂದೆ ಸ್ವಲ್ಪ ನಿಷ್ಠುರವಾಗಿಯೇ ಮಾತನಾಡಿ, ಸೇರುವಂತೆ ಹೇಳಿದ್ದರು. ಸಾಮಿಗೂ ಬೇರೆ ಯಾವ ಮಾರ್ಗವೂ ತೋರದೆ ಒಪ್ಪಿಕೊಂಡಿದ್ದನು. ಅವನ ಮುಖ್ಯೋಪಾಧ್ಯಾಯರು "ಯಾವ ರಾಜಕೀಯ ಚಳುವಳಿಯಲ್ಲಿ

ಯೂ ಭಾಗವಹಿಸುವುದಿಲ್ಲವೇ?" ಎಂದು ಕೇಳಿದಾಗ "ಇಲ್ಲ" ಎಂದು ಉತ್ತರ ಕೊಡಲು ಅವನ ಗಂಟಲು ಒಗಿದು ಬಂದಿತು. ತಾನು ದೇಶಕ್ಕೆ ದೊಡ್ಡ ದ್ರೋಹಿಯೆಂಬಂತೆ ಅವನ ಮನಸ್ಸು ತಲ್ಲಣಿಸಿತು. ಕೊಠಡಿಗೆ ಹೋಗಿ ಜವಹರರ ಪಠವನ್ನು ಒಂದು ಬಟ್ಟೆಯಲ್ಲಿ ಸುತ್ತಿ ಪೆಟ್ಟಿಗೆಯ ತಳದಲ್ಲಿ ಮರೆಸಿದನು. ತಾನೂ ಆತನೂ ಒಂದೇ ದೇಶಮಾತೆಯ ಮಕ್ಕಳೆಂದುಕೊಳ್ಳುವುದಕ್ಕೂ ಅವನಿಗೆ ನಾಚಿಕೆಯಾಯಿತು. ಕಾಲೇಜಿನಲ್ಲಿಯೂ ಸಾಮಿಯ ಶಬ್ದವೇ ಇಲ್ಲ. ಯಾವ ಸಂಘದಲ್ಲಿಯೂ ಮುಂದಾಗಿ, ಯಾವ ಚಟುವಟಿಕೆಯಲ್ಲಿಯೂ ನಾಯಕನಾಗಿರುತ್ತಿದ್ದ ಸಾಮಿ ಕೊಠಡಿಯನ್ನು ಬಿಟ್ಟು ಈಚೆಗೇ ಬರುತ್ತಿರಲಿಲ್ಲ. ಯಾರಾದರೂ ಹಾಸ್ಯಕ್ಕೆ, "ಏನಪ್ಪಾ, ದೇಶೋದ್ಧಾರ ಮುಗಿಯಿತೋ?" ಎಂದರೆ ಸಾಮಿಯ ಮುಖ ಕೆಂಪಾಗುವುದು. ಅವನು ಪ್ರತ್ಯುತ್ತರವನ್ನೇ ಕೊಡುತ್ತಿರಲಿಲ್ಲ. ಅವನು ಹಂಗಿಸಿದ್ದ ಉಪಾಧ್ಯಾಯರು ಎಂದಾದರೂ ವ್ಯಂಗ್ಯವಾಗಿ ವಿದ್ಯಾರ್ಥಿಗಳ ಚಳವಳಿಯ ವಿಷಯವಾಗಿ ಮಾತನಾಡಿದರೆ ಸಾಮಿ ತಲೆ ತಗ್ಗಿಸುವನು. ಎಲ್ಲರ ಅವಹೇಳನಗಳಿಗಿಂತ ಅವನ ಅಂತರಾತ್ಮನ ಟೀಕೆಯನ್ನು ಅವನು ಸಹಿಸಲಶಕ್ತನಾಗಿದ್ದನು. "ಎಂತಹ ಧ್ಯೇಯವನ್ನು ಇಲ್ಲವೆಂದು ಹೇಳಿ ಹೇಡಿಯಾದೆನು!" ಎಂಬ ಸಂಕಟ ಅವನನ್ನು ಸವೆಯಿಸುತ್ತಿದ್ದಿತು. ಈಗ ಓದಿ, ಪದವೀಧರನಾಗಿ ತಾನು ಮಾಡಬೇಕಾದ ಕೆಲಸವೇನು? ಯಾವುದಾದರೂ ಹುದ್ದೆಗೆ ಸೇರಿ ಸಾಮ್ರಾಜ್ಯದ ಒಂದು ಅಂಗವಾಗಿ ನಿಲ್ಲಬೇಕಾಗುವುದೆ? ಸಾಮಿಗೆ ಇದು ಬಗೆ ಹರಿಯದ ಸಮಸ್ಯೆಯಾಗಿದ್ದಿತು. ತಿಂಗಳುಗಳು ಉರುಳಿ ಹೋದುವು.

ಪರೀಕ್ಷೆ ಸಮೀಪಿಸುತ್ತಿದ್ದಿತು. ಎಲ್ಲರೂ ಓದುವುದರಲ್ಲಿ ಮಗ್ನರಾಗಿದ್ದರು. ಸಾಮಿಯ ಮನಸ್ಸು ಮಾತ್ರ ನೆಮ್ಮದಿಯಾಗಿರಲಿಲ್ಲ. ಅದು ಹತೋಟಿಮೀರಿ ಕಲ್ಪನಾರಾಜ್ಯದಲ್ಲಿ ಸುಳಿಯುತ್ತಿದ್ದಿತು. ಓದುತ್ತಿದ್ದ ಒಂದು ವಾಕ್ಯವೂ ತಲೆಗೆ ಹಿಡಿಸುತ್ತಿರಲಿಲ್ಲ. ಹಿಡಿಸಲಿಲ್ಲವೆಂಬ ಚಿಂತೆಯೂ ಅವನಿಗೆ ಇರಲಿಲ್ಲ. "ಪವಿತ್ರವಾದ ಧ್ಯೇಯವನ್ನು ಕಳೆದುಕೊಂಡು ಹೇಡಿಯಾಗಿ ವ್ಯರ್ಥಜೀವನವನ್ನು ಸಾಗಿಸುತ್ತಿರುವೆನಲ್ಲಾ" ಎಂಬ ಕೊರಗು ಹತ್ತಿತು.

ನಾಳೆಯೇ ಪರೀಕ್ಷೆ. ಎಲ್ಲರೂ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಸಾಮಿಗೆ ಹುಚ್ಚೇ ಹಿಡಿದಂತಿದ್ದಿತು. ಒಬ್ಬರೊಡನೆಯೂ ಒಂದು ಮಾತನ್ನೂ ಆಡುತ್ತಿರಲಿಲ್ಲ. ಆ ದಿನವೆಲ್ಲಾ ಮೇಜಿನ ಮುಂದೆ ಮಂಕುಬಡಿದವನಂತೆ ಕುಳಿತಿದ್ದನು. ಕತ್ತಲಾದರೂ ಕುರ್ಚಿಯನ್ನು ಬಿಟ್ಟು ಏಳಲಿಲ್ಲ. ಶಂಕರ ಬಂದು "ಬಾ ಸಾಮಿ, ಸ್ವಲ್ಪ ತಿರುಗಾಡಿಕೊಂಡು ಬರೋಣ, ಸುಮ್ಮನೆ ಹೀಗೆ ಓದುತ್ತಿದ್ದರೆ ನಾಳೆ ಏನೂ ಬರೆಯುವುದಕ್ಕೇ ತೋರುವುದಿಲ್ಲ" ಎಂದು ಕರೆದನು. ಸಾಮಿ ಯಂತ್ರದ ಬೊಂಬೆಯಂತೆ ಎದ್ದನು. "ನೀನು ನಡೆ, ಕೋಟು ತಗುಲಿಸಿಕೊಂಡು ಬರುತ್ತೇನೆ," ಎಂದನು. ಶಂಕರ ಹೊರಗೆ ಹೋದನು. ಸಾಮಿ ಪೆಟ್ಟಿಗೆಯನ್ನು ತೆಗೆದು, ಅನೇಕ ತಿಂಗಳುಗಳಿಂದ ಮುಚ್ಚಿಟ್ಟಿದ್ದ ಜವಹರರ ಚಿತ್ರವನ್ನು ತೆಗೆದು ಕೋಟಿನ ಒಳಜೇಬಿನಲ್ಲಿಟ್ಟುಕೊಂಡು ನಡೆದನು. ಪುನಃ ಶಂಕರ ಬರುವ ವೇಳೆಗೆ ಸಾಮಿ ಹೊರಟು ಅರ್ಧಘಂಟೆಯಾಗಿ ಹೋಗಿದ್ದಿತು.

"ಒಳ್ಳೆ ಬುದ್ಧಿವಂತನ ಸಹವಾಸ" ಎಂದುಕೊಂಡನು.

ಮಾರನೆಯ ದಿನ ಪರೀಕ್ಷೆ. ಅವರವರ ಸ್ಥಾನಗಳಲ್ಲಿ ಹುಡುಗರು ಕಾತರರಾಗಿ ಕುಳಿತಿದ್ದರು. ಸಾಮಿಯ ಸ್ಥಾನ ಮಾತ್ರ ಬರಿದಾಗಿದ್ದಿತು.

* * * *

ಸೀತಮ್ಮನವರಿಗೆ ತುಂಬ ಖಾಯಿಲೆಯಾಗಿದ್ದಿತು. ಖಾಯಿಲೆಯೆಂದು ಹಾಸಿಗೆ ಹಿಡಿಯುವಷ್ಟಿಲ್ಲದಿದ್ದರೂ, ಮುಕ್ಕಾಲು ಹೊತ್ತನ್ನೆಲ್ಲಾ ಹಾಸಿಗೆಯಲ್ಲಿಯೇ ಕಳೆಯುತ್ತಿದ್ದರು. ಬೆಳಗ್ಗೆ ಎದ್ದು ಸ್ನಾನಮಾಡಿ ಒಂದು ಹಿಡಿ ಅನ್ನ ಬೇಯಿಸುವಷ್ಟರಲ್ಲಿ ಅವರಿಗೆ ಸಾಕಾಗಿ ಹೋಗುತ್ತಿದ್ದಿತು. "ಏಕೆ ಸೀತಾ, ಹೀಗೆ ಮಾಡುತ್ತಿ? ಡಾಕ್ಟರನ್ನಾದರೂ ಕರೆಸಲೆ?" "ನನಗೇನಾಗಿದೆ, ಡಾಕ್ಟರು ಬಂದು ನೋಡುವುದಕ್ಕೆ? ನೀವೇನೂ ಘಾಬರಿ ಪಡಬೇಡಿ. ಸುಮ್ಮನೆ ಮಲಗಿದೆ. ಸಾಮಿಯ ಕಾಗದ ಬಂತೆ? ಅವನು ಯಾವಾಗ ಬರುತ್ತಾನೆ?" ಸುಬ್ಬರಾಯರ ಮುಖ ಚಿಕ್ಕದಾಯಿತು. ಸಾಮಿಯ ಕಾಗದವಿಲ್ಲದೆ ಎಷ್ಟೋ ದಿನಗಳು ಕಳೆದು ಹೋಗಿದ್ದುವು. ನಿತ್ಯವೂ

ಅಂಚೆಯ ಕಛೇರಿಗೆ ಹೋಗಿ ನಿರಾಶರಾಗಿ ಹಿಂತಿರುಗುತ್ತಿದ್ದರು. ತಮ್ಮ ಅಸಮಾಧಾನವನ್ನು ಹೆಂಡತಿಗೆ ತೋರಗೊಡದೆ, “ಈಗ ಅವನಿಗೆ ಪರೀಕ್ಷೆ ಯಲ್ಲವೆ? ಓದುತ್ತಾ ಇರುತ್ತಾನೆ. ಪುರಸತ್ತು ಎಲ್ಲಿದೆ? ಪರೀಕ್ಷೆಯಾಗು ತ್ತಲೇ ಬರುತ್ತಾನೆ.”

“ನನಗೆ ಸ್ವಸ್ಥವಿಲ್ಲವೆಂದು ಅವನಿಗೆ ಬರೆಯಬೇಡಿ, ಘಾಬರಿ ಪಟ್ಟಾನು.”

ಸುಬ್ಬರಾಯರ ಮನಸ್ಸಿನಲ್ಲಿ ಕೆಲವು ಕಠಿಣವಾದ ಆಲೋಚನೆಗಳು ಸುಳಿದುಹೋದುವು. ತಾಯಿಯ ಇಂತಹ ನಿಷ್ಕಾಮ ಪ್ರೇಮಕ್ಕೆ ಸಾಮಿ ಯೋಗ್ಯನೇ? ಎಂಬ ಪ್ರಶ್ನೆ ತಲೆದೋರಿತು. ಮಾತನಾಡದೆ ಸುಮ್ಮನಿದ್ದರು.

ಪರೀಕ್ಷೆ ಮುಗಿದು ವಾರವಾದರೂ ಸಾಮಿಯ ಸುದ್ದಿಯೇ ಇಲ್ಲ. ಸುಬ್ಬರಾಯರು ಕಾದು ಕಾದು ಕಡೆಗೆ ಬರೆದರು. ಸೀತಮ್ಮನವರಿಗೆ ಖಾಯಿ ಲೆಯಾಗಿ ಅವನನ್ನು ನೋಡಲು ಹಂಬಲಿಸುತ್ತಿರುವರೆಂದು ಬರೆದರು. ಆ ವಿಳಾಸದ ಮನುಷ್ಯ ಪತ್ತೆಇಲ್ಲವೆಂದು ಕಾಗದ ಹಿಂದಕ್ಕೆ ಬಂ ದಿತು. ಸುಬ್ಬರಾಯರಿಗೆ ಗಾಬರಿಯಾಗಿ ಕಾಲೇಜಿನ ಮುಖ್ಯೋಪಾ ಧ್ಯಾಯರಿಗೆ ಬರೆದರು. ಅವರಿಂದ ಉತ್ತರವಾಗಿ, “ಸಾಮಿ ಪರೀಕ್ಷೆಯ ದಿನ ಹೊರಟು ಹೋದವನು ಹಿಂತಿರುಗಿ ಬರಲೇ ಇಲ್ಲ. ಅವನ ಸಾಮಾ ನುಗಳನ್ನು ನಿಮ್ಮ ವಿಳಾಸಕ್ಕೆ ಕಳುಹಿಸಲೇ?” ಎಂದು ಪತ್ರ ಬಂದಿತು. ಸುಬ್ಬರಾಯರ ಎದೆಯೊಡೆದೇ ಹೋಯಿತು.

ಸೀತಮ್ಮನವರು ಹಾಸಿಗೆಯಿಂದ ಏಳುತ್ತಲೇ ಇರಲಿಲ್ಲ. ಸಾಮಿ ಹೊರಟು ಹೋಗಿ ಎರಡು ಮೂರು ತಿಂಗಳುಗಳು ಕಳೆದುಹೋದುವು. ಸೀತಮ್ಮನವರಿಗೆ ಕಾಲಜ್ಞಾನವು ಕೂಡ ಅಳಿಸಿಹೋಗಿದ್ದಿತು.

“ಸಾಮಿಯ ಪರೀಕ್ಷೆ ಇನ್ನೆಷ್ಟುದಿನ?”

“ಇನ್ನೇನು, ಮುಗಿಯುತ್ತೆ” ಸುಬ್ಬರಾಯರೆಂದರು. ಆ ಹೆಂಗರುಳನ್ನು ಅಷ್ಟುನೋಯಿಸಿದ ಸಾಮಿಯನ್ನು ಸೀಳಬೇಕೆನ್ನುವಷ್ಟು ಆಕ್ರೋಶ ಅವರಿಗುಂಟಾಯಿತು.

“ಅವನು ಬರುವವರೆಗೂ ನಾನಿರುವುದಿಲ್ಲ. ಅವನ ಪರೀಕ್ಷೆಗೆ

ತೊಂದರೆಯಾದೀತು, ಬರೆಯಬೇಡಿ. ಎಲ್ಲಾದರೂ ಕಂದ ಸೌಖ್ಯವಾಗಿಯಾಗಿದ್ದರೆ ಸರಿ."

ದಿನಗಳು ಕಳೆಯುತ್ತಾ ಅವರಿಗೆ ಸಾಮಿ ಬೆಳೆದ ಹುಡುಗನೆಂಬುದೇ ಮರೆತು ಹೋಯಿತು. "ಸಾಮಿ ಬಚ್ಚಲಲ್ಲಿ ಬಿದ್ದು ಬಿಟ್ಟನೋ ಏನೋ, ಅಳುತ್ತಿದ್ದಾನೆ ನೋಡಿ! ಜ್ವರಾದೀತು, ಎತ್ತಿಕೊಂಡು ಬನ್ನಿ." "ಅವನಿಗಷ್ಟು ಊಟಮಾಡಿಸಿಬಿಡಿ ಹೊತ್ತಾಗುತ್ತೆ." ಹೀಗೆ ಏನೇನೋ ಮಾತನಾಡುವರು. ಸುಬ್ಬರಾಯರಿಗೆ ಕಣ್ಣೀರನ್ನು ತಡೆಯುವುದೇ ಕಷ್ಟವಾಗುತ್ತಿತ್ತು.

* * * * *

ಜಗುಲಿಯಮೇಲೆ ಸುಬ್ಬರಾಯರು ಸ್ನಾನಮಾಡಿ ಕುಳಿತಿದ್ದರು. ಆಗತಾನೇ ಸೀತಮ್ಮನವರ ಅಂತ್ಯಕ್ರಿಯೆಗಳನ್ನು ಮುಗಿಸಿ ಬಂದಿದ್ದರು. ಕಡೆಗೂ ಸಾಮಿಯನ್ನು ಕಾಣದ ಹಂಬಲಿನಲ್ಲಿಯೇ ಆ ಜೀವ ಪಂಜರವನ್ನು ಬಿಟ್ಟು ಹೋಗಿದ್ದಿತು. ಸುಬ್ಬರಾಯರ ಜಗತ್ತು ಶೂನ್ಯವಾಗಿತ್ತು. ಮನೆಯೇ ಎದ್ದು ಆತನನ್ನು ಹೊರಗಟ್ಟಿದಂತಿತ್ತು. "ಇದ್ದೀಯಾ?" ಎನ್ನುವವರಿಲ್ಲದೆ ಹೋಯಿತು, ಅವರ ಜೀವನ.

ಶೂನ್ಯದೃಷ್ಟಿಯಿಂದ ನೋಡುತ್ತಾ ಕುಳಿತಿದ್ದರು. ಅಂಚೆಯವನು ಒಂದು ಕಾಗದದ ಕಟ್ಟನ್ನು ತಂದುಕೊಟ್ಟನು. ಯಾವುದೋ ಜ್ಞಾನದಲ್ಲಿ ಬಿಚ್ಚಿದರು. ಒಳಗೆ ಜವಹರರ ಪಠವೊಂದಿತ್ತು. ಅದರ ಕೆಳಗೆ ಸಾಮಿಯ ಅಕ್ಷರಗಳಲ್ಲಿ "ಅಮ್ಮನಿಗೆ" ಎಂದು ಬರೆದಿತ್ತು. ಅದನ್ನು ಸುತ್ತುವರಿದಿದ್ದ ಕಾಗದದಲ್ಲಿ ಕಲ್ಕತ್ತೆಯ ಡಾಕ್ಟರೊಬ್ಬರು—ಸಾಮಿ ಕಲ್ಕತ್ತೆಯ ಗಲಭೆಯಲ್ಲಿ ಗುಂಡಿನೇಟಿನ ಪರಿಣಾಮವಾಗಿ ಆಸ್ಪತ್ರೆಗೆ ಸೇರಿ ಮೃತಿಹೊಂದಿದನೆಂತಲೂ, ಅವನ ಇಷ್ಟದ ಪ್ರಕಾರ ಜವಹರರ ಪಠವನ್ನು ಕಳುಹಿಸಿ ಅವನ ಮರಣವಾರ್ತೆಯನ್ನೂ ತಾವು ತಿಳಿಸಬೇಕಾಯಿತೆಂದೂ ಬರೆದಿದ್ದರು. ಕಾಗದವನ್ನೂ ಪಠವನ್ನೂ ಕೆಳಗೆ ಹಾಕಿ ಸುಬ್ಬರಾಯರು ಮೊದಲಿನ ಶೂನ್ಯದೃಷ್ಟಿಯಿಂದಲೇ ನೋಡುತ್ತಾ ಕುಳಿತರು.

ಅನ್ನವು ಸೀದವಾಸನೆ ಮನೆಯೊಳಗೆಲ್ಲಾ ತುಂಬಿ ಹೊರಗಿನ ವಾತಾವರಣದಲ್ಲಿ ಸೇರಿಹೋಗುತ್ತಿದ್ದಿತು.

# ಬಹಿಷ್ಕೃತೆ

ಡಾಕ್ಟರ್ ಥಾಮಸರು ಕೈತೊಳೆದು ಹೊರಗೆ ಬರುವ ವೇಳೆಗೆ ಪುಟ್ಟಣ್ಣಾ ಅವರಿಗಾಗಿ ಕಾಯುತ್ತಾ ಕುಳಿತಿದ್ದನು.

"ಏನು ಡಾಕ್ಟರ್ ?"

"ಒಂದು ಕೇಸಿನ ವಿಚಾರದಲ್ಲಿ ನಿಮ್ಮ ಸಲಹೆ ಕೇಳಲು ಬಂದೆ. ನೀವು ಕೆಲಸದಲ್ಲಿದ್ದರೆ ಆಮೇಲೆ ಬರ್ತೇನೆ."

"ಕೆಲಸವೂ ಇಲ್ಲ, ಏನೂ ಇಲ್ಲ, ಕೂತುಕೊಳ್ಳಿ."

ಥಾಮಸರಿಗೆ ಪುಟ್ಟಣ್ಣಾನನ್ನು ಕಂಡರೆ ಬಹು ವಿಶ್ವಾಸ. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಅವನಿಗೆ ಕೆಲಸದಲ್ಲಿದ್ದ ಆಸಕ್ತಿ, ಬುದ್ಧಿ ತೀಕ್ಷ್ಣತೆಗಳನ್ನು ಕಂಡು ಸಂತೋಷಪಡುತ್ತಿದ್ದರು. ಅವನು ಸ್ವಂತವಾಗಿ ವೈದ್ಯ ವೃತ್ತಿಯನ್ನಾರಂಭಿಸಿದಾಗ ಕೈಮಾರಿ ಸಹಾಯಮಾಡಿದ್ದರು. ಅವನೂ ಅದೇ ವಿಶ್ವಾಸವನ್ನಿಟ್ಟುಕೊಂಡು ಆಗಾಗ ಬಂದು ಅವರ ಸಲಹೆಯನ್ನು ಪಡೆಯುತ್ತಿದ್ದನು. ಅವರೂ ಅವನ ಶ್ರೇಯೋಭಿವೃದ್ಧಿಯಲ್ಲಿ ಮನಸ್ಸಿಟ್ಟು ಬುದ್ಧಿವಾದವನ್ನು ಹೇಳುತ್ತಿದ್ದರು. ಮಾತನಾಡುತ್ತಾ, "ನಮ್ಮ ಅನಾಥಾಲಯಕ್ಕೆ ಈ ದಿನ ಇನ್ನೊಂದು ಮಗು ಬಂತು" ಎಂದು ಥಾಮಸರೆಂದರು.

ಪುಟ್ಟಣ್ಣಾ ಕುತೂಹಲದಿಂದ "ಯಾರದು?" ಎಂದನು. "ಯಾರೋ ಬ್ರಾಹ್ಮಣವಿಧವೆ ಹೆತ್ತಿದ್ದಾಳೆ. ಮಗುವನ್ನು ಸಾಕುವವರು ಯಾರಿದ್ದಾರೆ? ನಿಮ್ಮ ಸಮಾಜಕ್ಕೆ ಈ ವರ್ತಮಾನ ತಿಳಿದರೆ ತಾಯಿಯನ್ನೇ ಉಳಿಯಗೊಡಿಸುವುದಿಲ್ಲ. ಕ್ರಿಸ್ತನ ಮಂದಿರಗಳಿರುವುದೇ ಅನಾಥರಿಗಾಗಿ" ಎಂದರು.

ಪ್ರತಿಯೊಂದು ಶಬ್ದದಲ್ಲಿಯೂ ಮತದ ಅತ್ಯಭಿಮಾನ ಹೊರಹೊಮ್ಮುತ್ತಿತ್ತು. ಅವರ ಮಾತಿನಲ್ಲಿದ್ದ ವಾಸ್ತವಾಂಶ ಪುಟ್ಟಣ್ಣಾನ ಮನಸ್ಸನ್ನು ಚುಚ್ಚಿತು. ನಿಜವೇ! ವಿಧವೆಯ ಮಗುವಿಗೆ ಸಮಾಜದಲ್ಲಿ ಸ್ಥಾನವೆಲ್ಲಿಯದು?

ಥಾಮಸರು ನಗುತ್ತಾ, "ಏನು ಪುಟ್ಟಣ್ಣಾ, ನನ್ನ ಮಾತು ನಿಜವೋ ಸುಳ್ಳೋ ? ನಿಮ್ಮ ಜಾತಿಯ ಅಹಂಕಾರ ನಮ್ಮ ಸಮಾಜ ಸಂಖ್ಯೆಯನ್ನು ಹೆಚ್ಚಿಸುತ್ತಿಲ್ಲವೆ? ಜಾತಿಯ ಮಾತು ಬರಲು ಪುಟ್ಟಣ್ಣನ ರಕ್ತವೂ ಸ್ವಲ್ಪ ಬಿಸಿಯಾಯಿತು.

"ಎಂಥಾ ಮಗು ಸಾರ್ ?" ಎಂದನು.

"ಹೆಣ್ಣು."

ಪುಟ್ಟಣ್ಣನ ಧೈರ್ಯ ಕುಗ್ಗಿತು. ಪ್ರಥಮೆಯ ಮಗುವೆಂದರೇನೇ ಅಂಧಕಾರಮಯವಾದ ಭವಿಷ್ಯತ್ತು. ಅದರಲ್ಲೂ ಹೆಣ್ಣು ಮಗುವೆಂದರೆ! ಅದರ ಜೀವನ ನರಕವಾಸಕ್ಕೂ ಕಠಿಣವಾದೀತು. ತಲೆಯೆತ್ತಿನೋಡಲು ಥಾಮಸರು ಮುಗುಳು ನಗೆ ನಗುತ್ತಿದ್ದರು. ಧೈರ್ಯಮಾಡಿ, ಪುಟ್ಟಣ್ಣ ತಟ್ಟನೆ "ಆ ಮಗುವನ್ನು ನನಗೆ ಕೊಟ್ಟರೆ ಸಾಕುತ್ತೇನೆ ಸಾರ್" ಎಂದನು. ಥಾಮಸರಿಗೆ ಆಶ್ಚರ್ಯವಾಯಿತು. "ನೀನೆ ?" ಎಂದರು. ನಿರ್ಧಾರ ಧ್ವನಿಯಲ್ಲಿ ಪುಟ್ಟಣ್ಣ "ಕಳಿಸಿ ಸಾರ್ ಸಾಕುತ್ತೇನೆ" ಎಂದನು.

ಥಾಮಸರು ಸ್ನೇಹದಿಂದ ಅವನ ಬೆನ್ನಮೇಲೆ ಕೈಯಿಟ್ಟು "ಅದು ಬಹಳ ದೊಡ್ಡ ಹೊಣೆಗಾರಿಕೆ ಪುಟ್ಟಣ್ಣ. ದುಡುಕಬೇಡ. ಸಮಾಜದ ಕಟ್ಟಳೆಗಳನ್ನು ಎದುರಿಸಿ ಜೀವನವನ್ನು ನಿರ್ವಹಿಸುವುದು ಕಷ್ಟ. ನಿಧಾನವಾಗಿ ಯೋಚನೆಮಾಡಿ, ಮನೆಯವರನ್ನೂ ಕೇಳಿ, ಆಗಲೂ ಇದೇ ಮನಸ್ಸಿದ್ದರೆ ನಾಲ್ಕು ದಿನ ಬಿಟ್ಟು ಬಾ. ಮಗುವನ್ನು ಕೊಡುತ್ತೇನೆ" ಎಂದರು.

ಪುಟ್ಟಣ್ಣ "ಮಗುವನ್ನೊಂದು ಸಲ ನೋಡಬಹುದೆ, ಸಾರ್ ?" ಎಂದನು.

"ಅದಕ್ಕೇನು, ಬಾ. ಮಗುವನ್ನೂ ತಾಯಿಯನ್ನೂ ಕೂಡ ತೋರಿಸುತ್ತೇನೆ" ಎಂದು ಒಳಕ್ಕೆ ಕರೆದುಕೊಂಡು ಹೋದರು.

ತಾಯಿಗಿನ್ನೂ ಇಪ್ಪತ್ತುನಾಲ್ಕು ಇಪ್ಪತ್ತೈದು ವರ್ಷಗಳಿರಬಹುದು. ತೊಟ್ಟಿಲಿನಲ್ಲಿ ಎಂಟು ದಿನದ ಮಗು ಮಲಗಿತ್ತು. ತಾಯಿಯ ಬಳಿ ನಾಲ್ಕೈದು ವರ್ಷದ ಹುಡುಗನು ಕುಳಿತಿದ್ದನು. ಹೆಜ್ಜೆಯ ಸದ್ದನ್ನು ಕೇಳಿ ಆಕೆ ಗೋಡೆಯ ಕಡೆ ತಿರುಗಿದರು.

"ದೊಡ್ಡ ಮಗು ಯಾರದು ?" ಎಂದು ಪುಟ್ಟಣ್ಣ ವಿಚಾರಿಸಿದನು.

"ಅವರನ್ನೇ" ಎಂದು ಉತ್ತರವಿತ್ತು ಥಾಮಸರು ಆಕೆಯನ್ನು ಕುರಿತು, "ಇವರು ನಿಮ್ಮ ಮಗುವನ್ನು ಸಾಕಬೇಕೆನ್ನುತ್ತಾರೆ. ಆಗ ಬಹುದೇ?" ಎಂದರು. ಹೆಂಗಸು ಮಾತನಾಡಲಿಲ್ಲ. ಕೈಯನ್ನು ಹಿಂದೆ ಚಾಚಿ ಮಗುವಿನ ಪುಟ್ಟ ಕೈಯನ್ನು ಹಿಡಿದುಕೊಂಡಳು. "ಇವರು ಅನು ಕೂಲಸ್ಥರು. ಮಗು ಸುಖವಾಗಿರುತ್ತೆ. ನೀವಂತೂ ಸಾಕುವಹಾಗಿಲ್ಲ ವಲ್ಲಾ?" ಎಂದರು. ಹೆಂಗಸು ಮೆಲ್ಲಗೆ "ಆಗಲಿ" ಎಂದಳು. ಹೊತ್ತು ಹೆತ್ತ ಮಗುವನ್ನು ಬೇರೆಯವರಿಗೆ ಕೊಡಬೇಕಾಗಿ ಬಂದಾಗ ಆ ಹೆಂಗರು ಳೆಷ್ಟು ನೋಯುತ್ತಿದ್ದಿತೆಂಬ ಅರಿವಾಗಿ ಪುಟ್ಟಣ್ಣ ಹೊರಗೆ ಬಂದನು.

"ಹಾಗಾದರೆ ಇನ್ನು ನಾಲ್ಕು ದಿನಕ್ಕೆ ಒಂದು ಮಗುವನ್ನು ಕರೆ ದುಕೊಂಡು ಹೋಗುತ್ತೇನೆ" ಎಂದು ಪುಟ್ಟಣ್ಣ ಥಾಮಸರಿಗೆ ಕೈಮುಗಿ ದನು. ಥಾಮಸರು ನಗುತ್ತಾ, "ಏನು, ನಿರ್ಧರಿಸಿದ ಹಾಗೆ ಮಾತನಾ ಡುತ್ತಿದ್ದೀರಲ್ಲಾ? ಮದುವೆಯಾಗಿದೆಯೆಂಬ ವಿಚಾರವನ್ನು ಮರೆತು ಬಿಟ್ಟಿರಾ?" ಎಂದರು. ಪುಟ್ಟಣ್ಣನೂ ನಗುತ್ತ ಬೈಸಿಕಲ್ ಹತ್ತಿಕೊಂಡು ಹೊರಟನು.

ಪುಟ್ಟಣ್ಣನಿಗೆ ರುಕ್ಮಿಣಿಯನ್ನೊಪ್ಪಿಸುವುದು ಕಷ್ಟವೇ ಆಯಿತು.

"ಎಲ್ಲಿಯ ಪ್ರಾರಬ್ಧವನ್ನೋ ನಾವೇಕೆ ಕಟ್ಟಿಕೊಳ್ಳಬೇಕು?" ಎಂದಳು.

"ಎಲ್ಲರೂ ಹಾಗೇ ಅಂದರೆ ಹೇಗೆ ರುಕ್ಕೂ?"

"ಯಾರ್‍ಯಾರದೋ ಮಗುವನ್ನು ನಾವೇಕೆ ಸಾಕಬೇಕು?"

"ನಮ್ಮದೇ ಅಂದುಕೋ, ಬ್ರಾಹ್ಮಣರ ಮಗು. ಲಕ್ಷಣವಾಗಿದೆ."

"ಬ್ರಾಹ್ಮಣರ ಮಗುವೆಂದೇನು ಖಂಡಿತ? ಅದರ ತಂದೆ ಯಾರೋ!"

"ಯಾರಾದರೇನು? ದೇವರ ಮಗುವೆಂದು ಸಾಕೋಣ."

"ನಿಮ್ಮ ತಂದೆ ತಾಯಿಗಳಿಗೆ ತಿಳಿದರೆ ಅವರು ನಿಮ್ಮ ಮನೆಯಲ್ಲಿ ನೀರು ಕೂಡ ಕುಡಿಯುವುದಿಲ್ಲ."

"ಅವರಿಗೆ ನಿಜವನ್ನು ಹೇಳಬೇಡ. ಮಗುವನ್ನು ಹೆತ್ತು ತಾಯಿ ಸತ್ತುಹೋದಳೆಂದೂ ಬೇರೆ ಯಾರೂ ದಿಕ್ಕಿಲ್ಲದುದರಿಂದ ನಾವು ಸಾಕಿದೆ ವೆಂದೂ ಹೇಳೋಣ."

"ಏನಾದರೂ ಮಾಡಿಕೊಳ್ಳಿ. ನಾನಂತೂ ಆ ಮಗುವನ್ನು ಸಾಕುವುದಿಲ್ಲ. ಸುಳ್ಳಾದರೂ ಹೇಳಿ ಅದನ್ನು ಸಾಕಬೇಕೆಂಬ ಅಗತ್ಯ ವೇನು? ನನಗೆ ಪ್ರಭುವಿಲ್ಲವೆ?" ಎಂದು ಮಗನನ್ನು ಮುದ್ದಿಟ್ಟು ಕೊಂಡಳು.

"ನಾವು ಸಾಕದಿದ್ದರೆ ಜಾತಿಬಿಟ್ಟು ಹೋಗುತ್ತಲ್ಲಾ."

"ಓಹೋ! ನೀವೊಂದು ಮಗುವನ್ನು ಸಾಕಿಬಿಟ್ಟರೆ ನಿಮ್ಮ ಜಾತಿ ಉದ್ಧಾರವಾಗುತ್ತೆ!" ಎಂದು ರುಕ್ಮಿಣಿ ಎದ್ದು ಹೋದಳು.

"ಹಸಿ ಸೇರಿದರೆ ಹಳ್ಳ" ಎನ್ನುತ್ತ ಪುಟ್ಟಣ್ಣನೂ ಸ್ವಲ್ಪ ಸಿಡುಕಿ ನಿಂದಲೇ ಎದ್ದನು.

ನಾಲ್ಕು ದಿನವಾದ ಮೇಲೆ ಪುಟ್ಟಣ್ಣನೇನೋ ಧೈರ್ಯಮಾಡಿ ಮಗು ವನ್ನು ಮನೆಗೆ ತಂದನು. ಅಸಮಾಧಾನವಾದರೂ ಆ ಹಸುಗೂಸಿನ ನಿಸ್ಸಹಾಯ ಸ್ಥಿತಿಗೆ ರುಕ್ಮಿಣಿಯ ತಾಂತಿಃರುಳು ಮರುಕಗೊಂಡಿತು. ಪ್ರಭಾಕರನಿಗಂತೂ ಆಡಲು ಒಂದು ಜೀವಂತ ಬೊಂಬೆ ಸಿಕ್ಕಿತೆಂದು ಬಹಳ ಸಂತೋಷವಾಯಿತು.

* * * * *

ಆ ದಿನ ಗೌರಿ ಹಬ್ಬ. ರುಕ್ಮಿಣಿ ಆರತಿಗೆ ಸಾಮಗ್ರಿಗಳನ್ನು ಹವ ಣಿಸುತ್ತಿದ್ದಳು. ಜರತಾರಿ ಲಂಗ ಹಾಕಿಕೊಂಡು ಬಿಯ ಅಕ್ಕಪಕ್ಕದ ಮನೆಗಳಲ್ಲಿ ಕರೆದುಬಂದಳು.

"ಅಮ್ಮಾ, ಈ ಬಾಳೆಹಣ್ಣು ನಾನೇ ತಿನ್ನಲೇನಮ್ಮಾ?"

"ಪ್ರಭಾಕರನಿಗೆ ಸ್ವಲ್ಪಕೊಟ್ಟು ತಿನ್ನು. ಕೈ ಲಂಗಕ್ಕೆ ಒರಸಿಕೊಳ್ಳ ಬೇಡ." ದೀಪಕ್ಕೆ ಎಣ್ಣೆಯನ್ನು ಬಗ್ಗಿಸುತ್ತಾ ರುಕ್ಮಿಣಿ ಉತ್ತರ ಕೊಟ್ಟಳು.

"ನೀನೇ ಅಲ್ಲವೇನಮ್ಮ, ನನ್ನಮ್ಮ?" ಬಿಯ ಕೇಳಿದಳು. ರುಕ್ಮಿಣಿ ಗಾಬರಿಯಿಂದ "ಯಾಕೆ?" ಎಂದಳು.

"ಮೂರನೆಯ ಮನೆ ಸೀತಾಬಾಯಿ ಕೇಳಿದರು."

"ಏನು?"

"ನಿಮ್ಮಪ್ಪನ ಹೆಸರೇನೇ? ಎಂದರು. ನಾನು—ಡಾಕ್ಟರ್ ಪುಟ್ಟಣ್ಣ-ಎಂದೆ. ಗಟ್ಟಿಯಾಗಿ ನಕ್ಕು—ಅಪ್ಪನೇನೋ ಆಯಿತು. ಅಮ್ಮ

ಯಾರು ?—ಎಂದರು. ನೀನೇ ಅಲ್ಲವೇನಮ್ಮ ನನ್ನಮ್ಮ, ಬಂಗಾರಮ್ಮ?" ಎಂದು ಜಯ ರುಕ್ಮಿಣಿಯನ್ನಪ್ಪಿದಳು.

ರುಕ್ಮಿಣಿ ಕಣ್ಣಿನ ತೇವವನ್ನೊರಸಿಕೊಳ್ಳುತ್ತಾ "ಹೌದು, ಕಂದಾ" ಎಂದು ಮುದ್ದಿಸಿದಳು.

ಸಂಜೆ ಆರತಿಗೆ ಕರೆದವರೆಲ್ಲಾ ಬಂದರು. ಜಯಾನೇ ಅರಿಸಿನ ಕುಂಕುಮವನ್ನು ಹಂಚಿದಳು. ಎಲ್ಲರೂ ಎದ್ದು ಹೋದಮೇಲೆ ಸಿಧಾನವಾಗಿ ಸೀತಾಬಾಯಿ ಬಂದರು. ಅವರನ್ನು ನೋಡಿ ರುಕ್ಮಿಣಿಗೆ ವಿಪರೀತ ಸಿಟ್ಟುಬಂತು. ಕೇಳಿಯೇ ಬಿಡಬೇಕೆಂದುಕೊಂಡು, "ಜಯಾ, ಪ್ರಭು ಎಲ್ಲಿದ್ದಾನೆ? ಕರಿ" ಎಂದು ಅವಳನ್ನು ಹೊರಗೆ ಕಳುಹಿಸಿದಳು. "ಸೀತಾಬಾಯಿ, ಏನೋ ಒಂದು ತಬ್ಬಲಿ ಮಗುವನ್ನು ನಾವು ಸಾಕಿದರೆ ಅವಳನ್ನು ಚುಚ್ಚುಮಾತನಾಡಿ ನೋಯಿಸಬೇಕೆ? ನಾವು ನಿಮ್ಮಲ್ಲಿ ಏನು ತಪ್ಪುಮಾಡಿದ್ದೇವೆ" ಎಂದಳು.

ಸೀತಾಬಾಯಿಗೆ ಕೋಪದಿಂದ ಮುಖ ಕೆಂಪಾಯಿತು. "ಆಡಬಾರದ ಮಾತನ್ನು ನಾನೇನಾಡಿದೆ?" ಎಂದರು.

"ನಿಮ್ಮಪ್ಪ ಯಾರು, ನಿಮ್ಮಮ್ಮ ಯಾರು ಎಂದು ಅವಳ ತಲೆಯಲ್ಲಿ ಇಲ್ಲದ ಆಲೋಚನೆಗಳನ್ನು ತುಂಬಬೇಕೆ?"

ಸೀತಾಬಾಯಿ ತಟ್ಟನೆ ಎದ್ದು, "ನೀನು ಹುಚ್ಚಿಯ ಹಾಗೆ, ಗಂಡ ಎಲ್ಲೆಲೋ ಹೆತ್ತು ತಂದ ಮಕ್ಕಳನ್ನು ಸಾಕಿದರೆ ಬೇರೆಯವರಿಗೆ ಕಣ್ಣಿಲ್ಲವೆ? ಅವಳ ಮುಖ ನೋಡಿದರೆ ಗೊತ್ತಾಗುತ್ತೆ—ಪುಟ್ಟಣ್ಣನ ಮಗು—ಅಂತ. ಇಲ್ಲದಿದ್ದರೆ ಅದನ್ನು ಸಾಕುವುದಕ್ಕೆ ಅವನಿಗೇನು ಗ್ರಹಚಾರ?" ಎಂದು ಸರ್ರನೆ ಹೊರಟುಹೋದರು. ಅವರಿಗೆ ಕುಂಕುಮ ಕೊಡಬೇಕೆಂದು ಕೂಡ ರುಕ್ಮಿಣಿಗೆ ಜ್ಞಾಪಕ ಬರಲಿಲ್ಲ.

ಸಂಜೆ ಪುಟ್ಟಣ್ಣ ಬಂದಾಗ ರುಕ್ಮಿಣಿ ಅಳುತ್ತಾ ಸೀತಾಬಾಯಿಯ ಮಾತುಗಳನ್ನೆಲ್ಲಾ ಹೇಳಿದಳು. ಪುಟ್ಟಣ್ಣ ಅವಳ ಕಣ್ಣೊರಸಿ "ಇದಕ್ಕೆಲ್ಲಾ ಹೆದರಿದರೆ ಹೇಗೆ ರುಕ್ಕೂ? ಒಳ್ಳೆಯ ಕೆಲಸ ಮಾಡಬೇಕಾದರೆ ಪ್ರಪಂಚದ ಅವಹೇಳನಕ್ಕೆ ಸಿದ್ಧರಾಗಿಯೇ ಇರಬೇಕು."

"ಮಗು ನಿಮ್ಮದು ಎಂದರು" ಎಂದು ರುಕ್ಕು ಬಿಕ್ಕಿದಳು. ಪುಟ್ಟಣ್ಣ ಗಟ್ಟಿಯಾಗಿ ನಕ್ಕು "ಅಯ್ಯೋ ಹುಚ್ಚಿ! ಮಗು ನನ್ನದಾಗಿದ್ದರೆ ಅದರ ತಾಯಿಯನ್ನೂ ನಿನ್ನ ತಲೆಯ ಮೇಲೇ ತಂದುಹಾಕುತ್ತಿದ್ದೆ" ಎಂದನು.

* * * *

ಪ್ರಭು ಆ ದಿನವೇ ಬೆಂಗಳೂರಿಂದ ಬಂದಿದ್ದನು. ಬಾಗಿಲಲ್ಲಿ ನಿಂತಿದ್ದ ಜಯಳನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಆರು ತಿಂಗಳ ಹಿಂದೆ ಎಳೆಯ ಹುಡುಗಿಯಾಗಿದ್ದ ಜಯ ಈಗ ದೊಡ್ಡ ಹೆಂಗಸಿನಂತೆ ಕಾಣಿಸಿದಳು. ಅವಳ ಜಡೆಯನ್ನು ಹಿಡಿದೆಳೆದುಕೊಂಡು ತಾಯಿಯ ಬಳಿಗೆ ಹೋಗಿ, "ಅಮ್ಮಾ, ಜಯಾಗೆ ಮದುವೆ ಯಾವಾಗ?" ಎಂದನು.

ಜಯಾಗೆ ಮುಖವೆಲ್ಲಾ ಕೆಂಪಾಗಿ, "ಥೂ ಹೋಗಣ್ಣಾ" ಎಂದಳು.

"ಹೋಗಣ್ಣಾ ಎಂದರೆ? ಇಷ್ಟು ದೊಡ್ಡವಳಾಗಿ ಮದುವೆ ಬೇಡವೇನೇ?"

ರುಕ್ಮಿಣಿಯೂ ಜಯಾನ ನೋಡಿದಳು. ಹನ್ನೆರಡು ದಿನದ ಮಗು ಮನೆಗೆ ಬಂದಾಗ ಅವಳಿಷ್ಟು ರೂಪವತಿಯಾಗಬಹುದೆಂದು ಕಲ್ಪನೆಯಲ್ಲಿಯೂ ನೆನಸಿರಲಿಲ್ಲ. ಪ್ರಭಾಕರನ ಮಾತುಗಳಿಂದ ಜಯಾನ ಮದುವೆಯ ಕಠಿಣ ಸಮಸ್ಯೆ ರುಕ್ಮಿಣಿಯ ಮನಸ್ಸಿನ ಮುಂದೆ ಸುಳಿದುಹೋಯಿತು.

ಅಂದು ಸೀತಾಬಾಯಿ ಸಿಡುಕಿನಿಂದ ಎದ್ದುಹೋದುದು ಪರಿಣಾಮಕಾರಿಯಾಗದೆ ಇರಲಿಲ್ಲ. ಊರಲ್ಲಿ ಎಲ್ಲರೂ ಬಹುಮಟ್ಟಿಗೆ ಜಯಾಗೂ ಅವಳಿಗೆ ಆಸರೆಯನ್ನಿತ್ತ ಪುಟ್ಟಣ್ಣ ರುಕ್ಮಿಣಿಯರಿಗೂ ಬಹಿಷ್ಕಾರವನ್ನೇ ಹಾಕಿದ್ದರು. ರುಕ್ಮಿಣಿಯೂ ಜಯಳನ್ನು ಆದರವಿಲ್ಲದ ಕಡೆ ಕಳುಹಿಸಿ ಮನನೋಯಿಸುತ್ತಿರಲಿಲ್ಲ. ಹಾಗಾಗಿ ಪಾಠಶಾಲೆ, ಶಾಲೆ ಬಿಟ್ಟರೆ ಮನೆ, ಇಷ್ಟೇ ಜಯಳ ಪ್ರಪಂಚವಾಗಿತ್ತು. ಶಾಲೆಯಲ್ಲಿಯೂ ಸಣ್ಣಪುಟ್ಟ ಅಸಮಾಧಾನಕರ ಪ್ರಸಂಗಗಳು ಆಗಾಗ ನಡೆಯದೆ ಇರುತ್ತಿರಲಿಲ್ಲ. ಮನಸ್ಸು ಮಾಡಿದರೆ ಮಕ್ಕಳಷ್ಟು ಕ್ರೂರಿಗಳಾಗಲು ದೊಡ್ಡವರಿಗೂ ಸಾಧ್ಯವಿಲ್ಲ. ಒಂದೊಂದು ದಿನ ಜತೆಯ ಹುಡುಗಿಯರು ತಮ್ಮ ತಮ್ಮಲ್ಲೇ

ಗುಸುಗುಟ್ಟಿಕೊಂಡು ಸೇರಿಸದಿದ್ದಾಗ ಅಳುತ್ತಾ ಮನೆಗೆ ಬಂದು ಜಯಳು, ರುಕ್ಮಿಣಿಯ ಪ್ರೇಮದಾಸರೆಯಲ್ಲಿ ತನ್ನ ದುಃಖವನ್ನು ಮರೆಯುತ್ತಿದ್ದಳು.

ಮೊದಲು ಕೇವಲ ಒಂದು ಹಠಕ್ಕಾಗಿ ಕರೆತಂದ ಮಗು ತಮ್ಮ ಹೃದಯವನ್ನು ಪ್ರೇಮದಿಂದ ಹೀಗೆ ಬಂಧಿಸಬಹುದೆಂದು ಪುಟ್ಟಣ್ಣ ಎಂದೂ ಆಲೋಚಿಸಿರಲಿಲ್ಲ. ಔದಾರ್ಯದ ಒಂದು ಸಣ್ಣ ಕಣಕ್ಕೆ ಪ್ರತಿಯಾಗಿ ಒಂದು ನಿಧಿಯನ್ನೇ ಸಂಪಾದಿಸಿದಂತೆ ಪುಟ್ಟಣ್ಣನಿಗೆ ತೋರುತ್ತಿದ್ದಿತು. ಜಯಳ ಯಾವ ಮಾತಿಗೂ ಅವನು ಇಲ್ಲವೆನ್ನುತ್ತಿರಲಿಲ್ಲ.

ಈ ದಿನ ಪ್ರಭಾಕರನ ಮಾತಿನಿಂದ ರುಕ್ಮಿಣಿಗೆ ಎಚ್ಚರಿಕೆಯಾದಂತಾಯಿತು. ನಿಜ! ಜಯಾಗೆ ಮದುವೆಮಾಡಿ ಯೋಗ್ಯನಾದೊಬ್ಬ ಪೋಷಕನಿಗೆ ಅವಳ ಹೊಣೆಯನ್ನೊಪ್ಪಿಸಬೇಕು. ಹೀಗೆಯೇ ದಿನಗಳು ಕಳೆದುಹೋಗಿ ತಾನೂ ಪುಟ್ಟಣ್ಣನೂ ಕಾಲನ ಉದರದಲ್ಲಿ ಮರೆಯಾದರೆ ಜಯಾಗೆ ದಿಕ್ಕಾರು?

ಆ ದಿನವೆಲ್ಲಾ ರುಕ್ಮಿಣಿಗೆ ಅದೇ ಯೋಚನೆ. ಸಂಜೆ ಪ್ರಭಾಕರ ಜಯಳೊಡನೆ ಹೊರಗೆ ತಿರುಗಾಡಲು ಹೋದನು. ಪುಟ್ಟಣ್ಣ ಆಕಳಿಸುತ್ತಾ ಒಂದು ವೃತ್ತಪತ್ರಿಕೆಯನ್ನು ಹಿಡಿದುಕೊಂಡು ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದನು. ರುಕ್ಮಿಣಿ ಬೆಳಗಿನಿಂದ ಮನಸ್ಸನ್ನು ಕೊರೆಯುತ್ತಿದ್ದ ಚಿಂತೆಯನ್ನು ಪುಟ್ಟಣ್ಣನ ಎದುರು ಹರವಿದಳು.

"ಜಯಾಗೆ ಮದುವೆ ಮಾಡಬೇಡವೇ?"—

ಪುಟ್ಟಣ್ಣ ಯಾವುದೋ ಧ್ಯಾನದಲ್ಲಿ "ಏನವಸರ?" ಎಂದನು.

"ಅವಸರವೇನು ಬಂತು? ಅವಳಿಗೂ ಹದಿಮೂರು ವರ್ಷವಾಯಿತು."

"ಅವಳಿಗೆ ಮದುವೆಮಾಡುವುದೆಂದರೆ ಅಷ್ಟು ಸುಲಭವೆಂದು ತಿಳಿದಿದ್ದೀಯಾ, ರುಕ್ಕೂ?"

"ದಿನ ಕಳೆದಷ್ಟಕ್ಕೂ ಕಷ್ಟ ಹೆಚ್ಚಾಗುತ್ತೆ."

"ನೋಡೋಣ" ಎಂದು ಪುನಃ ವೃತ್ತಪತ್ರಿಕೆಯ ಕಡೆ ಪುಟ್ಟಣ್ಣ ದೃಷ್ಟಿಯನ್ನು ಹೊರಳಿಸಿದನು. ರುಕ್ಮಿಣಿಯೂ ಯಾವುದೋ ಆಲೋಚನೆಯಲ್ಲಿ ಮಗ್ನಳಾಗಿದ್ದಳು.

ಪುಟ್ಟಣ್ಣ ತಟ್ಟನೆ, "ನಮ್ಮ ಪ್ರಭುವಿಗೇ ಅವಳನ್ನು ಏತಕ್ಕೆ ಮಾಡಿಕೊಳ್ಳಬಾರದು?" ಎಂದನು.

ರುಕ್ಮಿಣಿ ಗಾಬರಿಯಿಂದ, "ಹಾ?" ಎಂದಳು. ಪುಟ್ಟಣ್ಣ ಸುಮ್ಮನಿರಲು ರುಕ್ಮಿಣಿಯ ಮನಸ್ಸಿನಲ್ಲಿ ಕೋಲಾಹಲವೆದ್ದಿತು. ಕುಲಗೋತ್ರಗಳಿಲ್ಲದ ಮಗುವನ್ನು ಮಗಳಂತೆ ಸಾಕಿ ಹೆರರ ಮನೆಗೆ ಕಳುಹಿಸುವುದೇನೋ ಸಾಧ್ಯವಾಗಿ ತೋರಿತು. ಆದರೆ ಅದೇ ಮಗುವನ್ನು ತಮ್ಮ ವಂಶವನ್ನು ಬೆಳೆಸುವ ಸೊಸೆಯಾಗಿ ಸ್ವೀಕರಿಸುವುದು ಇಷ್ಟವಾಗಿ ತೋರಲಿಲ್ಲ. ಅವಳ ಮನಸ್ಸಿನ ಮುಂದೆ ಜಯಳ ಮುಗ್ಧ ಮನೋಹರ ರೂಪ ಸುಳಿದುಹೋಗಿ ತನ್ನ ಆಲೋಚನೆಗಳಿಗೆ ನಾಚಿಕೆಯಾಯಿತು. ಪುಟ್ಟಣ್ಣ ಪುನಃ ವೃತ್ತಪತ್ರಿಕೆಯಲ್ಲಿಯೇ ತಲ್ಲೀನನಾದುದನ್ನು ನೋಡಿ ಮೇಲಕ್ಕೆದ್ದಳು. ಪುಟ್ಟಣ್ಣ ಅವಳ ಕಡೆ ನೋಡದೆಯೇ, "ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲವಲ್ಲಾ" ಎಂದು ನಕ್ಕನು. ರುಕ್ಮಿಣಿಯೂ "ಆಗಬಹುದು, ಅದಕ್ಕೇನು? ಆದರೆ ಪ್ರಭು ಒಪ್ಪಬೇಕಲ್ಲ" ಎಂದಳು.

ಪುಟ್ಟಣ್ಣ ನಗುತ್ತಾ ಹೆಂಡತಿಯನ್ನು ನೋಡಿ, "ಪ್ರಭು ಒಪ್ಪಿದರೂ ನನಗಿಷ್ಟವಿಲ್ಲ, ಜಯಾ ನಮ್ಮ ಮಗಳಲ್ಲವೇ? ಅವಳನ್ನು ಸೊಸೆಯಾಗಿ ಮಾಡಿಕೊಳ್ಳುವುದು ತಪ್ಪೇ" ಎಂದನು.

ರುಕ್ಮಿಣಿಯ ಬಗೆಯ ಮುಂದೆ ಸೀತಾಬಾಯಿಯ ನಂಜಿನ ಮಾತುಗಳು ಸುಳಿದುಹೋದುವು. ಜಯಾ ಪುಟ್ಟಣ್ಣನ ಮಗಳೇ ಎಂಬ ಸಂದೇಹ ತಲೆದೋರದಿರಲಿಲ್ಲ. ಮರುಕ್ಷಣವೇ ತನ್ನ ಆಲೋಚನೆಗೆ ನಾಚಿಕೊಂಡಳು. ಅಷ್ಟುಕಾಲ ಸಂಸಾರಮಾಡಿ ಆ ನಿಷ್ಕಲ್ಮಷ ಜೀವಿಯಲ್ಲಿ ಅನುಮಾನಪಡುವುದೇ ಎಂದು ತನ್ನನ್ನು ಹಳಿದುಕೊಂಡಳು.

ರಾತ್ರಿ ಜಯಾ ಮಲಗಿದಮೇಲೆ ಪ್ರಭಾಕರನ ಕೊಠಡಿಗೆ ರುಕ್ಮಿಣಿ ಹೋದಳು.

ಇನ್ನೆಷ್ಟು ದಿನ ರಜವಿದೆ, ಪ್ರಭೂ?"

"ಇನ್ನೂ ಎರಡುವರೆ ತಿಂಗಳಿದೆ."

"ಏನು ಓದುತ್ತಿದ್ದೀ?"

"ಏನೋ ಕಂತೆ ಪುರಾಣ."

ರುಕ್ಮಿಣಿ ಸ್ವಲ್ಪ ಸುಮ್ಮನಿದ್ದು, "ಜಯಾ ವಿಚಾರ ನಿನಗೆ ಗೊತ್ತೆ ಪ್ರಭೂ?" ಎಂದಳು.

"ಏಕಮ್ಮಾ? ತಬ್ಬಲಿ ಮಗುವನ್ನು ನೀವು ಸಾಕಿದ್ದಲ್ಲವೆ?"

"ಅವಳ ಮದುವೆಯಾಗುವುದು ಕಷ್ಟ ಪ್ರಭು."

"ಬಿಡಮ್ಮಾ ಅಷ್ಟು ಮುದ್ದಾಗಿದ್ದಾಳೆ, ಯಾರಾದರೂ ಮಾಡಿಕೊಳ್ಳುತ್ತಾರೆ."

"ನಿಮ್ಮ ತಂದೆ ನಿನಗೇ ಮಾಡಿಕೊಳ್ಳೋಣವೆಂದರು."

ಪ್ರಭುವಿಗೆ ಮುಖವೆಲ್ಲಾ ಕೆಂಪಾಯಿತು. "ಎಲ್ಲಾದರೂ ಉಂಟೇನಮ್ಮ? ಜಯಾ ನನ್ನ ತಂಗಿಯಲ್ಲವೆ?" ಎಂದನು. ರುಕ್ಮಿಣಿಯ ತಲೆಯಿಂದ ಒಂದು ದೊಡ್ಡ ಹೊರೆ ಇಳಿದಂತಾಗಿ, "ನಾನೂ ಹಾಗೇ ಅಂದುಕೊಂಡೆ. ಆದರೂ ನಿನ್ನನ್ನೊಂದು ಮಾತು ಕೇಳಬೇಕೆಂದು ಸುಮ್ಮನಿದ್ದೆ" ಎಂದಳು.

"ನಾನೂ ಬೆಂಗಳೂರಿನಲ್ಲಿ ನೋಡುತ್ತೇನೆ. ನಮ್ಮ ಕ್ಲಾಸಿನಲ್ಲೇ ಗೋಪಾಲನೆಂಬೊಬ್ಬ ಹುಡುಗನಿದ್ದಾನೆ. ನಮ್ಮ ಜನವೇ ಎಂದು ಕಾಣುತ್ತೆ. ವಿಚಾರಿಸುತ್ತೇನೆ."

"ಅಂತೂ ಅವಳ ಮದುವೆ ಕಷ್ಟ, ಪ್ರಭು. ಅವಳು ತಬ್ಬಲಿ ಮಾತ್ರವಲ್ಲ. ಅವಳ ತಂದೆ ಯಾರೆಂಬುದೇ ಗೊತ್ತಿಲ್ಲ" ಎಂದಳು.

ಪ್ರಭುವಿಗೆ ಇದು ಹೊಸ ವಿಚಾರ. ತಂದೆತಾಯಿಗಳಿಲ್ಲದ ಜಯಳನ್ನು ತಮ್ಮ ತಂದೆ ಸಾಕಲು ತಂದನೆಂದು ತಿಳಿದಿದ್ದನೇ ಹೊರತು, ಸಮಾಜ ಬಹಿಷ್ಕೃತೆಗೆ ಆಶ್ರಯ ನೀಡಿದ್ದರೆಂದು ತಿಳಿದಿರಲಿಲ್ಲ. ತಂದೆಯ ವಿಚಾರದಲ್ಲಿ ಅಭಿಮಾನ ನೂರ್ಮಡಿ ಹೆಚ್ಚಿ "ಈ ಕಾಲದಲ್ಲಿ ಅದನ್ನೆಲ್ಲಾ ಯಾರು ವಿಚಾರಿಸುತ್ತಾರಮ್ಮಾ? ಹುಡುಗಿ ಚೆನ್ನಾಗಿದ್ದು ಓದಿದವಳಾಗಿದ್ದರೆ ಎಂಥವನೂ ಕಣ್ಣುಮುಚ್ಚಿಕೊಂಡು ಒಪ್ಪಿಕೊಳ್ಳುತ್ತಾನೆ" ಎಂದನು.

ರುಕ್ಮಿಣಿ "ನೀನಿನ್ನೂ ಮಗು, ಪ್ರಭು. ಪ್ರಪಂಚ ಜ್ಞಾನವಿಲ್ಲ" ಎಂದು ಅವನ ತಲೆಯನ್ನು ನೇವರಿಸಿ ಹೊರಗೆ ಹೋದಳು.

* * * * *

ಆಗ ತಾನೆ ಮನೆಗೆ ಬಂದ ಪುಟ್ಟಣ್ಣನಿಗೆ ರುಕ್ಮಿಣಿ ಪ್ರಭುವಿನ ಕಾಗದನ್ನು ಕೊಟ್ಟಳು. ಓದಿಕೊಂಡು ಪುಟ್ಟಣ್ಣ "ಇರಲಿ, ನೋಡೋಣ" ಎಂದನು.

"ನಾವು ಹುಡುಗನನ್ನು ನೋಡಬೇಡವೆ ?"

"ಈಗೇನು, ಅವಳ ಮದುವೆ ಆಗಿಹೋಯ್ತೇನು ? ಹುಡುಗ ಜಯನ್ನ ನೋಡಬೇಕು. ಅವನ ತಾಯಿ ಒಪ್ಪಬೇಕು. ಇನ್ನೂ ಎಷ್ಟಾದರೇನೋ !"

"ಪ್ರಭು ಎಂದು ಬರುತ್ತಾನಂತೆ?"

"ಇನ್ನೂ ಎಂಟು ದಿನವಿದೆ. ಈವತ್ತಿನ್ನೂ ಹದಿನೈದು. ಅವರ ರಜಾ ಪ್ರಾರಂಭವಾಗುವುದೇ ಇಪ್ಪತ್ತನಾಲ್ಕಕ್ಕಲ್ಲವೇ? ಜಯಾ ಎಲ್ಲಿ?"

"ಒಳಗೆ ಏನೋ ಓದುತ್ತಿದ್ದಾಳೆ."

"ಸಂಜೆ ಯಾತಕ್ಕೆ ಒಳಗೆ ಕೂತಿರೋದು? ಆಡಿಕೊಳ್ಳಬಾರದೆ?"

"ಜಯಾ" ಎಂದು ರಕ್ಮಿಣಿ ಕೂಗಲು ಅವಳೆದ್ದು ಬಂದಳು.

ಪುಟ್ಟಣ್ಣ "ಸಾಯಂಕಾಲ, ಯಾಕೆ ಒಳಗೆ ಸೇರಿಕೊಂಡಿದ್ದೀ, ಜಯಾ? ಸ್ವಲ್ಪ ಸುತ್ತಾಡಿಕೊಂಡು ಬರೋಣ, ಬರುತ್ತೀಯಾ?"

ಜಯಾ ರುಕ್ಮಿಣಿಯನ್ನು "ನೀನೂ ಬಾಮ್ಮಾ" ಎಂದಳು.

"ನನ್ನ ಅಡುಗೆಯೇ ಮುಗಿದಿಲ್ಲ. ನೀವು ಹೋಗಿ ಬನ್ನಿ" ಎಂದು ರುಕ್ಮಿಣಿ ಒಳಕ್ಕೆ ಹೊರಟುಹೋದಳು.

ಪುಟ್ಟಣ್ಣ ಜಯಳ ಪಾಠಶಾಲೆಯ ಸುದ್ದಿಗಳನ್ನು ಕೇಳುತ್ತಾ ಹೋಗುತ್ತಿದ್ದನು. ಅವಳೂ ವಿರಾಮವಿಲ್ಲದೆ ಹರಟುತ್ತಿದ್ದಳು. ರಸ್ತೆಯ ಪಕ್ಕದಲ್ಲಿ ನಿಂತಿದ್ದ ಥಾಮಸರು, "ಹಲೋ ಪುಟ್ಟಣ್ಣ" ಎಂದುದನ್ನು ಕೇಳಿ ಪುಟ್ಟಣ್ಣ ನಮಸ್ಕರಿಸಿ ನಿಂತನು.

"ಏನು ಈ ಕಡೆ ಹೊರಟಿರಿ?" ಕೈ ಕುಲುಕುತ್ತಾ ಥಾಮಸರು ಕೇಳಿದರು.

"ಸುಮ್ಮನೆ ಸುತ್ತಾಡಿಕೊಂಡು ಬರೋಣವೆಂದು ಹೊರಟೆ."

" ಇವನನ್ನ ನೀವು ನೋಡಿಲ್ಲವಲ್ಲವೇ ? ನನ್ನ ಎರಡನೆಯ ಮಗ ಜಾರ್ಜ್. ಈ ಸಲ ಮೆಡಿಕಲ್ ಮೂರನೆಯ ತರಗತಿಯಲ್ಲಿದ್ದಾನೆ. ಇವರು ಡಾಕ್ಟರ್ ಪುಟ್ಟಣ್ಣ, ಜಾರ್ಜ್ " ಎಂದರು.

ಹುಡುಗ ಕೈ ಮುಗಿದು ನಿಂತನು.

ಪುಟ್ಟಣ್ಣನ ಹಿಂದೆ ನಿಂತಿದ್ದ ಜಯಳನ್ನು ನೋಡಿ ಥಾಮಸರು " ಈ ಹುಡುಗಿ ನಿಮ್ಮ ಮಗಳೆ? " ಎಂದರು.

" ಹೌದು, ನೀವೇ ಕೊಟ್ಟಿರಲ್ಲ."

" ಆ ಹುಡುಗಿಯೇ ಇದು? ನಿಜವೇ? ನೀವು ಬಹಳ ಒಳ್ಳೆಯ ಕೆಲಸ ಮಾಡಿದಿರಿ ಪುಟ್ಟಣ್ಣ, ಮುದ್ದಾದ ಮಗಳು ನಿಮಗೆ ಸಿಕ್ಕಿದಳು. "

ಪುಟ್ಟಣ್ಣ ಮುಂದಕ್ಕೆ ಹೋದಮೇಲೆ ಜಾರ್ಜ್ ತಂದೆಯನ್ನು " ಆ ಹುಡುಗಿ ಯಾರಪ್ಪಾ?" ಎಂದು ಕೇಳಿದನು.

ಥಾಮಸರು ಅವಳ ಕಥೆಯನ್ನೆಲ್ಲಾ ಹೇಳಲು " ಅವರು ಸಾಕಲೊಪ್ಪದೆ ಇದ್ದಿದ್ದರೆ ಆಕೆ ನಮ್ಮ ಮತವನ್ನೇ ಸೇರುತ್ತಿದ್ದಳಲ್ಲವೆ? " ಎಂದನು.

ಪ್ರಭು ರಜೆಗೆ ಗೋಪಾಲನೊಡನೆಯೇ ಬಂದನು. ಪುಟ್ಟಣ್ಣ ಪರಿಚಯಮಾಡಿಕೊಂಡು ಮಾತನಾಡಿದನು. ಜಯಳ ಮದುವೆಯ ಪ್ರಸ್ತಾಪವನ್ನೂ ಎತ್ತಿದನು. ಅವಳೂ ಅವನನ್ನು ಕದ್ದುನೋಡಿ ಒಪ್ಪಿದಳು.

ಎರಡು ದಿನವಾದ ಮೇಲೆ ಪ್ರಭು ಮಾತನಾಡುತ್ತಾ " ನಾನು ಕೇಳಿದ್ದಕ್ಕೆ ಏನು ಹೇಳುತ್ತೀಯೋ? " ಎಂದನು.

ಗೋಪಾಲ " ಏನು? " ಎಂದನು.

" ನಮ್ಮ ಜಯಾನ ನೋಡಿದೆಯಾ? "

" ಹೂ. "

" ಏನೆನ್ನುತ್ತೀ? "

" ನನ್ನದೇನೂ ಆಕ್ಷೇಪಣೆಯಿಲ್ಲ ಪ್ರಭು. ನಮ್ಮ ತಾಯಿಯನ್ನೊಂದು ಬಾರಿ ಕೇಳಿ ನೋಡಬೇಕು. "

" ಕೇಳು. "

" ನಾನು ಕೇಳಿದರೆ ಸಾಲದು. ಅವರೂ ಹುಡುಗಿಯನ್ನು ನೋಡ ಬೇಕು. ಒಂದು ಸಲ ನಿಮ್ಮ ತಂದೆತಾಯಿಗಳು ಬೆಂಗಳೂರಿಗೆ ಬಂದು ಹೋದರೆ."

ರಜಾ ಮುಗಿದು ಪ್ರಭು ಹಿಂದಿರುಗುವಾಗ ಪುಟ್ಟಣ್ಣ ರುಕ್ಮಿಣಿಯರು ಜಯಳೊಡನೆ ಬೆಂಗಳೂರಿಗೆ ಹೋದರು. ಅಲ್ಲಿ ಪುಟ್ಟಣ್ಣನ ಅಣ್ಣ ನಿದ್ದುದರಿಂದ ಇಳಿದುಕೊಳ್ಳುವುದಕ್ಕೆ ಸ್ಥಳ ಹುಡುಕಬೇಕಾಗಿರಲಿಲ್ಲ. ಮಾರನೆ ದಿನ ಪ್ರಭುವೇ ಎಲ್ಲರನ್ನೂ ಗೋಪಾಲನ ಮನೆಗೆ ಕರೆದುಕೊಂಡು ಹೋದನು. ಮನೆಯನ್ನು ನೋಡಿ ರುಕ್ಮಿಣಿ, " ಅಷ್ಟೇನು ಅನುಕೂಲ ಸ್ಥರ ಹಾಗಿಲ್ಲ " ಎಂದಳು.

ಪುಟ್ಟಣ್ಣ " ಹುಡುಗ ಚೆನ್ನಾಗಿದ್ದಾನೆ, ಬುದ್ಧಿವಂತ. ಜಯಾ ಅದೃಷ್ಟದಿಂದ ಮಹಡಿಯ ಮನೆಯನ್ನೇ ಕಟ್ಟಿಸಬಹುದು, ಏನು ಜಯಾ? " ಎಂದನು. ಜಯಳ ಮುಖ ಕೆಂಪೇರಿತು. ರುಕ್ಮಿಣಿಯೂ ಜಯಳೂ ಒಳಗೆ ಹೋಗಲು ಪುಟ್ಟಣ್ಣ ಪ್ರಭು ಗೋಪಾಲರು ಹೊರಗೇ ನಿಂತರು.

* * * * *

ಸಂಜೆ ಪ್ರಭು ಗೋಪಾಲನನ್ನು ಕಂಡು " ಏನೆಂದರು ಗೋಪಾಲ್ " ಎಂದು ಕೇಳಿದನು.

ಗೋಪಾಲ ಸುಮ್ಮನಿದ್ದನು.

" ಒಪ್ಪಿದರಲ್ಲವೆ? ಪುಣ್ಯ ಮಾಡಿರಬೇಕೋ, ನೀನು! ನಮ್ಮ ಜಯನಂತಹ ಹೆಂಡತಿ ಸಿಕ್ಕೋದಕ್ಕೆ!

ಗೋಪಾಲ ಮೆಲ್ಲಗೆ " ಅವರೊಪ್ಪಲಿಲ್ಲ ಪ್ರಭು."

" ಯಾಕೋ? "

" ಕಾರಣವನ್ನು ಕೇಳಬೇಡ."

" ಹೇಳಿಯೇ ತೀರಬೇಕು. ಆವಳಿಗಿಂತ ಚನ್ನಾಗಿರುವ ಹೆಣ್ಣು ನಿನಗೆ ಸಿಕ್ಕುತ್ತೆಂತೋ? "

" ಆ ವಿಚಾರಕ್ಕಾಗಿ ಅಲ್ಲ."

"ಜಯಾಗೆ ಯಾವುದು ಕಡಿಮೆ? ರೂಪವಿಲ್ಲವೆ, ಗುಣವಿಲ್ಲವೆ, ವಿದ್ಯೆಯಿಲ್ಲವೆ?"

"ಎಲ್ಲಾ ಇದೆ."

"ಮತ್ತೇನು?"

"ಆ ಮಾತು ಬಿಟ್ಟುಬಿಡು. ಹಠ ಮಾಡಬೇಡ."

"ಪರವಾಯಿಲ್ಲ ಹೇಳೋ."

"ಊರವರೆಲ್ಲಾ ಏನೇನೋ ಅನ್ನುತ್ತಾರೆ. ಆಕೆ ನಿನ್ನ ತಂಗಿಯಲ್ಲವೆ?"

"ಅಲ್ಲ, ತಂದೆ ತಾಯಿಗಳಿಲ್ಲದ ಹುಡುಗಿಯನ್ನು ನಮ್ಮ ತಂದೆ ಸಾಕಿದರು."

"ನಮ್ಮ ತಾಯಿ ಒಪ್ಪಲಿಲ್ಲ." ಆಡಿದ ಮಾತಿಗಿಂತ ಒಳಗಡಗಿದ್ದ ಅರ್ಥಕ್ಕೆ ನೊಂದು ಪ್ರಭುವಿನ ಮುಖ ಕೆಂಪಾಯಿತು. ಜಯಳ ಜ್ಞಾಪಕ ಬಂದು ಗೋಪಾಲನನ್ನು ಹೊಡೆಯಬೇಕೆನ್ನುವಷ್ಟು ಆಕ್ರೋಶವುಂಟಾಯಿತು. ಅಲ್ಲಿಂದ ಸುಮ್ಮನೆ ಎದ್ದು ಬಂದನು.

ರಾತ್ರಿ ಪುಟ್ಟಣ್ಣ ಮನೆಗೆ ಬಂದಾಗ ರುಕ್ಮಿಣಿ ಸಪ್ಪೆಮುಖವನ್ನಿಟ್ಟುಕೊಂಡಿದ್ದಳು. ಅವನು ಬರುತ್ತಲೇ "ಆ ಹುಡುಗನ ತಾಯಿ ಒಪ್ಪಲಿಲ್ಲವಂತೆ" ಎಂದಳು.

ಪುಟ್ಟಣ್ಣ ಬೇಸರದಿಂದ, "ಓ" ಎಂದನು.

"ಆ ಹಾಳು ಸೀತಾಬಾಯಿಯ ಅವಾಂತರ ಎಲ್ಲೆಲ್ಲೂ ಹಬ್ಬಿದೆ." ಎಂದು ರುಕ್ಮಿಣಿ ಕಣ್ಣೊರೆಸಿಕೊಂಡಳು. ಯಾವುದೋ ಧ್ಯಾನದಲ್ಲಿದ್ದ ಪುಟ್ಟಣ್ಣ ತಟ್ಟನೆ, "ಅವತ್ತು ಅವರ ಮನೆಯಿಂದ ಬಂದಾಗ ನಿನ್ನ ಜತೆಯಲ್ಲಿ ಹೊರಕ್ಕೆಬಂದ ಹೆಂಗಸಾರು?" ಎಂದನು.

"ಯಾರು, ಮಡಿ ಹೆಂಗಸೇ?"

"ಹೂ."

"ಅವರೇ ಅಲ್ಲವೆ, ಗೋಪಾಲನ ತಾಯಿ?"

ಪುಟ್ಟಣ್ಣ ಗಾಬರಿಯಿದ "ಹಾಂ" ಎಂದು ಗಟ್ಟಿಯಾಗಿ ನಗಲಾರಂಭಿಸಿದನು.

ರುಕ್ಮಿಣಿ ತಬ್ಬಿಬ್ಬಾಗಿ "ಏಕೆ?" ಎಂದಳು.

"ದೇವರೇ ಸಂಬಂಧ ತಪ್ಪಿಸಿದ ರುಕ್ಮಿಣಿ. ಅಣ್ಣನಿಗೆ ತಂಗಿಯನ್ನು ಕೊಡಲು ಸಿದ್ಧರಾಗಿದ್ದೆವು. ಆಕೆಯೇ ನಮ್ಮ ಜಯಾ ತಾಯಿ. ಆಸ್ಪತ್ರೆಯಲ್ಲಿ ನೋಡಿದ್ದೆವೇ" ಎಂದನು.

ರುಕ್ಮಿಣಿ ದಿಕ್ಕುತೋರದೆ ಕುರ್ಚಿಯ ಮೇಲೆ ಕುಳಿತಳು. ಸ್ವಲ್ಪ ಹೊತ್ತಾದ ಮೇಲೆ, "ಇವರ ನಡತೆಯಿರುವ ಚಂದಕ್ಕೆ ನಮ್ಮ ಜಯಳನ್ನನ್ನಬೇಕು!"

ಪುಟ್ಟಣ್ಣ ಗಾಬರಿಯಿಂದ "ಜಯಾ ಎಲ್ಲಿದ್ದಾಳೆ?" ಎಂದನು.

"ಅವಳೆಲ್ಲೋ ಅವರ ದೊಡ್ಡಮ್ಮನ ಬಳಿಯಲ್ಲಿ ಹೋಗಿದ್ದಾಳೆ" ಎಂದಾಗಲೇ ಪುಟ್ಟಣ್ಣನಿಗೆ ಸಮಾಧಾನವಾದುದು.

* * * *

ಪುಟ್ಟಣ್ಣ ಜಯಾ ಹೇಳಿದ ವಿಚಾರವನ್ನೇ ಮೆಲಕುಹಾಕುತ್ತಿದ್ದನು. ಇಪ್ಪತ್ತು ವರ್ಷಗಳ ಮಾತು! ಯೌವನದ ಹುಚ್ಚಿಗೆ ಯಾವುದೂ ಅಸಾಧ್ಯವಲ್ಲ. ಜಯಳನ್ನು ಸಮಾಜ ಬಹಿಷ್ಕೃತೆಯಾಗದಂತೆ ತಂದು ಸಾಕಿದ್ದನು. ಮಗುವನ್ನು ತರಲು ಪ್ರೇರೇಪಿಸಿದುದು ಯಾವುದೋ ಧ್ಯೇಯ ಮಾತ್ರ. ಈಗ ಜಯಳ ಆಗುಹೋಗುಗಳು ಹೃದಯವನ್ನು ಬಂಧಿಸಿರುವ ಬಿಡಿಸಲಾಗದ ಕಟ್ಟುಗಳು. ಆ ಮಗುವನ್ನು ಮನೆಗೆ ತಂದ ದಿನ ತಾನೆಂತಹ ಹೊಣೆಯನ್ನು ಹೊತ್ತೆನೆಂಬುದರ ಅರಿವು ಪುಟ್ಟಣ್ಣನಿಗೆ ಈಗ ಉಂಟಾಗಿತ್ತು. ರುಕ್ಮಿಣಿಯೂ ಚಿಂತೆಯಲ್ಲಿ ಮುದಿಯಾಗುತ್ತಿದ್ದಳು.

ಜಯಾನ್ನ ಮನೆಗೆ ತಂದಂದಿನಿಂದ ಅವರಿಗೂ ಒಂದು ರೀತಿಯ ಸಮಾಜ ಬಹಿಷ್ಕಾರವೇ ಆಗಿತ್ತು. ಅಷ್ಟೇಕೆ? ಪ್ರಭು ಇಷ್ಟು ಲಕ್ಷಣವಾಗಿದ್ದರೂ, ಓದಿದ್ದರೂ ಒಬ್ಬರಾದರೂ ಮಗಳನ್ನು ಕೊಡುತ್ತೇವೆಂದು ಮುಂದೆ ಬಂದಿರಲಿಲ್ಲ.

ಜಯಾ ಆ ದಿನವೇ ಮೈಸೂರಿನಿಂದ ಬಂದಿದ್ದಳು. ಅವಳೀಗ ಮೆಡಿಕಲ್ ಕಾಲೇಜಿನ ಎರಡನೆಯ ತರಗತಿಯಲ್ಲಿ ಓದುತ್ತಿದ್ದಳು. ತಂದೆ

ತಾಯಿಗಳು ಒಪ್ಪಿದ್ದರೆ ತಾನು ಡಾಕ್ಟರ್ ಥಾಮಸರ ಮಗ ಜಾರ್ಜನನ್ನು ಮದುವೆಯಾಗುವುದಾಗಿ ಹೇಳಿದ್ದಳು. ಪುಟ್ಟಣ್ಣ ಆ ವಿಚಾರವನ್ನೇ ಕುರಿತು ಯೋಚಿಸುತ್ತಿದ್ದನು. ಬೇಡವೆನ್ನುವ ಅಧಿಕಾರವಾದರೂ ತನಗಿದೆಯೇ, ಎಂಬ ಸಂಶಯು ಅವನಿಗುಂಟಾಗಿತ್ತು. ತನಗೂ ಐವತ್ತನೆಯ ವರ್ಷ ಸಮೀಪಿಸುತ್ತಿತ್ತು. ಹಿಂದು ಸಮಾಜದಲ್ಲಿ ಅವಳ ಮದುವೆ ಸಾಧ್ಯವಾಗಿರಲಿಲ್ಲ. ಡಾಕ್ಟರ್ ಥಾಮಸರಂತೆ ಅವರ ಮಗನೂ ಇದ್ದರೆ ಯೋಗ್ಯನೆಂಬುದರಲ್ಲಿ ಸಂಶಯವಿಲ್ಲ.

ರುಕ್ಮಿಣಿ ಅಲ್ಲಿಗೆ ಬಂದು, "ಜಯಾ ಹೇಳಿದಳೆ?" ಎಂದಳು.

"ಹೂ."

ರುಕ್ಮಿಣಿ ಸುಮ್ಮನಿದ್ದಳು.

"ನಿನ್ನ ಅಭಿಪ್ರಾಯವೇನು?"

"ಅವಳನ್ನು ಹಿಂದೂ ಸಮಾಜದಲ್ಲಿ ನಿಲ್ಲಿಸುವುದಕ್ಕಲ್ಲವೆ, ನೀವು ಸಾಕಿದ್ದು?" ರುಕ್ಮಿಣಿಯ ಧ್ವನಿಯಲ್ಲಿ ಕರುಣೆ ಸಹಾನುಭೂತಿಗಳಿದ್ದುವೇ ಹೊರತು ಟೀಕೆಯಿರಲಿಲ್ಲ.

"ನನ್ನ ಧ್ಯೇಯಗಳಿಗಾಗಿ ಮಗುವಿನ ಸುಖವನ್ನು ಬಲಿ ಕೊಡುವುದಕ್ಕಾಗುತ್ತದೆಯೇ ರುಕ್ಕು? ಈಗಂತಲೂ ನಿಜವಾಗಿ ಆದರ್ಶಕ್ಕೋಸ್ಕರ ಮಗುವನ್ನು ತಂದೆನೋ ಅಹಂಭಾವದಿಂದ ತಂದೆನೋ ಎಂಬ ಸಂಶಯವೂ ಇದೆ. ಈಗ ನಾವು ಒಪ್ಪದಿದ್ದರೆ ಜೀವನವನ್ನೆಲ್ಲಾ ಅವಳು ಸನ್ಯಾಸಿನಿಯಾಗಿಯೇ ಕಳೆಯಬೇಕಾದೀತು; ಇಲ್ಲದಿದ್ದರೆ ತಪ್ಪುಹಾದಿಗೆ ಹೋಗಬೇಕಾದೀತು. ಅವಳಿಂದ ಅಂತಹ ತ್ಯಾಗ ಸಂಯಮಗಳನ್ನು ಅಪೇಕ್ಷಿಸುವ ಹಕ್ಕು ನಮಗಿಲ್ಲ"

"ನನಗೂ ಹಾಗೇ ತೋರಿತು. ಎಲ್ಲಾದರೂ ಅವಳು ಸುಖವಾಗಿದ್ದರೆ ಸರಿ."

*　　*　　*　　*

ಸಂಜೆ ಡಾ|| ಥಾಮಸರು ಪುಟ್ಟಣ್ಣನನ್ನು ಹುಡುಕಿಕೊಂಡು ಬಂ

ದರು. "ಏನು ಪುಟ್ಟಣ್ಣಾ ಕಡೆಗೂ ನಿಮ್ಮ ಹುಡುಗಿ ನಮ್ಮ ಮತಕ್ಕೇ ಸೇರುವಂತಾಯಿತಲ್ಲ" ಎಂದರು.

ಪುಟ್ಟಣ್ಣ ವ್ಯಥೆಯಿಂದ, "ನಮ್ಮ ಸಮಾಜವೇ ಅವರನ್ನು ಹೊರಕ್ಕೆ ನೂಕುತ್ತಿದೆ" ಎಂದನು. ಥಾಮಸರು ಪುಟ್ಟಣ್ಣನ ಭುಜದಮೇಲೆ ಕೈಹಾಕಿ, "ನೀವು ಸಂಕಟಪಡಬೇಡಿ, ಪುಟ್ಟಣ್ಣ, ಜಾರ್ಜ್ ಒಳ್ಳೆಯ ಹುಡುಗ. ನಿಮ್ಮ ಮಗಳನ್ನು ಸುಖವಾಗಿ ನೋಡಿಕೊಳ್ಳುತ್ತಾನೆ" ಎಂದರು. ಪುಟ್ಟಣ್ಣ "ನಿಮ್ಮ ಮಗನೆಂದೇ ನನಗೂ ಸಮಾಧಾನ. ನಿಮ್ಮ ಯೋಗ್ಯತೆಯಲ್ಲಿ ಅರ್ಧಮಟ್ಟಿಗೆ ಆತನಿಗಿದ್ದರೆ ಸಾಕು. ಜಯಾ ಸುಖವಾಗಿದ್ದರೆ ಸರಿ" ಎಂದನು.

# ಅಸಡ್ಡೆಯೋ ಅಕ್ಕರೆಯೋ?

೧

"ಇಂದೂ, ಬಾ ಇಲ್ಲಿ!"

ಮನೆಯ ಮುಂದೆ ಜಾಜಿಯ ಬಳ್ಳಿಯ ಹಿಂದೆ ರಾಮು ಕೂತಿದ್ದ. ಅಲ್ಲಿಂದ ಹೆಂಡತಿಯನ್ನು ಕರೆದ.

"ಬಂದೆ!" ಒಳಗಿನಿಂದ ಉತ್ತರ ಬಂತು.

ರಾಮು ಬಾಗಿಲಿನ ಕಡೆ ಎದುರುನೋಡುತ್ತಾ ಕುಳಿತ. ಎಷ್ಟು ಹೊತ್ತಾದರೂ ಇಂದು ಬರಲಿಲ್ಲ.

ಪುನಃ ಕೂಗಿದ.

"ಇಂದೂ!"

"ಸ್ವಲ್ಪ ತಾಳೀಂದ್ರೆ, ಬಂದೆ!"

ಉತ್ತರ ಸ್ವಲ್ಪ ಬಿರುಸಾಗಿದ್ದಿತು. ರಾಮು ಸುಮ್ಮನೆ ಕುಳಿತ. ಸ್ವಲ್ಪ ಕೋಪ—ತಾನು ಕೂಗಿದ ಕೂಡಲೆ ಬರಲಿಲ್ಲವಲ್ಲಾ ಎಂದು. ಸ್ವಲ್ಪ ಹೊತ್ತಿನ ಮೇಲೆ, ಏನುಮಾಡುತ್ತಿರುವಳೋ ಎಂದು ಕುತೂಹಲ ದಿಂದ ಎದ್ದು ಮೆಲ್ಲಗೆ ಕಿಟಕಿಯಲ್ಲಿ ನೋಡಿದ. ಇಂದಿರಾ ಕರಿಮಣಿಗಳನ್ನು ಪೋಣಿಸುತ್ತ ಕುಳಿತಿದ್ದಳು. ರಾಮೂಗೆ ಪೂರ ಕೋಪ ಬಂತು. "ಮಹಾ ಈ ಕೆಲಸ ಸ್ವಲ್ಪ ನಿಧಾನವಾದರೆ ಆಗುವುದಿಲ್ಲವೇನೋ!" ಎಂದುಕೊಂಡು ಸದ್ದುಮಾಡದೆ ಹೊರಕ್ಕೆ ಹೊರಟ.

ಸ್ವಲ್ಪ ಹೊತ್ತಾದ ಮೇಲೆ ಇಂದು ಎದ್ದು ಬಂದು ನೋಡಿದಳು. ರಾಮು ಇರಲಿಲ್ಲ. ತಿರುಗಿ ಹೋಗಿ, ತನ್ನ ಕೆಲಸಕ್ಕೆ ಕುಳಿತುಕೊಂಡಳು.

ಕತ್ತಲಾದ ಮೇಲೆ ರಾಮು ಬಂದ. ಬಂದವನಿಗೆ ಇನ್ನೂ ಕೋಪ ಇಳಿದಿರಲಿಲ್ಲ. ಮಾತನ್ನೇ ಆಡದೆ ಊಟ ಮಾಡಿದ. ಅವನಿಗೆ ಕೋಪ ಬಂದಿರುವುದು ಇಂದಿರೆಗೆ ತಿಳಿದರೂ ಅದರ ಕಾರಣವನ್ನು ಕಂಡುಹಿಡಿಯ

ಲಾರದವಳಾದಳು. ಅವಳಿಗೆ ದುಃಖ. ಊಟಮಾಡಿ ಮಲಗಿದಳು. ಕಣ್ಣಿನಲ್ಲಿ ನೀರು ಹರಿಯುತ್ತಿದೆ. ಆದರೂ ಶಬ್ದಮಾಡಲಿಲ್ಲ.

ಸ್ವಲ್ಪಹೊತ್ತು ಸುಮ್ಮನಿದ್ದು ರಾಮು "ಇಂದೂ!" ಎಂದ. ಇಂದು ಮಾತನಾಡಲಿಲ್ಲ. ನಿದ್ರೆಯೇನೋ ಎಂದು ರಾಮು ಬಗ್ಗಿ ನೋಡಿದ. ಅಳುತ್ತಿದ್ದಳು. "ಅಯ್ಯೋ, ಹುಚ್ಚೀ! ಅಳೋದು ಯಾಕೇ?" ಎಂದ.

ಇಂದಿರಾ ನಕ್ಕಳು.

೨

ರಾಮು ಆಫೀಸಿನಿಂದ ಆಯಾಸಪಟ್ಟು ಬಂದಿದ್ದಾನೆ; ಬಹಳ ಹಸಿವು. ಮನೆಗೆ ಬಂದು ನೋಡಿದರೆ ಎಲ್ಲೂ ಇಂದಿರಾ ಇಲ್ಲ. ಅಡಿಗೆಯ ಮನೆಯಲ್ಲೂ ಇಲ್ಲ, ಮಲಗುವ ಮನೆಯಲ್ಲೂ ಇಲ್ಲ. ನಿಟ್ಟುಸಿರುಬಿಡುತ್ತಾ ಕುರ್ಚಿಯ ಮೇಲೆ ಕೂತನು. "ಇವಳಿಗೆ ನಾಜೋಕು, ನಯ, ಬರುವು ದೆಂದಿಗೆ? ಇಷ್ಟುಹೊತ್ತಿನಲ್ಲಿ ಎಲ್ಲೋ ಹೊರಟಿದ್ದಾಳೆ. ನಾನು ಮನೆಗೆ ಬರುವ ವೇಳೆಗೇ ಎಲ್ಲಿಯೂ ಇಲ್ಲದ ರಾಜಕಾರ್ಯ, ಇವಳಿಗೆ. . . ."

ಯೋಚನೆ ಮಾಡಮಾಡುತ್ತಾ ಅವನ ಕೋಪ ಮಿತಿಮೀರಿತು. ಅಷ್ಟು ಹೊತ್ತಿಗೆ ಇಂದಿರೆಯ ಧ್ವನಿ ಕೇಳಿಸಿತು—"ಬರ್ತೀನ್ರಿ, ಸುಂದರಮ್ಮ ನವರೇ, ಮನೆಗೆ ಬರುವ ಹೊತ್ತಾಯಿತು."

"ಊ, ಹೊತ್ತಾಗುತ್ತೆ ಹೊತ್ತು!" ಎಂದುಕೊಂಡ ರಾಮು.

ಇಂದಿರಾ ಮನೆಗೆ ಬಂದಳು. ರಾಮುವನ್ನು ನೋಡಿ ಗಾಬರಿ ಯಾಗಿ ಕಾಫಿ ಮಾಡಿಕೊಂಡು ಬಂದಳು.

"ತಿಂಡಿ ಏನೂ ಇಲ್ವೆ?"—ಹುಬ್ಬು ಗಂಟುಹಾಕಿಕೊಂಡು ರಾಮು ಕೇಳಿದ.

ಮೊದಲು ಇಂದಿರಾ ಅವನ ಹುಬ್ಬುಗಂಟನ್ನು ನೋಡಲಿಲ್ಲ. "ಅಯ್ಯೋ, ಇಲ್ಲ. ಊಟವಾಗುತ್ತಲೇ ಸುಂದರಮ್ಮನವರು ಕರೆದರು. ಅಲ್ಲಿ ಹೋದೆ."

ಮಾತು ನಿಂತಿತು. ಮೈ ಬೆವರಿತು. ರಾಮು ಮಾತನಾಡದೆ ದೃಷ್ಟಿಸಿ ನೋಡುತ್ತಿದ್ದನು. ಇಂದಿರೆ ಒಳಕ್ಕೆ ಹೊರಟುಹೋದಳು. ರಾಮು ಕಾಫಿ ಮುಗಿಸಿ ಹೊರಕ್ಕೆ ಹೋದನು.

೩

ಇಂದಿರಾಗೆ ಈಪೊತ್ತು ಎಲ್ಲೂ ಇಲ್ಲದ ಬೇಸರಿಕೆ. ಎಲ್ಲಿ ಕೂತರೂ, ಏನು ಮಾಡಿದರೂ ಹೊತ್ತು ಹೋಗದು. ಯಾರೊಡನೆ ಮಾತನಾಡು ವುದಕ್ಕೂ ಬೇಸರಿಕೆ. ಮನೆಗೆಲಸಗಳನ್ನೆಲ್ಲಾ ಮುಗಿಸಿಕೊಂಡು ಮೆಟ್ಟಲಿನ ಮೇಲೆ ಕುಳಿತಳು. ಏನೋ ದುಃಖ, ಬೇಸರಿಕೆ. ಕಾರಣ ಅವಳಿಗೇ ಗೊತ್ತಿಲ್ಲ. ರಾಮು ಬರುವ ಹೊತ್ತಾಯಿತೆಂದು ಎದ್ದು ಕಾಫಿ ಮಾಡಿ ದಳು. ಎದುರುನೋಡುತ್ತಾ ಕುಳಿತಳು. ಘಂಟೆ ಆರಾಯ್ತು, ಏಳಾಯ್ತು, ರಾಮುವಿನ ಸುಳಿವಿಲ್ಲ. ಇಂದಿರೆಗೆ ಅಳು ಬರುವ ಹಾಗಾಯಿತು. ಜತೆಗೆ ದಿಗಿಲು ಬೇರೆ; ಕಳ್ಳರ ಭಯ, ದೆವ್ವಗಳ ಭಯ; ಕಿಟಕಿಯಲ್ಲಿ ನೋಡು ವುದಕ್ಕೆ ಭಯ; ನೆರೆಹೊರೆಯೂ ಸ್ವಲ್ಪ ದೂರ. ಕೆಲಸದವಳೂ ಹೊರಟು ಹೋಗಿದ್ದಾಳೆ. ಗಡಿಯಾರ ಒಂಬತ್ತು ಘಂಟೆಯನ್ನು ತೋರಿಸಿತು. ರಾಮುವಿನ ಸುದ್ದಿಯೇ ಇಲ್ಲ. ಇಂದಿರೆಗೆ ದಿಕ್ಕೇ ತೋರದು. 'ಏನಾ ಯಿತೋ ಏನೋ' ಎಂಬ ಯೋಚನೆ ಬೇರೆ ಹತ್ತಿಕೊಂಡಿತು. ಹಾಸುಗೆ ಗಳನ್ನು ಹಾಸಿದಳು. ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡರೆ, ತಲೆಗೇ ಹತ್ತಲೊಲ್ಲದು; ಅದನ್ನೂ ಕೆಳಗಿಟ್ಟಳು. ಕಣ್ಣಿನಲ್ಲಿ ನೀರು ಸುರಿಯಲಾ ರಂಭಿಸಿತು. ಕಡೆಗೆ ೯-೩೦ ಘಂಟೆಯ ವೇಳೆಗೆ ರಾಮು ಬಾಗಿಲು ತಟ್ಟಿ ದನು. "ಸದ್ಯ!" ಎಂದು ಒಂದು ನಿಟ್ಟುಸಿರನ್ನು ಬಿಟ್ಟು ಇಂದಿರೆ ಎದ್ದು ಬಾಗಿಲು ತೆರೆದಳು. "ಯಾಕಿಷ್ಟು ಹೊತ್ತಾಯಿತು?" ಎಂದಳು. ರಾಮು ಶಾಂತನಾಗಿ, "ಏನೋ ಇಸ್ಪೀಟು ಆಡುತ್ತಾ ಕೂತುಬಿಟ್ಟೆ, ಶ್ರೀಕಂಠಯ್ಯನ ಮನೇಲಿ" ಎಂದ. ತಾನು ಇಲ್ಲಿ ಇಷ್ಟು ಯೋಚಿಸು ತ್ತಿದ್ದರೆ ಪಕ್ಕದ ಮನೇಲೇ ಇದ್ದ ರಾಮು! ಇಂದಿರೆಗೆ ಸ್ವಲ್ಪ ಕೋಪ ಬಂತು. "ತಾನು ಒಂದುಗಳಿಗೆ ಸುಂದರಮ್ಮನವರ ಮನೆಗೆ ಹೋದರೆ ಎಷ್ಟು ಹಾರಾಟ! ಇವರು ಮಾತ್ರ ರಾತ್ರಿ ಹತ್ತು ಘಂಟೆಗೆ ಬಂದರೂ ಅದು ತಪ್ಪಲ್ಲ" ಎಂದುಕೊಂಡಳು.

೪

ರಾಮು ಉಲ್ಲಾಸದಿಂದ ಹಾಡಿಕೊಳ್ಳುತ್ತಾ ಮನೆಗೆ ಹೊರಟ. ದಾರಿಯಲ್ಲಿ ದುಂಡುಮಾದಿ ಹೂವಿನ ಕುಚ್ಚುಗಳನ್ನು ಹಿಡಿದುಕೊಂಡು ಬರುತ್ತಿದ್ದಳು. ಒಂದು ಕುಚ್ಚನ್ನೂ ಸ್ವಲ್ಪ ವೀಳ್ಯದೆಲೆಯನ್ನೂ ಕೊಂಡು ಕೊಂಡು ಹೊರಟ. ಮನೆಗೆ ಹೋಗಿ ಬಾಗಿಲು ತಟ್ಟಿದರೆ, ಮಲಗಿದ್ದ ಇಂದಿರೆ ಎದ್ದುಬಂದು ಬಾಗಿಲು ತೆರೆದಳು. ಇನ್ನೂ ತಲೆ ಬಾಚಿರಲಿಲ್ಲ. ಮುಖ ಜೋಲುಬಿದ್ದಿದ್ದಿತು.

"ಯಾಕೆ? ಮೈಯಲ್ಲಿ ಚನ್ನಾಗಿಲ್ಲವೆ?" ಎಂದ.

"ಏನೂ ಇಲ್ಲ, ಮೈ ಕೈ ಸ್ವಲ್ಪ ನೋವು."

"ಈವೊತ್ತು ಫಾಲ್ಸ್‌ಗೆ ವಾಕಿಂಗ್ ಹೋಗೋಣ ಅಂತ ಬಂದೆ. ಹೋಗಲಿ ಬಿಡು, ಮಲಗಿಕೋ, ನಾನೂ ಶ್ರೀಕಂಠಯ್ಯನ ಮನೆಗೆ ಹೋಗುತ್ತೇನೆ."

ಇಂದಿರೆಗೆ ಅಸಮಾಧಾನ.—ಎಂದೂ ಇಲ್ಲದೆ, ಹೊರಗೆ ಹೋಗೋಣವೆಂದು ರಾಮು ಕರೆದ ದಿನವೇ ತಾನು ಮಲಗಿದೆನೆಂದು ಅಸಮಾಧಾನ. ಅವಳಿಗೆ ಸ್ವಸ್ಥವಿಲ್ಲವೆಂದು ತಿಳಿದೂ ತನ್ನಷ್ಟಕ್ಕೆ ತಾನು ಹೊರಟುಹೋಗುವನಲ್ಲಾ ಎಂದು ಕೋಪ. ಅವನಿಗೆ ಖಾಯಿಲೆಯಾಗಿದ್ದರೆ, ತಾನು ಹೊರಗೆ ಹೋಗುತ್ತಿದ್ದೆನೇ ಎಂದುಕೊಂಡಳು. ಕಾಫಿ ಮಾಡಿಕೊಟ್ಟಳು. ರಾಮು ಹೊರಟುಹೋದ.

ರಾಮು ಹೊರಟುಹೋಗುತ್ತಲೇ ಇಂದಿರೆಗೆ ಬೇಜಾರಾಯಿತು. "ಏನೂ ಇಲ್ಲ, ಸ್ವಸ್ಥವಾಗಿದ್ದೇನೆ" ಎಂದು ಹೇಳಿ ಹೊರಗೆ ಹೋಗದೆ, ಕೋಪದಿಂದ ಸುಮ್ಮನಿದ್ದುದಕ್ಕಾಗಿ ತನ್ನನ್ನೇ ಬೈದುಕೊಂಡಳು; ಎದ್ದು ಜಡೆ ಹಾಕಿಕೊಂಡಳು; ಹಾಗೇ ಹೊರಗೆ ಹೋಗಿ ಕುಳಿತುಕೊಂಡಳು. ಸ್ವಲ್ಪ ಹೊತ್ತಿಗೆ ಸುಂದರಮ್ಮನವರು ಬೀದಿಯಲ್ಲಿ ಹೋಗುತ್ತಾ "ದೇವಸ್ಥಾನಕ್ಕೆ ಬರುತೀರೇನ್ರಿ?" ಎಂದು ಕರೆದರು. ಇಂದಿರೆಗೂ ಒಬ್ಬಳೇ ಇದ್ದು ಬೇಜಾರಾಗಿತ್ತು. ಎದ್ದು ಹಣ್ಣುಕಾಯಿಗಳನ್ನು ತೆಗೆದುಕೊಂಡು ಹೊರಟಳು.

ರಾಮು, ಇಸ್ಪೀಟು ಆಡುತ್ತ "ಪಾಪ, ಮೈ ಕೈ ನೋವು ಅಂದಳು. ಜ್ವರ ಬಂದಿದೆಯೋನೊ! ಒಬ್ಬಳೇ ಇದ್ದಾಳೆ" ಎಂದುಕೊಂಡು ಸ್ವಲ್ಪ ಹೊತ್ತಿಗೆ ಎದ್ದು ಮನೆಗೆ ಹೊರಟ. ಹೋಗಿ ನೋಡಿದರೆ, ಮನೆಗೆ ಬೀಗ! ದೂರದಲ್ಲಿ ಇಂದಿರೆ ನಗುತ್ತಾ ಸುಂದರಮ್ಮನವರೊಡನೆ ಮಾತನಾಡುತ್ತಾ ಬರುತ್ತಿರುವುದು ಕಾಣಿಸಿತು. ರಾಮು ಅವಳನ್ನು ನೋಡಿಯೂ ನೋಡದಂತೆ ಹೊರಟುಹೋದನು. ಇಂದಿರೆಯೂ, ರಾಮು ಮನೆಯಿಂದ ಬರುವುದನ್ನು ನೋಡಿ ಗಾಬರಿಯಾದಳು. ಮಾತು, ನಗು, ಎಲ್ಲಾ ನಿಂತಿತು. ಮನೆಗೆ ಬಂದಳು. ಯಥಾಪ್ರಕಾರ ಆ ಹೊತ್ತೂ ರಾಮು ಹತ್ತು ಘಂಟೆಗೆ ಮನೆಗೆ ಬಂದ. ಬಂದವನು ಮಾತನಾಡದೆ ಊಟಮಾಡಿ, ಮಲಗಿದ. ಪಕ್ಕದಲ್ಲಿ ಇಂದಿರೆ ಅಳುತ್ತಾ ಬುಸುಗುಟ್ಟುವುದು ಕೇಳಿಸದಂತೆ ಮುಸುಕನ್ನು ಮೇಲಕ್ಕೆಳೆದುಕೊಂಡ.

೨೫

ಇಂದಿರೆ ಹಬ್ಬದಡುಗೆ ಮಾಡಿದಳು. ಉತ್ಸಾಹದಿಂದ ರುಚಿರುಚಿಯಾಗಿ ಮಾಡಿದಳು. ಆ ದಿನ ರಾಮುವೂ ಮನೆಗೆ ಬೇಗ ಬಂದ. ಸ್ನಾನ ಮಾಡಿ ಅಡುಗೆ ಮನೆಯಲ್ಲಿ ಹೋಗಿ ಕುಳಿತುಕೊಂಡ. ಮಾಡಿದ್ದ ಇಡ್ಲಿಯಲ್ಲಿ ಒಂದನ್ನು ತಟ್ಟೆಯಲ್ಲಿ ಹಾಕಿ ಚಟ್ನಿಹಾಕಿ ಕೈಗೆ ಕೊಟ್ಟಳು. ರಾಮು ಕಚ್ಚಿ ಕಚ್ಚಿ ತಿನ್ನುತ್ತಾ, "ಈವೊತ್ತೇನೋ ಹಸಿವೇ ಇಲ್ಲ. ಶ್ರೀಕಂಠಯ್ಯನ ಮನೇಲಿ, ನಿಮ್ಮ ಸುಂದರಮ್ಮಾನೂ ಒಂದಿಡ್ಲಿ ಕೊಟ್ಟರು. ಬಹಳ ಚೆನ್ನಾಗಿತ್ತು. ಇಷ್ಟು ಸ್ನೇಹ, ಸ್ವಲ್ಪ ಅಡುಗೆ ಕಲಿತುಕೊಳ್ಳಬಾರದೆ ನೀನು ಅವರ ಹತ್ತಿರ?" ಎಂದ. ಇಂದಿರೆಗೆ ತಟಕ್ಕನೆ ಕೋಪ ಬಂತು: ತಾನಿಷ್ಟು ಆದರದಿಂದ, ಉತ್ಸಾಹದಿಂದ ಅಡುಗೆ ಮಾಡಿಟ್ಟರೆ, ಇವನಿಗೆ ಅದು ರುಚಿಸಲಿಲ್ಲವಲ್ಲಾ ಎಂದು. "ಎಷ್ಟು ಮಾಡಿದರೂ ಇಷ್ಟೆ!" ಎಂದುಕೊಂಡಳು. ಊಟಮಾಡುವಾಗ ಮಾತನ್ನೇ ಆಡಲಿಲ್ಲ. ಊಟವಾಗುತ್ತಲೆ ಎಲೆ ಅಡಕೆಯನ್ನು ಕೊಟ್ಟು, ಅಡುಗೆಮನೆಯಲ್ಲಿ ಕೆಲಸಕ್ಕೆ ಹೊರಟುಹೋದಳು. ರಾಮು ಮೂರು ನಾಲ್ಕು ಸಲ ಇಂದೂ ಇಂದೂ ಎಂದು ಕರೆದರೂ ಕೇಳಿಸದಂತಿದ್ದಳು.

ಮೂರು ಘಂಟೆಯ ಸಮಯ. ಅಂಚೆಯವನು ಬಾಗಿಲು ತಟ್ಟಿದನು. ರಾಮು ಬಾಗಿಲು ತೆಗೆದು ಮಾವನವರ ಕಾಗದವನ್ನು ತೆಗೆದುಕೊಂಡನು. ತಾವು ಬುಧವಾರ ಬರುವುದಾಗಿಯೂ, ಮಗಳನ್ನು ಸ್ವಲ್ಪ ದಿವಸದ ಮಟ್ಟಿಗೆ ಕಳುಹಿಸಬೇಕಾಗಿಯೂ ಬರೆದಿದ್ದರು. ಒಳಗೆ ಬಂದು ಇಂದಿರೆಗೆ ತೋರಿಸಿದ. ಇಂದಿರೆಯ ಮುಖ ಮರಳಿತು. ತವರುಮನೆಯಿಂದ ಬಂದು ಆರು ತಿಂಗಳಾಗಿತ್ತು. ತಂದೆ ಬರುವರೆಂದು ತಿಳಿದು ಅವಳ ಕೋಪವೆಲ್ಲಾ ಮಾಯವಾಯಿತು. "ನಾಳೆಯೇ ಬುಧವಾರ" ಎಂದಳು. ರಾಮು ಬೇಸರದಿಂದ "ಹುಂ" ಎಂದು, ಹೊರಟುಹೋದನು.

ಮರುದಿನ ಇಂದಿರೆಗೆ ಬಹಳ ಉತ್ಸಾಹ. ತಂದೆ ಬರುವರೆಂದು ಹಬ್ಬದಡುಗೆ ಮಾಡಿದಳು: ಕೀರು, ಚಿತ್ರಾನ್ನ. ರಾಮು ಬೆಳಗ್ಗೆ ಕೆಲಸಕ್ಕೆ ಹೋದವನು ಬಂದಿರಲಿಲ್ಲ.

ಹನ್ನೊಂದು ಘಂಟೆಯ ಹೊತ್ತಿಗೆ ಇಂದಿರೆಯ ತಂದೆ ಮನೆಯ ಮುಂದೆ ಬಸ್ಸಿನಿಂದ ಇಳಿದರು. ಬಾಗಿಲಲ್ಲೇ ಇಂದಿರೆ ಕಾದಿದ್ದಳು. ಮುಖ ಮರಳಿತು. ಆಳನ್ನು ಕರೆದು ಸಾಮಾನುಗಳನ್ನು ಒಳಗಿಡಿಸಿದಳು. "ಅಮ್ಮ ಚನ್ನಾಗಿದ್ದಾಳೇನಪ್ಪಾ ?" ಎಂದು ಕೇಳಿದಳು.

"ಇದ್ದಾಳಮ್ಮ. ನೀನು? ಈಗ ಬರುತ್ತೀಯ ಊರಿಗೆ?

"ಕೇಳಬೇಕಪ್ಪ !"

ಕೃಷ್ಣರಾಯರು ಸುಮ್ಮನಾದರು.

ಘಂಟೆ ಹನ್ನೆರಡಾಯಿತು, ಒಂದಾಯಿತು ; ರಾಮುವಿನ ಸುದ್ದಿಯೇ ಇಲ್ಲ. ಇಂದಿರೆಗೆ ಬೇಸರವಾಯಿತು— ಅಪರೂಪಕ್ಕೆ ತನ್ನ ತಂದೆ ಬಂದಿದ್ದರೆ ಹೀಗೆ ಅಸಡ್ಡೆ ಮಾಡುವನಲ್ಲಾ ಎಂದು. "ಹೋಗಲಿ, ಅಪ್ಪ; ನೀನೇಕೆ ಕಾದಿರುವುದು ? ಊಟ ಮಾಡಿಬಿಡು !" ಎಂದಳು.

"ಬರಲೀಮ್ಮಾ ನಿನ್ನ ಗಂಡಾನೂ!" ಎಂದು ಸುಮ್ಮನೆ ಕಾದು ಕುಳಿತಿದ್ದರು.

ಮೂರು ಘಂಟೆಗೆ ರಾಮು ಬಂದು ಬೈಸ್ಕಲ್ಲಿನಿಂದ ಇಳಿದ. "ಯಾಕಪ್ಪಾ, ಹೊತ್ತಾಯಿತು?" ಎಂದರು ಕೃಷ್ಣರಾಯರು. "ಏನೋ ಕೆಲಸವಿತ್ತು" ಎಂದು ಉತ್ತರಕೊಟ್ಟ ರಾಮು.

ಇಂದಿರೆ ಬಡಿಸಿದಳು. ಎಷ್ಟು ಕೋಪವಿದ್ದರೂ ತಂದೆಯ ಬರುವಿಕೆ ಯಿಂದಾಹ ಉತ್ಸಾಹ ಮರೆಯಾಗಲಿಲ್ಲ. ಮಾತನಾಡುತ್ತಾ ಬಡಿಸಿದಳು.

"ಚಿತ್ರಾನ್ನ ಚೆನ್ನಾಗಿದೆಯಮ್ಮಾ" ಎಂದರು ಕೃಷ್ಣರಾಯರು. ಇಂದಿರೆ ಇನ್ನಷ್ಟು ಬಡಿಸಿದಳು. ರಾಮು ಮೌನವ್ರತ.

"ಇಂದಿರಾನ ಕೆಲವು ದಿವಸ ಕಳುಹಿಸುತ್ತೀಯೇನಪ್ಪಾ?"

"ಬೇಕಾದರೆ ಕರೆದುಕೊಂಡು ಹೋಗಿ."

ಮಾತು ಒಳ್ಳೆಯದಾದರೂ ಧ್ವನಿ ಕಠಿಣ. "ಹೋಗಲಿ! ಅವಳಿಗಾ ಗುವುದು ಶಾಸ್ತಿ!" ಎಂದ ಹಾಗಿತ್ತು.

ಊಟವಾದ ಮೇಲೆ ಕೃಷ್ಣರಾಯರು ತಮಗೆ ಕೆಲಸವಿದೆಯೆಂದೂ ಸಾಯಂಕಾಲವೇ ಹೊರಡಬೇಕೆಂದೂ ಹೇಳಿದರು.

ಇಂದಿರೆ ಗಂಡನಿಗೆ ತಾಂಬೂಲವನ್ನು ಕೊಡುತ್ತಾ "ಹೋಗಿ ಬರಲೇ?" ಎಂದಳು.

"ನಿನ್ನಿಷ್ಟ!"

"ಹಾಗೆಂದರೆ ಹೇಗೆ? ಸಮಾಧಾನವಾಗಿ ಕಳುಹಿಸಕೂಡದೆ?"

"ಶಾನೆ! ನಿನಗೆ ಬೇಕಾಗಿರುವುದು ನನ್ನ ಸಮಾಧಾನ!"

ಬೇಗಬೇಗ ಕೋಟನ್ನು ತಗುಲಿಸಿಕೊಂಡು ರಾಮು ಹೊರಕ್ಕೆ ಹೊರಟೇಬಿಟ್ಟ.

ಇಂದಿರೆಗೆ ಏನೂ ತೋರಲಿಲ್ಲ! ಒಂದುಕಡೆ ಹೊರಡಬೇಕೆಂಬ ಆಸೆ. ಇನ್ನೊಂದು ಕಡೆ ರಾಮುವಿಗೆ ಅಸಮಾಧಾನವೆಂಬ ಚಿಂತೆ. ತನ್ನ ಆಸೆ ಯನ್ನು ತೀರಿಸುವ ಯೋಚನೆಯೇ ರಾಮೂಗೆ ಇಲ್ಲವೆಂಬ ಕೋಪ. ಕೊನೆಗೆ ಮನಸ್ಸನ್ನು ಗಟ್ಟಿಮಾಡಿಕೊಂಡು, "ಹೋಗೇಬಿಡೋಣ. ಆದುದಾಗಲಿ" ಎಂದು ಎದ್ದು ಹಾಸುಗೆಯನ್ನು ಕಟ್ಟಿದಳು. ಬಸ್ಸು ಬರುವುದು ನಾಲ್ಕೂ ವರೆ ಘಂಟೆಗೆ. ರಾಮು ಮೂರುವರೆ ಆದರೂ ಮನೆಗೆ ಬರಲಿಲ್ಲ. ಹೇಳದೆ ಹೇಗೆ ಹೋಗುವುದೆಂಬ ಚಿಂತೆ. ನಾಲ್ಕು ಘಂಟೆಗೆ ರಾಮು ಬಂದ. ಹೆಂಡತಿ ಹಾಸಿಗೆ ಕಟ್ಟಿದ್ದನ್ನು ನೋಡಿ ಏನೂ ಮಾತನಾಡದೆ ಮಾವನವರ ಹತ್ತಿರ ಮಾತನಾಡುತ್ತಿದ್ದ. ನಾಲ್ಕುವರೆ ಘಂಟೆಗೆ ಬಸ್ಸು ಬಂತು. ಇಂದಿರೆ "ಬರುತ್ತೇನೆ" ಎಂದಳು. ರಾಮು ಆ ಕಡೆ ನೋಡಲೇ ಇಲ್ಲ. ಇಂದಿರೆಗೆ ಬಸ್ಸು ಹೊರಡುವವರೆಗೂ ರಾಮು ತನ್ನನ್ನು ಮಾತನಾಡಿಸುತ್ತಾನೆಂದು ಚಪಲ. ನಿರಾಶಳಾಗಿ ಹೊರಟುಹೋದಳು.

೬

ಇಂದಿರೆ ಹೊರಟುಹೋಗಿ ನಾಲ್ಕೈದು ದಿನಗಳಾದುವು. ರಾಮುಗೆ ಬೇಸರ. ಮನೆಯೊಳಗೆ ಬೇಸರ. ಹೊರಗೆ ಬೇಸರ. ಇಂದಿರೆ ಹೋದವಳು ಕಾಗದವನ್ನೇ ಬರೆದಿರಲಿಲ್ಲ. ಮೊದಮೊದಲು ಇವನಿಗೂ ಕೋಪ, ಬರೆಯ ಬಾರದೆಂದು ನಿರ್ಧರಿಸಿದನು. ದಿನದಿನಕ್ಕೂ ಬೇಸರ ಹೆಚ್ಚಾಯಿತು. ಎಷ್ಟು ದಿನಕ್ಕೆ ಹಿಂದಿರುಗಿ ಬರುವಳೆಂಬುದೂ ಗೊತ್ತಿಲ್ಲ. ಕಡೆಗೆ ಒಂದು ಕಾಗದ ವನ್ನು ಬರೆದನು. ಉತ್ತರವಾಗಿ ಅವನ ಮಾವನವರಿಂದ ಕಾಗದ ಬಂತು. "ಅಲ್ಲಿಂದ ಬಂದ ದಿನದಿಂದ ಇಂದಿರಾಗೆ ಜ್ವರ. ಮಲೇರಿಯಾ ಎಂದು ಕಾಣುತ್ತದೆ. ಗಾಬರಿಯೇನೂ ಇಲ್ಲ. ಸ್ವಲ್ಪ ಗುಣವಾಗುತ್ತಲೇ ಕಳು ಹಿಸಿ ಕೊಡುತ್ತೇನೆ" ಎಂದು ಬರೆದಿದ್ದರು. ರಾಮುವಿಗೆ ಮನಸ್ಸು ಇನ್ನೂ ಅಸ್ವಸ್ಥವಾಯಿತು. "ಪಾಪ! ಜ್ವರದಲ್ಲಿ ಎಷ್ಟು ನೊಂದುಕೊಂಡಳೋ! ಅವರ ಅಪ್ಪನ ಮನೆಗೆ ಅವಳು ಹೋಗಬೇಕೆನ್ನುವುದು ಸಹಜವಲ್ಲವೆ? ನಾನೇಕೆ ಅಷ್ಟು ರೇಗಾಡಿದುದು? ಇಲ್ಲಿ, ಪಾಪ! ಅವಳಿಗೆ ಎಷ್ಟು ಬೇಜಾರೋ! ನಾನೆಲ್ಲೂ ಅವಳನ್ನು ಕರೆದುಕೊಂಡು ಹೋಗುವುದಿಲ್ಲ. ಮನೆಯಲ್ಲಿ ಒಬ್ಬಳೇ ಇರುತ್ತಾಳೆ. ಈಸಲ ಬಂದರೆ ಇನ್ನೂ ಸುಖವಾಗಿ ನೋಡಿಕೊಳ್ಳಬೇಕು" ಎಂದುಕೊಂಡನು. ಮನಸ್ಸು ನಿಲ್ಲದೆ ನಾಲ್ಕು ದಿನ ರಜಾ ತೆಗೆದುಕೊಂಡು ಮಾವನ ಊರಿಗೆ ಹೋದನು. ಅಪರೂಪಕ್ಕೆ ಅಳಿಯನು ಬಂದನೆಂದು ಎಲ್ಲರಿಗೂ ಸಂಭ್ರಮ. ಇಂದಿರೆಗೂ ಹೊಸದಾಗಿ ಗಂಡನನ್ನು ಕಂಡಂತೆ ಹಿಗ್ಗು. ಜ್ವರ ಬಿಟ್ಟಿತ್ತು. ರಜಾ ತೀರುತ್ತಲೆ ಇಬ್ಬರೂ ಹೊರಡುವುದೆಂದು ಗೊತ್ತಾಯಿತು. ರಾಮೂಗೆ ಎಷ್ಟು ಉಪ ಚಾರಮಾಡಿದರೂ ಇಂದಿರೆಗೆ ತೃಪ್ತಿಯಿಲ್ಲ!

ಬಸ್ಸಿನಲ್ಲಿ ಹೊರಟು ಊರಿಗೆ ಬಂದು ಇಳಿದರು. ರಾಮು ಸಾಮಾ ನನ್ನೆಲ್ಲಾ ಒಳಗಿಡಿಸಿ, ಸ್ವಲ್ಪ ಹಾಗೆ ಹೀಗೆ ಓಡಾಡಿ, "ನಾನು ಸ್ವಲ್ಪ ಶ್ರೀಕಂಠಯ್ಯನ ಮನೆಗೆ ಹೋಗಿ ಬರುತ್ತೇನೆ" ಎಂದು ಹೊರಟ! ಇಂದಿರೆ ಬೇಸರದಿಂದ "ಉ!" ಎಂದು ಅಡುಗೆ ಮನೆಯೊಳಕ್ಕೆ ಹೋದಳು.

---

# ಮಾಯದ ನೆನಪು

"ಲಕ್ಷ್ಮೀ, ನನ್ನನ್ನು ಮರೆಯಬೇಡ" ಶ್ಯಾಮುನ ಕಣ್ಣುಗಳು ತೇವ ವಾಗಿದ್ದುವು.

"ಇಲ್ಲ" ಲಕ್ಷ್ಮಿಯ ಮುಖದಲ್ಲಿ ತುಂಟನಗೆಯಿನ್ನೂ ಮಾಯವಾಗಿ ರಲಿಲ್ಲ.

"ನಾನು ಬರುವುದಿನ್ನೆಂದೋ! ಎಷ್ಟು ದಿನ ಬಿಟ್ಟು ಬಂದರೂ ನನ್ನನ್ನೇ ಮದುವೆಯಾಗುವೆನೆಂದು ಆಣೆಯಿಡು."

"ಥೂ, ಹೋಗಪ್ಪಾ." ಒಂಭತ್ತು ವರ್ಷದ ಲಕ್ಷ್ಮಿಗೆ ಅವನ ಗಾಂಭೀರ್ಯವೂ ದುಃಖವೂ ಅರ್ಥವಾಗಲಿಲ್ಲ.

ಶ್ಯಾಮುನಿಗೆ ಕೋಪ ಬಂತು. "ಹಾಗಾದರೆ ಸಾಯಂಕಾಲ ನಿನಗೆ ನೇರಳೆಹಣ್ಣನ್ನೇ ಕುಯ್ದುಕೊಡುವುದಿಲ್ಲ."

ಲಕ್ಷ್ಮಿಗೆ ಗಾಬರಿಯಾಯಿತು. "ಇಲ್ಲ, ನಿನ್ನನ್ನೇ ಮದುವೆಮಾಡಿಕೊಳ್ತೀನೆ."

ಸಮಾಧಾನದಿಂದ ಶ್ಯಾಮು—"ನನ್ನ ಕೈ ಮೇಲೆ ಆಣೆಯಿಡು."

ಲಕ್ಷ್ಮಿ ಅವನ ಅಂಗೈಯನ್ನು ತಟ್ಟಿ ಮೆಲ್ಲಗೆ ಚಿವುಟಿ—"ನಿನ್ನಾಣೆಗೂ ನಿನ್ನನ್ನೇ ಮದುವೆಮಾಡಿಕೊಳ್ತೀನೆ."

ಶ್ಯಾಮು ಜೇಬುಗಳನ್ನೆಲ್ಲಾ ಹುಡುಕಿದನು. ತನ್ನ ಜ್ಞಾಪಕಕ್ಕಾಗಿ ಅವಳಿಗೇನಾದರೂ ಕೊಡಬೇಕೆಂಬ ಆಸೆ. ಆದರೆ ಹೆಂಡತಿಯಾಗುವವಳಿಗೆ ಕೊಡಲು ಅವನ ಬಳಿ ಏನೂ ಇರಲಿಲ್ಲ.

ಭದ್ರೆ ನಿಧಾನವಾಗಿ ಹರಿಯುತ್ತಿದ್ದಳು. ನೀರು ಅರ್ಧಕ್ಕಿಳಿದು ಹೋಗಿ ಎರಡು ಕಡೆಯೂ ಮರಳು ಮಿಂಚುತ್ತಿತ್ತು. ಅಲ್ಲಿ ಮಿರುಗುಟ್ಟುತ್ತ ಬಿದ್ದಿದ್ದ ಒಂದು ದುಂಡುಕಲ್ಲನ್ನು ಲಕ್ಷ್ಮಿಯ ಕೈಯಲ್ಲಿಟ್ಟು ಶ್ಯಾಮು, "ಇದನ್ನು ಭದ್ರವಾಗಿಟ್ಟುಕೊ. ನೋಡಿದಾಗಲೆಲ್ಲಾ ನನ್ನನ್ನು ಜ್ಞಾಪಿಸಿಕೊ," ಎಂದು ತುಟಿಗಳಿಂದ ಮೃದುವಾಗಿ ಅವಳ ಕೆನ್ನೆಯನ್ನು ತಾಗಿದನು.

ಲಕ್ಷ್ಮಿಗೂ ದುಃಖ ಉಕ್ಕಿಬಂತು. "ನೀನು ತಿರುಗಿ ಬರುವು ದಿಲ್ಲವೆ, ಶ್ಯಾಮೂ?" ಎಂದು ಬಿಕ್ಕಳಿಸುತ್ತ ಕೇಳಿದಳು.

ಆ ವರ್ಷವೇ ಮಧ್ಯಮ ಶಾಲೆಯ ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ಉತ್ತೀರ್ಣನಾದ ಹೆಮ್ಮೆಯಿಂದ ಶ್ಯಾಮ, "ಹೇಗೆ ಹೇಳೋ ಕಾಗುತ್ತೆ? ಪಾಠಗಳು ಹೆಚ್ಚಾಗಿರುತ್ತವೆ. ಯಾವಾಗ ಬರುತ್ತೇನೊ" ಎಂದನು. ಲಕ್ಷ್ಮಿಯ ಕಣ್ಣುಗಳಿಂದ ನೀರು ಸುರಿಯಲಾರಂಭಿಸಿತು. "ರಜದಲ್ಲಾದರೂ ಬಂದು ಹೋಗು" ಎಂದು ಬೇಡಿದಳು.

"ನೋಡೋಣ." ಗಂಡಸಿನ ಗಡುಸಾದ ಧ್ವನಿಯನ್ನನುಕರಿಸಲು ಶ್ಯಾಮ ಪ್ರಯತ್ನಿಸುತ್ತಿದ್ದನು. "ನನಗೇನಾದರೂ ನಿನ್ನ ಗುರ್ತಿಗಾಗಿ ಕೊಡು."

"ನನ್ನ ಹತ್ತಿರ ಏನಿದೆ? ನಾನೂ ಒಂದು ಕಲ್ಲು ಕೊಡಲೆ?"

"ನಿನ್ನದೊಂದು ಬಳೆ ಕೊಡು."

"ನಿನ್ನೆ ತಾನೆ ಹಾಕಿಸಿಕೊಂಡೆ. ಇನ್ನೇನಾದರೂ ಕೇಳು. ಬಳೆ ನನಗೆ ಬೇಕು."

"ಹಾಗಾದರೆ ನನ್ನ ಮೇಲೆ ನಿನಗೆ ಪ್ರೀತಿಯೇ ಇಲ್ಲ. ನನಗಿಂತ ನಿನಗೆ ಬಳೆ ಹೆಚ್ಚೋ?" ಶ್ಯಾಮ ನಿಷ್ಠುರವಾಗಿ ಮಾತನಾಡಿದನು.

ಲಕ್ಷ್ಮಿ ಮನಸ್ಸಿಲ್ಲದ ಮನಸ್ಸಿನಿಂದ ತನ್ನ ಬಳೆಯನ್ನು ಕಳಚಿಕೊಟ್ಟಳು. "ಪಾಪ! ಕೈಯೆಲ್ಲಾ ಕೆಂಪಾಯಿತು" ಎಂದು ಶ್ಯಾಮ ಮರುಕದಿಂದ ಹೇಳಲು ಅವಳಿಗೆ ಸ್ವಲ್ಪ ಸಮಾಧಾನವಾಯಿತು. ವರ್ಷಗಳುರುಳಿದುವು. ಲಕ್ಷ್ಮಿ ಈಗ ಹುಡುಗಿಯಲ್ಲ. ಆ ಹಳ್ಳಿಯಲ್ಲೇ ಅವಳಷ್ಟು ಚೆಲುವೆಯಿರಲಿಲ್ಲ. ಅಗಲವಾಗಿ ಮಿನುಗುತ್ತಿರುವ ಕಣ್ಣುಗಳು; ಭಾರವಾದ ಜಡೆ; ಬಹಳ ಸುಂದರಿಯಾಗಿದ್ದಳು. ಅಲ್ಲಿಯ ತರುಣರಲ್ಲಿ ಯಾರಾದರೂ ಅವಳನ್ನು ವಿವಾಹವಾಗಲು ಸಿದ್ಧರಾಗಿದ್ದರು. ಆದರೆ ನಂಜಪ್ಪನಿಗೆ ಬಡತನವನ್ನುಂಡು ಬೇಸರವಾಗಿ ಹೋಗಿದ್ದಿತು. ಮಗಳನ್ನಾದರೂ ಒಬ್ಬ ಸಿರಿವಂತನಿಗೆ ಮದುವೆ ಮಾಡಿಕೊಟ್ಟು ಅವಳ ಸೌಖ್ಯವನ್ನು ನೋಡಿ ನಲಿಯ ಬೇಕೆಂದಾಶಿಸುತ್ತಿದ್ದನು. ತಾಯಿಯಿಲ್ಲದ ಹುಡುಗಿಯ ಹೊಣೆಗಾರಿಕೆಯನ್ನು ಬೇರೊಬ್ಬರಿಗೆ ವಹಿಸಿಕೊಡಲು ಆತ ಆತುರನಾಗಿದ್ದನು. ಆದುದ

ರಿಂದ ಹಳ್ಳಿಯಲ್ಲಿ ಲಕ್ಷ್ಮಿಯ ಮದುವೆಯ ಪ್ರಸ್ತಾಪವನ್ನೇ ತೆಗೆಯದೆ ಬೆಂಗಳೂರಿನ ಇಂಜನಿಯರೊಬ್ಬರ ಮಗನನ್ನು ನೋಡಿ ಜಾತಕ ಕೊಟ್ಟು ಬಂದನು. ಜಾತಕ ಸರಿಹೋಯಿತೋ ಇಲ್ಲವೋ ತಿಳಿಯದು. ಆದರೆ ಶ್ರೀನಾಥನು ಹಳ್ಳಿಗೆ ಬಂದು ಲಕ್ಷ್ಮಿಯನ್ನು ನೋಡಿದುದೇ ತಡ, ಮದುವೆ ಗೊತ್ತಾಗಿಹೋಯಿತು. ಸಂಜಪ್ಪ ಬೀಗರೆದುರಿಗೆ ತನ್ನ ಬಡತನವನ್ನು ಹೆಚ್ಚಾಗಿ ತೋರಗೊಡದೆ ಲಕ್ಷಣವಾಗಿಯೇ ಮದುವೆಮಾಡಿಕೊಟ್ಟನು. ಹಳ್ಳಿಯ ತರುಣರೆಲ್ಲರೂ ಮೊದಮೊದಲು ಅಸಮಾಧಾನವಾಗಿದ್ದರೂ ಶ್ರೀನಾಥನನ್ನು ನೋಡುತ್ತಲೇ ಲಕ್ಷ್ಮಿಗೆ ತಕ್ಕ ವರನೆಂದೊಪ್ಪಿದರು. ಎಲ್ಲರೊಡನೆಯೂ ಉಲ್ಲಾಸದಿಂದ ಬೆರತು ಹೋಗುವುದು ಶ್ರೀನಾಥನ ಹುಟ್ಟುಗುಣ. ಹಳ್ಳಿಯವರಿಗೆಲ್ಲಾ ಚಿರಪರಿಚಿತನಂತೆ ತೋರಿದನು.

ಲಕ್ಷ್ಮಿಗೂ ಆನಂದ. ಶ್ರೀನಾಥನ ಹಾಸ್ಯ ಸಂತೋಷಗಳು ಅವಳ ಮನಸ್ಸನ್ನು ಸೂರೆಗೊಂಡಿದ್ದುವು. ಶ್ಯಾಮನನ್ನು ಮರೆತಿದ್ದಳೆಂದರೂ ತಪ್ಪಾಗಲಾರದು. ಜ್ಞಾಪಕ ಬಂದರೂ ಅರೆಮರೆತ ಬಾಲ್ಯದ ನೆನಪಿನಂತಿದ್ದನು. ಮಧ್ಯೆ ಅವನು ಊರಿಗೆ ಬಂದೇ ಇರಲಿಲ್ಲ. ಅವನ ವಿದ್ಯಾರ್ಥಿವೇತನ ಊಟಕ್ಕೇ ಸಾಲುತ್ತಿರಲಿಲ್ಲ. ರೈಲು ಖರ್ಚಿಗೆ ಹಣ ಎಲ್ಲಿಂದ ಬರಬೇಕು?

* * * *

ಲಕ್ಷ್ಮಿ ಗಂಡನ ಮನೆಗೆ ಹೊರಟಿದ್ದಳು. ಸಂಜಪ್ಪನಿಗೆ ಸಂಭ್ರಮ. ಆದರೂ ಅವಳು ಹೊರಟ ಮೇಲೆ ಮನೆಗೆಲ್ಲಾ ತಾನೊಬ್ಬನೇ ಇರಬೇಕೆಂದು ನೆನೆದಾಗ ಕಣ್ಣೀರು ಹರಿಯುವುದು. ಲಕ್ಷ್ಮಿಗೂ ಹಾಗೆಯೇ. ಹುಟ್ಟಿದಂದಿನಿಂದ ಹಳ್ಳಿಯನ್ನು ಬಿಟ್ಟು ಹೋದವಳಲ್ಲವಾದುದರಿಂದ ತನ್ನ ಹೊಸ ಜೀವನದಲ್ಲಿ ಅತಿಶಯವಾದ ಕುತೂಹಲವಿತ್ತು. ಶ್ರೀನಾಥನೊಡನೆ ಸಂಸಾರವೂ ಸವಿಯಾಗಿ ತೋರುತ್ತಿತ್ತು. ಆದರೂ ಹುಟ್ಟಿ ಬೆಳೆದ ಸ್ಥಳವನ್ನು ಬಿಟ್ಟುಹೋಗಲು ಹೃದಯ ಹಿಂಡಿದಂತಾಯಿತು. ಪುನಃ ಪುನಃ ಮನೆಯ ಸುತ್ತಲೂ ತಿರುಗಿ ಬಂದಳು. ನದಿಗೆ ಹೋಗಿ ಗಂಗಾಪೂಜೆಮಾಡಿ ಬಂದಳು. ಎಷ್ಟು ನಿಧಾನಿಸಿದರೂ ಹೊತ್ತಾಗುತ್ತಾ ಬಂತು.

"ಲಕ್ಷ್ಮೀ."

ಲಕ್ಷ್ಮಿ ಬೆಚ್ಚಿದಳು. ಪರಿಚಿತ ಧ್ವನಿ. ತಿರುಗಿ ನೋಡಲು ಶ್ಯಾಮ ನಿಂತಿದ್ದನು. ಆದರೆ ಮೊದಲಿನ ಶ್ಯಾಮನಲ್ಲ. ಕಾಲವು ಅವನಲ್ಲಿಯೂ ಮಾರ್ಪಾಟನ್ನುಂಟುಮಾಡಿತ್ತು. ಯುವಕನಾಗಿದ್ದ ಅವನೊಡನೆ ಮಾತನಾಡಲು ಲಕ್ಷ್ಮಿಗೆ ಸಂಕೋಚವಾಯಿತು. ಸುಮ್ಮನಿದ್ದಳು.

"ನಿನ್ನ ಬಳೆಯನ್ನು ಕೊಡಲು ಬಂದೆ." ಐದು ವರ್ಷಗಳಿಂದ ಶ್ಯಾಮ ಆ ಬಳೆಯನ್ನು ಕಾದಿಟ್ಟುಕೊಂಡಿದ್ದನು. ಅವನು ಕೊಟ್ಟ ಕಲ್ಲನ್ನೆಲ್ಲಿ ಹಾಕಿದೆನೆಂಬ ಪರಿವೆಯೇ ಲಕ್ಷ್ಮಿಗಿಲ್ಲ. ಮೂಕಳಾಗಿ ಕೈಚಾಚಿದಳು. ಅವಳ ಕೈಯಲ್ಲಿ ಬಳೆಯನ್ನಿಟ್ಟು, "ದೇವರು ನಿನ್ನನ್ನೆಂದೆಂದಿಗೂ ಸುಖವಾಗಿಟ್ಟಿರಲಿ, ಲಕ್ಷ್ಮೀ" ಎಂದು ಅಲ್ಲಿ ನಿಲ್ಲದೆ ಹೊರಟನು. ಅಷ್ಟು ಹೊತ್ತಿಗೆ ಹೊರಗೆ ಬಂದ ನಂಜಪ್ಪನವರು, "ಯಾರು ಶ್ಯಾಮನಲ್ಲವೆ? ಮಾತನಾಡದೆ ಹಾಗೆಯೇ ಹೋಗಿಬಿಟ್ಟನಲ್ಲ!" ಎಂದರು.

ಲಕ್ಷ್ಮಿ ಕಣ್ಣೊರಸಿಕೊಳ್ಳುತ್ತ, "ಏನೋ ಕೆಲಸವಿದೆಯಂತೆ" ಎಂದು ಸುಮ್ಮನಾದಳು.

* * * *

ತುಂಬಿದ ಜಗತ್ತಿನಲ್ಲಿ ಶ್ಯಾಮ ಏಕಾಕಿ. ತಂದೆತಾಯಿಗಳ ನೆನಪೇ ಅವನಿಗಿರಲಿಲ್ಲ. ಒಡಹುಟ್ಟಿದವರೂ ಇರಲಿಲ್ಲ. ಇರಲಿಲ್ಲವೆಂಬ ಆತಂಕವೂ ಅವನಿಗಿರಲಿಲ್ಲ. ಯಾರದೋ ಪೋಷಣೆಯಲ್ಲಿ ಬೆಳೆದು, ಯಾರ ಸಹಾಯದಿಂದಲೋ ವಿದ್ಯಾರ್ಜನೆ ಮಾಡಿದ್ದನು. ಚುರುಕಾದ ಹುಡುಗನಾದುದರಿಂದ ಸಹಾಯಮಾಡಲು ಯಾರೂ ಹಿಂಜರಿದಿರಲಿಲ್ಲ. ಲಕ್ಷ್ಮಿ ಅವನ ಜೀವನವನ್ನು ಇದುವರೆಗೂ ತುಂಬಿದ್ದಳು. ತಾಯಿಯ ಆದರ, ಸೋದರಿಯ ಸ್ನೇಹ ಎಲ್ಲವನ್ನೂ ಶ್ಯಾಮ ಅವಳಲ್ಲಿ ಕಂಡಿದ್ದನು. ಇದಕ್ಕೂ ಹೆಚ್ಚಿನ ಸಂಬಂಧವುಂಟಾಗಬಹುದೆಂಬ ಆಸೆಯೂ ಅವನ ಮನಸ್ಸಿನಲ್ಲಿ ಬೆಳೆಯುತ್ತ ಹೋಗಿತ್ತು. ಅವಳೂ ಅಷ್ಟು ದುರ್ಲಭಳಂತೆ ತೋರಿರಲಿಲ್ಲ. ನಂಜಪ್ಪನೂ ಬಡವನೇ. ತನ್ನ ವಿದ್ಯಾಭ್ಯಾಸ ಮುಗಿದು ಸಂಪಾದಿಸುವಂತಾದರೆ ಮಗಳನ್ನು ತನಗೆ ಕೊಡಲು ಆತನು ಹಿಂದೆಗೆಯಬಹುದೆಂಬ ಕಲ್ಪನೆಯೂ ಶ್ಯಾಮನಿಗುಂಟಾಗಿರಲಿಲ್ಲ. ಆದ್ದರಿಂದಲೇ ಲಕ್ಷ್ಮಿಯ ಮದುವೆಯ ವರ್ತಮಾನವನ್ನು ಕೇಳಿ ಸಿಡಿಲು ಬಡಿದಂತಾಯಿತು. ಅವನ ಎಣಿ

ಕೆಯಲ್ಲಿ ಲಕ್ಷ್ಮಿ ಆಗಲೇ ಅವನ ಮಡದಿಯಾಗಿ ಹೋಗಿದ್ದಳು. ಅವಳು ಬೇರೊಬ್ಬನನ್ನು ಮದುವೆಯಾದ್ದು ತನಗೆ ಮೋಸ ಮಾಡಿದಂತೆಯೇ ಎಂದು ತಿಳಿದನು.

ಲಕ್ಷ್ಮಿಗೆ ಈ ರೀತಿಯ ಭಾವನೆ ಬೆಳೆಯಲು ತಕ್ಕ ವಾತಾವರಣವೂ ಇರಲಿಲ್ಲ; ಅವಕಾಶವೂ ಇರಲಿಲ್ಲ. ಚಿಕ್ಕಂದಿನ ಅನೇಕ ನೆನಪುಗಳಂತೆ ಶ್ಯಾಮನೂ ಊರುಬಿಟ್ಟ ಕೆಲವು ದಿನಗಳಲ್ಲಿಯೇ ಕನಸಿನ ವ್ಯಕ್ತಿಯಾದನು. ದೀರ್ಘಕಾಲ ಊರಿಗೂ ಬರದಿದ್ದುದರಿಂದ ಅವನನ್ನು ಮರೆತಳೆಂದೇ ಹೇಳಬೇಕು. ಗಂಡನ ಮನೆಗೆ ಆನಂದದಿಂದ ಹೊರಡುತ್ತಿರುವ ಈ ದಿನ ಶ್ಯಾಮ ಪುನಃ ಬಂದಿದ್ದನು. ಬೆಚ್ಚಿದಂತೆ ಲಕ್ಷ್ಮಿಗೆ ಹಿಂದಿನ ನೆನಪುಂಟಾಯಿತು. ತಾನು ಅವನಿಗೆ ಕೊಟ್ಟ ಭಾಷೆಗೆ ತಪ್ಪಿದೆನೇ ಎಂದುಕೊಂಡಳು. ಆದರೆ ಅದು ಹುಡುಗಾಟಿಕೆ, ಅದನ್ನೇ ಸತ್ಯವಾಗಿ ತಿಳಿದುದು ಶ್ಯಾಮನ ತಪ್ಪು. ಬಳೆಯನ್ನು ಹಿಂದಕ್ಕೆ ಕೊಟ್ಟಾಗ ಅದೆಷ್ಟು ವೇದನೆಯಿಂದ ಕೂಡಿತ್ತು ಆ ಮುಖ! ಅರಿಯದೆ ಅವನ ಹೃದಯವನ್ನು ಮುರಿದೆನೆಂದು ಲಕ್ಷ್ಮಿಗೆ ನೋವುಂಟಾಯಿತು. ಆದರೂ ಒಂದು ವಿಧವಾಗಿ ಅವನ ನಡತೆಯಲ್ಲಿ ಅವಳಿಗೆ ಬೇಸರವೇ ಆಯಿತು. ಮದುವೆಯಾಗಿ ಪತಿಗೃಹಕ್ಕೆ ಹೊರಡುತ್ತಿರುವಾಗ ತನ್ನಲ್ಲಿ ಅವನು ಈ ಆಳಲನ್ನೆಬ್ಬಿಸಬಹುದೆ? ಇಷ್ಟುದಿನವೂ ಇದ್ದಂತೆ ದೂರವಾಗಿಯೇ ಇರದೆ ಬಂದುದೇಕೆ? ಶ್ಯಾಮ ಬೆಂದ ಹೃದಯವನ್ನು ತನಗೇಕೆ ತೋರಿಸಿ ಮರುಕವನ್ನಪೇಕ್ಷಿಸಬೇಕು? ಶ್ರೀನಾಥನ ಹಾಸ್ಯದ ಮಾತುಗಳನ್ನೂ ಸಂತೋಷ ಪ್ರಕೃತಿಯನ್ನೂ ನೆನೆದು ಅವಳಿಗೆ ತನ್ನ ಅದೃಷ್ಟ ಒಳ್ಳೆಯದನ್ನೇ ಮಾಡಿತೆಂದು ತೋರಿತು. ಶ್ಯಾಮ ಬೇರೆ ಯಾರನ್ನಾದರೂ ಮದುವೆಯಾಗಿ ತನ್ನನ್ನು ಮರೆಯುವನೆಂದು ಸಮಾಧಾನಗೊಂಡಳು.

* * * *

ಶ್ರೀನಾಥ ಮೆಚ್ಚಿ ಮದುವೆಯಾದುದೇನೋ ಲಕ್ಷ್ಮಿಯ ರೂಪವನ್ನು. ಆದರೆ ಹಳ್ಳಿಯಲ್ಲಿ ಅಕ್ಷರಗಂಧವನ್ನೇ ಅರಿಯದೆ ಬೆಳೆದ ಅವಳು ಜೀವನವನ್ನು ತನ್ನ ಜೀವನದೊಂದಿಗೆ ಸಮರಸವಾಗಿ ಬೆರಸಿ ನಡೆಯಬಲ್ಲಳೇ ಎಂಬ ಅಳುಕು ಅವನಿಗಿದ್ದೇ ಇತ್ತು. ಆದರೆ ಲಕ್ಷ್ಮಿ ಮನೆಗೆ ಬಂದ

ಕೆಲವೇ ದಿನಗಳಲ್ಲಿ ಈ ಭಯವೂ ಸ್ವಲ್ಪವೂ ಉಳಿಯಲಿಲ್ಲ. ಸ್ವಭಾವತಃ ಚುರುಕಾದ ಬುದ್ಧಿಯಿದ್ದುದರಿಂದ ಲಕ್ಷ್ಮಿಗೆ ತನ್ನ ನಡತೆಯನ್ನು ಶ್ರೀನಾಥನ ಮನೆಗೆ ಹೊಂದಿಸಿಕೊಂಡು ಹೋಗುವುದು ಕಷ್ಟವಾಗಲಿಲ್ಲ. ಶ್ರೀನಾಥನ ತಾಯಿ ಶಾರದಮ್ಮನಿಗೆ ಸೊಸೆ ಬಹು ಮೆಚ್ಚಾದಳು. ಒಬ್ಬನೇ ಮಗನಾದ ಶ್ರೀನಾಥನಿಗೆ ಅನುರೂಪಳಾದ ಹೆಂಡತಿ ಸಿಕ್ಕಿದಳೆಂದು ಸುಬ್ಬರಾಯರ ಆನಂದಕ್ಕಂತೂ ಮೇರೆಯೇ ಇರಲಿಲ್ಲ. ಸೊಸೆಗೆ ವಿದ್ಯಾಭ್ಯಾಸ ಮಾಡಿಸಲು ಒಬ್ಬ ಉಪಾಧ್ಯಾಯನನ್ನೂ, ಸಂಗೀತಕ್ಕೆ ಒಬ್ಬ ಉಪಾಧ್ಯಾಯನನ್ನೂ ಗೊತ್ತುಮಾಡಿದರು. ಶ್ರೀನಾಥನಿಗಂತೂ ಲಕ್ಷ್ಮಿಯೆಂದರೆ ಹುಚ್ಚು. ಅವಳು ವಿದ್ಯಾವತಿಯಾಗಬೇಕೆಂಬ ಅಪೇಕ್ಷೆಯೂ ಅವನಿಗೆ ಉಳಿಯಲಿಲ್ಲ. ಅವಳಿದ್ದಂತೆಯೇ ಮೆಚ್ಚಾಗಿದ್ದಳು. ಅವನ ಜೀವನಕ್ಕೆ ಅವಳು ನವೀನತೆಯನ್ನು ಕೊಟ್ಟಿದ್ದಳು.

ಆ ದಿನ ಶುಕ್ರವಾರ. ಲಕ್ಷ್ಮಿ ಮಡಿಯುಟ್ಟು ತುಳಸೀ ಪೂಜೆಯನ್ನು ಮಾಡುತ್ತಿದ್ದಳು. ಶ್ರೀನಾಥನಿಗಿದೊಂದು ಬೇಸರದ ಕಾರಣ. ತಾನು ಮನೆಯಲ್ಲಿ ಇರುವಷ್ಟು ಹೊತ್ತೂ ಬಳಿಯಲ್ಲಿರದೆ ಮಡಿ, ಪೂಜೆಗಳೆಂದರೇನು? ಆದರೆ ಆಕ್ಷೇಪಿಸಿದಾಗ ಲಕ್ಷ್ಮಿ ನಕ್ಕು, "ನನ್ನ ಆನಂದದಲ್ಲಿ ತನ್ನನ್ನು ಮರೆತೆನೆಂದು ದೇವಿಗೆ ಕೋಪ ಬಂದೀತು. ಪೂಜೆಮಾಡುವಷ್ಟು ಹೊತ್ತೂ ನಿಮ್ಮದೇ ಧ್ಯಾನವಲ್ಲವೆ?" ಎಂದು ಅವನ ಕ್ರಾಪನ್ನು ನೇವರಿಸಿದ್ದಳು. ಅಲ್ಲಿಂದ ಮುಂದೆ ಚರ್ಚೆಗೆ ಅವಕಾಶವೆಲ್ಲಿಯದು? ಶ್ರೀನಾಥ ಅವಸರವಸರವಾಗಿ ಒಂದು ಕಾರ್ಡನ್ನು ಹಿಡಿದುಕೊಂಡು ಬಂದು ಲಕ್ಷ್ಮಿಯ ಹಿಂದೆ ನಿಂತನು. ಲಕ್ಷ್ಮಿ ತಿರುಗಿ ನೋಡಲು, "ಮಡಿಯೇ? ಮುಟ್ಟುತ್ತೇನೆ" ಎಂದನು.

"ನೀವು ಮುಟ್ಟಿದರೂ ಮಡಿಯೇ."

"ನಿನಗೇನೋ ಕೊಡಬೇಕೆಂದು ಬಂದಿದ್ದೇನೆ. ನನಗೆ ಪ್ರತಿಯಾಗಿ ಏನು ಕೊಡುತ್ತೀ?"

"ಏನು, ತೋರಿಸಿ?"

"ನನಗೇನು ಕೊಡುತ್ತೀ?"

"ನನ್ನಲ್ಲಿ ಏನೂ ಇಲ್ಲ. ಎಲ್ಲಾ ಕೊಟ್ಟುಬಿಟ್ಟಿದ್ದೇನೆ." ಕಾರ್ಡನ್ನು ನೋಡಿ ಲಕ್ಷ್ಮಿಗೆ ಕುತೂಹಲ—"ತಂದೆಯವರು ಕ್ಷೇಮ ತಾನೆ?"

"ರಾತ್ರಿ ರೈಲಿಗೆ ಬರುತ್ತಾರಂತೆ."

ಲಕ್ಷ್ಮಿಗೆ ಸಂತೋಷ. ತಾನು ಗಂಡನ ಮನೆಗೆ ಬಂದು ವರ್ಷವಾದರೂ ಸಂಜಪ್ಪ ಆ ಕಡೆ ಬಂದಿರಲಿಲ್ಲ. ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದುದರಿಂದ ತಂದೆಯೇ ಅವಳಿಗಿದ್ದ ಸರ್ವಬಂಧು. ಶ್ರೀನಾಥ—"ನೋಡಿದೆಯಾ! ಆಗಲೇ ನನ್ನನ್ನು ಮರೆತು ಬಿಟ್ಟೆ, ನನಗೇನೂ ಕೊಡುವುದಿಲ್ಲವೆ?"

ಲಕ್ಷ್ಮಿಯ ಪ್ರೇಮದ ಮೆಲುನಗೆಯೇ ಶ್ರೀನಾಥನಿಗೆ ಅವಳಿತ್ತ ಕಾಣಿಕೆಯಾಯಿತು. ಸಡಗರದಿಂದ ತಂದೆಯ ಬರವನ್ನು ಲಕ್ಷ್ಮಿ ಕಾಯುತ್ತಿದ್ದಳು. ಸಂಜೆ ಏಳು ಘಂಟೆಗೆ ಬರುವ ರೈಲಿಗೆ ನಾಲ್ಕು ಘಂಟೆಯಿಂದ ಎದುರು ನೋಡುತ್ತಿದ್ದಳು. ದೂರದಲ್ಲಿ ಒಂದು ಕೈಚೀಲವನ್ನು ಹಿಡಿದುಕೊಂಡು ಅವರು ಬರುವುದನ್ನು ನೋಡುತ್ತಲೇ ಬೀದಿಗೆ ಓಡಿದಳು.

ನಂಜಪ್ಪನವರಿಗೂ ತುಂಬಾ ಸಮಾಧಾನವಾಯಿತು. ಮಗಳು ನಿಜವಾಗಿಯೂ ಬಹಳ ಅದೃಷ್ಟಶಾಲಿನಿಯೆಂದು ಸಂತೋಷಪಟ್ಟರು. ಯಾವ ವಿಧದಲ್ಲಿಯೂ ಅವಳಿಗೆ ಕೊರತೆಯಿರಲಿಲ್ಲ. ಅನುಕೂಲವಾದ ಮನೆ, ಅನುರೂಪನಾದ ಗಂಡ, ಆದರಿಸುವ ಅತ್ತೆಮಾವಂದಿರು. ಮಗಳ ಋಣವನ್ನು ತಾನು ಸಮರ್ಪಕವಾಗಿ ತೀರಿಸಿಕೊಂಡೆನೆಂದುಕೊಂಡರು.

ಲಕ್ಷ್ಮಿಗೆ ಎಷ್ಟು ಮಾತನಾಡಿದರೂ ತೃಪ್ತಿಯಿಲ್ಲ. ಊರಿನವರ ಯೋಗಕ್ಷೇಮವನ್ನೆಲ್ಲಾ ವಿಚಾರಿಸಿದಳು. ತನ್ನ ಗೆಳತಿಯರ ಸುದ್ದಿಯನ್ನೆಲ್ಲಾ ಕೇಳಿದಳು.

"ಸುಬ್ಬಿಗೆ ಮದುವೆ ಗೊತ್ತಾಯಿತು."

"ಯಾರು, ಪಕ್ಕದ ಮನೆ ಸುಬ್ಬೀನೆ?" ಲಕ್ಷ್ಮಿಗೆ ನಗು; ಸುಬ್ಬಿ ಸ್ನೇಹಿತಳಾದರೂ ಅವಳು ಕುರೂಪಿಯೆಂದು ಹಾಸ್ಯ. "ಆ ಮಂಗನನ್ನು ಮದುವೆಯಾಗಲು ಯಾರು ಒಪ್ಪಿದರು?"

"ಶ್ಯಾಮಣ್ಣ ಕೇಳಿದರು."

ಲಕ್ಷ್ಮಿ ಗಾಬರಿಯಿಂದ "ಹಾ?" ಎಂದಳು.

"ಅವನು ಒಪ್ಪಲಿಲ್ಲ. ಅವನೇನೊ ಸನ್ಯಾಸಿಯಾಗಿರುವನಂತೆ. ಮದುವೆ ಬೇಡವೆನ್ನುತ್ತಾನೆ. ಕೊನೆಗೆ, ಯಾರೋ ಬೇರೆ ಊರಿನ ಹುಡುಗ, —ಹುಡುಗನೇನು, ತಕ್ಕಮಟ್ಟಿಗೆ ವಯಸ್ಸಾಗಿದೆ,—ಅತನಿಗೆ ಗೊತ್ತು ಮಾಡಿದರು."

ಲಕ್ಷ್ಮಿಗೆ ಹೊರೆಯಿಳಿದಂತಾಯಿತು. ತಾನು ಬೇರೆ ಮದುವೆ ಯಾಗಿದ್ದರೂ, ಶ್ರೀನಾಥನೊಡನೆ ಸಂಸಾರದಲ್ಲಿ ಸುಖಿಯಾಗಿದ್ದರೂ, ಯಾವುದೋ ಅವ್ಯಕ್ತ ರೀತಿಯಲ್ಲಿ ಶ್ಯಾಮ ತನ್ನವನೆಂಬ ಭಾವನೆ ಮರೆ ಯಾಗಿರಲಿಲ್ಲ. ಅವನು ತನ್ನನ್ನು ಮರೆತು ಬೇರೆಯವಳ ಕೈ ಹಿಡಿಯು ವುದು ಇಷ್ಟವಾಗಿರಲಿಲ್ಲ. ಅದರಲ್ಲೂ ಅವನು ಕುರೂಪಿ ಸುಬ್ಬಿಯನ್ನು ವರಿಸಿದ್ದರೆ ತನ್ನ ಬೆಲೆಯೇ ಇಳಿಯಿತೆಂಬ ದುಃಖವುಂಟಾಗುತ್ತಿತ್ತು. ಅವನು ಮದುವೆಯನ್ನೊಲ್ಲದೆ ಹೋದುದು ತನ್ನ ನೆನಪಿನಿಂದಲೇ ಎಂದು ಲಕ್ಷ್ಮಿ ತಿಳಿದಳು. ಆ ಅರಿವು ಅವಳ ಮನಸ್ಸಿಗೆ ಸಂತೋಷವನ್ನೇ ಉಂಟುಮಾಡಿತು. ಈಗ ಲಕ್ಷ್ಮಿ ಹುಡುಗಿಯಲ್ಲ. ಅವಳಿಗೆ ಶ್ರೀನಾಥ ನಲ್ಲಿದ್ದ ಪ್ರೇಮವೂ, ಅವನ ಒಲುಮೆಯಿಂದುಂಟಾದ ಸುಖವೂ ತನ್ನಲ್ಲಿ ಶ್ಯಾಮನಿಗಿದ್ದ ಪ್ರೇಮದ ಆಳವನ್ನರಿಯುವಂತೆ ಮಾಡಿದ್ದುವು. ಒಂ ದೊಂದು ಸಲ ತಾನು ಅವನಿಗೆ ಅನ್ಯಾಯ ಮಾಡಿದೆನೆಂದು ದುಃಖವುಂ ಟಾದರೂ, ಅವನು ತನ್ನನ್ನು ಮರೆತು ಸುಖವಾಗಿರಲೆಂಬ ನಿಃಸ್ವಾರ್ಥತೆ ಅವಳಲ್ಲಿರಲಿಲ್ಲ.

ಶಾರದಮ್ಮನ ಉಪಚಾರವೂ, ಸುಬ್ಬರಾಯರ ಸ್ನೇಹವೂ ಹಿತವಾ ಗಿದ್ದರೂ ಮಗಳ ಮನೆಯಲ್ಲಿ ಬಹಳ ದಿನ ನಿಲ್ಲದೆ ನಂಜಪ್ಪನವರು ಮರುದಿನ ಸಾಯಂಕಾಲವೇ ಹೊರಟರು. ಲಕ್ಷ್ಮಿಗೆ ಕಣ್ಣು ತುಂಬ ನೀರು. ಅವಳೂ ಶ್ರೀನಾಥನೂ ನಿಲ್ದಾಣಕ್ಕೆ ಹೋಗಿದ್ದರು. "ಎಲ್ಲರನ್ನೂ ಕೇಳಿದೆನೆಂದು ಹೇಳು. ಆಗಾಗ ಬಾಪ್ಪಾ." ಎಂದಳು. ನಂಜಪ್ಪನವರು ಒಪ್ಪಿದರು. "ಶ್ಯಾಮನನ್ನೂ ಕೇಳಿದೆನೆಂದು ಹೇಳು."

ಅದೇಕೋ ಅವನ ಹೆಸರು ಹೇಳುವಾಗ ಲಕ್ಷ್ಮಿಗೆ ಅಳುಕುಂಟಾ ಯಿತು. ಶ್ರೀನಾಥನಿಗೆ ದ್ರೋಹಮಾಡಿದಂತೆ ತೋರಿತು.

* * * * *

ತಿಳಿಯದಿರುವುದನ್ನು ಹಾಗೆಯೇ ಬಿಡುವುದು ಮನುಷ್ಯನ ಲಕ್ಷಣ ವಲ್ಲ. ಪ್ರಪಂಚದ ಸುಖದುಃಖಗಳ ಕಾರಣ ಆ ಜಗನ್ನಿಯಾಮಕನಿಗೇ ತಿಳಿದಿರಬೇಕು. ಈ ಲೋಕದಲ್ಲಿ ಕೆಡುಕಿಗೆ ಶಿಕ್ಷೆಯಾಗಲೇಬೇಕೆಂಬ ನಿಯಮವಿಲ್ಲ. ಎಷ್ಟೋ ಜನರಿಗೆ ದ್ರೋಹಮಾಡಿ ಅನೇಕ ಮನೆಗಳನ್ನು ಮುರಿದವರೂ ಕೂಡ ವೈಭವದಿಂದ ಅನೇಕ ವರ್ಷಗಳು ಬಾಳುವರು. ಇದಕ್ಕೆ ಕಾರಣವನ್ನು ವಿವರಿಸಲು ತೋರದೆ ಪೂರ್ವಾರ್ಜಿತ ಕರ್ಮವೆಂಬ ಹೆಸರನ್ನು ಅದಕ್ಕಿಟ್ಟರು. ಇಲ್ಲದಿದ್ದರೆ ಅನ್ಯಾಯವಾದ ದುಃಖಗಳೇತಕ್ಕೆ? ಮುಂದಿನ ಜನ್ಮಕ್ಕೆ ಆಸರೆಯಾಗಿ ಪುಣ್ಯಕಾರ್ಯಗಳನ್ನೇ ಮಾಡಲೆಂಬ ದೃಷ್ಟಿಯಿಂದಲೋ ಏನೋ!

ವಿಧಿಗೆ ಲಕ್ಷ್ಮಿಯ ಸುಖವನ್ನು ಸಹಿಸಲಾಗಲಿಲ್ಲವೋ, ಅವಳ ಪೂರ್ವಾರ್ಜಿತ ಕರ್ಮವಿಶೇಷವೋ, ಅವಳು ತಂದೆಯ ಮನೆಗೇ ದುಗುಡದಿಂದ ಹಿಂತಿರುಗಿದಳು. ಅತ್ತೆಮಾವಂದಿರು ಹೋದ ಮಗನ ದುಃಖವನ್ನು ಮರೆಸಲು ಇರಬೇಕೆಂದು ಎಷ್ಟೋ ಕೇಳಿಕೊಂಡರೂ ಶ್ರೀನಾಥನಿಲ್ಲದ ಆ ಸುಖಜೀವನವನ್ನು ನಡೆಸಲು ಅವಳಿಂದಾಗಲಿಲ್ಲ. ಅವರ ವಂಶದ ಕುಡಿಯಾಗಿ ಒಂದು ಮಗುವೂ ಇಲ್ಲದ ಮೇಲೆ ಅಲ್ಲಿ ತನಗೇನು ಕೆಲಸ? ನೂಕಿದರೂ ಹೊತ್ತು ಕಳೆಯದಂತಾಯಿತು. ಕಷ್ಟದಿಂದ ಅತ್ತೆ ಮಾವಂದಿರನ್ನು ಒಪ್ಪಿಸಿ ಹಿಂದಿರುಗಿದ್ದಳು. ಆದರೆ ಅವಳ ಪಾಲಿಗೀಗ ಎಲ್ಲಿದ್ದರೂ ಒಂದೇ. ಜೀವನದಲ್ಲಿ ಉಲ್ಲಾಸವಿಲ್ಲ; ಸಂತೋಷವಿಲ್ಲ. ಯಂತ್ರದಂತೆ ದಿನಗಳನ್ನು ಕಳೆಯುತ್ತಿದ್ದಳು. ಸುಖದ ತುತ್ತತುದಿಯಿಂದ ಕೆಳಕ್ಕೆ ಬಿದ್ದಿದ್ದಳು. ಆ ದುಃಖದಿಂದ ಚೇತರಿಸಿಕೊಳ್ಳುವ ಶಕ್ತಿಯೇ ಅವಳಿಗಿರಲಿಲ್ಲ.

ನಂಜಪ್ಪನವರ ದುಃಖವನ್ನು ಹೇಳತೀರದು. ಗಂಡನಿಂದ ಎಷ್ಟೋ ಕಷ್ಟಗಳನ್ನನುಭವಿಸಿದ ಮಗಳು ವಿಧವೆಯಾದರೂ ತಂದೆಯ ಕರುಳು ಮರುಗುವುದು. ಲಕ್ಷ್ಮಿಯ ಸುಖವನ್ನು ಕಣ್ಣಾರೆ ಕಂಡು ಆನಂದಿಸುತ್ತಿದ್ದ ನಂಜಪ್ಪನವರಿಗಂತೂ ಈ ದುಃಖ ಬರಸಿಡಿಲಿನಂತೆ ತೋರಿತು. ಮಗಳ ಮನಸ್ಸಿಗೆ ಹೇಗಾದರೂ ಸ್ವಲ್ಪ ಶಾಂತಿಯನ್ನುಂಟುಮಾಡಬೇಕೆಂದು ತಲ್ಲಣಿಸುವರು. ಅವಳನ್ನು ಕೂಡಿಸಿಕೊಂಡು ಗೀತೆಯನ್ನೋದಿ ವಿವರಿಸು

ಟದು. ಲಕ್ಷ್ಮಿ ತಂದೆಯ ಮನನೋಯಿಸಬಾರದೆಂದು ಕುಳಿತುಕೊಂಡರೂ ಸ್ವಲ್ಪ ಹೊತ್ತಿಗೆಲ್ಲಾ ಕಣ್ಣು ತುಂಬಾ ನೀರು ತುಂಬಿಕೊಂಡು ಹೊರಗೆ ಹೊರಟುಹೋಗುವಳು. ನಂಜಪ್ಪನವರೂ ಹನಿಗೂಡಿದ ಕಣ್ಣುಗಳಿಂದ ಅವಳು ಹೋದ ಕಡೆಯೇ ನೋಡುತ್ತಾ ಗೀತೆಯನ್ನು ಮರೆಯುವರು.

ಆದರೆ ಕಾಲಕ್ಕೆ ಮನುಷ್ಯನ ಸುಖದುಃಖಗಳ ಗೊಂದಲವಿಲ್ಲ. ದಿನದ ಮೇಲೆ ದಿನ ಉರುಳಿ ಹೋಗುತ್ತದೆ. ಸುಖವಾಗಿದ್ದರೂ ಸಂಜೆ ಯಾಗುತ್ತದೆ. ಅಳುತ್ತಿದ್ದರೂ ಬೆಳಕು ಹರಿಯುತ್ತದೆ. ಕ್ರಮೇಣ ಲಕ್ಷ್ಮಿಯೂ ಒಂಟಿ ಜೀವನಕ್ಕೆ ಹೊಂದಿಕೊಂಡು ಹೋದಳು. ಶ್ರೀ ನಾಥನ ಅಗಲಿಕೆಯ ಗಾಯ ಮಾಯದಿದ್ದರೂ, ಕೆದಕದಿದ್ದರೆ ಮರೆಯಾಗಿ ರಲಾರಂಭಿಸಿತು.

ಸಾಯಂಕಾಲ ಬಹು ಸುಂದರವಾಗಿತ್ತು. ಸೂರ್ಯ ಮುಳುಗು ವುದರಲ್ಲಿದ್ದನು. ಪಶ್ಚಿಮಾಕಾಶವೆಲ್ಲಾ ಅನಂತ ಕಿರಣಗಳಿಂದ ಮನೋ ಹರವಾಗಿತ್ತು. ಕೆಂಪು ಛಾಯೆ ಭದ್ರೆಯ ನೀರಿನಲ್ಲೂ ಪ್ರತಿಬಿಂಬಿತವಾ ಗಿತ್ತು. ನಿಧಾನವಾಗಿ ಹರಿಯುತ್ತಿದ್ದ ನೀರು, ತಡೆಕಟ್ಟಿದ್ದ ಲಕ್ಷ್ಮಿಯ ಪಾದಗಳ ಮೇಲೆ ಮಾತ್ರ ರಭಸದಿಂದ ನುಗ್ಗಿ, ಅವುಗಳನ್ನು ದಾಟುತ್ತಲೇ ತನ್ನ ಸಿಟ್ಟಿಗೆ ನಾಚಿಕೊಂಡಂತೆ ಪುನಃ ನಿಧಾನವಾಗಿ ಹರಿಯುತ್ತಿದ್ದಿತು.

ಲಕ್ಷ್ಮಿ ಪಾತ್ರೆಗಳನ್ನೆಲ್ಲಾ ತೊಳೆದಿಟ್ಟು ನೀರಿನಲ್ಲಿ ಕಾಲನ್ನಿಟ್ಟು ಕುಳಿತಿದ್ದಳು. ನೆನಪುಗಳು ಅವಳ ಮನಸ್ಸನ್ನು ಕಲಕುತ್ತಿದ್ದುವು. ವಿಧಿ ಅಷ್ಟು ಸುಖವನ್ನು ತುಟಿಗೆ ತಾಗಿಸಿ ಕಿತ್ತುಕೊಂಡುದೇಕೆ? ತನ್ನಿಂದಾದ ಅಪರಾಧವೇನು? ಅಥವಾ ಶ್ಯಾಮನ ಹೃದಯವನ್ನು ಹರಿದುದಕ್ಕೆ ಈ ಶಿಕ್ಷೆಯೋ? ಆದರೆ ಅದು ತಿಳಿಯದೆ ಮಾಡಿದ ಅಪರಾಧವಲ್ಲವೇ? ಆ ದಿನ ಅವನು ತನ್ನ ಬಳೆಯನ್ನು ಹಿಂದಕ್ಕೆ ತಂದುಕೊಟ್ಟು ಮಾತನಾಡದೆ ಹೊರಟು ಹೋಗುವವರೆಗೂ ತನ್ನನ್ನು ಪ್ರೀತಿಸಿದ್ದನೆಂದು ಅವಳಿಗೆ ತಿಳಿದೇ ಇರಲಿಲ್ಲ. ಹುಡುಗಾಟಕ್ಕಾಡಿದ ಮಾತುಗಳು ಇಷ್ಟು ದೂರ ಬರುವುವೆಂದು ತಿಳಿಯ ಲಿಲ್ಲ. ಆದುದರಿಂದ ಶ್ಯಾಮನನ್ನು ಮರೆತುದು ತಪ್ಪೇ ಅಲ್ಲ. ಅದಕ್ಕಾಗಿ ಈ ಶಿಕ್ಷೆಯೇ? ಅಥವಾ ಪ್ರಕೃತಿಯಲ್ಲಿ ಕಾರ್ಯಕಾರಣಗಳಿಗೆ ಸಂಬಂಧವೆಲ್ಲಿ ಯದು? ಅನಂತ ಸೃಷ್ಟಿಯ ಅದ್ಭುತ ತಾಂಡವದಲ್ಲಿ ಮಗ್ನನಾಗಿ ತಾಳಹಾ

ಕುತ್ತಿರುವ ಕರ್ತನಿಗೆ ಈ ಸಣ್ಣ ಸುಖದುಃಖಗಳ ಕರೆ ಕೇಳುವುದಾದರೂ ಹೇಗೆ? ಲಕ್ಷ್ಮಿಯ ದುಃಖಕ್ಕೆ ಕೊನೆಮೊದಲೇ ಇರಲಿಲ್ಲ. ಎದ್ದರೆ ಕುಳಿತರೆ ಶ್ರೀನಾಥನ ನೆನಪು: ಅವನಾಡಿದ ಸವಿ ಮಾತುಗಳು, ಸ್ನೇಹ ಪೂರಿತವಾದ ನಡೆವಳಿಕೆಗಳು. ಅಂತಹ ಪ್ರೇಮವನ್ನು ಚಿರಕಾಲ ಉಳಿಸಿಕೊಳ್ಳಲು ತನಗೆ ಯೋಗ್ಯತೆಯಾದರೂ ಎಲ್ಲಿಂದ ಬರಬೇಕು? ಕಣ್ಣೀರು ನದಿಯ ನೀರಿನೊಂದಿಗೆ ಬೆರತು ಹರಿದುಹೋಗುತ್ತಿದ್ದಿತು.

"ಲಕ್ಷ್ಮೀ."

ಲಕ್ಷ್ಮಿ ಬೆಚ್ಚಿ ತಿರುಗಿ ನೋಡಿದಳು. ಶ್ಯಾಮ ನಿಂತಿದ್ದನು. ಆ ದಿನದ ಬಿಗಿಹಿಡಿದ ನೋವಾಗಲಿ, ಕಠಿನತೆಯಾಗಲಿ ಅವನ ಮುಖದಲ್ಲಿರಲಿಲ್ಲ. ತನ್ನ ಸಣ್ಣ ಕಷ್ಟಗಳನ್ನು ಚಿಕ್ಕಂದಿನಲ್ಲಿ ಹೇಳಿ ಅತ್ತಾಗ ಸಮಾಧಾನ ಮಾಡುತ್ತಿದ್ದ ಶ್ಯಾಮನಂತೆಯೇ ಇದ್ದನು.

"ಬಾ ಶ್ಯಾಮ, ಕೂತುಕೋ."

ಶ್ಯಾಮ ಕುಳಿತನು. "ಸುಮ್ಮನೆ ಅತ್ತೇನು ಪ್ರಯೋಜನ, ಲಕ್ಷ್ಮೀ? ಪ್ರಪಂಚವೇ ಹೀಗೆ. ಮಾಡಿದ್ದೆಲ್ಲಾ ಸುತ್ತಲೂ ಮುರಿದುಬೀಳುತ್ತಿರುತ್ತೆ. ಮುಕುಕುಗಳನ್ನು ಜೋಡಿಸಿಕೊಂಡು ಮುಂದಕ್ಕೆ ಹೆಜ್ಜೆಯಿಡಬೇಕು." ಲಕ್ಷ್ಮಿಯ ಕಣ್ಣೀರು ಸೋರುತ್ತಲೇ ಇತ್ತು. "ಧೈರ್ಯವಾಗಿರಬೇಕು. ಒಂದಲ್ಲ ಒಂದು ದಿನ ನಾವೂ ಹೋಗುವವರೇ ಅಲ್ಲವೆ?"

"ಬಹಳ ಸುಖವಾಗಿದ್ದೆ, ಶ್ಯಾಮಾ."

ತನ್ನ ಸುಖಕ್ಕೆ ಅವಳು ಬಡಿದಿದ್ದ ಪೆಟ್ಟನ್ನು ತೋರಗೊಡದೆ, "ಅದಕ್ಕೇ ಸಮಾಧಾನ ತಂದುಕೊಳ್ಳಬೇಕು, ಲಕ್ಷ್ಮೀ. ಬೇರೆಯವರು ಒಂದು ಜೀವನದಲ್ಲೆಲ್ಲಾ ಉಣ್ಣಬಹುದಾದಷ್ಟು ಸುಖವನ್ನು ನೀನು ಸ್ವಲ್ಪ ಕಾಲದಲ್ಲೇ ಅನುಭವಿಸಿದೆ. ಅದರಿಂದ ತೃಪ್ತಳಾಗಿರಬೇಕು."

ಈ ವೇದಾಂತವೂ ಲಕ್ಷ್ಮಿಗೆ ರುಚಿಸಲಿಲ್ಲ. ಶ್ಯಾಮ ಬೇಸರಪಡದೆ ನಿಧಾನವಾಗಿ ಸಮಾಧಾನ ಮಾಡಿದನು.

ಲಕ್ಷ್ಮಿಗೆ ಇದೇ ಅಭ್ಯಾಸವಾಯಿತು. ಪ್ರತಿ ಸಾಯಂಕಾಲವೂ ಅವಳು ಪಾತ್ರೆ ತೊಳೆದು ಮುಗಿಸುವ ವೇಳೆಗೆ ಶ್ಯಾಮ ಅಲ್ಲಿಗೆ ಬರುವನು. ಆ ಮಾತು ಈ ಮಾತು ಆಡಿ ಅವಳ ಬೇಸರ ಕಳೆಯುವನು. ಅವನು ಬರು

ವುದು ನಿಧಾನವಾದರೆ ಅವಳೇ ಕಾಯುವಳು. ದಿನದ ಬೇಸರವನ್ನೆಲ್ಲಾ ಶ್ಯಾಮನೊಡನೆ ಮಾತನಾಡುತ್ತ ಆ ಘಂಟೆಯಲ್ಲಿ ಮರೆಯುವಳು.

ಸಂಜಪ್ಪನವರು ಒಂದು ದಿನ ಲಕ್ಷ್ಮಿಯನ್ನು ಕರೆದು ಹೇಳಿದರು. "ಲಕ್ಷ್ಮೀ, ಒಂದು ಮಾತು ಹೇಳಬೇಕಾಗಿದೆ, ಹೇಳಲೆ?"

ಅವರು ಅನುಮಾನಿಸಿದ್ದನ್ನು ನೋಡಿ ಲಕ್ಷ್ಮಿ ಕುತೂಹಲದಿಂದ ತಲೆಯೆತ್ತಿದಳು.

"ನೀನು ಶ್ಯಾಮನನ್ನು ಪ್ರತಿದಿನವೂ ನೋಡುತ್ತೀಯಂತೆ. ಜನರ ಬಾಯಿಗೆ ಸಿಕ್ಕುವುದು ಬಹು ಸುಲಭ. ಸ್ವಲ್ಪ ಎಚ್ಚರಿಕೆಯಾಗಿರಮ್ಮಾ."

ಲಕ್ಷ್ಮಿ ಉತ್ತರ ಕೊಡಲಿಲ್ಲ. ಕಣ್ಣೀರು ಮಾತ್ರ ಅವಳ ಅಂಕೆಗೆ ಸಿಕ್ಕದೆ ಹರಿದುಹೋಯಿತು.

ಆ ದಿನ ಸಂಜೆಯೂ ಶ್ಯಾಮನಿಗಾಗಿ ಕಾದಳು. ಆದರೆ ಅದರಲ್ಲಿ ಒಂದು ಕಳ್ಳ ಭಾವನೆ ತಲೆದೋರಿತ್ತು. ಯಾರು ನೋಡುವರೋ ಎಂಬ ಗಾಬರಿ ಹುಟ್ಟಿತ್ತು. ಶ್ಯಾಮನಿಗಿದೊಂದೂ ತಿಳಿಯದು. ಎಂದಿನಂತೆ ಬಂದು ಕುಳಿತು, "ನಿನಗೊಂದು ವಿಚಾರ ತಿಳಿಸಬೇಕಾಗಿದೆ, ಲಕ್ಷ್ಮೀ" ಎಂದನು.

ಲಕ್ಷ್ಮಿಗೆ ಅಳುಕುಂಟಾಯಿತು. ಜನರ ಆಕ್ಷೇಪಣೆ ಅವನ ಕಿವಿಗೂ ಬಿದ್ದಿತ್ತೋ, ಎಂದು ಅನುಮಾನಿಸಿದಳು.

"ನನಗೆ ಕೆಲಸವಾಯಿತೆಂದು ಈವತ್ತು ಕಾಗದ ಬಂತು."

"ಏನು ಕೆಲಸ? ಎಲ್ಲಿ?"

"ಮೈಸೂರಿನಲ್ಲಿ ಸ್ಕೂಲಿನಲ್ಲಿ ಕೆಲಸವಾಗಿದೆ."

ಸ್ವಲ್ಪ ಹೊತ್ತು ಸುಮ್ಮನಿದ್ದು ಲಕ್ಷ್ಮಿ "ಹೋಗುತ್ತೀಯಾ?" ಎಂದಳು.

"ಹೌದು. ಅದಕ್ಕೇ ನಿನ್ನನ್ನೊಂದು ಮಾತು ಕೇಳೋಣವೆಂದು ಬಂದೆ."

"ನನ್ನನ್ನೇನು ಕೇಳುವುದು?"

"ಒಂದು ವೇಳೆ ನಾನು ಹೊರಟರೆ ನೀನೂ ಬರುತ್ತೀಯಾ?"

ಲಕ್ಷ್ಮಿ ಗಾಬರಿಯಿಂದ, "ಏನೆಂದೆ?" ಎಂದಳು. ಶ್ಯಾಮ ಮಾತುಗಳನ್ನು ಸಿದ್ಧಪಡಿಸಿಕೊಂಡೇ ಬಂದಿದ್ದನು. "ಲಕ್ಷ್ಮೀ! ಚಿಕ್ಕಂದಿನಿಂದಲೂ ನಿನ್ನನ್ನೇ ಮದುವೆಯಾಗಬೇಕೆಂದಿದ್ದೆ. ವಿಧಿಗೆ ಅದು ಸರಿದೋರಲಿಲ್ಲ. ನಾನೆಂದೂ ಬೇರೆ ಮದುವೆಯಾಗುವುದಿಲ್ಲ. ನೀನೂ ನನ್ನೊಡನೆ ಬಂದರೆ ಸಂತೋಷದಿಂದ ಜೀವನವನ್ನೆದುರಿಸಬಲ್ಲೆ. ಇಲ್ಲವಾದರೆ ನನಗೆ ಪ್ರಪಂಚದಲ್ಲಿ ಸ್ವಾರಸ್ಯವೇ ಇಲ್ಲ. ಬರೀ ಹೊಟ್ಟೆಗಾಗಿ ದುಡಿದು ಕಾಲವನ್ನು ತಳ್ಳಬೇಕಾಗುತ್ತದೆ. ನೀನು ಸುಖವಾಗಿದ್ದಿದ್ದರೆ ನಿನ್ನ ಮಾರ್ಗದಲ್ಲಿ ನಾನು ಮುಳ್ಳಾಗುತ್ತಿರಲಿಲ್ಲ. ನಿನಗೂ ಯಾರೂ ಇಲ್ಲವಾಯಿತು. ನನಗೂ ಯಾರೂ ಇಲ್ಲ. ಇಬ್ಬರೂ ಒಟ್ಟಾಗಿರುವುದರಲ್ಲಿ ತಪ್ಪೇನು?" ಎಂದು ಒಂದೇ ಉಸಿರಿನಲ್ಲಿ ಹೇಳಿದನು.

ಲಕ್ಷ್ಮಿಗೆ ಇದು ಬಹಳ ಅನಿರೀಕ್ಷಿತವಾದ ಮಾತಾಯಿತು. ಮೈಯೆಲ್ಲಾ ಬೆವತು ಮುಖ ಕೆಂಪಾಗಿತ್ತು. ಶ್ರೀನಾಥನ ನೆನಪು ಕಣ್ಣಿಗೆ ಕಟ್ಟಿದಂತಿತ್ತು. ಶ್ಯಾಮನ ಮಾತಿಗೆ ಉತ್ತರವನ್ನೇ ಕೊಡಲಿಲ್ಲ. ಕಣ್ಣುಗಳು ಮಾತ್ರ ತುಂಬಿ ಬಂದುವು. ಶ್ಯಾಮ ವ್ಯಾಕುಲ ಧ್ವನಿಯಿಂದ "ಬರುವುದಿಲ್ಲವೇ ಲಕ್ಷ್ಮಿ? ಎಂದನು.

ಲಕ್ಷ್ಮಿ ತಲೆಯಾಡಿಸಿದಳು.

ಶ್ಯಾಮ ಎದ್ದು "ಹಾಗಾದರೆ ನಾನು ಹೊರಡುತ್ತೇನೆ. ಆದರೆ ಇದೊಂದು ಮಾತನ್ನು ನೆನಪಿನಲ್ಲಿಟ್ಟುಕೋ. ನಾನೆಲ್ಲಿದ್ದರೂ ವಿಳಾಸವನ್ನು ತಿಳಿಸುತ್ತೇನೆ. ನೀನು ಕರೆದಾಗ ಓಡಿಬರುತ್ತೇನೆ." ಎಂದು ಹೇಳಿ ನಿಲ್ಲದೆ ಹೊರಟುಹೋದನು.

* * * *

ಶ್ಯಾಮನೇನೋ ತನ್ನ ವಚನವನ್ನು ಪಾಲಿಸಿದನು. ಅವನು ವಿಳಾಸವನ್ನು ಬದಲಾಯಿಸಿದಾಗಲೆಲ್ಲಾ ಲಕ್ಷ್ಮಿಗೆ ಬರೆಯುತ್ತಿದ್ದನು. ಮೊದಮೊದಲು ಶ್ರೀಸಾಥನ ಪ್ರೇಮದ ನೆನಪು ಲಕ್ಷ್ಮಿಯನ್ನು ಬಂಧಿಸಿತ್ತು. ಬೇರೊಬ್ಬನೊಡನೆ ಸುಖಸಂಸಾರ ಹೇಯವಾಗಿ ತೋರಿತು. ನಂಜಪ್ಪನವರೂ ತೀರಿಹೋದಮೇಲೆ ಅವಳಿಗೆ ಕಷ್ಟವೇ ಒದಗಿತು. ಮಾವನ ಮನೆಯನ್ನು ಬಿಟ್ಟು ಬಹಳ ವರ್ಷಗಳಾಗಿ ಹೋದುದರಿಂದ ಅವರ ಸಹಾಯವನ್ನು